ಶುಕ್ರವಾರ, ಏಪ್ರಿಲ್ 28, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 117 | ಪುಟ 14
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ರಾಘವೇಂದ್ರ ಸ್ಟೋರ್ಸ್' ತೆರೆದು 'ಹಯವದನ'ನಾಗಿ ಬಂದಿದ್ದಾರೆ ಜಗ್ಗೇಶ್



ಆಳ-ಅಗಲ
ಮನದ ಮಾತಿಗೆ 100ರ ಸಂಭ್ರಮ
ಅಂಗಾಂಗ ದಾನ: ಕೇಂದ್ರದ ನೌಕರರಿಗೆ 42 ಎಸ್‌ಸಿಎಲ್ ಸೌಲಭ್ಯ 10
ಛತ್ತೀಸಗಢ: ಬಸ್ತರ್ ವಲಯದ ಏಳು ಜಿಲ್ಲೆಗಳಲ್ಲಿ ಹೈ ಅಲರ್ಟ್ 11

'ವಿಷ'ದ ಮಾತಿನ ಕೋಲಾಹಲ


ವಿಧಾನಸಭೆ ಚುನಾವಣೆಯ ಮತದಾನಕ್ಕೆ ದಿನಗಣನೆ ಆರಂಭವಾಗುತ್ತಿದ್ದಂತೆ, ಪ್ರಚಾರದ ಕಾವು ಏರುತ್ತಿದೆ. ಪ್ರಚಾರ ಸಭೆಗಳಲ್ಲಿ ಮಾತಿನ ಅಬ್ಬರ ಜೋರಾಗಿದೆ. 'ಪ್ರಧಾನಿ ಮೋದಿಯವರನ್ನು ವಿಷದ ಹಾವು' ಎಂದು ಕರೆದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಬಳಿಕ ತಮ್ಮ ಟೀಕೆ ಮೋದಿ ಅವರನ್ನು ವೈಯಕ್ತಿಕವಾಗಿ ಗುರಿಯಾಗಿಸಿಕೊಂಡಿರಲಿಲ್ಲ. ಅವರು ಪ್ರತಿನಿಧಿಸುವ ಸಿದ್ಧಾಂತದ ಕುರಿತದ್ದಾಗಿತ್ತು ಎಂದು ಸ್ಪಷ್ಟನೆ ನೀಡಿದ್ದಾರೆ. ಕರ್ನಾಟಕದಲ್ಲಿನ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ವರ್ಚುವಲ್ ರೂಪದಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಕಾಂಗ್ರೆಸ್ ಅನ್ನು ಟೀಕಿಸಿದ್ದಾರೆ. ಇದಕ್ಕೆ ಡಿ.ಕೆ. ಶಿವಕುಮಾರ್ ಕಟುವಾಗಿ ಪ್ರತಿಕ್ರಿಯಿಸಿದ್ದಾರೆ.

'ಮೋದಿ ವಿಷದ ಹಾವಿದ್ದಂತೆ'

ಪ್ರಜಾವಾಣಿ ವಾರ್ತೆ

ನರೇಗಲ್ (ಗದಗ ಜಿಲ್ಲೆ): 'ಮೋದಿ ಅಂದ್ರೆ ವಿಷದ ಹಾವಿದ್ದಂತೆ. ವಿಷ ಹೌದೋ, ಅಲ್ಲವೋ ಎಂದು ನೀವೇನಾದರೂ ನೆಕ್ಕಿ ನೋಡಲು ಹೋದರೆ ಸತ್ತು ಹೋಗ್ತೀರಿ' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ವಿರುದ್ಧ ಗುರುವಾರ ಹರಿಹಾಯ್ದಿದ್ದಾರೆ. ತಮ್ಮ ಹೇಳಿಕೆಯು ವಿವಾದದ ಸ್ವರೂಪ ಪಡೆಯುತ್ತಿದ್ದಂತೆಯೇ 'ನಾನು ಹೇಳಿರುವುದು ವೈಯಕ್ತಿಕವಾಗಿ ಮೋದಿ ಅವರನ್ನು ಉದ್ದೇಶಿಸಿ ಅಲ್ಲ. ಬದಲಾಗಿ ಅವರು ಪ್ರತಿನಿಧಿಸುವ ಸಿದ್ಧಾಂತದ ಕುರಿತಾಗಿ' ಎಂದು ಸ್ಪಷ್ಟನೆಯನ್ನೂ ನೀಡಿದ್ದಾರೆ.

ಪ್ರಚಾರ ಸಭೆಯಲ್ಲಿ ಖರ್ಗೆ ಮಾತನಾಡಿದರು. 'ಮೋದಿ ಒಬ್ಬ ಆಸೆಬುರುಕ ಮನುಷ್ಯ. ಯಾವುದಾದರೂ ಕುರ್ಚಿ ಖಾಲಿ ಇದ್ದರೆ ಅಲ್ಲಿ ಬಂದು ಕುಳಿತುಕೊಳ್ಳುತ್ತಾನೆ. 'ತಿನ್ನಲ್ಲ, ತಿನ್ನೋಕೆ ಬಿಡಲ್ಲ' ಅಂತ ಭಾಷಣ ಮಾಡುತ್ತಾನೆ. ಆದರೆ, ಶೇ 40ರಷ್ಟು ಲಂಚ ತಿಂದವರನ್ನು ಪಕ್ಕದಲ್ಲಿ ಕೂರಿಸಿಕೊಂಡು ರಾಜಕೀಯ ಮಾಡುತ್ತಾನೆ. ಆತ ದೇಶವನ್ನು ತನ್ನ ವಿಚಾರಧಾರೆಯಿಂದ ಹಾಳು ಮಾಡಲು ಬಂದಿದ್ದಾನೆ' ಎಂದು ಟೀಕಿಸಿದರು.



'ಸಂಸತ್‌ನಲ್ಲಿ ಪ್ರಶ್ನೆ ಮಾಡಿದರೆ 56 ಇಂಚಿನ ಎದೆ ಬಗ್ಗೆ ಹೇಳುತ್ತಾರೆ. ನಾವು ಅವರ ದೇಹದಾರ್ಢ್ಯತೆ ಕೇಳುತ್ತಿಲ್ಲ. ಅವರು ಮಾಡಿರುವ ಜನಪರ, ಅಭಿವೃದ್ಧಿಪರ ಕೆಲಸಗಳನ್ನು ಅಳತೆ ಮಾಡುತ್ತಿದ್ದೇವೆ' ಎಂದೂ ಹೇಳಿದರು.

6ನೇ ಪುಟ ನೋಡಿ



ದ್ರೋಹಿಗಳಿಗೆ ಮೋದಿ ಸಿಂಹಸ್ವಪ್ನ ಆಗಿದ್ದಾರೆ. ಪ್ರಧಾನಿ ಬಗ್ಗೆ ಖರ್ಗೆ ಅವರ ಮಾತುಗಳು ಅವರ ಸಂಸ್ಕೃತಿಯನ್ನು ತೋರಿಸುತ್ತವೆ. ಖರ್ಗೆ ಅವರ ವಿಚಾರಗಳ ಬಗ್ಗೆ ವಿರೋಧ ಇದ್ದರೂ ಅವರ ಹಿರಿತನಕ್ಕೆ ನಾವು ಗೌರವ ಕೊಡುತ್ತೇವೆ. ಹಿರಿಯರಾಗಿ ಹೀಗೆ ಹೇಳಿದ್ದು ಖೇದಕರ

ಬಸವರಾಜ ಬೊಮ್ಮಾಯಿ
ಮುಖ್ಯಮಂತ್ರಿ



ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಸೋಲು ಅನುಭವಿಸಲಿದೆ ಎಂಬ ಹತಾಶೆಯಿಂದ ಕಾಂಗ್ರೆಸ್ ಪಕ್ಷದ ಗ್ಯಾರಂಟಿ ಯೋಜನೆಗಳ ಬಗ್ಗೆ ಪ್ರಧಾನಿ ನರೇಂದ್ರ ಮೋದಿ ಟೀಕೆ ಮಾಡುತ್ತಿದ್ದಾರೆ

ಡಿ.ಕೆ. ಶಿವಕುಮಾರ್
ಕೆಪಿಸಿಸಿ ಅಧ್ಯಕ್ಷ

'ಭ್ರಷ್ಟಾಚಾರವೇ 'ಕೈ' ಗ್ಯಾರಂಟಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಗ್ಯಾರಂಟಿ ಎಂದರೆ ಭ್ರಷ್ಟಾಚಾರ ಗ್ಯಾರಂಟಿ ಮತ್ತು ಕುಟುಂಬ ಆಡಳಿತ ಗ್ಯಾರಂಟಿ. ಆದರೆ, ಕಾಂಗ್ರೆಸ್ ಪಕ್ಷದ 'ವಾರಂಟಿ' ಈಗಾಗಲೇ (ಎಕ್ಸ್‌ಪೈರಿ-ಬಳಕೆಯ ಅವಧಿ) ಮುಗಿದು ಹೋಗಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ವ್ಯಂಗ್ಯವಾಡಿದರು.

ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಪಕ್ಷದ ಕಾರ್ಯಕರ್ತರನ್ನು ಉದ್ದೇಶಿಸಿ ಗುರುವಾರ ವರ್ಚುವಲ್ ಆಗಿ ಸಂವಾದ ನಡೆಸಿದ ಅವರು, 'ಕಾಂಗ್ರೆಸ್ ವಿವಿಧ ರಾಜ್ಯಗಳಲ್ಲಿ ಚುನಾವಣೆಗೆ ಮುನ್ನ ಹಲವು ಗ್ಯಾರಂಟಿಗಳನ್ನು ನೀಡಿತ್ತು. ಆದರೆ ಎಲ್ಲೂ ಈಡೇರಿಸಿಲ್ಲ' ಎಂದರು.

'ಹಿಮಾಚಲ ಪ್ರದೇಶದಲ್ಲಿ ಚುನಾವಣೆಗೆ ಮುನ್ನ ಹಲವು ಗ್ಯಾರಂಟಿಗಳನ್ನು ನೀಡಿತ್ತು. ಆದರೆ, ಈವರೆಗೂ ಈಡೇರಿಸಿಲ್ಲ. ಇವರು ಯಾವಾಗ ಜಾರಿ ಮಾಡುತ್ತಾರೆ ಎಂಬುದನ್ನು ಜನ ಕಾಯುತ್ತಿದ್ದಾರೆ. ರಾಜಸ್ಥಾನದಲ್ಲೂ ಗ್ಯಾರಂಟಿ ನೀಡಿದ್ದರು. ಅಲ್ಲೂ ಈಡೇರಿಸಿಲ್ಲ. ಅಲ್ಲಿನ ಸರ್ಕಾರಗಳ ಅವಧಿ ಮುಗಿಯುತ್ತಾ ಬಂದಿದೆ. ಕರ್ನಾಟಕದಲ್ಲೂ ಸುಳ್ಳು ಭರವಸೆಗಳನ್ನು ಗ್ಯಾರಂಟಿ ಹೆಸರಿನಲ್ಲಿ ಮುಂದಿಟ್ಟಿದ್ದಾರೆ. ಅದರಲ್ಲಿ ಯಾವುದೂ ಈಡೇರಿಸುವಂಥದ್ದಲ್ಲ. ಕಾಂಗ್ರೆಸ್‌ನವರು ಕುಟುಂಬ ಆಡಳಿತದ ಗ್ಯಾರಂಟಿ ಮಾತ್ರ ನೀಡಬಲ್ಲರು' ಎಂದು ಹೇಳಿದರು.



6ನೇ ಪುಟ ನೋಡಿ

ಕಾಂಗ್ರೆಸ್ 5ನೇ ಗ್ಯಾರಂಟಿ

ಮಂಗಳೂರು: 'ಕಾಂಗ್ರೆಸ್ ನೇತೃತ್ವದ ಸರ್ಕಾರವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ದಿನದಿಂದಲೇ ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣದ ಸೌಲಭ್ಯ ಒದಗಿಸಲಾಗುವುದು' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಗುರುವಾರ ಘೋಷಿಸಿದರು. ಕಾಂಗ್ರೆಸ್ ಈಗಾಗಲೇ ನಾಲ್ಕು ಭರವಸೆಗಳ 'ಗ್ಯಾರಂಟಿ ಕಾರ್ಡ್' ಅನ್ನು ಬಿಡುಗಡೆ ಮಾಡಿದೆ.

ಸುದ್ದಿ 6

'2 ಬಿ'ಯಲ್ಲೇ ಮುಸ್ಲಿಮರಿಗೆ ಮತ್ತೆ ಮೀಸಲಾತಿ'

ಜೆಡಿಎಸ್ ವಾಗ್ದಾನ

ಬೆಂಗಳೂರು: 'ರಾಜ್ಯ ಬಿಜೆಪಿ ಸರ್ಕಾರ ಮುಸ್ಲಿಮರಿಂದ ಕಿತ್ತುಕೊಂಡಿರುವ ಪ್ರವರ್ಗ 2ಬಿ (ಶೇ 4) ಮೀಸಲಾತಿಯನ್ನು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಮತ್ತೆ ನೀಡುತ್ತೇವೆ' ಎಂದು ಜೆಡಿಎಸ್ ವಾಗ್ದಾನ ಮಾಡಿದೆ.

ವಿಧಾನಸಭೆ ಚುನಾವಣೆಗಾಗಿ ಪಕ್ಷ ಸಿದ್ಧಪಡಿಸಿದ 34 ಪುಟಗಳ 'ಜನತಾ ಪ್ರಣಾಳಿಕೆ'ಯನ್ನು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಗುರುವಾರ ಬಿಡುಗಡೆ ಮಾಡಿದರು. 'ಪಂಚರತ್ನ' ಯಾತ್ರೆ ಹಾಗೂ 'ಕರುನಾಡ ಜನರಿಗೆ ಜೆಡಿಎಸ್ ಪರಿಹಾರ' ಪತ್ರದಲ್ಲಿನ ಬಹುಪಾಲು ಅಂಶಗಳನ್ನೇ ಪ್ರಣಾಳಿಕೆ ಒಳಗೊಂಡಿದೆ.

ಮುಸ್ಲಿಮರಿಗೆ ನೀಡಿದ್ದ ಶೇ 4ರಷ್ಟು ಮೀಸಲಾತಿಯನ್ನು ರದ್ದುಪಡಿಸಿ, ಅವರನ್ನು ಆರ್ಥಿಕ ದುರ್ಬಲ ವರ್ಗದವರಿಗೆ ನೀಡಲಾದ ಮೀಸಲಾತಿ ವ್ಯಾಪ್ತಿಗೆ ತರಲು ನಿರ್ಧರಿಸಲಾಗಿತ್ತು.

6ನೇ ಪುಟ ನೋಡಿ

ಮತಗಟ್ಟೆ ಮಾಹಿತಿಗೆ ಶೋಭಾ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಮತಗಟ್ಟೆಗಳ ವಿವರ ಸಲ್ಲಿಸುವಂತೆ ತಮ್ಮ ಪಕ್ಷದ ಜಿಲ್ಲಾ ಘಟಕಗಳಿಗೆ ಮತ್ತು ಅಭ್ಯರ್ಥಿಗಳಿಗೆ ಬಿಜೆಪಿ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿಯ ಸಂಚಾಲಕಿ ಶೋಭಾ ಕರಂದ್ಲಾಜೆ ಬರೆದ ಪತ್ರಕ್ಕೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತೀವ್ರ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಈ ಬಗ್ಗೆ ಮಾತನಾಡಿರುವ ಅವರು, 'ಈ ವಿಷಯದಲ್ಲಿ ಕೇಂದ್ರ ಚುನಾವಣಾ ಆಯುಕ್ತರು ತಕ್ಷಣ ಮಧ್ಯ ಪ್ರವೇಶಿಸಬೇಕು' ಎಂದೂ ಆಗ್ರಹಿಸಿದ್ದಾರೆ.

ಶೋಭಾ ಕರಂದ್ಲಾಜೆ ಪತ್ರದಲ್ಲಿ ಏನಿದೆ?: ಬಿಜೆಪಿ ಜಿಲ್ಲಾ ಘಟಕಗಳ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿಗಳು, ಅಭ್ಯರ್ಥಿಗಳು ಮತ್ತು ಚುನಾವಣಾ ಏಜೆಂಟರಿಗೆ ಬರೆದ ಪತ್ರದಲ್ಲಿ, 'ಯಾವ ಯಾವ ಮತಗಟ್ಟೆಗಳನ್ನು ಸೂಕ್ಷ್ಮ ಮತ್ತು ಅತಿ ಸೂಕ್ಷ್ಮ ಎಂದು ಘೋಷಿಸಬೇಕು. ಯಾವ ಭಾಗಗಳಲ್ಲಿ ಕೇಂದ್ರ ಸೇನಾಪಡೆಗಳು ಅಥವಾ ಅರೆ ಸೇನಾ ಪಡೆಯ ತುಕಡಿಗಳನ್ನು ನಿಯೋಜಿಸಬೇಕು. ಯಾವ ಯಾವ ಮತಗಟ್ಟೆಗಳಿಗೆ ವೆಬ್ ಕಾಸ್ಟಿಂಗ್ ಮತ್ತು ವಿಡಿಯೊ ರೆಕಾರ್ಡಿಂಗ್ ಸೇವೆ ಅಗತ್ಯವಿದೆ ಎಂಬ ಬಗ್ಗೆ ಪಟ್ಟಿಯನ್ನು ಇ- ಮೇಲ್ ಮೂಲಕ ಕೂಡಲೇ ಕಳುಹಿಸಬೇಕು. ತಡವಾದರೆ ಪಟ್ಟಿಯಲ್ಲಿ ಸೇರಿಸುವುದು ಕಷ್ಟಕರ' ಎಂದು ಬರೆಯಲಾಗಿದೆ.

ಅಲ್ಲದೆ, ಇ- ಮೇಲ್ ವಿಳಾಸ (bjponline@gmail.com ಮತ್ತು bjplegalcell.2023@gmail.com) ಕೂಡ ನೀಡಲಾಗಿದೆ.

ಸಿದ್ದರಾಮಯ್ಯ ಆಕ್ಷೇಪ

'ಶೋಭಾ ಕರಂದ್ಲಾಜೆ ಅವರನ್ನು ವಿಚಾರಣೆಗೆ ಒಳಪಡಿಸಬೇಕು. ಅಲ್ಲದೆ, ಅವರು ಯಾವುದೇ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುವುದನ್ನು ನಿಷೇಧಿಸಬೇಕು. ಪಕ್ಷದ ನಾಯಕರು ಮತ್ತು ಅಭ್ಯರ್ಥಿಗಳಿಂದ ಅವರು ಪಡೆದಿರುವ ಮಾಹಿತಿಯನ್ನು ವಶಕ್ಕೆ ಪಡೆಯಬೇಕು' ಎಂದು ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

'ಚುನಾವಣೆ ನಡೆಸುತ್ತಿರುವುದು ಚುನಾವಣಾ ಆಯೋಗವೊ? ಬಿಜೆಪಿಯೊ? ಪಕ್ಷದ ಪದಾಧಿಕಾರಿಗಳು ನಿರ್ಧರಿಸಲಿರುವುದು ಸೂಕ್ಷ್ಮ, ಅತಿಸೂಕ್ಷ್ಮ ಮತಗಟ್ಟೆಗಳನ್ನೋ, ಬಿಜೆಪಿ ಪರ ಮತ್ತು ವಿರೋಧಿ ಮತದಾರರು ಇರುವ ಮತಗಟ್ಟೆಗಳನ್ನೋ' ಎಂದು ಪ್ರಶ್ನಿಸಿರುವ ಅವರು, 'ತಮ್ಮ ಪಕ್ಷದ ಪರವಾಗಿಲ್ಲದ ಮತದಾರರು ಇರುವ ಮತಗಟ್ಟೆಗಳಲ್ಲಿ ಭದ್ರತೆಯ ನೆಪದಲ್ಲಿ ಕೇಂದ್ರ ಸೇನಾಪಡೆಗಳನ್ನು ನಿಯೋಜಿಸಿ ಮತದಾರರನ್ನು ಬೆದರಿಸಿ, ಮತದಾನ ಮಾಡುವುದನ್ನು ತಡೆಯುವುದು ಈ ಪತ್ರದ ದುರುದ್ದೇಶವಾಗಿದೆ' ಎಂದಿದ್ದಾರೆ.

ಸಚಿವೆ ಸ್ಪಷ್ಟನೆ

'ಯಾವ ಯಾವ ಕ್ಷೇತ್ರಗಳು ಸೂಕ್ಷ್ಮ, ಅತಿ ಸೂಕ್ಷ್ಮ ಇವೆ, ಎಲ್ಲಿ ಕೇಂದ್ರ ಸೇನಾ ಪಡೆಗಳನ್ನು ನಿಯೋಜಿಸಬೇಕು ಮತ್ತು ಎಲ್ಲಿ ವೆಬ್ ಕಾಸ್ಟಿಂಗ್, ವಿಡಿಯೊ ರೆಕಾರ್ಡಿಂಗ್ ವ್ಯವಸ್ಥೆ ಮಾಡಬೇಕು ಎಂಬ ಮಾಹಿತಿಯನ್ನು ಪಕ್ಷದ ಕಾರ್ಯಕರ್ತರ ಮೂಲಕ ಪಡೆದು ಚುನಾವಣಾ ಆಯೋಗಕ್ಕೆ ಸಲ್ಲಿಸಲು ಆಂತರಿಕವಾಗಿ ಪತ್ರ ಕಳುಹಿಸಲಾಗಿತ್ತು. ಇದಕ್ಕೆ ಸಿದ್ದರಾಮಯ್ಯ ಅವರ ಆಕ್ಷೇಪ ಏಕೆ' ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪ್ರಶ್ನಿಸಿದ್ದಾರೆ.


ಪ್ರಜಾ ಮತ
ಜನತಂತ್ರದ ಹಬ್ಬ
'ಕೈ' ಕೋಟೆಯಲ್ಲಿ 'ತಾವರೆ' ಬೇರು 7
ಗಿರಿ ಜಿಲ್ಲೆಯಲ್ಲಿ ಗೆಲುವಿನ ಗರಿ ಯಾರಿಗೆ? 7
ಚುನಾವಣೆ ಕಣದಲ್ಲಿ ಗೋಬಿ ವ್ಯಾಪಾರಿ 6

'ಸಲಿಂಗ ಜೋಡಿಗೆ ಕೆಲವು ಸಾಮಾಜಿಕ ಸೌಲಭ್ಯ ನೀಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸಲಿಂಗಿಗಳ ಮದುವೆಗೆ ಕಾನೂನಿನಡಿ ಮಾನ್ಯತೆ ಇಲ್ಲದಿದ್ದರೂ, ಅಂತಹ ಜೋಡಿಗೆ ಜಂಟಿ ಬ್ಯಾಂಕ್ ಖಾತೆ, ವಿಮಾ ಪಾಲಿಸಿಗಳಲ್ಲಿ ನಾಮನಿರ್ದೇಶನದಂತಹ ಸಾಮಾಜಿಕ ಸೌಲಭ್ಯಗಳನ್ನು ನೀಡಲು ಸಾಧ್ಯವೇ ಎಂದು ಕೇಂದ್ರ ಸರ್ಕಾರವನ್ನು ಸುಪ್ರೀಂ ಕೋರ್ಟ್ ಗುರುವಾರ ಕೇಳಿದೆ.

ಸಲಿಂಗ ಮದುವೆಗೆ ಮಾನ್ಯತೆ ನೀಡುವುದಕ್ಕೆ ಸಂಬಂಧಿಸಿ ಸಂಸತ್ ನಿರ್ಧಾರ ಕೈಗೊಳ್ಳಬೇಕು ಎಂಬ ಕೇಂದ್ರದ ವಾದಕ್ಕೆ ಮೌಖಿಕವಾಗಿ ಸಮ್ಮತಿ ಸೂಚಿಸಿದ ನಂತರ ಸುಪ್ರೀಂಕೋರ್ಟ್ ಈ ಮಾತನ್ನು ಹೇಳಿತು.



ಈ ವಿಷಯಕ್ಕೆ ಸಂಬಂಧಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಐವರು ಸದಸ್ಯರಿರುವ ಸಂವಿಧಾನ ಪೀಠ ನಡೆಸಿತು.

ಕೇಂದ್ರದ ಪರ ವಾದ ಮಂಡಿಸಿದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ಕಾನೂನು ಮಾನ್ಯತೆ ಇಲ್ಲದಿದ್ದಾಗ ಸಲಿಂಗ ಜೋಡಿ ಎದುರಿಸಬಹುದಾದ ಸಮಸ್ಯೆಗಳಿಗೆ ಪರಿಹಾರ ಒದಗಿಸಲು ಸರ್ಕಾರ ಕ್ರಮ ತೆಗೆದುಕೊಳ್ಳಬಹುದು' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಕಾನೂನು ಮಾನ್ಯತೆ ಇಲ್ಲದಿದ್ದಾಗಲೂ ಸಲಿಂಗ ಜೋಡಿಗೆ ನೀಡಬಹುದಾದ ಸಾಮಾಜಿಕ ಸೌಲಭ್ಯಗಳಿಗೆ ಸಂಬಂಧಿಸಿದ ಪ್ರತಿಕ್ರಿಯೆಯನ್ನು ಮೇ 3ರಂದು ಸಲ್ಲಿಸಬೇಕು' ಎಂದು ಸೂಚಿಸಿತು.

ಇದಕ್ಕೂ ಮುನ್ನ ವಾದ ಮಂಡಿಸಿದ ಮೆಹ್ತಾ, 'ಒಂದು ವೇಳೆ ಸಲಿಂಗಿಗಳ ಮದುವೆಗೆ ಕಾನೂನು ಮಾನ್ಯತೆ ನೀಡಿದರೆ, ಇಂಥ ವೈವಾಹಿಕ ಸಂಬಂಧವನ್ನು ಪ್ರಶ್ನಿಸಿ ಯಾರಾದರೂ ಕೋರ್ಟ್ ಮೆಟ್ಟಿಲೇರಬಹುದು. ಈ ವಿಷಯದಲ್ಲಿ ಮಧ್ಯಪ್ರವೇಶಿಸಲು ಸರ್ಕಾರಕ್ಕೆ ಅಧಿಕಾರ ಇಲ್ಲ ಎಂಬುದಾಗಿ ವಾದಿಸಬಹುದು' ಎಂದರು.

> ಸಲಿಂಗಿಗಳ ಸಂಬಂಧಕ್ಕೆ ಕೋರ್ಟ್ ಮಾನ್ಯತೆ ನೀಡುತ್ತದೆ ಎಂದ ಮಾತ್ರಕ್ಕೆ ಅದನ್ನು ಅವರ ಮದುವೆಗೆ ನೀಡಿದ ಮಾನ್ಯತೆ ಎಂದರ್ಥ ಮಾಡಿಕೊಳ್ಳುವಂತಿಲ್ಲ. ಕೆಲ ಸೌಲಭ್ಯಗಳನ್ನು ಪಡೆಯಲು ಈ (ಸಲಿಂಗ) ಜೋಡಿ ಅರ್ಹರಾಗಿರುತ್ತಾರೆ ಎಂದು ಅರ್ಥ. ಅಲ್ಲದೇ, ಇಬ್ಬರು ಒಟ್ಟಿಗೆ ಬಾಳುತ್ತಿದ್ದಾರೆ ಎಂದರೆ, ಅವರು ಮದುವೆಯಾಗಿದ್ದಾರೆ ಎಂದು ಭಾವಿಸಬಾರದು
>
> **ಡಿ.ವೈ. ಚಂದ್ರಚೂಡ್,** ಮುಖ್ಯ ನ್ಯಾಯಮೂರ್ತಿ

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, 'ಒಟ್ಟಿಗೆ ಬಾಳುವ ಹಕ್ಕು ಮೂಲಭೂತ ಹಕ್ಕಾಗಿದೆ ಎಂಬುದನ್ನು ಒಪ್ಪಿಕೊಂಡ ಮೇಲೆ, ಇಂಥ ಸಂಬಂಧಗಳಿಂದ ಸಮಾಜದ ಮೇಲಾಗುವ ಪರಿಣಾಮಗಳಿಗೂ ಕಾನೂನು ಮಾನ್ಯತೆ ನೀಡುವುದು ಸರ್ಕಾರದ ಬಾಧ್ಯತೆಯಾಗಿರುತ್ತದೆ. ಅಂಥ ಸಂದರ್ಭದಲ್ಲಿ ನ್ಯಾಯಾಲಯವು (ಸಲಿಂಗ) ಮದುವೆ ವಿಷಯದಲ್ಲಿ ಏನೂ ನಿರ್ಣಯ ಕೈಗೊಳ್ಳುವುದಿಲ್ಲ' ಎಂದಿತು.

'ಇಂಥ ಸಂಬಂಧಗಳಿಗೆ ಸುರಕ್ಷಿತ ಭಾವನೆ ಮೂಡಬೇಕು. ಅವರ ಪ್ರಗತಿಗೂ ಅವಕಾಶ ಇರಬೇಕು. ಅಲ್ಲದೇ, ಅವರನ್ನು ಸಮಾಜವು ಬಹಿಷ್ಕರಿಸದಂತೆ ಮಾಡಲು ಏನು ಕ್ರಮ ತೆಗೆದುಕೊಳ್ಳಬೇಕು ಎಂಬ ಬಗ್ಗೆಯೂ ತಿಳಿಸಬೇಕು' ಎಂದು ನ್ಯಾಯಪೀಠ ಸೂಚಿಸಿತು.

'ದೇಶದಲ್ಲಿ ಪ್ರಾತಿನಿಧಿಕ ಪ್ರಜಾತಂತ್ರ ಇರಬೇಕು ಎಂಬ ಬಗ್ಗೆ ನ್ಯಾಯಾಲಯಕ್ಕೆ ಅರಿವಿದೆ. ಅಲ್ಲದೇ, ಇಂಥ ವಿಷಯಗಳಲ್ಲಿ ವ್ಯಾಪಕ ಸಹಮತವೂ ಅಗತ್ಯ' ಎಂದು ನ್ಯಾಯಪೀಠ ಹೇಳಿತು.

ಆಗ, 'ಸಲಿಂಗ ಮದುವೆಗೆ ವಿಶೇಷ ವಿವಾಹ ಕಾಯ್ದೆಯಡಿ ಮಾನ್ಯತೆ ನೀಡಿದಲ್ಲಿ, ವೈಯಕ್ತಿಕ ಕಾನೂನುಗಳಲ್ಲಿ ಮಾರ್ಪಾಡು ಸಾಧ್ಯವಾಗುವುದಿಲ್ಲ' ಎಂದು ಮೆಹ್ತಾ ಹೇಳಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ



ಸಿಎಸಿ ಕಾರ್ಯಕ್ರಮ ಅನುಷ್ಠಾನ: ರಾಜ್ಯಕ್ಕೆ 2ನೇ ಸ್ಥಾನ

ಬೆಂಗಳೂರು: 'ಸಮಗ್ರ ಗರ್ಭಪಾತ ಆರೈಕೆ' (ಸಿಎಸಿ) ಕಾರ್ಯಕ್ರಮ ಅನುಷ್ಠಾನದಲ್ಲಿ ಕರ್ನಾಟಕವು ದೇಶದಲ್ಲಿ ಎರಡನೇ ಅತ್ಯುತ್ತಮ ರಾಜ್ಯ ಎಂಬ ಗೌರವಕ್ಕೆ ಭಾಜನವಾಗಿದೆ.

ನವದೆಹಲಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಆರೋಗ್ಯ ಸಚಿವಾಲಯವು ರಾಜ್ಯ ಆರೋಗ್ಯ ಇಲಾಖೆಗೆ ಪ್ರಶಸ್ತಿ ಪ್ರದಾನ ಮಾಡಿತು. ಈ ಕಾರ್ಯಕ್ರಮದಲ್ಲಿ ಗರ್ಭಪಾತದ ಆರೈಕೆ ಸುಧಾರಿಸುವ ಸವಾಲುಗಳು ಹಾಗೂ ಆರೈಕೆಯ ಬಗ್ಗೆ ಚರ್ಚಿಸಲಾಯಿತು.

ಅಸುರಕ್ಷಿತ ಗರ್ಭಪಾತವು ತಾಯಿಯ ಮರಣಕ್ಕೆ ಕಾರಣವಾಗಲಿದೆ. ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಸುರಕ್ಷಿತ ಗರ್ಭಪಾತ ಸೇವೆಗಳನ್ನು ಒದಗಿಸಲು ಕ್ರಮವಹಿಸಲಾಗಿದೆ ಎಂದು ಇಲಾಖೆ ತಿಳಿಸಿದೆ.

ರಾಜ್ಯ ಸರ್ಕಾರದ ಮೇಲ್ಮನವಿ ವಜಾ
ಇಲಾಖಾ ವಿಚಾರಣೆಗೆ 28 ವರ್ಷ: ಹೈಕೋರ್ಟ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೊಕ್ಕಸಕ್ಕೆ ನಷ್ಟ ಉಂಟುಮಾಡಿದ ಆರೋಪದಡಿ ರಾಜ್ಯ ಪೌರಾಡಳಿತ ಇಲಾಖೆಯ ನಿವೃತ್ತ ಆಯುಕ್ತರೊಬ್ಬರ ವಿರುದ್ಧ 28 ವರ್ಷ ಕಳೆದರೂ ಇಲಾಖೆ ವಿಚಾರಣೆ ಪೂರ್ಣಗೊಳಿಸದ ಸರ್ಕಾರದ ಕಾರ್ಯವೈಖರಿಗೆ ಹೈಕೋರ್ಟ್ ಕಿಡಿ ಕಾರಿದೆ.

ನಿವೃತ್ತ ಆಯುಕ್ತ ಕೆ.ಎಂ.ರಾಮಪ್ಪ ಎಂಬುವರ ವಿರುದ್ಧದ ಇಲಾಖಾ ವಿಚಾರಣೆ ರದ್ದುಪಡಿಸಿದ್ದ ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ) ಆದೇಶ ಪ್ರಶ್ನಿಸಿ ಸರ್ಕಾರ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಜಿ.ನರೇಂದರ್ ನೇತೃತ್ವದ ವಿಭಾಗೀಯ ಪೀಠ ಸರ್ಕಾರದ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿ ಮೇಲ್ಮನವಿಯನ್ನು ವಜಾಗೊಳಿಸಿದೆ.

'ರಾಮಪ್ಪ ವಿರುದ್ಧ 1996ರಿಂದ 97ರ ಅವಧಿಯಲ್ಲಿ ಆರೋಪ ಕೇಳಿ ಬಂದಿದೆ. ಅವರು ಸೇವೆಯಿಂದ ನಿವೃತ್ತಿಯಾಗಿ 13 ವರ್ಷ ಕಳೆದ ನಂತರ ಇಲಾಖಾ ತನಿಖೆ ನಡೆಸಲು ಸರ್ಕಾರ ಅಧಿಕಾರಿಯನ್ನು ನೇಮಿಸಿದೆ. ವಿಚಾರಣೆಗಾಗಿ ಈತನಕ ಒಂದೂ ಸಭೆ ನಡೆಸಿಲ್ಲ. ವಿಚಾರಣೆ ಮುಂದುವರಿಸಲು ಈಗ ಪುನಃ ಮತ್ತೊಬ್ಬ ಅಧಿಕಾರಿಯನ್ನು ನೇಮಿಸಲಾಗಿದೆ. ಇಷ್ಟೊಂದು ವಿಳಂಬ ನ್ಯಾಯಸಮ್ಮತವಲ್ಲ' ಎಂದು ನ್ಯಾಯಪೀಠ ಹೇಳಿದೆ.



'ಸುದೀರ್ಘ ವಿಳಂಬವನ್ನು ಪರಿಗಣಿಸಿ ರಾಮಪ್ಪ ವಿರುದ್ಧದ ವಿಚಾರಣೆ ರದ್ದುಪಡಿಸಿರುವ ಕೆಎಟಿ ಕ್ರಮ ನ್ಯಾಯಸಮ್ಮತವಾಗಿದೆ. ಇದರಲ್ಲಿ ಮಧ್ಯಪ್ರವೇಶಿಸಲು ಮತ್ತು ಸರ್ಕಾರದ ಮೇಲ್ಮನವಿ ಪುರಸ್ಕರಿಸಲು ಯಾವುದೇ ಸಕಾರಣ ಕಂಡುಬರುತ್ತಿಲ್ಲ' ಎಂದು ನ್ಯಾಯಪೀಠ ವಿವರಿಸಿದೆ.

ಪ್ರಕರಣವೇನು?: ಬೆಂಗಳೂರಿನ ಕೆ.ಆರ್.ಪುರ ಪುರಸಭೆಗೆ 1996ರಿಂದ 1997ರ ಅವಧಿಯಲ್ಲಿ ಆಯುಕ್ತರಾಗಿದ್ದ ರಾಮಪ್ಪ, ಜಿಲ್ಲಾಧಿಕಾರಿ ಅನುಮತಿ ಪಡೆಯದೆ ಮತ್ತು ಟೆಂಡರ್ ಕರೆಯದೆ ಕೆಲ ಕಾಮಗಾರಿ ನಡೆಸಿ ಬಿಲ್ ಪಾವತಿಸಿದ ಮತ್ತು ಸರ್ಕಾರದ ಬೊಕ್ಕಸಕ್ಕೆ ₹ 29 ಲಕ್ಷ ನಷ್ಟ ಉಂಟು ಮಾಡಿದ ಆರೋಪಕ್ಕೆ ಒಳಗಾಗಿದ್ದರು. ಹೀಗಾಗಿ, ರಾಮಪ್ಪ ವಿರುದ್ಧ 2006ರ ನವೆಂಬರ್ 10ರಂದು ಇಲಾಖಾ ವಿಚಾರಣೆಗೆ ಆದೇಶಿಸಲಾಗಿತ್ತು

ಏತನ್ಮಧ್ಯೆ, ರಾಮಪ್ಪ ದೊಡ್ಡಬಳ್ಳಾಪುರ ಪುರಸಭೆ ಆಯುಕ್ತರಾಗಿ ವರ್ಗಾವಣೆಗೊಂಡಿದ್ದರು. ಸರ್ಕಾರ 2007ರ ಡಿಸೆಂಬರ್ 7ರಂದು ರಾಮಪ್ಪ ಅವರಿಗೆ ನೋಟಿಸ್ ನೀಡಿತ್ತು. ಇದಕ್ಕೆ ಪ್ರತಿಕ್ರಿಯಿಸಿದ್ದ ರಾಮಪ್ಪ ತಮ್ಮ ವಿರುದ್ಧದ ಎಲ್ಲಾ ಆರೋಪಗಳನ್ನು ನಿರಾಕರಿಸಿದ್ದರು. ಅಂತೆಯೇ, 2010ರ ಮೇ 31ರಂದು ನಿವೃತ್ತರಾಗಿದ್ದರು.

ಈ ಎಲ್ಲ ಪ್ರಕ್ರಿಯೆ ನಡೆದ 18 ವರ್ಷಗಳ ಬಳಿಕ ಸರ್ಕಾರವು ಪ್ರಕರಣದ ಇಲಾಖಾ ವಿಚಾರಣೆಗೆಂದು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ನಿವೃತ್ತ ಜಿಲ್ಲಾ ನ್ಯಾಯಾಧೀಶರನ್ನು ವಿಚಾರಣಾ ಅಧಿಕಾರಿಗಳಾಗಿ ನೇಮಿಸಿತ್ತು. ಆದರೆ, ಇವರು ವಿಚಾರಣೆಗಾಗಿ ಯಾವುದೇ ಸಭೆ ನಡೆಸಿರಲಿಲ್ಲ. 2019ರಲ್ಲಿ ಮತ್ತೊಬ್ಬ ವಿಚಾರಣಾ ಅಧಿಕಾರಿಯನ್ನು ನೇಮಿಸಲಾಗಿತ್ತು. ಇದನ್ನು ಪ್ರಶ್ನಿಸಿ ರಾಮಪ್ಪ ಕೆಎಟಿಯಲ್ಲಿ ಅರ್ಜಿ ಸಲ್ಲಿಸಿದ್ದರು. ಕೆಎಟಿ ಇಲಾಖಾ ವಿಚಾರಣೆಯನ್ನು ರದ್ದುಪಡಿಸಿತ್ತು. ಹೈಕೋರ್ಟ್ ಕೆಎಟಿ ಆದೇಶವನ್ನು ಎತ್ತಿಹಿಡಿದಿದೆ.

ಸುದ್ದಿ 2 ನಿಮಿಷ

ಮೂರು ತಿಂಗಳಲ್ಲಿ ಪರಿಸರ ಪರಿಹಾರ ವಸೂಲಿಗೆ ಆದೇಶ

ನವದೆಹಲಿ: ಆನೇಕಲ್ ತಾಲ್ಲೂಕಿನ ಸೋಂಪುರದಲ್ಲಿರುವ ಎಸ್‌ಎನ್‌ಆರ್ ಸಿಲ್ವರ್ ರಿಪಲ್ ಅಪಾರ್ಟ್‌ಮೆಂಟ್ ಸಮುಚ್ಚಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಕ್ಕೆ (ಎಸ್‌ಟಿಪಿ) ಅನುಮತಿ ಪಡೆಯದ ಹಾಗೂ ಘಟಕ ಸ್ಥಗಿತಗೊಂಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂರು ತಿಂಗಳಲ್ಲಿ ಪರಿಸರ ಪರಿಹಾರ ವಸೂಲಿ ಮಾಡುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಚೆನ್ನೈ ಪೀಠ ಆದೇಶಿಸಿದೆ.

'ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣಕ್ಕೆ ಬಿಲ್ಡರ್ ಅನುಮತಿ ಪಡೆದಿಲ್ಲ. ಜತೆಗೆ, ಈ ಘಟಕ ಕಾರ್ಯಾಚರಿಸುತ್ತಿಲ್ಲ. ಇದರಿಂದಾಗಿ ಸುತ್ತಮುತ್ತಲಿನ ಜಲಕಾಯ ಕಲುಷಿತಗೊಳ್ಳುತ್ತಿದೆ' ಎಂದು ಆರೋಪಿಸಿ ಅಪಾರ್ಟ್‌ಮೆಂಟ್‌ನ ನಿವಾಸಿ ವಿಕಾಸ್ ಆರ್.ಎಸ್.ಎಂಬುವರು ಎನ್‌ಜಿಟಿಗೆ ದೂರು ನೀಡಿದ್ದರು. ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಪುಷ್ಪಾ ಸತ್ಯನಾರಾಯಣ ಹಾಗೂ ಸತ್ಯಗೋಪಾಲ್ ಕೊರ್ಲಪಾಟಿ ಅವರನ್ನು ಒಳಗೊಂಡ ಪೀಠವು ಗುರುವಾರ ತೀರ್ಪು ಪ್ರಕಟಿಸಿದೆ.



ಈ ಅಪಾರ್ಟ್‌ಮೆಂಟ್ ಸಮುಚ್ಚಯದಲ್ಲಿ 120 ಫ್ಲ್ಯಾಟ್‌ಗಳಿವೆ. ಇಲ್ಲಿರುವ ಎಸ್‌ಟಿಪಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಒಪ್ಪಿಗೆ ಪಡೆದಿಲ್ಲ. ಇಲ್ಲಿರುವ ಎಸ್‌ಟಿಪಿ ಕಾರ್ಯಾಚರಣೆ ನಡೆಸದೆ ಇರುವುದು ಮಂಡಳಿ ಅಧಿಕಾರಿಗಳ ಪರಿಶೀಲನೆ ವೇಳೆ ಪತ್ತೆಯಾಗಿತ್ತು. ಈ ಸಂಬಂಧ ಮಾಲಿನ್ಯ ನಿಯಂತ್ರಣ ಮಂಡಳಿಯು ಬಿಲ್ಡರ್‌ಗೆ ನೋಟಿಸ್ ನೀಡಿತ್ತು. ಪರಿಸರ ಪರಿಹಾರದ ರೂಪದಲ್ಲಿ ₹37.51 ಲಕ್ಷ ಪಾವತಿಸುವಂತೆಯೂ ಸೂಚಿಸಿತ್ತು.

'ಅಯೋಧ್ಯಾ ಕಾಂಡ' ನಾಟಕ ಪ್ರದರ್ಶನ ಮೇ 6ರಂದು

ಬೆಂಗಳೂರು: ನವೋದಯ ತಂಡದಿಂದ ವಾಲ್ಮೀಕಿ ರಾಮಾಯಣ ಆಧಾರಿತ 'ಅಯೋಧ್ಯಾ ಕಾಂಡ' ನಾಟಕದ ಪ್ರದರ್ಶನವನ್ನು ಮೇ 6ರ ಮಧ್ಯಾಹ್ನ 3.30 ಹಾಗೂ ಸಂಜೆ 7.30ಕ್ಕೆ ರಂಗಶಂಕರದಲ್ಲಿ ಹಮ್ಮಿಕೊಳ್ಳಲಾಗಿದೆ.

ಈ ನಾಟಕವನ್ನು ರಂಗಕರ್ಮಿ ಪ್ರಸನ್ನ ರಚಿಸಿ-ನಿರ್ದೇಶಿಸಿದ್ದು, ಅನುಷ್ ಶೆಟ್ಟಿ ಸಂಗೀತ ಸಂಯೋಜಿಸಿದ್ದಾರೆ. ವಸ್ತ್ರಾಲಂಕಾರ ನಂದಿನಿ ಕೆ.ಆರ್., ಪ್ರಸಾಧನ ಬಿ.ಎಂ.ರಾಮಚಂದ್ರ ಮತ್ತು ಬೆಳಕಿನ ವಿನ್ಯಾಸವನ್ನು ಮಧುಸೂಧನ್ ಅಯ್ಯಂಗಾರ್ ಮಾಡಿದ್ದಾರೆ. ಮುಖ್ಯ ಪಾತ್ರದಲ್ಲಿ ಪ್ರದೀಪ್ ಉಡುಪಿ, ಪದ್ಮಶ್ರೀ ಸಿ.ಆರ್., ವಾಧಿರಾಜ್, ಸುಂದರೀಶ್ ದೇವಪ್ರಿಯ (ಮುನ್ನ), ಅನುಷ್ ಶೆಟ್ಟಿ, ರಾಜಲಕ್ಷ್ಮಿ, ಕೆ. ಮೂರ್ತಿ ಅಭಿನಯಿಸಲಿದ್ದಾರೆ.

ಮಾಹಿತಿಗೆ ಮೊ.ಸಂಖ್ಯೆ: 9590259095 (ರಾಜೇಶ್) ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

'ಪಂಪ್‌ಹೌಸ್‌ಗೆ ವಿದ್ಯುತ್ ಪೂರೈಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಸಮರ್ಪಕವಾಗಿ ಕುಡಿಯುವ ನೀರು ಪೂರೈಸಲು ಪಂಪ್‌ಹೌಸ್‌ಗಳಿಗೆ ನಿರಂತರವಾಗಿ ವಿದ್ಯುತ್ ಪೂರೈಸುವಂತೆ ಕೆಪಿಟಿಸಿಎಲ್ ಮತ್ತು ಬೆಸ್ಕಾಂ ಅಧಿಕಾರಿಗಳಿಗೆ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಸೂಚಿಸಿದ್ದಾರೆ.

ನೀರು ಪೂರೈಕೆಗೆ ಸಂಬಂಧಿಸಿದಂತೆ ಗುರುವಾರ ನಡೆದ ಸಭೆಯಲ್ಲಿ ಈ ಸೂಚನೆ ನೀಡಿದ ಅವರು, 'ವಿದ್ಯುತ್ ವ್ಯತ್ಯಯವಾಗದಂತೆ ಎಚ್ಚರವಹಿಸಬೇಕು. ಇದು ಬೇಸಿಗೆ ಹಾಗೂ ಚುನಾವಣೆ ಸಮಯವಾಗಿರುವುದರಿಂದ ಈ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ತಿಳಿಸಿದರು.

'ರಜಾ ದಿನಗಳು ಸೇರಿದಂತೆ ಪ್ರತಿ ದಿನವೂ ವಿದ್ಯುತ್ ಸರಬರಾಜಿನ ಮೇಲೆ ನಿಗಾವಹಿಸಬೇಕು. ಜಲಮಂಡಳಿ ಮತ್ತು ಕೆಪಿಟಿಸಿಎಲ್ ನಿರ್ದೇಶಕರು, ಬೆಸ್ಕಾಂ ಮುಖ್ಯ ಎಂಜಿನಿಯರ್ ಪರಸ್ಪರ ಸಂಪರ್ಕದಲ್ಲಿರಬೇಕು' ಎಂದು ಸೂಚಿಸಿದರು.

ಜಲಮಂಡಳಿ ಅಧ್ಯಕ್ಷ ಎನ್. ಜಯರಾಮ್, ನಗರದಲ್ಲಿ ಬೇಸಿಗೆ ಹೆಚ್ಚಾಗಿರುವುದರಿಂದ ನೀರಿನ ಬೇಡಿಕೆ ಹೆಚ್ಚಾಗಿದೆ. ನಿರಂತರವಾಗಿ ನೀರು ಪೂರೈಸಲು ಸಮರ್ಪಕ ವಿದ್ಯುತ್ ಸರಬರಾಜು ಅಗತ್ಯವಾಗಿದೆ. ಆದರೆ, ಪಂಪ್‌ಹೌಸ್‌ಗಳಲ್ಲಿ ಪದೇ ಪದೇ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗುತ್ತಿದೆ. ಇದರಿಂದಾಗಿ, ನೀರು ಸರಬರಾಜಿನ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತಿದೆ. ಒಮ್ಮೆ ವಿದ್ಯುತ್ ಸಂಪರ್ಕ ಕಡಿತಗೊಂಡರೆ ಮತ್ತೆ ನೀರು ಪೂರೈಸುವ ವ್ಯವಸ್ಥೆ ಪುನರ್ ಸ್ಥಾಪನೆಯಾಗಲು ಹಲವಾರು ಗಂಟೆಗಳು ಬೇಕಾಗುತ್ತವೆ' ಎಂದು ಅವರು ವಿವರಿಸಿದರು.

ಜಲಮಂಡಳಿ ಫೋನ್ ಇನ್ ನಾಳೆ

ಬೆಂಗಳೂರು: ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಇದೇ ಏಪ್ರಿಲ್ 29ರಂದು ಬೆಳಿಗ್ಗೆ 9ರಿಂದ 10.30ರವರೆಗೆ ನೇರ ಫೋನ್ ಇನ್ ಕಾರ್ಯಕ್ರಮ ಹಮ್ಮಿಕೊಂಡಿದೆ.ಜಲಮಂಡಳಿ ಅಧ್ಯಕ್ಷ ಎನ್. ಜಯರಾಂ ಅವರು ಅಹವಾಲು ಆಲಿಸಲಿದ್ದಾರೆ.

ನೀರಿನ ಸಂಪರ್ಕ ಹೊಂದಿರುವ ಗ್ರಾಹಕರು ತಮ್ಮ ಆರ್.ಆರ್.ಸಂಖ್ಯೆ ತಿಳಿಸಿ ದೂರು ನೀಡಬಹುದು. ದೂರವಾಣಿ ಸಂಖ್ಯೆ: 080-22945119.

ಶಕುಂತಲಾ ದೇವಿ ಕಾಲೇಜು ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಎಚ್.ಎಸ್‌ಆರ್ ಲೇಔಟ್‌ನ ಶಕುಂತಲಾ ದೇವಿ ಪದವಿ ಪೂರ್ವ ಕಾಲೇಜಿನ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಸ್ನೇಹಾ ಶೆಟ್ಟಿ (ಶೇ 95.5), ವಾಣಿಜ್ಯ ವಿಭಾಗದ ವಿದ್ಯಾರ್ಥಿಯಾದ ಅನು ರಾಜ್ಬರ್ (ಶೇ 91.5) ಅವರು ಉತ್ತಮ ಸಾಧನೆ ಮಾಡಿದ್ದಾರೆ' ಎಂದು ಕಾಲೇಜಿನ ನಿರ್ದೇಶಕ ಡಾ. ಕೆ. ಗೋಕುಲನಾಥ ಮತ್ತು ಪ್ರಾಂಶುಪಾಲ ರಾಘವೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಅನು ರಾಜ್ಬರ್


ಸ್ನೇಹಾ ಶೆಟ್ಟಿ


ನಗರದ ಕೋಟೆ ಪ್ರೌಢ ಶಾಲೆಯ ಆವರಣದಲ್ಲಿ ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್ ಆಯೋಜಿಸಿದ್ದ 85ನೇ ಶ್ರೀ ರಾಮನವಮಿ ಸಂಗೀತೋತ್ಸವ ಅಂಗವಾಗಿ ಎಂ.ಎಸ್. ಶೀಲಾ ಅವರು ಸಂಗೀತ ಕಛೇರಿ ನೀಡಿದರು ಎಚ್. ಎಂ. ಸ್ಮಿತಾ ಪಿಟೀಲಿನಲ್ಲಿ ಸಾಥ್ ನೀಡಿದರು
–ಪ್ರಜಾವಾಣಿ ಚಿತ್ರ ಕಿಶೋರ್ ಕುಮಾರ್ ಬೋಳಾರ್

'ರೈತ ವಿರೋಧಿ ಕಾನೂನುಗಳನ್ನು ಜಾರಿಗೊಳಿಸಬಾರದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೈತ ವಿರೋಧಿ ಕಾನೂನುಗಳನ್ನು ಜಾರಿಗೊಳಿಸಬಾರದು, ರೈತರಿಗೆ ಆದಾಯದ ಭದ್ರತೆ ನೀಡಬೇಕು. ಯುವಕರನ್ನು ಕೃಷಿಯತ್ತ ಸೆಳೆಯುವ ಮೂಲಕ ಈ ವಲಯವನ್ನು ಸದೃಢಗೊಳಿಸಬೇಕು' ಎಂದು ಆರ್ಥಿಕ ತಜ್ಞ ಪ್ರಕಾಶ್ ಕಮ್ಮರಡಿ ಆಗ್ರಹಿಸಿದರು.

ನಗರದಲ್ಲಿ ಗುರುವಾರ ರಾಜ್ಯ ರೈತ ಸಂಘ ಹಮ್ಮಿಕೊಂಡಿದ್ದ ರೈತ ಪ್ರಣಾಳಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, 'ಕರ್ನಾಟಕದ ಕೃಷಿಕರು ಎದುರಿಸುತ್ತಿರುವ ಬಿಕ್ಕಟ್ಟಿಗೆ ಸಮಗ್ರ ಪರಿಹಾರ ಕಂಡು ಹಿಡಿಯಬೇಕು. ರೈತರ ಉತ್ಪನ್ನಗಳಿಗೆ ಲಾಭದಾಯಕ ದರ ನಿಗದಿಪಡಿಸಲು ಕನಿಷ್ಠ ಬೆಂಬಲ ಬೆಲೆಗೆ ಕಾನೂನಿನ ರಕ್ಷಣೆ ನೀಡಬೇಕು. ಬರ ಮತ್ತು ಹವಾಮಾನ ವಿಕೋಪಗಳಿಗೆ ಪರಿಹಾರ ಒದಗಿಸಬೇಕು' ಎಂದರು.

'ಬಂಡವಾಳಶಾಹಿಗಳ ಪರವಾಗಿ ಎಪಿಎಂಸಿ ವ್ಯವಸ್ಥೆಗೆ ತಂದಿರುವ ತಿದ್ದುಪಡಿ ಕಾಯ್ದೆ, ಗೋಹತ್ಯೆ ನಿಷೇಧ ಮತ್ತು ಸಂರಕ್ಷಣಾ ಕಾಯ್ದೆಗಳನ್ನು ಕೂಡಲೇ ರದ್ದುಗೊಳಿಸಬೇಕು. ರಾಜ್ಯದಲ್ಲಿ ಯುವ ರೈತರಿಗೆ ವಧುಗಳೇ ಸಿಗದಿರುವ ಸಾಮಾಜಿಕ ಸಮಸ್ಯೆ ತಲೆದೋರಿದೆ. ಆದ್ದರಿಂದ, ರೈತರನ್ನು ಮದುವೆಯಾಗುವ ಹೆಣ್ಣು ಮಕ್ಕಳಿಗೆ ಸರ್ಕಾರ ₹10 ಲಕ್ಷ ಉಳಿತಾಯ ಬಾಂಡ್ ನೀಡಬೇಕು' ಎಂದು ಹೇಳಿದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಮಾತನಾಡಿ, 'ಕರ್ನಾಟಕ ಕೃಷಿ ಬೆಲೆ ಆಯೋಗದ ಅಧ್ಯಕ್ಷರಾಗಿದ್ದ ಟಿ.ಎನ್. ಪ್ರಕಾಶ್ ಕಮ್ಮರಡಿ ಅವರ ವರದಿ ಜಾರಿಗೊಳಿಸಬೇಕು. ರಾಜ್ಯದ ರೈತರು ಬೆಳೆಯುವ ಎಲ್ಲ ಉತ್ಪನ್ನಗಳನ್ನು ಕನಿಷ್ಠ ಬೆಂಬಲ ಬೆಲೆ ಅಡಿಯಲ್ಲಿ ರೈತರಿಂದ ಸರ್ಕಾರವೇ ನೇರವಾಗಿ ಖರೀದಿಸಿ ಸರಬರಾಜು ಮಾಡಬೇಕು ಎಂದರು.

₹30 ಸಾವಿರ ಲಂಚ: ಆರೋಗ್ಯಾಧಿಕಾರಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಲ್ ಮಂಜೂರು ಮಾಡಲು ₹30 ಸಾವಿರ ಲಂಚ ಪಡೆಯುತ್ತಿದ್ದ ಬಿಬಿಎಂಪಿ ಆರೋಗ್ಯಾಧಿಕಾರಿ ಶಿವೇಗೌಡ ಅವರು ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.


ಶಿವೇಗೌಡ

ಸೊಳ್ಳೆಗಳ ನಿಯಂತ್ರಣಕ್ಕೆ ಸಿಂಪಡಿಸಿದ್ದ ಔಷಧಿಯ ಬಿಲ್ ಮಂಜೂರು ಮಾಡಲು ಲಕ್ಷ್ಮೀನರಸಿಂಹಸ್ವಾಮಿ ಎಂಟರ್‌ಪ್ರೈಸಸ್ ಮಾಲೀಕ ಶ್ರೀನಿವಾಸಲು ಅವರು ಸಿ.ವಿ.ರಾಮನ್‌ನಗರದ ಆರೋಗ್ಯಾಧಿಕಾರಿ ಶಿವೇಗೌಡ ಅವರನ್ನು ಸಂಪರ್ಕಿಸಿದ್ದರು. ₹30 ಸಾವಿರ ಲಂಚ ನೀಡಿದರೆ ಬಿಲ್ ಪಾವತಿಸುವ ಬೇಡಿಕೆ ಇಟ್ಟಿದ್ದ ಶಿವೇಗೌಡ, ಗುರುವಾರ ಹಣ ಪಡೆಯುವಾಗ ಲೋಕಾಯುಕ್ತ ಡಿವೈಎಸ್‌ಪಿ ಸತೀಶ್ ನೇತೃತ್ವದ ತಂಡ ದಾಳಿ ನಡೆಸಿದೆ. ಆರೋಪಿಯನ್ನು ಬಂಧಿಸಲಾಗಿದ್ದು ತನಿಖೆ ನಡೆಸಲಾಗುತ್ತಿದೆ ಎಂದು ಲೋಕಾಯುಕ್ತ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹೊಸ ಕಾಯಂ ಚೂರ್ಣ

ಬೆಂಗಳೂರು: ಕಾಯಂ ಚೂರ್ಣ ತಯಾರಿಸುವ ಶೇಟ್ ಬ್ರದರ್ಸ್ ಕಂಪನಿಯು, ಕಾಯಂ ಚೂರ್ಣ ಅಡ್ವಾನ್ಸ್ ಹೆಸರಿನ ಉತ್ಪನ್ನವನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

ಹೊಸ ಕಾಯಂ ಚೂರ್ಣವು ಜೀರಿಗೆ ರುಚಿಯಲ್ಲಿ ಸಿಗುತ್ತಿದೆ.

ಇದು ಗಂಟಲಲ್ಲಿ ಸಿಕ್ಕಿಹಾಕಿಕೊಳ್ಳುವುದಿಲ್ಲ ಎಂದು ಪ್ರಕಟಣೆ ತಿಳಿಸಿದೆ.

ಡಿಜಿಟಲ್ ಆರೋಗ್ಯ ಕೇಂದ್ರ ಸ್ಥಾಪನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ಟರ್ ಡಿಎಂ ಹೆಲ್ತ್ ಕೇರ್ ನಗರದಲ್ಲಿ ಟೆಲಿಕಮಾಂಡ್ ಮತ್ತು ಡಿಜಿಟಲ್‌ಆರೋಗ್ಯ ಕೇಂದ್ರವನ್ನು ಸ್ಥಾಪಿಸಿದ್ದು, ದೂರ ಸಂಪರ್ಕ ವ್ಯವಸ್ಥೆ ಮೂಲಕ ಟೆಲಿ ಸಮಾಲೋಚನೆ, ಟೆಲಿ ಐಸಿಯು ಸೇರಿ ವಿವಿಧ ಸೇವೆಗಳನ್ನು ಒದಗಿಸುವುದಾಗಿ ಘೋಷಿಸಿದೆ.

'ಅತ್ಯಾಧುನಿಕ ತಂತ್ರಜ್ಞಾನಗಳಿರುವ ಈ ಕೇಂದ್ರದಲ್ಲಿ ವೈದ್ಯಕೀಯ ವೃತ್ತಿಪರರ ತಂಡ ಕಾರ್ಯನಿರ್ವಹಿಸಲಿದೆ. ಇದರಿಂದ ದೂರದಿಂದಲೇ ರೋಗಿಗಳನ್ನು ಮೇಲ್ವಿಚಾರಣೆ ಮಾಡಿ ಚಿಕಿತ್ಸೆಯನ್ನೂ ನೀಡಬಹುದಾಗಿದೆ. ಸಕಾಲಕ್ಕೆ ಪರಿಣಿತ ವೈದ್ಯರ ಮಾರ್ಗದರ್ಶನವೂ ದೊರೆಯಲಿದೆ' ಎಂದು ಆಸ್ಪತ್ರೆ ತಿಳಿಸಿದೆ. ಆಸ್ಟರ್ ಡಿಜಿಟಲ್ ಹೆಲ್ತ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ ಡಾ.ಹರ್ಷ ರಾಜಾರಾಂ, 'ಕೃತಕ ಬುದ್ಧಿಮತ್ತೆ ತಂತ್ರಜ್ಞಾನದಿಂದ ಉತ್ತಮ ಆರೈಕೆ ನೀಡಬಹುದು' ಎಂದಿದ್ದಾರೆ.

ನಗರದಲ್ಲಿ ಇಂದು

'ಜಿ–20 ಜೆನ್ ಫೋರಂ ಶೃಂಗ ಸಭೆ–2023': ಭಾಷಣಕಾರರು: ಅನಿಲ್ ಸಹಸ್ರಬುದ್ಧೆ, ಟಿ.ಜಿ. ಸೀತಾರಾಮ್, ಶ್ರೀಧರ್ ಶ್ರೀವಾತ್ಸವ, ಬಿಸ್ವಜಿತ್ ಸಾಹ, ಬುದ್ಧ ಚಂದ್ರಶೇಖರ್, ಆರ್.ಪಿ. ಸಿಂಗ್, ಚಿಂತನ್ ವೈಷ್ಣವ್, ರಾಜ್ ನೆಹರೂ, ಕೆ.ವಿ. ವಿನ್ಸೆಂಟ್, ಮಧು ಅಹ್ಲುವಾಲಿಯಾ, ತನು ಆನಂದ್, ಆಯೋಜನೆ: ಟಿ.ಎ.ಜಿ, ಸ್ಥಳ: ಕಾರಿಯಪ್ಪ ಹಾಲ್, ಆರ್‌ಎಸ್‌ಐ, ಎಂ.ಜಿ. ರಸ್ತೆ, ಬೆಳಿಗ್ಗೆ 9ರಿಂದ

ಶರತ್ ನಂದಿನಿ ದೇಸಾಯಿ ಅವರ 'ವೈಬ್ರಂಟ್ ನೇಚರ್' ಚಿತ್ರಗಳ ಪ್ರದರ್ಶನ: ಅತಿಥಿಗಳು: ಚಂದ್ರಶೇಖರ್ ಕಕ್ಕಲ್, ಬಿ. ರಘೋತಮ್ ರಾವ್ ದೇಸಾಯಿ, ಬಿ.ಎನ್. ಹರಿಪ್ರಸಾದ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 10

'ಜನ ಪ್ರಣಾಳಿಕೆ' ಲೇಖನಗಳ ಪುಸ್ತಕ ಬಿಡುಗಡೆ: ಪುರುಷೋತ್ತಮ ಬಿಳಿಮಲೆ, ಜನಪ್ರಣಾಳಿಕೆಯ ಕುರಿತು: ಬಂಜಗೆರೆ ಜಯಪ್ರಕಾಶ್, ಜನಪ್ರಣಾಳಿಕೆಯ ಅಗತ್ಯ ಮಹಿಳಾ ದೃಷ್ಟಿಕೋನ: ಎಚ್. ಜಿ. ಜಯಲಕ್ಷ್ಮಿ, ಆಯೋಜನೆ: ಕ್ರಿಯಾ ಮಾಧ್ಯಮ, ಸಂಜೆ 6 (ಆನ್‌ಲೈನ್ ಕಾರ್ಯಕ್ರಮ)

ರಾಮೋತ್ಸವ ವಿಶೇಷ


ಸಾಕೇತರಾಮನ್

ಶ್ರೀರಾಮ ನವಮಿ ಸಂಗೀತೋತ್ಸವ: ಗಾಯನ: ಎಸ್. ಸಾಕೇತರಾಮನ್, ಪಿಟೀಲು: ಮೈಸೂರು ಕಾರ್ತಿಕ್, ಮೃದಂಗ: ವಿಜಯ್ ನಟೇಶನ್, ಘಟ: ಗಿರಿಧರ್ ಉಡುಪ, ಆಯೋಜನೆ: ಶ್ರೀರಾಮಸೇವಾ ಮಂಡಳಿ, ರಾಮನವಮಿ ಸೆಲಬ್ರೇಷನ್ಸ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲಾ ಆವರಣ, ಚಾಮರಾಜಪೇಟೆ, ಸಂಜೆ 6.30

30ನೇ ಶ್ರೀರಾಮನವಮಿ ಸಂಗೀತೋತ್ಸವ: ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಗಾಯನ: ಶ್ರೇಯಾ ಮೂರ್ತಿ, ಹಾರ್ಮೋನಿಯಂ: ತೇಜಸ್ ರವೀಂದ್ರ ಕಟೋಟಿ, ತಬಲಾ: ಸುಮಿತ್ ನಾಯಕ್, ಆಯೋಜನೆ ಹಾಗೂ ಸ್ಥಳ: ಶ್ರೀ ವಾಣಿ ಕಲಾ ಕೇಂದ್ರ, ಬಸವೇಶ್ವರ ನಗರ, ಸಂಜೆ 5ರಿಂದ

ನೃತ್ಯ ಪ್ರದರ್ಶನ: ಶ್ರೀದೇವಿ ಜಗನ್ನಾಥ್, ರೋಹಿಣಿ ಅನಂತ್, ಅತಿಥಿಗಳು: ಪಿ. ಆನಂದ ನಾಯ್ಡು, ಪದ್ಮಿನಿ ರಾವ್, ಲಲಿತಾ ಶ್ರೀನಿವಾಸನ್, ಆಯೋಜನೆ ನರ್ತನ ಯಾತ್ರಾ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 6

ಪ್ರವಚನ ವಾಹಿನಿ: 'ಸಮಾಜಕ್ಕೆ ರಾಮಾನುಜರ ಕೊಡುಗೆ',

ಉಪನ್ಯಾಸ: ಗೋಪಾಲ ಅಯ್ಯಂಗಾರ್, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಅಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ
nagaradalli_indu@prajavani.co.in

'ಮಾಸ್ತಿಗುಡಿ' ಸಿನಿಮಾ ಚಿತ್ರೀಕರಣದ ದುರಂತ ಪ್ರಕರಣ

ಪ್ರಾಣಕ್ಕೆ ಕುತ್ತು ತಂದ ನಟರ ಸಿಕ್ಸ್‌ಪ್ಯಾಕ್ ಮೋಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾವು ನಮ್ಮ ದೇಹವನ್ನು ದಂಡಿಸಿ ಸಿಕ್ಸ್‌ಪ್ಯಾಕ್ ರೂಪು ಪಡೆದಿದ್ದೇವೆ. ಪ್ರೇಕ್ಷಕರು ಈ ಸಿಕ್ಸ್‌ಪ್ಯಾಕ್ ಅನ್ನು ಕಣ್ತುಂಬಿಕೊಳ್ಳಲು ಅನುವು ಮಾಡಿಕೊಡಬೇಕು. ಹೀಗಾಗಿ, ನಾವು ಸೇಫ್ಟಿ ಜಾಕೆಟ್ (ರಕ್ಷಾ ಕವಚ) ಧರಿಸುವುದಿಲ್ಲ, ದಯವಿಟ್ಟು ನಮ್ಮನ್ನು ಹಾಗೇ ಬಿಟ್ಟುಬಿಡಿ, ಹೇಗಿದ್ದೇವೆಯೋ ಹಾಗೆಯೇ ಚಿತ್ರೀಕರಿಸಿ...!

'ಮಾಸ್ತಿಗುಡಿ' ಸಿನಿಮಾ ಚಿತ್ರೀಕರಣದ ವೇಳೆ ಖಳನಟರಾದ ಉದಯ್ ಹಾಗೂ ಅನಿಲ್ ಹೆಲಿಕಾಪ್ಟರ್‌ನಿಂದ ತಿಪ್ಪಗೊಂಡನಹಳ್ಳಿ ಜಲಾಶಯದ ಹಿನ್ನೀರಿನಲ್ಲಿ ಧುಮುಕುವ ಸಾಹಸ ದೃಶ್ಯದ ಚಿತ್ರೀಕರಣದ ವೇಳೆ ನೀರಿನಲ್ಲಿ ಮುಳುಗಿ ಸಾವನ್ನಪ್ಪುವ ಮೊದಲು ಸ್ಥಳದಲ್ಲಿದ್ದ ಸಾಹಸ ನಿರ್ದೇಶಕರಿಗೆ ಹೇಳಿದ್ದ ಮಾತುಗಳಿವು.

ಸಾಹಸ ನಿರ್ದೇಶಕ ರವಿವರ್ಮ ಅವರು ತಮ್ಮನ್ನು ದೋಷಾರೋಪ ಪಟ್ಟಿಯಿಂದ ಕೈಬಿಡುವಂತೆ ಕೋರಿ ಸಲ್ಲಿಸಿರುವ ಅರ್ಜಿಯನ್ನು 9ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ನ್ಯಾಯಾಧೀಶ ಎಸ್. ಶ್ರೀಧರ ಅವರು ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ರವಿವರ್ಮ ಪರ ಹಿರಿಯ ವಕೀಲ ಸಿ.ಎಚ್. ಹನುಮಂತರಾಯ ಅವರು ವಾದ ಮಂಡಿಸಿ, 'ಖಳನಟರಿಬ್ಬರ ಸಾವು ಆಕಸ್ಮಿಕ ಮತ್ತು ದುರದೃಷ್ಟಕರ. ಹೆಲಿಕಾಪ್ಟರ್‌ನಿಂದ ಜಲಾಶಯದ ಹಿನ್ನೀರಿಗೆ ಧುಮುಕುವ ಸಾಹಸ ದೃಶ್ಯದ ಚಿತ್ರೀಕರಣದ ವೇಳೆ ಅವರಿಗೆ ರಕ್ಷಾ ಕವಚ ಧರಿಸುವಂತೆ ಸೂಚಿಸಿದ್ದರೂ ಧರಿಸದೇ ಹೋದರು. ರಕ್ಷಾ ಕವಚ ಧರಿಸಿದರೆ ತಮ್ಮ ಸಿಕ್ಸ್ ಪ್ಯಾಕ್ ದೇಹದಾರ್ಢ್ಯತೆ ಪ್ರೇಕ್ಷಕರಿಗೆ ಕಾಣುವುದಿಲ್ಲ ಎಂಬ ಏಕೈಕ ಉದ್ದೇಶದಿಂದ ತಮ್ಮ ಪ್ರಾಣಕ್ಕೇ ಸಂಚಕಾರ ತಂದುಕೊಂಡರು' ಎಂದು ಹೇಳಿದರು.



'ರವಿವರ್ಮ ಅವರು ಚಿತ್ರೀಕರಣದ ವೇಳೆ ಅಗತ್ಯವಿದ್ದ ಎಲ್ಲಾ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದ್ದರು. ಸ್ಥಳದಲ್ಲಿ ತುರ್ತು ಪರಿಸ್ಥಿತಿಗೆ ಅನುಗುಣವಾದ ಈಜುಗಾರು ಇದ್ದರು. ಮೋಟಾರ್ ಬೋಟ್ ಕೂಡ ಸಿದ್ಧವಾಗಿತ್ತು. ಆದರೆ, ಅವರು ರಕ್ಷಾ ಕವಚ ಧರಿಸಲು ಸುತಾರಾಂ ಒಪ್ಪಿರಲೇ ಇಲ್ಲ. ತಮಗೆ ಈಜು ಬರುತ್ತದೆ ಎಂದು ತಿಳಿಸಿದ್ದರ ಪರಿಣಾಮ ಅವರ ಖುದ್ದು ಒಪ್ಪಿಗೆಯ ಮೇರೆಗೆ ಚಿತ್ರೀಕರಣ ನಡೆಸಲಾಗಿತ್ತು. ಈ ಅಂಶವನ್ನು ದೋಷಾರೋಪ ಪಟ್ಟಿಯಲ್ಲೇ ಉಲ್ಲೇಖಿಸಲಾಗಿದೆ' ಎಂದು ಹನುಮಂತರಾಯ ವಿವರಿಸಿದರು.

'ದುರ್ಘಟನೆ ನಿಜವಾಗಲೂ ಅನಿರೀಕ್ಷಿತ ಗಳಿಗೆಯಾಗಿತ್ತು. ಖಳನಟರು ನೀರಿನಲ್ಲಿ ಮುಳುಗುತ್ತಿದ್ದಾರೆ ಎಂದು ಗೊತ್ತಾದ ತಕ್ಷಣವೇ ಅವರನ್ನು ರಕ್ಷಿಸಲು ತೆರಳಬೇಕು ಎಂದುಕೊಂಡರೆ ಆ ಕ್ಷಣದಲ್ಲಿ ಮೋಟಾರ್ ಬೋಟ್‌ನಲ್ಲಿ ತಾಂತ್ರಿಕ ದೋಷ ಕಾಣಿಸಿಕೊಂಡಿತ್ತು. ಪರಿಣಾಮ ಖಳನಟರು ಬಿದ್ದಿದ್ದ ಜಾಗಕ್ಕೆ ತಕ್ಷಣವೇ ಕ್ರಮಿಸಲು ಸಾಧ್ಯವಾಗಲಿಲ್ಲ. ಅರ್ಜಿದಾರರು ನಿರ್ದೋಷಿಗಳು. ಅವರು ಉದ್ದೇಶ ಪೂರ್ವಕವಾದಂತಹ ಯಾವುದೇ ಶಿಕ್ಷಾರ್ಹ ಅಪರಾಧ ಎಸಗಿಲ್ಲ. ಆದ್ದರಿಂದ, ಅವರ ವಿರುದ್ಧದ ಆರೋಪಗಳನ್ನು ಕೈಬಿಡಬೇಕು' ಎಂದು ಕೋರಿದರು.

ಪ್ರಾಸಿಕ್ಯೂಷನ್ ವಾದ ಮಂಡಿಸ ಬೇಕಾಗಿದ್ದು ವಿಚಾರಣೆಯನ್ನು ಮೇ 30ಕ್ಕೆ ಮುಂದೂಡಲಾಗಿದೆ.

ಪ್ರಕರಣವೇನು?

'ಮಾಸ್ತಿಗುಡಿ' ಸಿನಿಮಾದ ಸಾಹಸ ದೃಶ್ಯದ ಚಿತ್ರೀಕರಣದ ಭಾಗವಾಗಿ 2016ರ ನವೆಂಬರ್ 7ರಂದು ಖಳನಟರಾದ ಉದಯ್ ಹಾಗೂ ಅನಿಲ್ ಅವರು, ಚಿತ್ರದ ನಾಯಕ ನಟ ದುನಿಯಾ ವಿಜಯ್ ಜೊತೆಯಲ್ಲಿ ಹೆಲಿಕಾಪ್ಟರ್‌ನಿಂದ ತಿಪ್ಪಗೊಂಡನಹಳ್ಳಿ ಜಲಾಶಯದ ಹಿನ್ನೀರಿನಲ್ಲಿ ಧುಮುಕಿದ್ದರು. ಆದರೆ, ಈಜಿ ದಡ ಸೇರಲು ಸಾಧ್ಯವಾಗದೆ ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದರು.

ತನಿಖೆ ನಡೆಸಿದ್ದ ತಾವರೆಕೆರೆ ಠಾಣೆ ಪೊಲೀಸರು ರವಿವರ್ಮ ಸೇರಿದಂತೆ ಇತರೆ ಐವರನ್ನು ಪ್ರಕರಣದಲ್ಲಿ ಆರೋಪಿಗಳನ್ನಾಗಿಸಿ, ಅವರ ವಿರುದ್ಧ ಭಾರತೀಯ ದಂಡ ಸಂಹಿತೆ–1860ರ ಕಲಂ 304ರ ಅನುಸಾರ; ಉದ್ದೇಶ ಪೂರ್ವಕವಲ್ಲದ ಕೊಲೆ ಆರೋಪದಡಿ ರಾಮನಗರದ ಮ್ಯಾಜಿಸ್ಟ್ರೇಟ್ ಕೋರ್ಟ್‌ಗೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಸಂಕ್ಷಿಪ್ತ ಸುದ್ದಿ

ಅತ್ಯುತ್ಸಾಹದಿಂದ ಇದ್ದೇನೆ: ವಕೀಲರಿಗೆ ಅಮೃತಪಾಲ್ ಪತ್ರ

ದಿಬ್ರೂಗಢ (ಪಿಟಿಐ): ಸಿಖ್ ಮೂಲಭೂತವಾದಿ ಧರ್ಮಪ್ರಚಾರಕ, ವಾರಿಸ್ ಪಂಜಾಬ್ ದೇ ಮುಖ್ಯಸ್ಥ ಅಮೃತಪಾಲ್ ಸಿಂಗ್, 'ಜೈಲಿನಲ್ಲಿ ಅತ್ಯುತ್ಸಾಹದಿಂದ ಇದ್ದೇನೆ' ಎಂದು ತನ್ನ ವಕೀಲರಿಗೆ ಪತ್ರ ಬರೆದಿದ್ದಾರೆ.

ವಕೀಲ ಭಗವಂತ್ ಸಿಂಗ್ ಸಿಯಾಲ್ಕಾ ಅವರು ಈ ವಿಷಯ ತಿಳಿಸಿದರು. ಬಂಧನಕ್ಕೊಳಗಾಗಿರುವ ವಾರಿಸ್ ಪಂಜಾಬ್ ದೇ ಕಾರ್ಯಕರ್ತರ ಸಂಬಂಧಿಕರ ಜೊತೆಗೆ ಇಲ್ಲಿಗೆ ಬಂದಿದ್ದ ಅವರು ಜೈಲಿನಲ್ಲಿ ಬಂಧಿತರನ್ನು ಭೇಟಿಯಾದರು.

ಈ ಸಂದರ್ಭದಲ್ಲಿ ಅಮೃತಪಾಲ್ ಸಿಂಗ್ ವಕೀಲರಿಗೆ ಪತ್ರ ನೀಡಿದ್ದಾರೆ.

ಕಾರ್ಯಕರ್ತರ ವಿರುದ್ಧ ದಾಖಲಿಸಿರುವ ಪ್ರಕರಣಗಳನ್ನು ಉಲ್ಲೇಖಿಸಿದ ಅವರು, ಪಂಜಾಬ್ ಸರ್ಕಾರವು ಸಿಖ್ಖರ ವಿರುದ್ಧ ಹಲವು ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದು, ಇವನ್ನು ಕೈಗೆತ್ತಿಗೊಳ್ಳಲು ಅರ್ಹ ವಕೀಲರ ತಂಡ ರಚಿಸಬೇಕು ಎಂದು ಕೋರಿದ್ದಾರೆ.

ತಾಂತ್ರಿಕ ದೋಷ: ಸ್ಟಾಲಿನ್ ತೆರಳಬೇಕಿದ್ದ ವಿಮಾನಸಂಚಾರ ರದ್ದು

ಚೆನ್ನೈ (ಪಿಟಿಐ): ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್, ಪ್ರಯಾಣಿಸಬೇಕಿದ್ದ ವಿಮಾನದ ಸಂಚಾರವನ್ನು ಗುರುವಾರ ತಾಂತ್ರಿಕ ದೋಷದ ಕಾರಣ ರದ್ದುಪಡಿಸಲಾಯಿತು.

ಆಸ್ಪತ್ರೆ ಉದ್ಘಾಟನೆ ಕಾರ್ಯಕ್ರಮಕ್ಕಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಆಹ್ವಾನಿಸಲು ಸ್ಟಾಲಿನ್ ಅವರು ದೆಹಲಿಗೆ ತೆರಳಬೇಕಿತ್ತು. ಈಗ ಅವರು ಶುಕ್ರವಾರ ದೆಹಲಿಗೆ ತೆರಳುವ ಸಂಭವವಿದೆ.



ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ

‘ಸಿನಿಮಾ ಸಂಸ್ಕೃತಿ ಪತ್ರಿಕೆಯ ಸಿನಿ ಸಮ್ಮಾನದ ಅಧ್ಯಾಯ’

‘ಪ್ರಜಾವಾಣಿ ಸಿನಿ ಸಮ್ಮಾನ’ಕ್ಕೆ ದಿನಗಣನೆ ಶುರುವಾಗಿದೆ. 2022ರಲ್ಲಿ ಬಿಡುಗಡೆಯಾದ ಕನ್ನಡ ಚಲನಚಿತ್ರಗಳಲ್ಲಿ ವಿವಿಧ ವಿಭಾಗಗಳಲ್ಲಿ ಪ್ರಶಸ್ತಿಗೆ ಸಿನಿಮಾಗಳನ್ನು, ಚಿತ್ರರಂಗದ ಪ್ರತಿಭೆಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಅದಾಗಲೇ ನಡೆಯುತ್ತಿದೆ. ಮೂರು ಸ್ತರದ ಪಾರದರ್ಶಕ ಪ್ರಕ್ರಿಯೆ ಇದಾಗಿದ್ದು, ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಸಿನಿಮಾ ನಿರ್ದೇಶಕ ಗಿರೀಶ ಕಾಸರವಳ್ಳಿ ಮುಖ್ಯ ತೀರ್ಪುಗಾರರ ಸಮಿತಿಯ ಅಧ್ಯಕ್ಷರು. ಇಂದು ಸಂಜೆ (ಏ.28) ಈ ಪ್ರಶಸ್ತಿಯ ಟ್ರೋಫಿ ಅನಾವರಣಗೊಳ್ಳಲಿದೆ. ‘ಪ್ರಜಾವಾಣಿ’ಗೂ ಚಲನಚಿತ್ರ ರಂಗಕ್ಕೂ ಇರುವ ಸಾಂಸ್ಕೃತಿಕ ಸಂಬಂಧದ ಕುರಿತು ಗಿರೀಶ ಕಾಸರವಳ್ಳಿ ‘ಸಿನಿಮಾ ಪುರವಣಿ’ ಜತೆಗೆ ಮಾತನಾಡಿದ್ದಾರೆ.

‘ಚಲನಚಿತ್ರ ರಂಗವು ಮದ್ರಾಸ್‌ನಲ್ಲಿ ನೆಲೆಗೊಂಡಿದ್ದಾಗ ಅಲ್ಲಿನ ಚಟುವಟಿಕೆಗಳನ್ನು ‘ಪ್ರಜಾವಾಣಿ’ ಆಸ್ಥೆಯಿಂದ ವರದಿ ಮಾಡುತ್ತಿತ್ತು. ಆಮೇಲೆ ರಾಮಕೃಷ್ಣ ಹೆಗಡೆ ಕನ್ನಡ ಸಿನಿಮಾಗಳಿಗೆ ಸಬ್ಸಿಡಿ ನೀಡುವ ಪರಿಪಾಟ ಪ್ರಾರಂಭಿಸಿದ ಮೇಲೆ ಸಿನಿಮಾ ಚಟುವಟಿಕೆ ಬೆಂಗಳೂರಿನಲ್ಲಿ ಗಟ್ಟಿಗೊಳ್ಳಲಾರಂಭಿಸಿತು. ಇವೆಲ್ಲವನ್ನೂ ‘ಪ್ರಜಾವಾಣಿ’ ಅಚ್ಚುಕಟ್ಟಾಗಿ ದಾಖಲಿಸುತ್ತಾ ಬಂದಿದೆ. ಕನ್ನಡ ಸಿನಿಮಾ ಬೆಳವಣಿಗೆಗೆ ಪತ್ರಿಕೆಯ ಕೊಡುಗೆ ಬಹಳ ದೊಡ್ಡದು’ ಎನ್ನುವುದು ಅವರ ಮೊದಲ ನುಡಿ.

‘ಬಹುತೇಕ ಮಾಧ್ಯಮಗಳು ಸಿನಿಮಾ ಉದ್ಯಮವನ್ನು ದೃಷ್ಟಿಯಲ್ಲಿಟ್ಟುಕೊಂಡು ವರದಿ ಮಾಡುವುದು ಸಹಜ. ಆದರೆ, ‘ಪ್ರಜಾವಾಣಿ’ ಕಲಾಪ್ರಕಾರವಾಗಿಯೂ ಚಲನಚಿತ್ರವನ್ನು ಸೂಕ್ಷ್ಮವಾಗಿ ದಾಖಲಿಸಿದೆ. ಹೀಗಾಗಿಯೇ 1960–70ರ ದಶಕಗಳಲ್ಲಿ ಹೊಸ ಅಲೆಯ ಚಿತ್ರಗಳನ್ನೂ ಜನಪ್ರಿಯವಾಗಿಸುವಲ್ಲಿ ಪತ್ರಿಕೆಯ ಕಾಣ್ಕೆ ಮುಖ್ಯವಾಯಿತು’ ಎಂದು ಅವರು ನೆನಪಿಸಿಕೊಂಡರು.

‘ವ್ಯಕ್ತಿ ಕೇಂದ್ರಿತ ಉದ್ಯಮದಿಂದ ವಸ್ತು ಕೇಂದ್ರಿತ ಕಲಾಪ್ರಕಾರವಾಗಿ ಪರಿಭಾವಿಸಿ ‘ಪ್ರಜಾವಾಣಿ’ ಚಲನಚಿತ್ರಗಳನ್ನು ದಾಖಲಿಸುತ್ತಾ ಬಂದಿದ್ದು, ಇಲ್ಲಿನ ವಿಮರ್ಶೆಗಳನ್ನು ಆಧರಿಸಿ ಗುಣಾವಗುಣಗಳ ಚರ್ಚೆ ನಡೆಯುತ್ತದೆ. ಇದು ಪತ್ರಿಕೆಯ ಇನ್ನೊಂದು ಕಾಣ್ಕೆ’ ಎಂದು ಶ್ಲಾಘಿಸಿದರು.

ಇಂತಹ ಗಂಭೀರ ಧೋರಣೆಯ ಮುಂದುವರಿದ ಭಾಗವೇ ‘ಸಿನಿ ಸಮ್ಮಾನ’. ಸರ್ಕಾರ ಅಥವಾ ಕೆಲವು ಸಂಘ–ಸಂಸ್ಥೆಗಳು ಕೊಡುವ ಪ್ರಶಸ್ತಿಗಳಿಗೆ ಇರುವ ಮಾನದಂಡವೇ ಬೇರೆ. ಚಿತ್ರೋದ್ಯಮದ ಎಲ್ಲರ ಸಹಕಾರ, ಸಹಭಾಗಿತ್ವ ಪಡೆದು ಮೂರು ಸ್ತರದಲ್ಲಿ ಪರಿಣಾಮಕಾರಿ ನಿಷ್ಕರ್ಷೆಗೆ ಒಳಪಡಿಸಿ ‘ಪ್ರಜಾವಾಣಿ ಸಿನಿ ಸಮ್ಮಾನ’ಕ್ಕೆ ಅರ್ಹರನ್ನು ಆಯ್ಕೆ ಮಾಡುತ್ತಿರುವುದಕ್ಕೆ ಗಿರೀಶ ಕಾಸರವಳ್ಳಿ ಮಾತಿನಲ್ಲಿ ಅಡಿಗೆರೆ ಎಳೆದರು.

ಸಿನಿಮಾ ಪುರಸ್ಕಾರದ ಕುರಿತ ಮಾಹಿತಿಗೆ https://www.prajavani.net/cinesamman ನೋಡಿ.



‘ಶೀರ್ಷಿಕೆಯೂ ರಾಯರ ಕೃಪೆ’

ಪುರೋಹಿತರಿಗೆ, ಅಡುಗೆ ಭಟ್ಟರಿಗೆ ಹೀಗೆ ಕೆಲ ಉದ್ಯೋಗಿಗಳಿಗೆ ಹುಡುಗಿ ಸಿಗುವುದು ಬಹಳ ಕಷ್ಟ ಎಂಬ ಕಾಲಘಟ್ಟದಲ್ಲಿದ್ದೇವೆ ನಾವು. ಅಡುಗೆ ಭಟ್ಟರೊಬ್ಬರ ಮದುವೆ ಪ್ರಸಂಗವನ್ನು ಹಾಸ್ಯಮಯವಾಗಿ ಹೇಳಲು ನಟ ಜಗ್ಗೇಶ್ ‘ರಾಘವೇಂದ್ರ ಸ್ಟೋರ್ಸ್’ ಮೂಲಕ ಇಂದು ಪ್ರೇಕ್ಷಕರೆದುರು ಬರುತ್ತಿದ್ದಾರೆ...

ಸಿನಿಮಾತು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ವಿನಾಯಕ ಕೆ.ಎಸ್.

- **ಈ ಚಿತ್ರದ ಶೀರ್ಷಿಕೆ ಯಾರ ಆಯ್ಕೆ?**

ಶೀರ್ಷಿಕೆ ನಿರ್ದೇಶಕರ ಆಯ್ಕೆ. ಮೊದಲಿಗೆ ನಿರ್ದೇಶಕರು ಶೀರ್ಷಿಕೆ ಹೇಳಿರಲಿಲ್ಲ. ಇದು ನನ್ನ ಪಾಲಿಗೂ ನಿಗೂಢವಾಗಿತ್ತು. ಕಥೆ ಕೇಳಿದ್ದೆ. ಆದರೆ ಶೀರ್ಷಿಕೆ ಘೋಷಿಸಿದಾಗ ಅಚ್ಚರಿಯಾಯಿತು. ಶುಭವಾಗಲೆಂದು ರಾಯರೇ ಈ ಶೀರ್ಷಿಕೆಯನ್ನು ನನ್ನ ಪಾಲಿಗೆ ಕಳುಹಿಸಿರಬಹುದೆಂದು ಭಾವಿಸಿದೆ.

- **ಪ್ರೇಕ್ಷಕರು ಈ ಚಿತ್ರದಿಂದ ಮತ್ತೆಷ್ಟು ಮನರಂಜನೆ ನಿರೀಕ್ಷಿಸಬಹುದಾ?**

ಖಂಡಿತ ಇದು ಮನರಂಜನೆಯ ಸಿನಿಮಾ ಅಲ್ಲ. ತುಂಬ ಗಂಭೀರವಾದ ಸಿನಿಮಾ. ಮದುವೆ ಆಗಿಲ್ಲ ಎಂಬ ಕಥೆಯನ್ನು ಹಾಸ್ಯಮಯವಾಗಿ ಹೇಳಿದ್ದಾರೆ. ಸಿನಿಮಾದ ದ್ವಿತೀಯಾರ್ಧ ನಮ್ಮನ್ನು ಆವರಿಸಿಕೊಳ್ಳುವಷ್ಟು ಚೆನ್ನಾಗಿದೆ.

- **ನಿರ್ದೇಶಕ ಸಂತೋಷ್ ಆನಂದ್‌ರಾಮ್ ಅವರ ಹಿಂದಿನ ಸಿನಿಮಾಗಳನ್ನು ನೋಡಿದರೆ ಇದೊಂದು ತೀರ ಭಿನ್ನವಾದ ಆಯ್ಕೆ ಅನ್ನಿಸಲಿಲ್ಲವೆ?**

ಬೇರೆ ನಿರ್ದೇಶಕರಿಗೂ ಇವರಿಗೂ ಇರುವ ವ್ಯತ್ಯಾಸವಿದು. ಇವರು ಸಿನಿಮಾವನ್ನು ದೊಡ್ಡ ಮಟ್ಟದ ಸಂಶೋಧನೆ ಮಾಡಿದ ನಂತರ ಮಾಡುತ್ತಾರೆ. ಸುಮ್ಮನೆ ಒಂದು ಕಥೆ ಹೊಳೆಯಿತು, ಸಿನಿಮಾ ಮಾಡುತ್ತೀನಿ ಎನ್ನುವ ನಿರ್ದೇಶಕ ಇವರಲ್ಲ. ನಮ್ಮಲ್ಲಿ ಶೇ 90ರಷ್ಟು ನಿರ್ದೇಶಕರು ಯಾವುದೋ ಬೇರೆ ಸಿನಿಮಾದಿಂದ, ದೃಶ್ಯದಿಂದ ಸ್ಫೂರ್ತಿ ಪಡೆದು ಸಿನಿಮಾ ಮಾಡುತ್ತಾರೆ. ಆದರೆ ಸಂತೋಷ್ ಸ್ವಂತಿಕೆಯಿಂದ ಸಿನಿಮಾ ಮಾಡುತ್ತಾರೆ ಎಂಬುದು ಜತೆಗೆ ಕೆಲಸ ಮಾಡಿದಾಗ ತಿಳಿಯಿತು.

- **‘ತೋತಾಪುರಿ’ ಸಿನಿಮಾ ಕುರಿತಾದ ಋಣಾತ್ಮಕ ಟೀಕೆಗಳು ಇದರ ಮೇಲೆ ಪರಿಣಾಮ ಬೀರಬಹುದಾ?**

ಹೊಟ್ಟೆಕಿಚ್ಚು ಇರುವವರು ‘ತೋತಾಪುರಿ’ಯನ್ನು ಟೀಕಿಸಬೇಕಷ್ಟೆ. ‘ತೋತಾಪುರಿ–2’ ತೆರೆಗೆ ಬರಲಿದೆ. ಮೊದಲ ಭಾಗ ಪಾತ್ರ ಪರಿಚಯವಷ್ಟೆ. ನಿಜವಾದ ಕಥೆ 2ನೇ ಭಾಗದಲ್ಲಿದೆ. ದೇಶದ ಸಂವಿಧಾನಕ್ಕೆ ಕೈ ಹಾಕಿದ ಕಥೆಯದು. ಬಹಳ ಗಟ್ಟಿಯಾದ ಕಥೆ ಹೊಂದಿರುವ ಚಿತ್ರ. ಅಷ್ಟಿಲ್ಲದೆ ಜಗ್ಗೇಶ್ ಸುಮ್ಮನೆ ಹಣಕ್ಕಾಗಿ, ಅವಕಾಶಕ್ಕಾಗಿ ಸಿನಿಮಾ ಒಪ್ಪಿಕೊಳ್ಳುವುದಿಲ್ಲ. ‘ರಾಘವೇಂದ್ರ ಸ್ಟೋರ್ಸ್’ ನಡುವೆ ಆ ಚಿತ್ರದ ಮಾತು ಬೇಡ ಬಿಡಿ.

- **ಚಿತ್ರೀಕರಣದ ಅನುಭವ ಹೇಗಿತ್ತು?**

ಪ್ರತಿ ಚಿತ್ರವನ್ನು ನನ್ನ ಮೊದಲ ಚಿತ್ರ ಎಂದುಕೊಂಡು ನಟಿಸುತ್ತೇನೆ. ಪ್ರತಿ ಸಿನಿಮಾವನ್ನು ಹೊಸ ಜೀವನ ಎಂದು ನಟಿಸುತ್ತೇನೆ. ಹೊಂಬಾಳೆಯಂತಹ ದೊಡ್ಡ ನಿರ್ಮಾಣ ಸಂಸ್ಥೆ ಜತೆಗಿದೆ. ಅವರು ದೊಡ್ಡ ಮಟ್ಟದಲ್ಲಿ ಸಿನಿಮಾ ತಲುಪಿಸುತ್ತಾರೆ.

- **ನಿಮ್ಮ ಮುಂದಿನ ಚಿತ್ರಗಳ ಕುರಿತು ಮಾಹಿತಿ?**

‘ತೋತಾಪುರಿ–2’ ಚಿತ್ರೀಕರಣದ ಬಳಿಕದ ಕೆಲಸಗಳು ನಡೆಯುತ್ತಿವೆ. 3–4 ಹೊಸ ಸಿನಿಮಾಗಳನ್ನು ಒಪ್ಪಿಕೊಂಡಿರುವೆ. ಆಯಾ ಕಾಲದಲ್ಲಿ ಆ ಸಿನಿಮಾಗಳ ಬಗ್ಗೆ ಮಾಹಿತಿ ನೀಡುವೆ.

- **ಚಿತ್ರ ಪ್ರಚಾರದ ವೇಳೆ ನೀವು ಒಳ್ಳೆಯ ಉದ್ದೇಶದಿಂದ ಮಾತನಾಡಿದ್ದರೂ, ಕೆಲವೊಮ್ಮೆ ಆ ಮಾತುಗಳು ಟೀಕೆಗೆ ಗುರಿಯಾಗುತ್ತಿದೆಯಲ್ಲ?**

ನಾನು ಇನ್ನೊಬ್ಬರ ಅಭಿಪ್ರಾಯಗಳಿಗೆ ಬದುಕುವವನಲ್ಲ. ಹೀಗಾಗಿ ಆ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಸದ್ಯಕ್ಕೆ ಈ ಚಿತ್ರದ ಪ್ರಚಾರ ಮಾಡುತ್ತಿರುವೆ. ಇದರ ಬಗ್ಗೆಯಷ್ಟೇ ಮಾತನಾಡುವೆ.



ವಿಜಯ ರಾಘವೇಂದ್ರ

ಪ್ರಯೋಗಮುಖಿ ರಾಘು

ಅಭಿಲಾಷ್ ಪಿ.ಎಸ್.

ಚಂದನವನದ ‘ಚಿನ್ನಾರಿಮುತ್ತ’ ವಿಜಯ ರಾಘವೇಂದ್ರ ‘ರಾಘು’ ಎಂಬ ವಿಭಿನ್ನವಾದ ಸಿನಿಮಾ ಮೂಲಕ ಪ್ರೇಕ್ಷಕರೆದುರಿಗೆ ಬಂದಿದ್ದಾರೆ. ಹಾಲಿವುಡ್‌ನಲ್ಲಿ ಈಗಾಗಲೇ ಪ್ರಯೋಗವಾದಂತಹ ‘ಸೋಲೊ ಆ್ಯಕ್ಟಿಂಗ್’(ಏಕ ವ್ಯಕ್ತಿ ನಟನೆ) ಇದೀಗ ಕಮರ್ಷಿಯಲ್ ರೂಪದಲ್ಲಿ ‘ರಾಘು’ ಸಿನಿಮಾ ಮೂಲಕ ಕನ್ನಡಕ್ಕೂ ಹೆಜ್ಜೆ ಇಟ್ಟಿದೆ. ಎಂ. ಆನಂದ್ ರಾಜ್ ನಿರ್ದೇಶನದ ಚೊಚ್ಚಲ ಚಿತ್ರ ಇದಾಗಿದ್ದು, ಇಂದು(ಏ.28) ಈ ಸಿನಿಮಾ ತೆರೆಕಂಡಿದೆ. ಈ ಸಂದರ್ಭದಲ್ಲಿ ಸಿನಿಮಾ ಚಿತ್ರೀಕರಣದ ಅನುಭವ ಹಾಗೂ ಪ್ರಯೋಗಾತ್ಮಕ ಚಿತ್ರಗಳ ಬಗ್ಗೆ ‘ಸಿನಿಮಾ ಪುರವಣಿ’ ಜೊತೆ ಮಾತಿಗಳಿದು ವಿಜಯ್ ಹೀಗಂದರು...

‘ನಿರ್ದೇಶಕರಾದ ಆನಂದ್ ಈ ಚಿತ್ರದ ಪರಿಕಲ್ಪನೆಯನ್ನು ಮುಂದಿಟ್ಟಾಗಲೇ ಇದು ಕಷ್ಟ ಹಾಗೂ ಸವಾಲಿನಿಂದ ಕೂಡಿದೆ ಎನ್ನಿಸಿತ್ತು. ಏಕೆಂದರೆ ಇಡೀ ಸಿನಿಮಾದಲ್ಲಿ ಒಬ್ಬನೇ ನಟನಿದ್ದಾಗ, ಸಿನಿಮಾ ಹೇಗೆ ತೂಗುತ್ತದೆ ಎನ್ನುವ ಪ್ರಶ್ನೆ ಮೂಡಿತ್ತು. ಕನ್ನಡ ಚಿತ್ರರಂಗ ಪ್ರಸ್ತುತ ಇರುವ ಸನ್ನಿವೇಶದಲ್ಲಿ, ಈಗಿನ ಜನ ಮೂರು ದೊಡ್ಡ ದೊಡ್ಡ ಹೀರೊಗಳಿದ್ದರೂ ಸಿನಿಮಾ ನೋಡುತ್ತಿಲ್ಲ. ಅಂತಹ ಸಂದರ್ಭದಲ್ಲಿ ಏಕವ್ಯಕ್ತಿ ಸಿನಿಮಾ ಮಾಡುವುದು ಸರಿಯೇ ಎನ್ನುವ ಪ್ರಶ್ನೆಯನ್ನು ಕೇಳಿಕೊಂಡೆ. ಜನರ ಮನಃಸ್ಥಿತಿಯ ಬಗ್ಗೆ ನನಗೆ ಭಯ. ನಾನು ಹಿಂದೆಂದೂ ಈ ರೀತಿಯ ಪಾತ್ರ ಮಾಡಿಲ್ಲ. ಹೀಗಿರುವಾಗ ಅಂಜಿಕೆಯೇ ಹೆಚ್ಚಿತ್ತು. ಒಬ್ಬ ನಟನಾಗಿ ನನ್ನ ನಟನೆಯ ಮೇಲೆ ನನಗೆ ಧೈರ್ಯ, ವಿಶ್ವಾಸವಿದೆ. ಆದರೆ ಇಡೀ ಸಿನಿಮಾದಲ್ಲಿ ಒಬ್ಬನೇ ಇದ್ದರೆ ಜನ ನೋಡುತ್ತಾರೆಯೇ ಎನ್ನುವ ವಿಚಾರ ಕಾಡುತ್ತಿತ್ತು. ಈ ಭಯ, ಅಳುಕು ಚಿತ್ರೀಕರಣ ಆರಂಭವಾದ ಒಂದು ವಾರದಲ್ಲಿ ಬಗೆಹರಿಯಿತು’ ಎನ್ನುತ್ತಾರೆ ವಿಜಯ ರಾಘವೇಂದ್ರ.

‘ಮನರಂಜನೆ ಎಂಬ ಅಂಶ ಇಟ್ಟುಕೊಂಡು ನೋಡಿದರೆ ನಮ್ಮ ಕನ್ನಡ ಪ್ರೇಕ್ಷಕರಲ್ಲಿ ಬಗೆಬಗೆಯ ಆಸಕ್ತಿಗಳಿವೆ. ಪ್ರಯೋಗಾತ್ಮಕವಾಗಿ ನಾವು ನಮ್ಮ ಯೋಚನೆಗಳನ್ನು ಇಡಬಹುದೇ ವಿನಾ ಇಡೀ ಸಿನಿಮಾವನ್ನು ಹಾಲಿವುಡ್ ಮಟ್ಟಕ್ಕೆ ಪ್ರಯೋಗಕ್ಕೆ ಇಳಿಸಿದರೆ, ಅದನ್ನು ನೋಡುವ ತಾಳ್ಮೆ ಎಲ್ಲ ವರ್ಗದ ಪ್ರೇಕ್ಷಕರಿಗೆ ಇಲ್ಲ. ಸದಭಿರುಚಿಯ ಪ್ರೇಕ್ಷಕರಿಗೆ ಪೂರ್ಣ ಪ್ರಮಾಣದ ಪ್ರಯೋಗಾತ್ಮಕ ಚಿತ್ರಗಳು ಹಿಡಿಸುತ್ತವೆ. ನಮ್ಮ ವೀಕ್ಷಕರಲ್ಲಿ ಇಂಥ ತಾಳ್ಮೆ ಎಷ್ಟಿದೆ ಎನ್ನುವುದೇ ಪ್ರಶ್ನೆ. ಹಾಲಿವುಡ್‌ನ ‘ಕಾಸ್ಟ್‌ಅವೇ’ ಸಿನಿಮಾವನ್ನು ಬಹುತೇಕರು ನೋಡಿರುತ್ತಾರೆ. ‘ರಾಘು’ ಈ ಮಾದರಿಯಲ್ಲಿ ಇರುತ್ತದೆಯೇ ಅಂದುಕೊಂಡರೆ ಆ ರೀತಿ ಇಲ್ಲ. ಇದೊಂದು ಆಸಕ್ತಿಕರ ಕ್ರೈಂ ಆ್ಯಕ್ಷನ್ ಥ್ರಿಲ್ಲರ್. ಇದರಲ್ಲಿ ಒಬ್ಬನನ್ನೇ ತೆರೆ ಮೇಲೆ ಹೇಗೆ ತೋರಿಸಿದ್ದಾರೆ ಎನ್ನುವುದೇ ಮುಖ್ಯ. ಇದು ತಂತ್ರಜ್ಞರೇ ತೆಗೆದುಕೊಂಡಿರುವ ಸವಾಲು. ಎದುರಿಗಿರುವ ಪಾತ್ರವನ್ನು ಕಲ್ಪನೆ ಮಾಡಿಕೊಂಡು, ಯಾವ ರೀತಿ ನಾನು ಪ್ರತಿಕ್ರಿಯೆ ನೀಡಿದರೆ ಕಥೆಗೆ ನ್ಯಾಯ ಸಿಗಲಿದೆ ಎನ್ನುವುದು ನಟನಾಗಿ ನನಗಿದ್ದ ಸವಾಲಾಗಿತ್ತು’ ಎಂದರು.

‘ಆನಂದ್ ರಾಜ್, ತಿಳಿವಳಿಕೆ ಇರುವ ತಂತ್ರಜ್ಞ. ತಮ್ಮ ವಿಚಾರದ ಮೇಲೆ ಅವರಿಗೆ ಹಿಡಿತವಿದೆ. ಅದಕ್ಕಿಂತ ಹೆಚ್ಚಾಗಿ ಅವರಿಗೆ ನಿರ್ಮಾಪಕರ ಬೆಂಬಲವಿತ್ತು. ಮಲ್ಟಿಸ್ಟಾರ್ ಸಿನಿಮಾಗಳಿಗೇ ಬಂಡವಾಳ ಹೂಡಲು ನಿರ್ಮಾಪಕರು ಯೋಚಿಸುವ ಈ ಸಂದರ್ಭದಲ್ಲಿ, ‘ರಾಘು’ ಚಿತ್ರದ ನಿರ್ಮಾಪಕರು ನಿರ್ದೇಶಕರ ಬೆಂಬಲಕ್ಕೆ ನಿಂತಿದ್ದಾರೆ’ ಎಂದು ಶ್ಲಾಘಿಸಿದರು ವಿಜಯ್.

ವಿಜಯ್ ಕೈಯಲ್ಲಿರುವ ಪ್ರಾಜೆಕ್ಟ್‌ಗಳು

‘ಗಂಗಾಧರ್ ಸಾಲಿಮಠ್ ನಿರ್ದೇಶನದ ‘ಗ್ರೇ ಗೇಮ್ಸ್’, ಸುಹಾಸ್ ಕೃಷ್ಣ ನಿರ್ದೇಶನದ ‘ಕದ್ದಚಿತ್ರ’ ಬಿಡುಗಡೆಗೆ ಸಜ್ಜಾಗಿವೆ. ‘ಜೋಗ್ 101’, ‘ಓ ಮನಸೇ’ ಸಿನಿಮಾಗಳೂ ಬಿಡುಗಡೆಗೆ ಸಜ್ಜಾಗುತ್ತಿದೆ. ದೇವಿ ಪ್ರಸಾದ್ ಶೆಟ್ಟಿ ನಿರ್ದೇಶನದ ‘ಕೇಸ್ ಆಫ್ ಕೊಂಡಾಣ’ ಚಿತ್ರದ ಚಿತ್ರೀಕರಣ ಅಂತಿಮ ಹಂತದಲ್ಲಿದೆ’ ಎನ್ನುತ್ತಾರೆ ವಿಜಯ್.

ಮತದಾರರ ದತ್ತಾಂಶ ಮಾರಾಟ ಪ್ರಕರಣ • ಪೊಲೀಸರಿಂದ ಚುರುಕಿನ ತನಿಖೆ • ಆಯೋಗಕ್ಕೆ ವರದಿ ಶೀಘ್ರ

ದೆಹಲಿ ‘ಡೊಮೈನ್’: ಖಾತೆದಾರನ ಸುಳಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ದತ್ತಾಂಶ ಮಾರಾಟ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಆಗ್ನೇಯ ವಿಭಾಗದ ಸೈಬರ್ ಕ್ರೈಂ ಠಾಣೆ ಪೊಲೀಸರು, ದತ್ತಾಂಶ ಮಾರಾಟಕ್ಕೆ ಇರಿಸಿದ್ದ ಜಾಲತಾಣದ ಡೊಮೈನ್ (ಹೆಸರು) ದೆಹಲಿ ವಿಳಾಸದಲ್ಲಿ ನೋಂದಣಿಯಾಗಿರುವ ಸಂಗತಿ ಪತ್ತೆ ಮಾಡಿದ್ದಾರೆ.

ದತ್ತಾಂಶ ಲಭ್ಯವಿದ್ದ ಜಾಲತಾಣ ಹಾಗೂ ಸರ್ವರ್ ಬಗ್ಗೆ ತಾಂತ್ರಿಕ ಪುರಾವೆ ಕಲೆಹಾಕುತ್ತಿರುವ ಪೊಲೀಸರು, ಪ್ರಕರಣದ ಬಗ್ಗೆ ಕೆಲವೇ ದಿನಗಳಲ್ಲಿ ಚುನಾವಣಾ ಆಯೋಗಕ್ಕೆ ವರದಿ ಸಲ್ಲಿಸುವ ತಯಾರಿ ನಡೆಸುತ್ತಿದ್ದಾರೆ.

‘ಬೆಂಗಳೂರು ದಕ್ಷಿಣ ಸೇರಿದಂತೆ ನಗರದ ಹಲವು ವಿಧಾನಸಭಾ ಕ್ಷೇತ್ರಗಳ ಮತದಾರರ ವೈಯಕ್ತಿಕ ಮಾಹಿತಿ ಸಂಗ್ರಹಿಸಿರುವ ಕಂಪನಿ, ಎಲ್ಲ ಮಾಹಿತಿಯನ್ನು ಸರ್ವರ್‌ನಲ್ಲಿ ಅಪ್‌ಲೋಡ್ ಮಾಡಿದೆ. ಅದೇ ಮಾಹಿತಿಯನ್ನು ₹ 25,000 ಬೆಲೆಗೆ ಜಾಲತಾಣದ ಮೂಲಕ ಮಾರಾಟಕ್ಕೆ ಇರಿಸಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘2023ರ ಚುನಾವಣೆಯಲ್ಲಿ ನಿಮ್ಮ ಕ್ಷೇತ್ರದ ದತ್ತಾಂಶವನ್ನು ಕೇವಲ ₹ 25,000ಕ್ಕೆ ಖರೀದಿಸಿ, ಗೆಲುವು ನಿಮ್ಮದಾಗಿಸಿಕೊಳ್ಳಿ’ ಎಂಬುದಾಗಿ ಕಂಪನಿಯು ಸಾಮಾಜಿಕ ಜಾಲತಾಣಗಳಲ್ಲಿ ಜಾಹೀರಾತು ಪ್ರಕಟಿಸುತ್ತಿದೆ. ಯೂಸರ್ ಐಡಿ ಹಾಗೂ ಪಾಸ್‌ವರ್ಡ್ ಪಡೆಯುವ ವ್ಯಕ್ತಿಗಳು, ಜಾಲತಾಣದಲ್ಲಿ ಲಾಗಿನ್ ಆಗಿ ಹಣ ಪಾವತಿಸಿ ದತ್ತಾಂಶ ಡೌನ್‌ಲೋಡ್ ಮಾಡಿಕೊಳ್ಳುವ ವ್ಯವಸ್ಥೆ ಇದಾಗಿದೆ’ ಎಂದು ಮೂಲಗಳು ತಿಳಿಸಿವೆ.

‘6.50 ಲಕ್ಷ ಮತದಾರರ ಮಾಹಿತಿ ಜಾಲತಾಣದಲ್ಲಿ ಲಭ್ಯವಿದೆ. 3,45,089 ಪುರುಷರು, 2,93,000 ಮಹಿಳೆಯರು ಹಾಗೂ 5,630 ಇತರರ ವೈಯಕ್ತಿಕ ಮಾಹಿತಿ ಪಟ್ಟಿ ಇಲ್ಲಿದೆ. ಸಾಮೂಹಿಕ ಎಸ್‌ಎಂಎಸ್, ಆಡಿಯೊ ಕರೆ, ವಾಟ್ಸ್‌ಆ್ಯಪ್ ಸಂದೇಶ, ಫೇಸ್‌ಬುಕ್, ಇನ್‌ಸ್ಟಾಗ್ರಾಂ, ಟ್ವಿಟರ್ ಹಾಗೂ ಲಿಂಕ್ಡ್‌ಇನ್ ಸಾಮಾಜಿಕ ಮಾಧ್ಯಮ ಖಾತೆಗಳ ಮಾಹಿತಿ ಇದೆ. ಕನ್ನಡ, ತಮಿಳು ಹಾಗೂ ಇಂಗ್ಲಿಷ್‌ನಲ್ಲೂ ದತ್ತಾಂಶವಿರುವುದು ಪರಿಶೀಲನೆಯಿಂದ ಗಮನಕ್ಕೆ ಬಂದಿದೆ’ ಎಂದಿವೆ.

ದೆಹಲಿ ವಿಳಾಸ ಬಳಕೆ: ‘ಮತದಾರರ ದತ್ತಾಂಶ ಮಾರಾಟ ಪ್ರಕರಣ ಸೂಕ್ಷ್ಮವಾದದ್ದು. ಹೀಗಾಗಿ, ವಿಶೇಷ ತಂಡ ರಚಿಸಿ ತನಿಖೆ ಮುಂದುವರಿಸಲಾಗಿದೆ. ಜಾಲತಾಣದ ಹೆಸರನ್ನು ಸದ್ಯಕ್ಕೆ ಬಹಿರಂಗಪಡಿಸಲಾಗದು’ ಎಂದು ಮೂಲಗಳು ತಿಳಿಸಿವೆ.

‘ದತ್ತಾಂಶ ಲಭ್ಯವಿರುವ‘ಡೊಮೈನ್’ (ಜಾಲತಾಣದ ಹೆಸರು) ಬಗ್ಗೆ ಮಾಹಿತಿ ಸಂಗ್ರಹಿಸಲಾಗಿದೆ. 2023ರ ಏಪ್ರಿಲ್‌ನಲ್ಲಿ ದೆಹಲಿ ವಿಳಾಸದಲ್ಲಿ ಡೊಮೈನ್ ಖರೀದಿಸಿರುವುದಕ್ಕೆ ಪುರಾವೆಗಳು ಸಿಕ್ಕಿವೆ.’ ‘ಯುಪಿಐ (ಯುನಿಫೈಡ್ ಪೇಮೆಂಟ್ಸ್ ಇಂಟರ್‌ಫೇಸ್) ವ್ಯವಸ್ಥೆ ಮೂಲಕ ಹಣ ವರ್ಗಾವಣೆ ಮಾಡಿಸಿಕೊಂಡು ದತ್ತಾಂಶ ಮಾರಲಾಗಿದೆ. ಇದಕ್ಕಾಗಿ ಎಚ್‌ಡಿಎಫ್‌ಸಿ, ಐಸಿಐಸಿಐ ಹಾಗೂ ಆ್ಯಕ್ಸಿಸ್ ಬ್ಯಾಂಕ್ ಖಾತೆಗಳನ್ನು ಬಳಸಲಾಗಿದೆ. ಮೂರು ಬ್ಯಾಂಕ್‌ನ ಖಾತೆಗಳು ಒಂದೇ ವ್ಯಕ್ತಿ ಹೆಸರಿನಲ್ಲಿರುವ ಸುಳಿವು ಲಭ್ಯವಾಗಿದೆ. ಆ ವ್ಯಕ್ತಿ ಎಲ್ಲಿದ್ದಾನೆ ? ಆತನ ಹಿನ್ನೆಲೆ ಏನು ? ಎಂಬುದನ್ನು ತಿಳಿಯಲಾಗುತ್ತಿದೆ. ಆತನ ಪತ್ತೆಗಾಗಿ ವಿಶೇಷ ತಂಡವೊಂದು ಈಗಾಗಲೇ ಹುಡುಕಾಟ ಆರಂಭಿಸಿದೆ’ ಎಂದು ಮೂಲಗಳು ಹೇಳಿವೆ.

ಮತದಾರರಿಗೆ ಕರೆ

ಬೆಂಗಳೂರಿನ ಕೆ.ಆರ್. ಪುರ ಹಾಗೂ ದಕ್ಷಿಣ ವಿಧಾನಸಭಾ ಕ್ಷೇತ್ರದ ಮತದಾರರ ಮೊಬೈಲ್‌ಗೆ ಕರೆ ಮಾಡಿ, ನಿರ್ದಿಷ್ಟ ಅಭ್ಯರ್ಥಿಗೆ ಮತ ಹಾಕುವಂತೆ ಓಲೈಸಲಾಗುತ್ತಿದೆ ಎಂದು ಗೊತ್ತಾಗಿದೆ.

ಒಂದೇ ಮನೆಯ ಮೂವರಿಗೆ ಈ ಕರೆ ಬಂದಿದೆ. ಈ ಕುಟುಂಬದ ಯಾರೊಬ್ಬರು ತಮ್ಮ ಮೊಬೈಲ್ ಸಂಖ್ಯೆಯನ್ನು ಎಲ್ಲಿಯೂ ನೀಡಿರಲಿಲ್ಲ. ಕರೆ ಮಾಡಿದವರು, ‘ಕನೆಕ್ಟ್’ ಆಗಿದೆ ಮಾತನಾಡಿ ಎಂದು ಕರೆಯನ್ನು ಮತ್ತೊಬ್ಬರಿಗೆ ವರ್ಗಾಯಿಸುತ್ತಿದ್ದಾರೆ. ಕೆ.ಆರ್. ಪುರದಲ್ಲಿ ಇಂತಹ ಪಕ್ಷದಿಂದ ಈ ಅಭ್ಯರ್ಥಿ ಸ್ಪರ್ಧಿಸಿದ್ದು, ಅವರಿಗೆ ಮತ ಚಲಾಯಿಸಬೇಕು ಎಂದು ಮನವಿ ಮಾಡಿದ್ದಾರೆ ಎಂದು ಹೆಸರು ಬಹಿರಂಗ ಪಡಿಸಲಿಚ್ಛಿಸದ ವ್ಯಕ್ತಿಯೊಬ್ಬರು ಹೇಳಿದರು.

ಮತದಾರರ ಮಾಹಿತಿ ಲಭ್ಯವಾದರೂ ಅವರು ಇಂತಹದೇ ಕ್ಷೇತ್ರದವರು, ಅವರ ಹೆಸರು, ಮೊಬೈಲ್ ಸಂಖ್ಯೆಯನ್ನು ಬಳಸಿಕೊಳ್ಳುತ್ತಿರುವುದು ದತ್ತಾಂಶ ಮಾರಾಟವಾಗಿದೆ ಎಂಬ ಸಂಶಯವನ್ನು ಮತ್ತಷ್ಟು ದಟ್ಟಗೊಳಿಸುತ್ತಿದೆ ಎಂದೂ ಹೇಳಲಾಗಿದೆ.

ಮುಖ್ಯಾಂಶಗಳು

- ಸರ್ವರ್ ಬಗ್ಗೆ ತಾಂತ್ರಿಕ ಪುರಾವೆ ಕಲೆಹಾಕುತ್ತಿರುವ ಪೊಲೀಸರು
- ₹ 25,000 ಮೊತ್ತಕ್ಕೆ ಮಾಹಿತಿ ಮಾರಾಟ

ಬಿರು ಬೇಸಿಗೆಯಲ್ಲೂ ಜೋಗದಲ್ಲಿ ನೀರು



ಕಾರ್ಗಲ್ ಸಮೀಪದ ಜೋಗ ಜಲಪಾತದಲ್ಲಿ ಬೇಸಿಗೆಯ ಬಿಸಿಲಿನಲ್ಲೂ ಅಲ್ಪ ಪ್ರಮಾಣದಲ್ಲಿ ನೀರು ಹರಿಯುತ್ತಿದೆ

ಪ್ರಜಾವಾಣಿ ವಾರ್ತೆ

ಕಾರ್ಗಲ್: ಬೇಸಿಗೆ ಬಂತೆಂದರೆ ಜೋಗದ ವೈಭವ ಕಾಣೆಯಾಗಿ, ಪ್ರವಾಸಿಗರು ಜಲಪಾತ ವೀಕ್ಷಣೆಗೆ ಮತ್ತೆ ಮಳೆಗಾಲದವರೆಗೂ ಕಾಯುವ ಸ್ಥಿತಿ ಸಾಮಾನ್ಯ. ಆದರೆ, ಈ ಬಾರಿ ಇದಕ್ಕೆ ವ್ಯತಿರಿಕ್ತ ವಾತಾವರಣ ಎಂಬಂತೆ ನೀರು ಹರಿಯುತ್ತಿದೆ.

ಜೋಗ ಜಲಪಾತ ಬೇಸಿಗೆಯಲ್ಲೂ ಹರಿಯುವ ಮೂಲಕ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

ಮಾತ್ರವಲ್ಲ, ಬಿಸಿಲಿನಿಂದ ತತ್ತರಿಸುತ್ತಿದ್ದ ಪ್ರಾಣಿ– ಪಕ್ಷಿಗಳು, ಜಲಚರಗಳ ಪಾಲಿಗೆ ಅನುಕೂಲ ಕಲ್ಪಿಸಿದೆ.

ಏಪ್ರಿಲ್ ತಿಂಗಳಲ್ಲಿ ಜಲಪಾತದಲ್ಲಿ ನೀರು ಇರುವುದು ಅಪರೂಪ. ಅಂತೆಯೇ ಪ್ರತಿವರ್ಷದ ಬೇಸಿಗೆಯಲ್ಲಿ ಜೋಗಕ್ಕೆ ಬರುವ ಪ್ರವಾಸಿಗರ ಸಂಖ್ಯೆಯಲ್ಲೂ ಇಳಿಮುಖವಾಗುತ್ತದೆ. ಈ ಬಾರಿ ಕಾರ್ಗಲ್ ಜಲಾಶಯದ ಕ್ರೆಸ್ಟ್‌ಗೇಟ್‌ಗಳ ಅಡಿಯಿಂದ ಸೋರಿಕೆಯಾಗುವ ನೀರು ತಡೆಯಲು ಕ್ರಮ ಕೈಗೊಳ್ಳದ್ದರಿಂದ ನೀರು ಬರುತ್ತಿದೆ ಜೋಗ ನಿರ್ವಹಣಾ ಪ್ರಾಧಿಕಾರದ ಮೂಲಗಳು ತಿಳಿಸಿವೆ.

ಪ್ರತಿ ವರ್ಷ ಬೇಸಿಗೆ ವೇಳೆ ಕ್ರೆಸ್ಟ್‌ಗೇಟ್‌ಗಳ ಅಡಿಯಿಂದ ಸಣ್ಣಗೆ ನೀರು ಸೋರಿಕೆ ಆಗುವುದನ್ನು ತಡೆಯಲಾಗುತ್ತಿತ್ತು. ಈ ಬಾರಿ ಕಾರ್ಗಲ್‌ನ ಮಾರಿಕಾಂಬಾ ಜಾತ್ರೆ ನಡೆಯಲಿರುವ ಕಾರಣ ಗ್ರಾಮಸ್ಥರ ಮನವಿ ಮೇರೆಗೆ ಸೋರಿಕೆ ತಡೆಯಲಾಗಿಲ್ಲ. ಇದರಿಂದ ಜಲಚರಗಳು ಮತ್ತು ಕಾಡು ಪ್ರಾಣಿಗಳಿಗೆ ಅನುಕೂಲವಾಗುತ್ತಿದೆ ಎನ್ನಲಾಗಿದೆ.

ಆಲಿಕಲ್ಲು ಮಳೆ; ಸಿಡಿಲಿಗೆ ಜಾನುವಾರು ಸಾವು

ಪ್ರಜಾವಾಣಿ ವಾರ್ತೆ

ಕಲಬುರಗಿ: ಕಲಬುರಗಿ ಮತ್ತು ಬೀದರ್ ಜಿಲ್ಲೆಯ ವಿವಿಧೆಡೆ ಗುರುವಾರ ಆಲಿಕಲ್ಲು ಸಹಿತ ಜೋರು ಮಳೆಯಾಯಿತು. ರಸ್ತೆಯುದ್ದಕ್ಕೂ ಮತ್ತು ಕಟ್ಟಡಗಳ ಸುತ್ತ ಮುತ್ತ ರಾಶಿಗಟ್ಟಲೇ ಆಲಿಕಲ್ಲು ಬಿದ್ದವು. ಸಿಡಿಲಿಗೆಜಾನುವಾರುಗಳುಮೃತಪಟ್ಟಿವೆ.

ಕಲಬುರಗಿ ನಗರ ಸೇರಿ ಚಿಂಚೋಳಿ, ಕಾಳಗಿ ಮತ್ತು ಕಮಲಾಪುರ ತಾಲ್ಲೂಕಿನಲ್ಲಿ ಮಳೆ ಬಿತ್ತು. ಕಲಬುರಗಿಯಲ್ಲಿ ರಸ್ತೆ ಮೇಲೆ ನೀರು ನಿಂತು, ವಾಹನಗಳ ಸಂಚಾರಕ್ಕೆ ಅಡ್ಡಿ ಉಂಟಾಯಿತು.

ಬೀದರ್ ನಗರ ಹಾಗೂ ಹುಲಸೂರು, ಭಾಲ್ಕಿ ತಾಲ್ಲೂಕಿನಲ್ಲಿ ಸುರಿದ ಮಳೆಗೆ ಹಳ್ಳಕೊಳ್ಳಗಳು ಭರ್ತಿಯಾದವು. ಕೆಲ ಕಡೆ ಗಿಡಮರಗಳು ಉರುಳಿ ಬಿದ್ದವು. ಬಹುತೇಕ ಕಡೆ ವಿದ್ಯುತ್ ಕಡಿತಗೊಂಡ ಕಾರಣ ಜನರು ತೊಂದರೆ ಅನುಭವಿಸಿದರು.

ಸಿಡಿಲು ಬಡಿದು ಕಲಬುರಗಿ ತಾಲ್ಲೂಕಿನ ಜಂಬಗಾ(ಬಿ) ಗ್ರಾಮದ ಸುಧಾಬಾಯಿ ರೇವಣಸಿದ್ದಪ್ಪ ಅವರಿಗೆ ಸೇರಿದ್ದ ಎರಡು ಎಮ್ಮೆ ಹಾಗೂ ಕಮಲಾಪುರ ತಾಲ್ಲೂಕಿನ ಮಳಸಾಪುರ ತಾಂಡಾದಲ್ಲಿ ಎರಡು ಎತ್ತುಗಳು ಮೃತಪಟ್ಟಿವೆ. ಬೀದರ್ ಜಿಲ್ಲೆಯ ಹುಲಸೂರು ತಾಲ್ಲೂಕಿನ ಹಲಸಿತೂಗಾಂವನಲ್ಲಿ ಎರಡು ಎತ್ತು, ಅಳವಾಯಿ ಗ್ರಾಮದಲ್ಲಿ ಎಮ್ಮೆ ಮತ್ತು ಎತ್ತು, ಶ್ರೀಮಲಿ ಗ್ರಾಮದಲ್ಲಿ ಹಸು, ಮೆಹಕರ ಗ್ರಾಮದಲ್ಲಿ ಮೇಕೆ ಸಾವನ್ನಪ್ಪಿದೆ.

ಮಡಿಕೇರಿ ವರದಿ: ನಗರದಲ್ಲಿ ಗುರುವಾರ ಸಂಜೆ ಬಿರುಸಿನ ಮಳೆ ಸುರಿಯಿತು. ಸುಮಾರು 20 ನಿಮಿಷಗಳ ಕಾಲ ಗುಡುಗು, ಸಿಡಿಲಿನಿಂದ ಸುರಿದ ಮಳೆಗೆ ಹಲವು ರಸ್ತೆಗಳಲ್ಲಿ ನೀರು ಹರಿಯಿತು. ಮದೆ, ಕಡಗದಾಳು, ಬೆಂಗೂರು, ನಾಪೋಕ್ಲು, ಚೆಂಬು, ಪೆರಾಜೆ, ಕೆದಕಲ್, ತಿತಿಮತಿ ಭಾಗದಲ್ಲೂ ಮಳೆಯಾಯಿತು.



ಕಲಬುರಗಿಯಲ್ಲಿ ಗುರುವಾರ ಸುರಿದ ಆಲಿಕಲ್ಲು ಮಳೆಯಲ್ಲಿ ಸಿಲುಕಿದ ಗುಜರಿ ಸಾಮಗ್ರಿ ಖರೀದಿಯ ವ್ಯಾಪಾರಿ –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ನಾಳೆ ನಾಲ್ಕು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’

ಬೆಂಗಳೂರು: ಹವಾಮಾನ ಇಲಾಖೆಯು ರಾಜ್ಯದ ನಾಲ್ಕು ಜಿಲ್ಲೆಗಳಿಗೆ ಶನಿವಾರ ಹಾಗೂ ಹತ್ತು ಜಿಲ್ಲೆಗಳಿಗೆ ಭಾನುವಾರ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಕಲಬುರಗಿ, ಯಾದಗಿರಿ, ರಾಯಚೂರು ಹಾಗೂ ಮೈಸೂರು ಜಿಲ್ಲೆಗೆ ಶನಿವಾರ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದ್ದು, ಗುಡುಗು ಸಹಿತ ಭಾರಿ ಮಳೆಯಾಗುವ ಸಾಧ್ಯತೆಯಿದೆ.

ಬಳ್ಳಾರಿ, ದಾವಣಗೆರೆ, ಶಿವಮೊಗ್ಗ, ತುಮಕೂರು, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ ಹಾಗೂ ಮೈಸೂರು ಜಿಲ್ಲೆಗೆ ಭಾನುವಾರ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಈ ಜಿಲ್ಲೆಗಳಲ್ಲಿ ಮಳೆಯ ತೀವ್ರತೆ ಹೆಚ್ಚಿರಲಿದೆ ಎಂದು ಇಲಾಖೆ ತಿಳಿಸಿದೆ.

ಶುಕ್ರವಾರ ಉತ್ತರ ಒಳನಾಡಿನ ಬೀದರ್, ಬಾಗಲಕೋಟೆ, ಬೆಳಗಾವಿ, ಗದಗ, ಹಾವೇರಿ, ರಾಯಚೂರು, ಕಲಬುರಗಿ, ಯಾದಗಿರಿ, ಕೊಪ್ಪಳ, ವಿಜಯಪುರ ಹಾಗೂ ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ದಾವಣಗೆರೆ, ಚಿತ್ರದುರ್ಗ, ಚಿಕ್ಕಮಗಳೂರು, ಹಾಸನ, ಕೊಡಗು, ಮಂಡ್ಯ, ಮೈಸೂರು, ತುಮಕೂರು, ವಿಜಯನಗರ, ಶಿವಮೊಗ್ಗ, ರಾಮನಗರ ಜಿಲ್ಲೆಯ ಕೆಲವು ಕಡೆ ಮತ್ತು ಕರಾವಳಿಯ ಎಲ್ಲಾ ಜಿಲ್ಲೆಗಳಲ್ಲಿ ಒಂದೆರಡು ಕಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ಹೇಳಿದೆ.

ಗುರುವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ದಕ್ಷಿಣ ಕನ್ನಡದ ಸುಬ್ರಹ್ಮಣ್ಯದಲ್ಲಿ ಗರಿಷ್ಠ (4 ಸೆಂ.ಮೀ.) ಮಳೆಯಾಗಿದೆ.

ಕೊಡಗಿನ ಭಾಗಮಂಡಲ, ಚಿಕ್ಕಮಗಳೂರಿನ ಶೃಂಗೇರಿ, ಬಾಳೆಹೊನ್ನೂರಿನಲ್ಲಿ ತಲಾ 3 ಸೆಂ.ಮೀ., ದಕ್ಷಿಣ ಕನ್ನಡದ ಉಪ್ಪಿನಂಗಡಿ, ಸುಳ್ಯ, ಕೊಡಗಿನ ಹಾರಂಗಿ ಹಾಗೂ ಶಿವಮೊಗ್ಗದ ನಿದಿಗೆಯಲ್ಲಿ ತಲಾ 2 ಸೆಂ.ಮೀ. ಮಳೆಯಾಗಿದೆ. ಉಳಿದೆಡೆ ಈ ಪ್ರಮಾಣ 2 ಸೆಂ.ಮೀ.ಗಿಂತ ಕಡಿಮೆ ವರದಿಯಾಗಿದೆ. ಕಲಬುರಗಿಯಲ್ಲಿ ಗರಿಷ್ಠ ಉಷ್ಣಾಂಶ (37.6 ಡಿಗ್ರಿ ಸೆಲ್ಸಿಯಸ್) ದಾಖಲಾಗಿದೆ ಎಂದು ಇಲಾಖೆ ತಿಳಿಸಿದೆ.

₹ 82 ಕೋಟಿ ಅಕ್ರಮ ವರ್ಗಾವಣೆ

‘ನಗರದ ಎರಡು ಸ್ಥಳಗಳಲ್ಲಿದ್ದ ಕಚೇರಿಗಳ ಮೇಲೆ ದಾಳಿ ಮಾಡಲಾಗಿದೆ. ಎಲೆಕ್ಟ್ರಾನಿಕ್ ವಸ್ತುಗಳು ಹಾಗೂ ದಾಖಲೆಗಳನ್ನು ಜಪ್ತಿ ಮಾಡಿ, ಪರಿಶೀಲಿಸಲಾಗುತ್ತಿದೆ’.

ಚೀನಾ ಪ್ರಜೆ ಒಡೆತನದ ‘ಒಡಾ ಕ್ಲಾಸ್’ ಮೇಲೆ ಇ.ಡಿ ದಾಳಿ

ಬೆಂಗಳೂರು: ಭಾರತೀಯರ ಹೆಸರಿನಲ್ಲಿ ಅಕ್ರಮವಾಗಿ ವ್ಯವಹಾರ ನಡೆಸುತ್ತಿದ್ದ ಚೀನಾ ಪ್ರಜೆಗಳ ಒಡೆತನದ ‘ಒಡಾ ಕ್ಲಾಸ್’ ಆನ್‌ಲೈನ್ ಎಜ್ಯುಕೇಶನ್ ಆ್ಯಪ್ ಕಚೇರಿಗಳ ಮೇಲೆ ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ದಾಳಿ ಮಾಡಿದ್ದಾರೆ.

‘ಪಿಜನ್ ಎಜ್ಯುಕೇಶನ್ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ ಹೆಸರಿನಲ್ಲಿ ಕಂಪನಿ ಸ್ಥಾಪಿಸಿದ್ದ ಚೀನಾ ಪ್ರಜೆಗಳು, ಭಾರತೀಯರನ್ನು ನಿರ್ದೇಶಕರನ್ನಾಗಿ ಮಾಡಿದ್ದರು. ಆದರೆ, ಅವರಿಗೆ ಯಾವುದೇ ಅಧಿಕಾರ ನೀಡಿರಲಿಲ್ಲ. ತಾವೇ ಅಸಲಿ ಮಾಲೀಕರಾಗಿದ್ದರು. ಕಂಪನಿಯ ಅಕ್ರಮ ವಹಿವಾಟು ಪತ್ತೆಯಾಗುತ್ತಿದ್ದಂತೆ, ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯಡಿ (ಫೆಮಾ) ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು’ ಎಂದು ಇ.ಡಿ ಮೂಲಗಳು ತಿಳಿಸಿವೆ.

₹ 82 ಕೋಟಿ ಅಕ್ರಮ ವರ್ಗಾವಣೆ: ‘ಆನ್‌ಲೈನ್ ತರಗತಿ ನಡೆಸುವ ಉದ್ದೇಶದಿಂದ ‘ಒಡಾ ಕ್ಲಾಸ್’ ಆ್ಯಪ್ ಅಭಿವೃದ್ಧಿಪಡಿಸಲಾಗಿದೆ. ಚೀನಾ ಪ್ರಜೆ ಲಿಯೊ ಕ್ಯಾನ್ ಹಾಗೂ ಇತರರು, ಕಂಪನಿಯ ಶೇ 100ರಷ್ಟು ಒಡೆತನ ಹೊಂದಿರುವುದು ತನಿಖೆಯಿಂದ ಗೊತ್ತಾಗಿದೆ’ ಎಂದು ಇ.ಡಿ ಮೂಲಗಳು ತಿಳಿಸಿವೆ.

‘ಲಿಯೊ ಕ್ಯಾನ್ ಹಾಗೂ ಇತರರು, ಭಾರತೀಯರಾದ ವೇದಾಂತ್ ಹಮೀರ್‌ವಸಿಯಾ ಸುಶಾಂತ್ ಶ್ರೀವಾತ್ಸವ್, ಪ್ರಿಯಾಂಕಾ ಖಾಂಡೇಲವಾಲ ಹಾಗೂ ಹಿಮಾಂಶು ಗರ್ಗ್ ಅವರನ್ನು ನಿರ್ದೇಶಕರನ್ನಾಗಿ ಮಾಡಿ ಕಂಪನಿ ನಡೆಸುತ್ತಿದ್ದರು. ಮಾರುಕಟ್ಟೆ ವೆಚ್ಚದ ಹೆಸರಿನಲ್ಲಿ ಹಲವು ತಿಂಗಳಿನಿಂದ ಚೀನಾ ಪ್ರಜೆಗಳ ಖಾತೆಗಳಿಗೆ ₹ 82 ಕೋಟಿ ವರ್ಗಾವಣೆ ಆಗಿತ್ತು. ಈ ಅಕ್ರಮ ವಹಿವಾಟಿನ ಸುಳಿವು ಸಿಗುತ್ತಿದ್ದಂತೆ ಮಾಹಿತಿ ಸಂಗ್ರಹಿಸಿ ಈ ದಾಳಿ ನಡೆಸಲಾಗಿದೆ. ಕಚೇರಿಯ ಹಳೆಯ ನಿರ್ದೇಶಕರು, ಹೊಸ ನಿರ್ದೇಶಕರು ಹಾಗೂ ಸಿಬ್ಬಂದಿಯನ್ನು ವಿಚಾರಣೆ ನಡೆಸಬೇಕಿದೆ’ ಎಂದು ಇ.ಡಿ ಮೂಲಗಳು ಹೇಳಿವೆ.

ಸಿದ್ದರಾಮನಹುಂಡಿ: ಬಿಜೆಪಿ–ಕಾಂಗ್ರೆಸ್ ಕಾರ್ಯಕರ್ತರ ಗಲಾಟೆ

ಪ್ರಜಾವಾಣಿ ವಾರ್ತೆ

ಮೈಸೂರು: ವರುಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸಿದ್ದರಾಮಯ್ಯ ಸ್ವಗ್ರಾಮ ಸಿದ್ದರಾಮನಹುಂಡಿಯಲ್ಲಿ ಕಾಂಗ್ರೆಸ್ ಹಾಗೂ ಬಿಜೆಪಿಯ ಕೆಲವು ಕಾರ್ಯಕರ್ತರ ನಡುವೆ ಗುರುವಾರ ಗಲಾಟೆ ನಡೆದಿದೆ. ಬಿಜೆಪಿ ಕಾರ್ಯಕರ್ತ ಕೆ.ಎಂ.ನಾಗೇಶ್ ಗಾಯಗೊಂಡಿದ್ದು, ಜೆಎಸ್‌ಎಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಲಾಟೆ ಮಾಡಿದವರಲ್ಲಿ ಒಬ್ಬರು ಸಿದ್ದರಾಮಯ್ಯನವರ ಸಂಬಂಧಿ ಎಂದು ಆರೋಪಿಸಲಾಗಿದೆ.

‘ಬಿಜೆಪಿ ಅಭ್ಯರ್ಥಿ ಸೋಮಣ್ಣ ಅವರಿದ್ದ ವಾಹನ ಸಿದ್ದರಾಮಯ್ಯ ಅವರ ಅಣ್ಣನ ಮನೆ ಸಮೀಪ ಬರುತ್ತಿದ್ದಂತೆ ಕಾಂಗ್ರೆಸ್ ಬೆಂಬಲಿತ ಯುವಕರ ಗುಂಪೊಂದು ಸಿದ್ದರಾಮಯ್ಯ ಪರ ಘೋಷಣೆ ಕೂಗಿತ್ತು. ಮತ್ತೊಂದು ಗುಂಪು ಸೋಮಣ್ಣ ಪರ ಘೋಷಣೆ ಕೂಗಿತ್ತು. ಆಗ, ಎರಡೂ ಗುಂಪುಗಳ ನಡುವೆ ಮಾತಿನ ಚಕಮಕಿ ನಡೆದು, ಕೆಲವರು ನಾಗೇಶ್ ಮೇಲೆ ಹಲ್ಲೆ ಮಾಡಿದರು. ಪೊಲೀಸರು ಎರಡೂ ಗುಂಪುಗಳನ್ನು ಚದುರಿಸಿ ಪರಿಸ್ಥಿತಿ ತಿಳಿಯಾಗಿಸಿದರು. ನಂತರ ಪೊಲೀಸ್ ಬಂದೋಬಸ್ತ್‌ನಲ್ಲಿ ಬಿಜೆಪಿ ಪ್ರಚಾರ ವಾಹನ ಸಾಗಿತು’ ಎಂದು ತಿಳಿದುಬಂದಿದೆ.

‘ಪೊಲೀಸರ ಮುಂದೆಯೇ ಗಲಾಟೆ ನಡೆಯಿತು. ನನ್ನ ಅಣ್ಣನ ಮಗ ನಾಗೇಶ್ ಕಾಲಿಗೆ ಗಾಯವಾಗಿದ್ದು, ಮೂವರು ಆರೋಪಿಗಳನ್ನು ವರುಣ ಪೊಲೀಸರು ವಶಕ್ಕೆ ಪಡೆದು, ಬಿಡುಗಡೆ ಮಾಡಿದ್ದಾರೆ’ ಎಂದು ಬಿಜೆಪಿ ಕಾರ್ಯಕರ್ತ ರವಿಶಂಕರ್ ದೂರಿದರು.

‘ನಾಗೇಶ್ ಎಂಬುವರಿಗೆ ರವಿ ಎಂಬುವರ ವಾಹನ ಡಿಕ್ಕಿಯಾಗಿದೆ ಎಂಬ ಮಾಹಿತಿ ಬಂದಿದೆ. ಬೇರಾವುದೇ ಗಲಾಟೆಯಾಗಿಲ್ಲ. ಕಲ್ಲು ತೂರಾಟವೇನೂ ಆಗಿಲ್ಲ. ಸಿಬ್ಬಂದಿ ಅಲ್ಲಿದ್ದರು’ ಎಂದು ಎಸ್ಪಿ ಸೀಮಾ ಲಾಟ್ಕರ್ ಪ್ರತಿಕ್ರಿಯಿಸಿದರು.

ಇದಕ್ಕೂ ಮುನ್ನ ನಡೆದ ಪ್ರಚಾರ ಸಭೆಯಲ್ಲಿ ಮಾತನಾಡಿದ್ದ ಪ್ರತಾಪ ಸಿಂಹ, ‘ಈ ಬಾರಿ ಸಿದ್ದರಾಮನಹುಂಡಿಯಲ್ಲೂ ಬಿಜೆಪಿಗೆ ಲೀಡ್ ಬರಬೇಕು. ಕೆಲವರು ನಡೆಸುತ್ತಿರುವ ಪುಂಡಾಟಿಕೆಗೆ ಪಕ್ಷದ ಯಾರೂ ಬಗ್ಗುವವರಿಲ್ಲ, ಜಗ್ಗುವವರಿಲ್ಲ. ಇಲ್ಲಿಯೂ ಜನ ನರೇಂದ್ರ ಮೋದಿ ಜೊತೆಗಿದ್ದಾರೆಂದು ಸಾಬೀತುಪಡಿಸಬೇಕು’ ಎಂದರು.

ಠಾಣೆಗೆ ದೂರು: ‘ನನ್ನ ಮಗನ ಮೇಲೆ ಸಿದ್ದರಾಮನಹುಂಡಿ ಗ್ರಾಮದಲ್ಲಿ ಸಿದ್ದರಾಮಯ್ಯನವರ ಅಣ್ಣನ ಮಕ್ಕಳು ಹಾಗೂ ಇತರರು ಹಲ್ಲೆ ನಡೆಸಿದ್ದಾರೆ. ಆರೋಪಿಗಳನ್ನು ಪೊಲೀಸರು ವಾಹನದಲ್ಲಿ ಕೂರಿಸಿಕೊಂಡಿದ್ದರು. ನಂತರ ಬಿಟ್ಟಿದ್ದಾರೆ’ ಎಂದು ಕೀಳನಪುರದ ಕೆ.ಸಿ.ಮಂಜುನಾಥ್ ವರುಣ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಪವಿತ್ರ ವಸ್ತ್ರ ಯೋಜನೆ ರದ್ದು: ಖಂಡನೆ

ಪ್ರಜಾವಾಣಿ ವಾರ್ತೆ

ಸಾಗರ: ನೈಸರ್ಗಿಕ ಬಣ್ಣವನ್ನು ಮಾತ್ರ ಬಳಸಿ ಹತ್ತಿಯಿಂದ ತಯಾರಿಸಲಾದ ಕಾಷಾಯ ವಸ್ತ್ರವನ್ನು ರಾಜ್ಯದ ಮಠಗಳೂ ಸೇರಿದಂತೆ ಧಾರ್ಮಿಕ ಸಂಸ್ಥೆಗಳಿಗೆ ಪೂರೈಸುವ ‘ಪವಿತ್ರ ವಸ್ತ್ರ ಯೋಜನೆ’ಯನ್ನು ರಾಜ್ಯ ಸರ್ಕಾರ ರದ್ದುಗೊಳಿಸಿರುವ ಕ್ರಮ ಖಂಡನೀಯ ಎಂದು ಹೆಗ್ಗೋಡಿನ ಚರಕ ಸಂಸ್ಥೆಯ ಅಧ್ಯಕ್ಷೆ ಗೌರಮ್ಮ ಹೇಳಿದರು.

ಸರ್ಕಾರವು ಯೋಜನೆ ರದ್ದುಗೊಳಿಸಿ ಕೈಮಗ್ಗ ನೇಕಾರರ ಉದ್ಯೋಗ ಮೂಲಕ್ಕೆ ಪೆಟ್ಟು ನೀಡಿದೆ. ಇದನ್ನು ಖಂಡಿಸಿ ಚರಕ ಸಂಸ್ಥೆಯ ಉದ್ಯೋಗಿಗಳು ಮೇ 1ರಂದು ಹೊನ್ನೇಸರದ ಶ್ರಮಜೀವಿ ಆಶ್ರಮದಲ್ಲಿ ಕಪ್ಪುಪಟ್ಟಿ ಧರಿಸಿ ಕೆಲಸ ಮಾಡುವ ಮೂಲಕ ಸಾಂಕೇತಿಕವಾಗಿ ಪ್ರತಿಭಟಿಸಲಿದ್ದಾರೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

10 ವರ್ಷಗಳ ಹಿಂದೆ ಚರಕ ಸಂಸ್ಥೆಯ ‘ಪವಿತ್ರ ವಸ್ತ್ರ ಯೋಜನೆ’ಯ ಬಗ್ಗೆ ಅಂದಿನ ಕಾಂಗ್ರೆಸ್ ಸರ್ಕಾರ ಆಸಕ್ತಿ ತೋರಿಸಿ ಯೋಜನೆಯನ್ನು ಮಂಜೂರು ಮಾಡಿತ್ತು. ಬಿ.ಎಸ್. ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾದ ನಂತರ ಬಿಜೆಪಿ ಸರ್ಕಾರವು ಈ ಯೋಜನೆಯನ್ನು ಮತ್ತಷ್ಟು ವಿಸ್ತರಿಸಿ ಬೆಂಬಲ ನೀಡಿತ್ತು. ಆದರೆ, ಅಧಿಕಾರಿಗಳ ಭ್ರಷ್ಟಾಚಾರದಿಂದಾಗಿ ಯೋಜನೆ ರದ್ದುಗೊಳ್ಳುವಂತಾಗಿದೆ ಎಂದು ಅವರು ದೂರಿದರು.

ಯೋಜನೆಯ ಪರಿಣಾಮಕಾರಿ ಅನುಷ್ಠಾನ ಮಾಡಬೇಕು ಎಂದು ಚರಕ ಸಂಸ್ಥೆ 2021ರಲ್ಲಿ ಸರ್ಕಾರಕ್ಕೆ ಕೆಲವು ಸಲಹೆ ನೀಡಿತ್ತು. ಅನುದಾನವನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯ ಜಿಲ್ಲಾ ಸಹಾಯಕ ನಿರ್ದೇಶಕರ ಹಾಗೂ ಚರಕ ಸಂಸ್ಥೆಯ ಜಂಟಿ ಖಾತೆಯಲ್ಲಿ ಇಡುವುದರಿಂದ ಅನುಷ್ಠಾನ ಸಾಧ್ಯವಿಲ್ಲ ಎಂಬುದನ್ನು ಮನವರಿಕೆ ಮಾಡಿಕೊಡಲಾಗಿತ್ತು. ಚರಕಕ್ಕೆ ಮಂಜೂರಾಗಿದ್ದ ಅನುದಾನವನ್ನು ಪ್ರತಿಭಟನಾರ್ಥ ವಾಪಸ್ ನೀಡಲಾಗಿತ್ತು. ಇದೀಗ ನ್ಯೂನತೆ ಸರಿಪಡಿಸುವ ಬದಲು ಯೋಜನೆಯನ್ನೇ ರದ್ದುಗೊಳಿಸಿರುವುದು ಎಷ್ಟು ಸರಿ ಎಂದು ಅವರು ಪ್ರಶ್ನಿಸಿದರು.



ಗೌರಮ್ಮ

ಯೋಜನೆ ಸಮರ್ಪಕವಾಗಿ ಜಾರಿಯಾಗಿದ್ದಲ್ಲಿ ರಾಜ್ಯದ ಸಾವಿರಾರು ನೇಕಾರರ ಕೈಗೆ ಉದ್ಯೋಗ ದೊರಕುತ್ತಿತ್ತು. ಜೊತೆಗೆ ಧಾರ್ಮಿಕ ವ್ಯಕ್ತಿಗಳಿಗೆ ಪರಿಶುದ್ಧವಾದ ಕಾಷಾಯ ವಸ್ತ್ರವೂ ಲಭ್ಯವಾಗುತ್ತಿತ್ತು ಎಂದರು.

ಮಿತಿಮೀರಿದ ಭ್ರಷ್ಟಾಚಾರದ ಕಾರಣಕ್ಕೆ ಸರ್ಕಾರದ ಬಹುತೇಕ ಯೋಜನೆಗಳ ಹಣ ಫಲಾನುಭವಿಗಳನ್ನು ತಲುಪುತ್ತಿಲ್ಲ. ಲಂಚ ಕೊಡುವ ಅಥವಾ ತೆಗೆದುಕೊಳ್ಳುವ ಅಭ್ಯಾಸ ಇಲ್ಲದ ಸಂಸ್ಥೆಗಳು ಅನುದಾನ ಪಡೆಯುವುದು ಕಷ್ಟಸಾಧ್ಯವಾಗಿದೆ. ಇದರಿಂದಾಗಿ ಪವಿತ್ರ ವಸ್ತ್ರ ಯೋಜನೆಯನ್ನು ಜನರ ಬೆಂಬಲದಿಂದಲೇ ಮುಂದಕ್ಕೆ ಕೊಂಡೊಯ್ಯುವ ಸಂಕಲ್ಪ ಮಾಡಲಾಗಿದೆ ಎಂದು ಅವರು ತಿಳಿಸಿದರು.

ಚರಕ ಸಂಸ್ಥೆಯ ಕಾರ್ಯದರ್ಶಿ ರಮೇಶ್, ವ್ಯವಸ್ಥಾಪಕಿ ಪದ್ಮಶ್ರೀ, ನಿರ್ದೇಶಕರಾದ ಮಹಾಲಕ್ಷ್ಮಿ, ನಾಗರತ್ನ ಇದ್ದರು.


ವೇದವ್ಯಾಸ ಜಯಂತಿ ಅಂಗವಾಗಿ ಕೊಡಲಾಗುವ ವಾರ್ಷಿಕ ಪುರಸ್ಕಾರ

ಐವರಿಗೆ ಭಂಡಾರಕೇರಿ ಮಠದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ




ಕೇಶವ ಬಾಯರಿ



ರಾಘವೇಂದ್ರ ಉಪಾಧ್ಯಾಯ



ಗಣಪತಿ ಭಟ್



ಸತ್ಯಪ್ರಮೋದ ಕಟ್ಟಿ



ಡಿ.ಪಿ.ಅನಂತ

ಮೈಸೂರು: ವೇದವ್ಯಾಸ ಜಯಂತಿ ಮತ್ತು ವಿದ್ಯಾಮಾನ್ಯತೀರ್ಥರ ಆರಾಧನೋತ್ಸವದ ಅಂಗವಾಗಿ ಉಡುಪಿಯ ಭಂಡಾರಕೇರಿ ಮಠದಿಂದ ಕೊಡುವ ವಾರ್ಷಿಕ ಪ್ರಶಸ್ತಿಗೆ ಈ ಬಾರಿ ನಾಲ್ವರು ವಿದ್ವಾಂಸರು ಮತ್ತು ಗೌರವ ಪ್ರಶಸ್ತಿಗೆ ಒಬ್ಬ ಗಣ್ಯರು ಆಯ್ಕೆಯಾಗಿದ್ದಾರೆ.

‘ರಾಜವಿದ್ಯಾವಂದ್ಯ ಪ್ರಶಸ್ತಿ’ಗೆ ಪೂರ್ಣಪ್ರಜ್ಞ ವಿದ್ಯಾಪೀಠದ ನಿವೃತ್ತ ಪ್ರಾಚಾರ್ಯ ಪಂ.ಕೇಶವ ಬಾಯರಿ, ‘ವೇದಪೀಠ ಪ್ರಶಸ್ತಿ’ಗೆ ಉಡುಪಿಯ ಪಂಡಿತ ಮತ್ತು ಪರವಿದ್ಯಾ ಪ್ರತಿಷ್ಠಾನದ ಮುಖ್ಯಸ್ಥ ಸಗ್ರಿ ರಾಘವೇಂದ್ರ ಉಪಾಧ್ಯಾಯ ಆಯ್ಕೆಯಾಗಿದ್ದಾರೆ. ಈ ಎರಡೂ ಪ್ರಶಸ್ತಿಗಳು ತಲಾ ₹1 ಲಕ್ಷ ನಗದು, ಸನ್ಮಾನಪತ್ರ, ಸ್ಮರಣಿಕೆ ಒಳಗೊಂಡಿವೆ.

ಯುವ ವಿದ್ವಾಂಸರಿಗೆ ನೀಡುವ ‘ಭಂಡಾರಕೇರಿ ರಾಜಹಂಸ ಪ್ರಶಸ್ತಿ’ಗೆ ಬೆಂಗಳೂರಿನ ವಿದ್ಯಾಮಾನ್ಯ ನಗರದ ವಿದ್ವಾನ್ ಎನ್. ಗಣಪತಿ ಭಟ್ ಮತ್ತು ‘ಸತ್ಯತೀರ್ಥ ಅನುಗ್ರಹ ಪ್ರಶಸ್ತಿ’ಗೆ ಬಸವನಗುಡಿಯ ಜಯತೀರ್ಥ ವಿದ್ಯಾಪೀಠದ ವಿದ್ವಾನ್ ಸತ್ಯಪ್ರಮೋದ ಕಟ್ಟಿ ಅವರನ್ನು ಆಯ್ಕೆ ಮಾಡಲಾಗಿದೆ. ಈ ಪ್ರಶಸ್ತಿಗಳು ತಲಾ ₹ 50 ಸಾವಿರ ನಗದು, ಸನ್ಮಾನ ಪತ್ರ, ಸ್ಮರಣಿಕೆ ಒಳಗೊಂಡಿವೆ. ಉದ್ಯಮಿ ಮತ್ತು ತಿರುಮಲ-ತಿರುಪತಿ ಮಂಡಳಿಯಲ್ಲಿ 2 ಬಾರಿ ಸದಸ್ಯರಾಗಿ, ಪೇಜಾವರ ಮಠದ ವಿಶ್ವೇಶ ತೀರ್ಥರಿಗೆ ಆಪ್ತ ಕಾರ್ಯದರ್ಶಿಯಾಗಿದ್ದ ಡಿ.ಪಿ.ಅನಂತ ಅವರಿಗೆ ‘ಶ್ರೀಶ ರಾಜದರ್ಶನ ಗೌರವ ಪ್ರಶಸ್ತಿ’ ಪ್ರದಾನ ಮಾಡಲಾಗುವುದು.

ಮೇ 2ರಂದು ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಮಠದಿಂದ ಆಯೋಜಿಸಿರುವ ವೇದವ್ಯಾಸ ಮಹರ್ಷಿ ಜಯಂತಿ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ನೆರವೇರಲಿದೆ. ವಿದ್ಯೇಶತೀರ್ಥ ಸ್ವಾಮೀಜಿ ರಚಿಸಿರುವ 300 ಪದ್ಯಗಳ ಸಂಕಲನ ‘ವಿದ್ಯೇಶ ವಿಠಲಾಂಕಿತ ಕೃತಿ ಮಂಜರೀ’ ಬಿಡುಗಡೆ ಮಾಡಲಾಗುವುದು. ಸೋಸಲೆ ವ್ಯಾಸರಾಜರ ಮಠಾಧೀಶ ವಿದ್ಯಾ ಶ್ರೀಶ ತೀರ್ಥ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಭಂಡಾರಕೇರಿ ಮಠಾಧೀಶ ವಿದ್ಯೇಶತೀರ್ಥ ಸ್ವಾಮೀಜಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮಹಿಳೆ ಕೊಂದು ಆತ್ಮಹತ್ಯೆ ಕಥೆ ಕಟ್ಟಿದ್ದ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವೇಶ್ವರನಗರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸರ್ಗುನಂ (35) ಎಂಬುವವರ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಆರೋಪಿ ಗಣೇಶ್ (23) ಅವರನ್ನು ಬಂಧಿಸಿದ್ದಾರೆ.

‘ಕುರುಬರಹಳ್ಳಿ ಜೆ.ಸಿ. ನಗರದ ನಿವಾಸಿ ಸರ್ಗುನಂ, ಪತಿ ಹಾಗೂ ಮಕ್ಕಳಿಬ್ಬರ ಜೊತೆ ವಾಸವಿದ್ದರು. ಏಪ್ರಿಲ್ 25ರಂದು ಸರ್ಗುನಂ ಅವರನ್ನು ಕೊಲೆ ಮಾಡಿ ಗಣೇಶ್ ತಲೆಮರೆಸಿ ಕೊಂಡಿದ್ದ. ಅನುಮಾನಾಸ್ಪದ ಸಾವಿನ ಬಗ್ಗೆ ಪತಿ ನೀಡಿದ್ದ ದೂರು ಆಧರಿಸಿ ಆರೋಪಿ ಗಣೇಶ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಸರ್ಗುನಂ ಅವರು ಕೆಲ ವರ್ಷ ಎಂ.ಜಿ. ನಗರದ ಬಾಡಿಗೆ ಮನೆಯೊಂದರಲ್ಲಿ ವಾಸವಿದ್ದರು. ಮನೆಯ ಮಾಲೀಕರ ಮನೆಗೆ ಆಗಾಗ ಬಂದು ಹೋಗುತ್ತಿದ್ದ ಆಟೊ ಚಾಲಕ ಗಣೇಶ್, ಸರ್ಗುನಂ ಜೊತೆ ಸ್ನೇಹ ಬೆಳೆಸಿದ್ದ. ನಂತರ, ಇಬ್ಬರ ನಡುವೆ ಸಲುಗೆ ಏರ್ಪಟ್ಟಿತ್ತು. ವಿಷಯ ಗೊತ್ತಾಗುತ್ತಿದ್ದಂತೆ ಸರ್ಗುನಂ ಅವರಿಗೆ ಪತಿ ಎಚ್ಚರಿಕೆ ನೀಡಿದ್ದರು. ಗಣೇಶ್ ಜೊತೆ ಮಾತನಾಡದಂತೆ ತಾಕೀತು ಮಾಡಿದ್ದರು.’

‘ಪತಿ ಮಾತಿಗೆ ಬೆಲೆ ನೀಡದ ಸರ್ಗುನಂ, ಗಣೇಶ್ ಜೊತೆ ಸಲುಗೆ ಮುಂದುವರಿಸಿದ್ದರು. ಇಬ್ಬರೂ ಹಲವೆಡೆ ಸುತ್ತಾಡುತ್ತಿದ್ದರು. ಅವಿವಾಹಿತನಾಗಿದ್ದ ಗಣೇಶ್ ವಾಸವಿದ್ದ ಮನೆಗೂ ಮಹಿಳೆ ಹೋಗಿ ಬರುತ್ತಿದ್ದರು’ ಎಂದು ಪೊಲೀಸರು ತಿಳಿಸಿದರು.

ಆಸ್ಪತ್ರೆಗೆ ಮೃತದೇಹ ಸಾಗಿಸಿ ಪರಾರಿ: ‘ಸರ್ಗುನಂ ಅವರು ಏಪ್ರಿಲ್ 25ರಂದು ಗಣೇಶ್‌ನ ಮನೆಗೆ ಹೋಗಿದ್ದರು. ಇದೇ ವೇಳೆ ಅವರಿಬ್ಬರ ನಡುವೆ ಜಗಳವಾಗಿತ್ತು. ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿದ್ದ ಗಣೇಶ್, ಫ್ಯಾನ್‌ಗೆ ಹಗ್ಗ ಕಟ್ಟಿ ಕುಣಿಕೆ ಸಿದ್ಧಪಡಿಸಿದ್ದ’ ಎಂದು ಪೊಲೀಸರು ಹೇಳಿದರು.

‘ಕುಣಿಕೆ ನೋಡಿದ್ದ ಸರ್ಗುನಂ, ತಾನೇ ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಬೆದರಿಸಿ ಕುರ್ಚಿ ಏರಿ ನಿಂತಿದ್ದರು. ಇದೇ ಸಂದರ್ಭದಲ್ಲಿ ಆರೋಪಿ ಗಣೇಶ್, ಸರ್ಗುನಂ ಕುತ್ತಿಗೆಗೆ ಹಗ್ಗ ಬಿಗಿದು ಉಸಿರುಗಟ್ಟಿಸಿ ಕೊಂದಿದ್ದ. ನಂತರ, ಆಟೊದಲ್ಲಿ ಮೃತದೇಹವನ್ನು ಮಲ್ಲೇಶ್ವರದ ಕೆ.ಸಿ.ಜನರಲ್ ಆಸ್ಪತ್ರೆಗೆ ಸಾಗಿಸಿದ್ದ. ಮಹಿಳೆ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ವೈದ್ಯರಿಗೆ ಸುಳ್ಳು ಹೇಳಿ, ಆಸ್ಪತ್ರೆಯಿಂದ ಪರಾರಿಯಾಗಿದ್ದ. ವಿಷಯ ತಿಳಿದು ಆಸ್ಪತ್ರೆಗೆ ಬಂದಿದ್ದ ಪತಿ, ಗಣೇಶ್ ಮೇಲೆ ಸಂಶಯ ವ್ಯಕ್ತಪಡಿಸಿದ್ದರು. ಆರೋಪಿಯನ್ನು ವಶಕ್ಕೆ ಪಡೆದು ವಿಚಾರಿಸಿದಾಗಲೂ ಆತ್ಮಹತ್ಯೆ ಕಥೆ ಹೇಳಿದ್ದ. ಹೆಚ್ಚಿನ ವಿಚಾರಣೆ ನಡೆಸಿದಾಗ ತಪ್ಪೊಪ್ಪಿಕೊಂಡ’ ಎಂದು ತಿಳಿಸಿದರು.

ಸಿಸಿಬಿ ಪೊಲೀಸರಿಂದ ಗೋವಾದಲ್ಲಿ ಆರೋಪಿಗಳ ಬಂಧನ

ಹೂಡಿಕೆ ನೆಪ: ₹ 31 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ


ಅಶೋಕ


ಜೋಜಿಪೌಲ್

ಬೆಂಗಳೂರು: ‘ಹಣ ಹೂಡಿಕೆ ಮಾಡಿದರೆ, ಹೆಚ್ಚಿನ ಲಾಭ ನೀಡುತ್ತೇವೆ’ ಎಂದು ಹೇಳಿ 870 ಜನರಿಂದ ₹ 31 ಕೋಟಿ ಪಡೆದುಕೊಂಡು ವಂಚಿಸಿದ್ದ ಇಬ್ಬರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ನಾಗದೇವನಹಳ್ಳಿ ಜ್ಞಾನಭಾರತಿ ಬಡಾವಣೆಯ ಅಶೋಕ ಮೊಗವೀರ (52) ಹಾಗೂ ಯಲಹಂಕ ಮಾರುತಿನಗರದ ಜೆ. ಜೋಜಿಪೌಲ್ (29) ಬಂಧಿತರು. ‘ಸಂಜೋಸೆ ವೆಲ್ತ್ ಮ್ಯಾನೇಜ್‌ಮೆಂಟ್’ ಕಂಪನಿ ಸ್ಥಾಪಿಸಿದ್ದ ಇವರಿಬ್ಬರು, ವಂಚನೆಯನ್ನು ವೃತ್ತಿ ಮಾಡಿಕೊಂಡಿದ್ದರು’ ಎಂದು ಸಿಸಿಬಿ ಪೊಲೀಸರು ಹೇಳಿದರು.

‘ರಾಜಾಜಿನಗರದ ಡಾ. ರಾಜ್‌ಕುಮಾರ್ ರಸ್ತೆಯಲ್ಲಿರುವ ಅಂಬಿಕಾ ಪ್ಲಾಜಾದಲ್ಲಿ ಕಚೇರಿ ತೆರೆದಿದ್ದ ಆರೋಪಿಗಳು, ‘ಷೇರು ಮಾರುಕಟ್ಟೆಯಲ್ಲಿ ನಮ್ಮ ಕಂಪನಿ ಹೆಸರು ಮಾಡಿದೆ. ಹಣ ಹೂಡಿಕೆ ಮಾಡಿದರೆ, 36 ದಿನಕ್ಕೆ ಶೇ 15 ರಷ್ಟು ಲಾಭ ನೀಡುತ್ತೇವೆ’ ಎಂದು ಜಾಹೀರಾತು ನೀಡುತ್ತಿದ್ದರು. ಆರೋಪಿಗಳ ಮಾತು ನಂಬಿದ್ದ ಮಹಿಳೆಯೊಬ್ಬರು ₹ 27.50 ಲಕ್ಷ ಹೂಡಿಕೆ ಮಾಡಿದ್ದರು.’

ಅಪರಾಧ ಸುದ್ದಿ

‘ನಿಗದಿತ ದಿನದೊಳಗೆ ಆರೋಪಿಗಳು ಹಣ ವಾಪಸು ಕೊಟ್ಟಿರಲಿಲ್ಲ. ಈ ಬಗ್ಗೆ ವಿಚಾರಿಸಿದಾಗ, ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ನೊಂದ ಮಹಿಳೆ, ರಾಜಾಜಿನಗರ ಠಾಣೆಗೆ ದೂರು ನೀಡಿದ್ದರು’ ಎಂದರು.

ಗೋವಾದಲ್ಲಿ ಓಡಾಟ: ‘ಪ್ರಕರಣ ದಾಖಲಾಗುತ್ತಿದ್ದಂತೆ ಬಂಧನ ಭೀತಿಯಲ್ಲಿದ್ದ ಆರೋಪಿಗಳು, ಕಚೇರಿಗೆ ಬೀಗ ಹಾಕಿಕೊಂಡು ಗೋವಾಕ್ಕೆ ಹೋಗಿದ್ದರು. ಈ ಬಗ್ಗೆ ಮಾಹಿತಿ ಸಿಗುತ್ತಿದ್ದಂತೆ ಗೋವಾಕ್ಕೆ ಹೋಗಿ ಆರೋಪಿಗಳನ್ನು ಬಂಧಿಸಿ ನಗರಕ್ಕೆ ಕರೆತರಲಾಗಿದೆ’ ಎಂದು ಪೊಲೀಸರು ಹೇಳಿದರು.

ಅತ್ಯಾಚಾರ: ತಂದೆಗೆ 3 ವರ್ಷ ಜೈಲು ಶಿಕ್ಷೆ

ಬೆಂಗಳೂರು: ಮಗಳ ಮೇಲೆ ಅತ್ಯಾಚಾರ ಎಸಗಿದ್ದ ಅಪರಾಧಿ ತಂದೆಗೆ 3 ವರ್ಷ ಜೈಲು ಶಿಕ್ಷೆ ವಿಧಿಸಿ ನಗರದ 4ನೇ ತ್ವರಿತ ವಿಶೇಷ ನ್ಯಾಯಾಲಯ (ಎಫ್‌ಟಿಎಸ್‌ಸಿ) ಆದೇಶ ಹೊರಡಿಸಿದೆ.

ಅಶೋಕನಗರ ಠಾಣೆ ವ್ಯಾಪ್ತಿಯಲ್ಲಿ ವಾಸವಿದ್ದ 14 ವರ್ಷದ ಮಗಳ ಮೇಲೆ 36 ವರ್ಷದ ತಂದೆ ಅತ್ಯಾಚಾರ ಎಸಗಿದ್ದ. ಹಲವು ಬಾರಿ ಅಂಗಾಂಗಗಳನ್ನು ಮುಟ್ಟಿ ಅಸಭ್ಯವಾಗಿ ವರ್ತಿಸಿದ್ದ. ಈತನ ಕೃತ್ಯದ ಬಗ್ಗೆ ಬಾಲಕಿ ಹೇಳಿಕೆ ನೀಡಿದ್ದಳು.

ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯ್ದೆ (ಪೋಕ್ಸೊ) ಅಡಿ ಪ್ರಕರಣ ದಾಖಲಿಸಿಕೊಂಡಿದ್ದ ಅಂದಿನ ಇನ್‌ಸ್ಪೆಕ್ಟರ್ ಎಸ್.ಡಿ. ಶಶಿಧರ್ ಅವರು ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ಬಗ್ಗೆ ನ್ಯಾಯಾಧೀಶ ಎ.ಕೆ. ನಾಗರಾಜಪ್ಪ ಅವರು ವಿಚಾರಣೆ ನಡೆಸಿದ್ದರು. ಪಬ್ಲಿಕ್ ಪ್ರಾಸಿಕ್ಯೂಟರ್ ಆರ್. ರವೀಂದ್ರ ವಾದಿಸಿದ್ದರು.

‘ಅಪರಾಧಿಗೆ ₹ 21 ಸಾವಿರ ದಂಡ ವಿಧಿಸಲಾಗಿದೆ. ಜೊತೆಗೆ, ಬಾಲಕಿಗೆ ₹ 4 ಲಕ್ಷ ಪರಿಹಾರ ನೀಡುವಂತೆ ನ್ಯಾಯಾಲಯ ನಿರ್ದೇಶನ ನೀಡಿದೆ’ ಎಂದು ರವೀಂದ್ರ ಹೇಳಿದರು.

ಲಿಫ್ಟ್‌ನಲ್ಲಿ ತಲೆ ಸಿಲುಕಿ ಯುವಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರಕು ಸಾಗಣೆಗೆ ಬಳಸುತ್ತಿದ್ದ ಲಿಫ್ಟ್‌ನಲ್ಲಿ ತಲೆ ಸಿಲುಕಿ ವಿಕಾಸ್ ಕುಮಾರ್ (25) ಎಂಬುವವರು ಮೃತಪಟ್ಟಿದ್ದು, ಈ ಸಂಬಂಧ ಕಲಾಸಿಪಾಳ್ಯ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಉತ್ತರ ಪ್ರದೇಶದ ವಿಕಾಸ್, ಕೆಲಸ ಹುಡುಕಿಕೊಂಡು ಕೆಲ ತಿಂಗಳ ಹಿಂದೆಯಷ್ಟೇ ನಗರಕ್ಕೆ ಬಂದಿದ್ದರು. ಜೆ.ಸಿ.ರಸ್ತೆಯಲ್ಲಿರುವ ಸಂಜಯ ಆಟೊಮೊಬೈಲ್ಸ್ ಮಳಿಗೆಯಲ್ಲಿ ಕೆಲಸಕ್ಕೆ ಸೇರಿದ್ದರು. ಅದೇ ಮಳಿಗೆಯ ಕಟ್ಟಡದ ಲಿಫ್ಟ್‌ನಲ್ಲಿ ಅವಘಡ ಸಂಭವಿಸಿದೆ’ ಎಂದು ಪೊಲೀಸರು ಹೇಳಿದರು.

‘ಬಹುಮಹಡಿ ಕಟ್ಟಡದಲ್ಲಿ ಸರಕು ಸಾಗಣೆಗೆಂದು ಲಿಫ್ಟ್ ಅಳವಡಿಸಲಾಗಿದೆ. ಆದರೆ, ಲಿಫ್ಟ್ ಹಾಗೂ ಅದನ್ನು ಅಳವಡಿಸಿದ್ದ ಗೋಡೆಗೆ ಬಾಗಿಲು ಇರಲಿಲ್ಲ. ಬಟನ್ ಒತ್ತುವ ಮೂಲಕ ಲಿಫ್ಟ್ ನಿಲ್ಲಿಸಿ, ಅದರಲ್ಲಿ ಸರಕು ತುಂಬಿ ಮೇಲಿನ ಮಹಡಿ ಹಾಗೂ ಕೆಳ ಮಹಡಿಗೆ ಕಳುಹಿಸಲಾಗುತ್ತಿತ್ತು’ ಎಂದು ತಿಳಿಸಿದರು.

ಲಿಫ್ಟ್-ಗೋಡೆ ಮಧ್ಯೆ ಸಿಲುಕಿದ ತಲೆ: ‘ಬುಧವಾರ ಸಂಜೆ ಲಿಫ್ಟ್ ಮೂಲಕ ಮೇಲಿನ ಮಹಡಿಗೆ ತರಲಾಗಿದ್ದ ಸರಕುಗಳನ್ನು ವಿಕಾಸ್ ಹೊರಗೆ ತೆಗೆಯುತ್ತಿದ್ದರು. ಇದೇ ವೇಳೆ ಆಕಸ್ಮಿಕವಾಗಿ ಬಟನ್ ಒತ್ತಿದ್ದರು. ಲಿಫ್ಟ್ ಕೆಳ ಮಹಡಿಯತ್ತ ಹೊರಟಿತ್ತು. ಗಲಿಬಿಲಿಗೊಂಡಿದ್ದ ವಿಕಾಸ್ ಲಿಫ್ಟ್‌ನೊಳಗೆ ತಲೆ ಹಾಕಿದ್ದರು. ಲಿಫ್ಟ್ ಹಾಗೂ ಗೋಡೆ ಮಧ್ಯೆ ತಲೆ ಸಿಲುಕಿತ್ತು’ ಎಂದು ಪೊಲೀಸರು ಹೇಳಿದರು.

‘ಅವಘಡದಿಂದ ಕುತ್ತಿಗೆಯ ಭಾಗಕ್ಕೆ ತೀವ್ರ ಗಾಯವಾಗಿತ್ತು. ಹೀಗಾಗಿ, ಉಸಿರುಗಟ್ಟಿ ವಿಕಾಸ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮಾಹಿತಿ ಬರುತ್ತಿದ್ದಂತೆ ಸಿಬ್ಬಂದಿ ಸ್ಥಳಕ್ಕೆ ಹೋಗಿದ್ದರು. ಲಿಫ್ಟ್‌ನೊಳಗೆ ರುಂಡ ಹಾಗೂ ಹೊರಭಾಗದಲ್ಲಿ ಮುಂಡವಿತ್ತು. ಮೃತದೇಹವನ್ನು ಹೊರಗೆ ತೆಗೆದು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಯಿತು’ ಎಂದು ತಿಳಿಸಿದರು.

ಮಳಿಗೆ ಮಾಲೀಕರ ವಿರುದ್ಧ ಪ್ರಕರಣ: ‘ಲಿಫ್ಟ್ ವ್ಯವಸ್ಥೆ ಹಾಗೂ ಅದರ ನಿರ್ವಹಣೆ ಸಮರ್ಪಕವಾಗಿರಲಿಲ್ಲ. ಸಂಜಯ್ ಆಟೊಮೊಬೈಲ್ ಮಾಲೀಕರ ನಿರ್ಲಕ್ಷ್ಯದಿಂದ ವಿಕಾಸ್ ಮೃತಪಟ್ಟಿರುವುದಾಗಿ ಸಂಬಂಧಿಕರು ದೂರು ನೀಡಿದ್ದಾರೆ. ಮಾಲೀಕರಾದ ಬಿನೊಯ್ ಹಾಗೂ ಸಂಜಯ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸರು ಹೇಳಿದರು.

ದಾರಿಹೋಕರ ಮೇಲೆ ಹಲ್ಲೆ: ರೌಡಿ ಬಂಧನ

ಬೆಂಗಳೂರು: ರಸ್ತೆಯಲ್ಲಿ ನಡೆದುಕೊಂಡು ಹೋಗುವ ಸಾರ್ವಜನಿಕರನ್ನು ಅಡ್ಡಗಟ್ಟಿ ಹಲ್ಲೆ ಮಾಡಿದ್ದ ಆರೋಪದಡಿ ರೌಡಿ ನರಸಿಂಹ ಅಲಿಯಾಸ್ ಕೂಸೆಯನ್ನು ಗಿರಿನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಜನರೆಲ್ಲರೂ ಹೆದರಬೇಕು. ನಾನು ಹೇಳಿದಂತೆ ಕೇಳಬೇಕು’ ಎಂದು ರೌಡಿ ನರಸಿಂಹ ಕೃತ್ಯ ಎಸಗುತ್ತಿದ್ದ. ಈತನ ಸಹಚರ ಕಾಂತರಾಜ್‌ನನ್ನು ಸಹ ಬಂಧಿಸಲಾಗಿದೆ. ಇನ್ನಿಬ್ಬರು ಆರೋಪಿಗಳು ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ಸ್ಥಳೀಯ ನಿವಾಸಿ ವೆಂಕಟೇಶ್ ಇತ್ತೀಚೆಗೆ ರಸ್ತೆಯಲ್ಲಿ ನಡೆದುಕೊಂಡು ಹೊರಟಿದ್ದರು. ಅವರನ್ನು ಅಡ್ಡಗಟ್ಟಿದ್ದ ರೌಡಿ, ಚಾಕುವಿನಿಂದ ಇರಿದಿದ್ದ. ಗಾಯಗೊಂಡಿದ್ದ ವೆಂಕಟೇಶ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದರು. ಅದೇ ದಿನ ನಿತೇಶ್ ಎಂಬುವವರ ಕಾರು ಅಡ್ಡಗಟ್ಟಿದ್ದ ಆರೋಪಿಗಳು, ರಾಡ್‌ನಿಂದ ಗಾಜು ಒಡೆದು ಪರಾರಿಯಾಗಿದ್ದರು. ಈ ಬಗ್ಗೆಯೂ ಪ್ರತ್ಯೇಕ ಪ್ರಕರಣ ದಾಖಲಾಗಿತ್ತು’ ಎಂದು ತಿಳಿಸಿದರು.

‘ಧರ್ಮದ ಆಧಾರದಲ್ಲಿ ಸಮಾಜ ಧ್ರುವೀಕರಣ’

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023


ಬಿ.ಕೆ. ಚಂದ್ರಶೇಖರ್

ಬೆಂಗಳೂರು: ‘ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಜನ ವಿರೋಧಿ ನೀತಿ ಅನುಸರಿಸುತ್ತಿದ್ದು, ಧರ್ಮದ ಆಧಾರದಲ್ಲಿ ಸಮಾಜವನ್ನು ಧ್ರುವೀಕರಣ ಮಾಡುತ್ತಿವೆ’ ಎಂದು ಕಾಂಗ್ರೆಸ್ ಮುಖಂಡ ಪ್ರೊ. ಬಿ.ಕೆ. ಚಂದ್ರಶೇಖರ್ ಆರೋಪಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘2013ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಸಿದ್ದರಾಮಯ್ಯ ಅವರ ಸರ್ಕಾರ ಶೇ10ರಷ್ಟು ಕಮಿಷನ್ ಪಡೆಯುತ್ತಿದೆ ಎಂದಿದ್ದರು. ಆದರೆ, ಈಗ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ತಮ್ಮದೇ ಸರ್ಕಾರ ಶೇ 40ರಷ್ಟು ಕಮಿಷನ್ ದಂಧೆ ನಡೆಸುತ್ತಿದ್ದರೂ ಏನೂ ಮಾತನಾಡುತ್ತಿಲ್ಲ. ಈ ಬಾರಿ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳಲ್ಲಿ ಶೇ 26ರಷ್ಟು ಅಭ್ಯರ್ಥಿಗಳು ಕ್ರಿಮಿನಲ್ ಪ್ರಕರಣಗಳನ್ನು ಹೊಂದಿದ್ದಾರೆ. ಅದರಲ್ಲಿ ಬಿಜೆಪಿ ಅಭ್ಯರ್ಥಿಗಳೇ ಹೆಚ್ಚು’ ಎಂದು ಹೇಳಿದರು.

‘ಸರ್ಕಾರದ ನಿರ್ಲಕ್ಷ್ಯದಿಂದ ಬೆಂಗಳೂರಿನ ಕೆರೆಗಳು ಸರ್ವನಾಶವಾಗುತ್ತಿವೆ. ರೈತರ ಸಮಸ್ಯೆಗಳ ಬಗ್ಗೆ ಚರ್ಚೆಯಾಗುತ್ತಿಲ್ಲ. ರಾಜ್ಯದಲ್ಲಿ ಪ್ರಾಥಮಿಕ ಮತ್ತು ಪಿಯುಸಿ ಶಿಕ್ಷಣಕ್ಕೆ ದಿಕ್ಕು ದೆಸೆಯೇ ಇಲ್ಲದಂತಾಗಿದೆ. ಪಠ್ಯಪುಸ್ತಕ ವಿವಾದ, ಗಾಂಧಿ ಅವರನ್ನು ಹತ್ಯೆ ಮಾಡಿರುವ ಪಾಠವನ್ನು ಕಿತ್ತು ಹಾಕಲಾಗಿದೆ. ಹಿಂದುತ್ವದ ಹಿನ್ನೆಲೆಗೆ ಏನು ಬೇಕಾಗಿದೆಯೋ ಅದನ್ನು ಮಾತ್ರ ಉಳಿಸಿಕೊಳ್ಳಲಾಗಿದೆ. ಇವೆಲ್ಲ ಸಂಘ ಪರಿವಾರದ ಕಾರ್ಯಸೂಚಿಯನ್ನು ಜಾರಿಗೊಳಿಸುವ ಸೂಚನೆ’ ಎಂದರು.

ಸಾಹಿತಿ ಎಸ್.ಜಿ. ಸಿದ್ಧರಾಮಯ್ಯ ಮಾತನಾಡಿ, ‘ಕೇಂದ್ರ ಸರ್ಕಾರದ ನಾಯಕರು ಒಬ್ಬ ವ್ಯಕ್ತಿಯನ್ನು ಮುಖ್ಯವಾಗಿಟ್ಟುಕೊಂಡು ಅವರ ಆಶೀರ್ವಾದ ಇದ್ದರೆ ಸಾಕು ಎನ್ನುವ ಮಾತುಗಳನ್ನಾಡುವ ಮೂಲಕ ಕರ್ನಾಟಕದ ಸ್ವಾಭಿಮಾನವನ್ನು ಕೆಣಕುತ್ತಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರ ಆಶೀರ್ವಾದವೂ ಬೇಕಾಗಿಲ್ಲ. ಕರ್ನಾಟಕಕ್ಕೆ ಅದರದೇ ಆದಂತಹ ಅಸ್ಮಿತೆ ಇದೆ. ನಮ್ಮ ಸ್ವಾಭಿಮಾನವನ್ನು ಕೆಣಕುತ್ತಿರುವವರಿಗೆ ಧಿಕ್ಕಾರ ಹೇಳುತ್ತೇನೆ’ ಎಂದರು.

‘ಚುನಾವಣೆಯ ನಂತರ ಬಿಜೆಪಿಯ ಜೊತೆ ಕೈಜೋಡಿಸುವ ಯಾವುದೇ ಅವಕಾಶವಾದಿ ಪಕ್ಷಗಳಿಗೂ ಕೂಡ ಮತ ಹಾಕಬಾರದು. ಇಲ್ಲದಿದ್ದರೆ ಮತ್ತದೇ ಹೊಲಸು ರಾಜಕಾರಣವನ್ನು ಜಾರಿಗೊಳಿಸಿದಂತಾಗುತ್ತದೆ. ಆದ್ದರಿಂದ ಬಿಜೆಪಿಯನ್ನು ವಿರೋಧಿಸುವುದೆಂದರೆ ಕೋಮುವಾದವನ್ನು ವಿರೋಧಿಸುವುದು. ಕೋಮುವಾದದ ಜತೆಗೆ ಅವಕಾಶವಾದಿ ರಾಜಕಾರಣ ಮಾಡುವ ಯಾವುದೇ ವ್ಯಕ್ತಿ ಮತ್ತು ಪಕ್ಷಗಳನ್ನು ವಿರೋಧಿಸಬೇಕು’ ಎಂದು ಮನವಿ ಮಾಡಿದರು.

ಪ್ರೊ. ಬಿ. ಕೃಷ್ಣಪ್ಪ ಟ್ರಸ್ಟ್ ಅಧ್ಯಕ್ಷ ರುದ್ರಪ್ಪ ಹನಗವಾಡಿ, ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕ ಟಿ.ಆರ್. ಚಂದ್ರಶೇಖರ್, ರೈತ ಸಂಘದ ಕಾರ್ಯಾಧ್ಯಕ್ಷ ವೀರಸಂಗಯ್ಯ ಇದ್ದರು.

‘ಉತ್ತರಪ್ರದೇಶ ಮಾದರಿ ಪ್ರಸ್ತಾವ ಹಾಸ್ಯಾಸ್ಪದ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದಲ್ಲಿ ಚುನಾವಣಾ ಪ್ರಚಾರ ನಡೆಸಿದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್, ತಮ್ಮ ರಾಜ್ಯದ ಮಾದರಿ ಬಗ್ಗೆ ಕರ್ನಾಟಕದಲ್ಲಿ ಪ್ರಸ್ತಾಪಿಸಿರುವುದು ಹಾಸ್ಯಾಸ್ಪದ’ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಲೇವಡಿ ಮಾಡಿದ್ದಾರೆ.

‘ಕೇಂದ್ರ ಸರ್ಕಾರದ ದಾಖಲೆಗಳ ಪ್ರಕಾರ ಉತ್ತರಪ್ರದೇಶದಲ್ಲಿ ಆರು ವರ್ಷದ ಒಳಗಿನ ಮಕ್ಕಳ ಅನಿಮಿಯಾ ಪ್ರಮಾಣ 2016ರಲ್ಲಿ ಶೇ 63.2 ರಷ್ಟಿತ್ತು. ಅದನ್ನು ಶೇ 66.4 ಕ್ಕೆ ಹೆಚ್ಚಿಸಿ ಮಕ್ಕಳನ್ನು ರೋಗಗ್ರಸ್ತ ಮಾಡಿದ್ದು ಯೋಗಿ ಸಾಧನೆ. ಎಲ್ಲ ರಾಜ್ಯಗಳಲ್ಲಿ ಜನರ ಜೀವಿತಾವಧಿ ಹೆಚ್ಚುತ್ತಿದ್ದರೆ ಉತ್ತರಪ್ರದೇಶದಲ್ಲಿ ಕುಸಿಯುತ್ತಿರುವುದು ಅವರದ್ದೇ ಮಾದರಿಯಲ್ಲವೇ’ ಎಂದು ಕುಟುಕಿದ್ದಾರೆ.

‘ಆದಿತ್ಯನಾಥರು ಮುಖ್ಯಮಂತ್ರಿಯಾದ ಬಳಿಕ ತಲಾವಾರು ವಿದ್ಯುತ್ ಲಭ್ಯತೆಯಲ್ಲಿ ಗಮನಾರ್ಹ ಬದಲಾವಣೆಯೇನೂ ಆಗಿಲ್ಲ. ಅಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 1,355 ವೈದ್ಯ ಹುದ್ದೆಗಳು ಖಾಲಿ ಇವೆ. ಜನರ ಆರೋಗ್ಯ ಸುಧಾರಿಸದೆ ರಾಜ್ಯವನ್ನು ಅಭಿವೃದ್ಧಿ ಮಾಡುವುದು ಹೇಗೆ? ಅಷ್ಟೇ ಅಲ್ಲ, ಅಲ್ಲಿ ದಲಿತ, ಹಿಂದುಳಿದ, ಅಲ್ಪಸಂಖ್ಯಾತ, ಮಹಿಳೆ ಮತ್ತು ರೈತರು ಮುಂತಾದ ದಮನಿತ ವರ್ಗಗಳು ಬದುಕಲಾಗದಷ್ಟು ಪರಿಸ್ಥಿತಿ ಹಾಳಾಗಿದೆಯೆಂಬ ಮಾಹಿತಿಯೂ ಇದೆ’ ಎಂದಿದ್ದಾರೆ.

ಮೇ 5ಕ್ಕೆ ಮಾಯಾವತಿ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಸಭೆ ಚುನಾವಣೆಯಲ್ಲಿ ಬಹುಜನ ಸಮಾಜ ಪಕ್ಷದಿಂದ (ಬಿಎಸ್‌ಪಿ) 130 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿರುವ ಅಭ್ಯರ್ಥಿಗಳ ಪರವಾಗಿ ಪಕ್ಷದ ನಾಯಕಿ ಮಾಯಾವತಿ ಮತಯಾಚಿಸಲಿದ್ದಾರೆ’ ಎಂದು ಪಕ್ಷದ ರಾಜ್ಯ ಸಂಯೋಜಕ ಮಾರಸಂದ್ರ ಮುನಿಯಪ್ಪ ತಿಳಿಸಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬೆಂಗಳೂರಿನ ತ್ರಿಪುರವಾಸಿನಿ ಮೈದಾನದಲ್ಲಿ ಮೇ 5ರಂದು ನಡೆಯುವ ಪ್ರಚಾರ ಕಾರ್ಯಕ್ರಮದಲ್ಲಿ ಬಿಎಸ್‌ಪಿ ಅಭ್ಯರ್ಥಿಗಳ ಪರ ಮಾಯಾವತಿ ಮತಯಾಚಿಸಲಿದ್ದಾರೆ. ಪುಲಕೇಶಿನಗರದಿಂದ ಬಿಎಸ್‌ಪಿ ಅಭ್ಯರ್ಥಿಯಾಗಿ ಅಖಂಡ ಶ್ರೀನಿವಾಸಮೂರ್ತಿ ಕಣಕ್ಕಿಳಿದಿದ್ದಾರೆ. ಗಾಂಧಿನಗರ ವಿಧಾನಸಭೆ ಕ್ಷೇತ್ರದ ಸ್ವತಂತ್ರ ಅಭ್ಯರ್ಥಿ ಮಾಜಿ ಸಚಿವ ಕೃಷ್ಣಯ್ಯ ಶೆಟ್ಟಿ ಅವರು ಬಿಎಸ್‌ಪಿ ಬೆಂಬಲಿತ ಅಭ್ಯರ್ಥಿಯಾಗಿದ್ದಾರೆ’ ಎಂದು ಹೇಳಿದರು.

ನಾಳೆಯಿಂದ ಎರಡು ದಿನ ಮೋದಿ ಪ್ರಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಇದೇ ಶನಿವಾರ ಮತ್ತು ಭಾನುವಾರ (ಏ.29 ಮತ್ತು 30) ರಾಜ್ಯದಲ್ಲಿ ಚುನಾವಣಾ ಪ್ರಚಾರ ನಡೆಸಲಿದ್ದಾರೆ.

ಬಿಜೆಪಿ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಹಾಗೂ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾಹಿತಿ ನೀಡಿದರು.

‘ಏ. 29ರಂದು ಬೆಳಿಗ್ಗೆ 9ಗಂಟೆಗೆ ಬೀದರ್ ಜಿಲ್ಲೆ ಹುಮ್ನಾಬಾದ್‌ನಲ್ಲಿ, ಮಧ್ಯಾಹ್ನ 1ಗಂಟೆಗೆ ವಿಜಯಪುರದಲ್ಲಿ, ಮಧ್ಯಾಹ್ನ 3ಕ್ಕೆ ಬೆಳಗಾವಿ ಜಿಲ್ಲೆ ಕುಡುಚಿಯಲ್ಲಿ ಸಾರ್ವಜನಿಕ ಸಭೆಗಳನ್ನುದ್ದೇಶಿಸಿ ಮಾತನಾಡಲಿದ್ದಾರೆ. ಅಂದು ಸಂಜೆ ಬೆಂಗಳೂರಿನ ಮಾಗಡಿ ರಸ್ತೆ ನೈಸ್ ರಸ್ತೆಯಿಂದ ಸುಮನಹಳ್ಳಿಯವರೆಗೆ ಸುಮಾರು 4.5 ಕಿ.ಮೀ ದೂರ ರೋಡ್ ಶೋ ನಡೆಸಲಿದ್ದಾರೆ. ಏ.30 ರಂದು ಬೆಳಿಗ್ಗೆ 11.30ಕ್ಕೆ ಕೋಲಾರದಲ್ಲಿ, ಮಧ್ಯಾಹ್ನ 1ಕ್ಕೆ ಚನ್ನಪಟ್ಟಣ ಮತ್ತು ಸಂಜೆ 4 ಕ್ಕೆ ಹಾಸನ ಜಿಲ್ಲೆ ಬೇಲೂರಿನಲ್ಲಿ ಚುನಾವಣಾ ಪ್ರಚಾರ ಸಭೆಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಅಂದು ಸಂಜೆ ಮೈಸೂರಿನಲ್ಲಿ ರೋಡ್ ಶೋ ನಡೆಸಲಿದ್ದಾರೆ’ ಎಂದರು.

ದಾಸರಹಳ್ಳಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್. ಮುನಿರಾಜು ವಿಶ್ವಾಸ

‘ಜನಾಶೀರ್ವಾದ ಯಾತ್ರೆಗೆ ಜನ ಬೆಂಬಲ’

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ‘ಕ್ಷೇತ್ರದಲ್ಲಿ ಕಳೆದ ಬಾರಿ ಜೆಡಿಎಸ್ ಕುತಂತ್ರದಿಂದ ಜಯ ಸಾಧಿಸಿತ್ತು. ಈ ಬಾರಿ ಇಲ್ಲಿ ಬಿಜೆಪಿ ಜಯಗಳಿಸಲಿದೆ ಎನ್ನುವುದಕ್ಕೆ ಜನಾಶೀರ್ವಾದ ಯಾತ್ರೆಯ ಜನ ಬೆಂಬಲವೇ ಸಾಕ್ಷಿ’ ಎಂದು ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್. ಮುನಿರಾಜು ವಿಶ್ವಾಸ ವ್ಯಕ್ತಪಡಿಸಿದರು.

ಸುಂಕದಕಟ್ಟೆ ವಾರ್ಡ್‌ನ ಹೊಯ್ಸಳ ನಗರದ ಅಯ್ಯಪ್ಪ ಸರ್ಕಲ್‌ನಿಂದ ರೋಡ್ ಶೋ ನಡೆಸಿ ಮಾತನಾಡಿದ ಅವರು, ‘ಈ ಹಿಂದೆ ಶಾಸಕನಾಗಿದ್ದ ಅವಧಿಯಲ್ಲಿ ಕೈಗೊಂಡ ಅನೇಕ ಅಭಿವೃದ್ಧಿ ಕಾರ್ಯಗಳು ಜನರ ಮನಸ್ಸಿನಲ್ಲಿ ಇಂದಿಗೂ ಉಳಿದಿವೆ. ಹೀಗಾಗಿ, ಕ್ಷೇತ್ರದ ಅಭಿವೃದ್ಧಿಗಾಗಿ ಬಿಜೆಪಿ ಗೆಲ್ಲಿಸಲು ಜನರೇ ಹೆಜ್ಜೆಯಿಟ್ಟಿದ್ದಾರೆ’ ಎಂದು ಹೇಳಿದರು.

ಹೊಯ್ಸಳ ನಗರದ ಗಣೇಶ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿದ ಅವರು, ಬಳಿಕ ಸೊಲ್ಲಾಪುರದಮ್ಮ ದೇವಸ್ಥಾನ, ಹೆಗ್ಗನಹಳ್ಳಿ ಕ್ರಾಸ್, ಶ್ರೀಗಂಧನಗರ, ಫ್ರೆಂಡ್ಸ್ ಕಾಲೋನಿ, ಹೆಗ್ಗನಹಳ್ಳಿ ಮುಖ್ಯರಸ್ತೆಯಲ್ಲಿ ರ್‍ಯಾಲಿ ನಡೆಸುವ ಮೂಲಕ ಮತಯಾಚಿಸಿದರು.

ಹೆಗ್ಗನಹಳ್ಳಿ ವಾರ್ಡ್ ಅಧ್ಯಕ್ಷ ಸಪ್ತಗಿರಿ ಮಂಜುನಾಥ್, ಪಾಲಿಕೆ ಮಾಜಿ ಸದಸ್ಯ ಭಾಗ್ಯಮ್ಮ ಕೃಷ್ಣಯ್ಯ, ಬಿಜೆಪಿ ಮುಖಂಡರಾದ ಎಚ್.ಆರ್ ಪ್ರಕಾಶ್, ಸಪ್ತಗಿರಿ ಆನಂದ್, ಟೆಂಟ್ ಮಂಜಣ್ಣ, ನಾಗೇಶ್, ಗುರು ನಿಶ್ಚಲ್ ಇದ್ದರು.


ದಾಸರಹಳ್ಳಿ ವಿಧಾನಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್. ಮುನಿರಾಜು ಅವರು ಸುಂಕದಕಟ್ಟೆ ವಾರ್ಡ್‌ನ ಹೊಯ್ಸಳ ನಗರದ ಅಯ್ಯಪ್ಪ ವೃತ್ತದಿಂದ ಚುನಾವಣೆ ಪ್ರಚಾರ ನಡೆಸಿದರು.



ಕೆ.ಆರ್.ಪುರ ವಿಧಾನಸಭಾ ಕ್ಷೇತ್ರ ಅಭ್ಯರ್ಥಿಗಳು ಏನಂತಾರೆ..?

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ಚಂದ್ರಹಾಸ ಹಿರೇಮಳಲಿ** ಅವರು ನಡೆಸಿದ ಕಿರು ಸಂದರ್ಶನ ಇಲ್ಲಿದೆ.

ಬೈರತಿ ಬಸವರಾಜ (ಬಿಜೆಪಿ)

ಅಭಿವೃದ್ಧಿ ಪೂರ್ಣಗೊಳಿಸಲು ಮತ್ತೊಮ್ಮೆ ಅವಕಾಶ

- **ಜನರು ನಿಮ್ಮನ್ನು ಏಕೆ ಬೆಂಬಲಿಸಬೇಕು?**

ಮೂರು ಬಾರಿ ಶಾಸಕನಾಗಿ ಕ್ಷೇತ್ರದ ಜನರ ಸೇವೆ ಮಾಡಿದ್ದೇನೆ. ಕ್ಷೇತ್ರಕ್ಕೆ ₹ 4,500 ಕೋಟಿ ಅನುದಾನ ತಂದು ಸರ್ವತೋಮುಖ ಅಭಿವೃದ್ಧಿ ಮಾಡಿರುವೆ. ಕಾವೇರಿ ನೀರು ತರಲು ಶ್ರಮ ವಹಿಸಿರುವೆ. ಜನರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವ ಕಾರಣಕ್ಕೆ ಜನರು ಬೆಂಬಲಿಸುತ್ತಾರೆ.

- **ಪಕ್ಷಾಂತರ ಚುನಾವಣೆಯ ಮೇಲೆ ಪ್ರಭಾವ ಬೀರುವುದೇ?**


2013 ಹಾಗೂ 2018ರಲ್ಲಿ ಕಾಂಗ್ರೆಸ್‌ನಿಂದ ಆಯ್ಕೆಯಾಗಿದ್ದೆ. 2019ರಲ್ಲಿ ರಾಜೀನಾಮೆ ನೀಡಿ ಬಿಜೆಪಿಯಿಂದ ಸ್ಪರ್ಧಿಸಿದಾಗ ಜನರು ಮತ್ತೆ ಆಶೀರ್ವಾದ ಮಾಡಿದ್ದರು. ಹಾಗಾಗಿ, ಪಕ್ಷಾಂತರದ ಟೀಕೆಗಳಿಗೆ ಆಗಲೇ ಉತ್ತರ ಸಿಕ್ಕಿದೆ. ಈ ಬಾರಿಯೂ ಜನರು ಜತೆ ನಿಲ್ಲುತ್ತಾರೆ.

- **ನಿಮ್ಮ ಪ್ರಮುಖ ಎದುರಾಳಿ ಯಾರು?**

ಕಣದಲ್ಲಿರುವ ಎಲ್ಲರೂ ಎದುರಾಳಿಗಳೇ. ಇಲ್ಲಿ ಪಕ್ಷದ ಜತೆಗೆ ವ್ಯಕ್ತಿಯ ಕೆಲಸಗಳೂ ಮುಖ್ಯವಾಗುತ್ತವೆ. ಹಾಗಾಗಿಯೇ, ಪಕ್ಷ ಬದಲಿಸಿದರೂ ಜನರು ತಮ್ಮ ಬೆಂಬಲ ಬದಲಿಸಲಿಲ್ಲ. ಆಡಳಿತ ವಿರೋಧಿ ಅಲೆ ಇದೆ ಎಂದು ಎದುರಾಳಿ ಅಭ್ಯರ್ಥಿಗಳು ಅಪಪ್ರಚಾರ ಮಾಡುತ್ತಿದ್ದಾರೆ. ಹಿಂದೆದೂ ಮಾಡದಷ್ಟು ಅಭಿವೃದ್ಧಿ ಕೆಲಸ ಮಾಡಿದ್ದೇನೆ. ಒಳ್ಳೆಯ ಕೆಲಸ, ಒಳ್ಳೆಯ ತನಕ್ಕೆ ಬೆಲೆ ಸಿಗುತ್ತದೆ.

- **ಕ್ಷೇತ್ರದ ಜನರಿಗೆ ನಿಮ್ಮ ಭರವಸೆ ಏನು?**

ಕ್ಷೇತ್ರದಲ್ಲಿ ಇನ್ನಷ್ಟು ಕೆಲಸಗಳಿವೆ. ಹಿಂದಿನ ಅವಧಿಯ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಿದೆ. ಅದಕ್ಕಾಗಿ ಮತ್ತೆ ಶಾಸಕನಾಗಿ ಆಯ್ಕೆಯಾಗಬೇಕು. ಮುಂದಿನ ಐದು ವರ್ಷಗಳಲ್ಲಿ ಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿ ರೂಪಿಸಲಾಗುವುದು.



ಸಿ.ವೆಂಕಟಾಚಲಪತಿ (ಜೆಡಿಎಸ್)

ಕ್ಷೇತ್ರದ ಮನೆಯ ಮಗನಿಗೆ ಬೆಂಬಲ

- **ಆರಂಭದಲ್ಲೇ ಗೊಂದಲ ಸೃಷ್ಟಿಯಾಗಿದೆಯಲ್ಲ?**

ಗೆಲ್ಲುವ ಸಾಮರ್ಥ್ಯ ಇದೆ ಎಂದು ಕಮ್ಯುನಿಸ್ಟ್ ಪಕ್ಷದ ಅಭ್ಯರ್ಥಿಗೆ ಜೆಡಿಎಸ್ ವರಿಷ್ಠರು ಬೆಂಬಲ ನೀಡಿದ್ದರು. ಕೊನೆಗೆ ವಾಸ್ತವ ಮನವರಿಕೆಯಾದ ನಂತರ ನಿರ್ಧಾರ ಬದಲಿಸಿದರು. ಕ್ಷೇತ್ರದಲ್ಲಿ ಜೆಡಿಎಸ್ ಬಲ ವೃದ್ಧಿಸಿದೆ. ನಾಯಕರಾದ ಎಚ್.ಡಿ.ಕುಮಾರಸ್ವಾಮಿ ಸೇರಿದಂತೆ ಎಲ್ಲ ನಾಯಕರೂ ಪ್ರಚಾರಕ್ಕೆ ಬರುತ್ತಾರೆ.

- **ಯಾವ ಕಾರಣಕ್ಕೆ ನಿಮ್ಮನ್ನು ಮತದಾರರು ಬೆಂಬಲಿಸಬೇಕು?**

ಮೂಲತಃ ನನ್ನದು ಕೋಲಾರ. ಎರಡೂವರೆ ದಶಕಗಳಿಂದ ಕ್ಷೇತ್ರದಲ್ಲೇ ನೆಲೆಸಿದ್ದೇನೆ. ಮನೆಯ ಮಗನಾಗಿ ಜನರ ಪ್ರೀತಿ ಗಳಿಸಿದ್ದೇನೆ. ಅವರ ಕಷ್ಟಕ್ಕೆ ಜತೆಯಾಗಿದ್ದೇನೆ. ಎದುರಾಳಿ ಬಿಜೆಪಿ ಅಭ್ಯರ್ಥಿ ಮಂತ್ರಿಯಾದರೂ ಕ್ಷೇತ್ರಕ್ಕೆ ಏನೂ ಮಾಡಿಲ್ಲ. ಅವರ ಹಿಂಬಾಲಕರಷ್ಟೇ ಉದ್ಧಾರವಾಗಿದ್ದಾರೆ.

- **ನಿಮ್ಮ ಎದುರಾಳಿ ಯಾರು?**

ಕಣದಲ್ಲಿ ನನ್ನನ್ನೂ ಸೇರಿ 11 ಅಭ್ಯರ್ಥಿಗಳು ಇದ್ದರೂ, ಬಿಜೆಪಿಯ ಬೈರತಿ ಬಸವರಾಜ ಅವರೇ ಪ್ರಮುಖ ಎದುರಾಳಿ. ಕಾಂಗ್ರೆಸ್ ಸೇರಿದಂತೆ ಇತರೆ ಯಾವ ಅಭ್ಯರ್ಥಿಗಳಿಗೂ ಜನರ ಒಲವಿಲ್ಲ. ಬಿಜೆಪಿ ಜನರ ನಂಬಿಕೆ ಕಳೆದುಕೊಂಡಿದೆ. ಅವರ ಪಟಾಲಂ ವಿರುದ್ಧ ಜನರು ತಿರುಗಿ ಬಿದ್ದಿದ್ದಾರೆ. ಜನರು ಪಂಚ ರತ್ನ ಯಾತ್ರೆಯ ಅಂಶಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

- **ಕ್ಷೇತ್ರದ ಜನರಿಗೆ ನಿಮ್ಮ ಭರವಸೆಗಳು ಏನು?**

ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಸರ್ಕಾರ ಸಾಕಷ್ಟು ಅನುದಾನ ನೀಡಿದರೂ, ಅಭಿವೃದ್ಧಿ ಶೂನ್ಯ. ಸುಗಮ ಸಂಚಾರ ಇಲ್ಲವಾಗಿದೆ. ಜನರಿಗೆ ಅಗತ್ಯವಾದ ಮೂಲ ಸೌಕರ್ಯ ಕಲ್ಪಿಸಲು ಪ್ರಥಮ ಆದ್ಯತೆ ನೀಡುವೆ. ಜೆಡಿಎಸ್ ಅಧಿಕಾರಕ್ಕೆ ಬಂದರೆ ಕ್ಷೇತ್ರವನ್ನು ಹಿಂದೆಂದೂ ಕಾಣದಷ್ಟು ಅಭಿವೃದ್ಧಿ ಪಥದಲ್ಲಿ ತೆಗೆದುಕೊಂಡು ಹೋಗುವೆ.



ಡಿ.ಕೆ.ಮೋಹನ್ (ಕಾಂಗ್ರೆಸ್)

ಭ್ರಷ್ಟಾಚಾರದ ವಿರುದ್ಧ ಗಟ್ಟಿ ಧ್ವನಿ

- **ಯಾವ ಕಾರಣಕ್ಕೆ ನಿಮ್ಮನ್ನು ಮತದಾರರು ಬೆಂಬಲಿಸಬೇಕು?**


1985ರಿಂದ ಈ ಭಾಗದ ಜನರ ಸೇವೆ ಸಲ್ಲಿಸುತ್ತಾ ಬಂದಿರುವೆ. ಹಿಂದೆ ಎರಡು ಅವಧಿ ಕೆ.ಆರ್.ಪುರ ಪುರಸಭೆಯ ಅಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ಜನರ ಸಮಸ್ಯೆಗಳಿಗೆ ಸದಾ ಸ್ಪಂದಿಸಿರುವೆ. ಭ್ರಷ್ಟಾಚಾರದ ವಿರುದ್ಧ ಗಟ್ಟಿ ಧ್ವನಿ ಎತ್ತಿರುವೆ. ಮಾಜಿ ಸಚಿವ ಎ.ಕೃಷ್ಣಪ್ಪ ಅವರ ಅಣ್ಣನ ಮಗನಾಗಿ ಜನಸೇವೆಯ ಅರ್ಥ ತಿಳಿದುಕೊಂಡಿರುವೆ. ಕಾಂಗ್ರೆಸ್‌ಗೆ ನಿಷ್ಠನಾಗಿರುವೆ. ಕಾಂಗ್ರೆಸ್‌ನಿಂದ ರಾಜಕೀಯವಾಗಿ ಮೇಲೆ ಬಂದ ಪಕ್ಷಾಂತರಿಗಳಿಗೆ ಈ ಬಾರಿ ಜನರು ತಕ್ಕಪಾಠ ಕಲಿಸಲಿದ್ದಾರೆ.

- **ನಿಮ್ಮ ಪ್ರಮುಖ ಎದುರಾಳಿ ಯಾರು?**

ಬಿಜೆಪಿಯ ಬೈರತಿ ಬಸವರಾಜ ನಮ್ಮ ಎದುರಾಳಿ. ಕಣದಲ್ಲಿ ಎಷ್ಟೇ ಅಭ್ಯರ್ಥಿಗಳಿದ್ದರೂ ಹಿಂದಿನಿಂದಲೂ ಈ ಕ್ಷೇತ್ರದಲ್ಲಿ ಕಾಂಗ್ರೆಸ್–ಬಿಜೆಪಿ ನಡುವೆ ಪೈಪೋಟಿ ನಡೆದಿರುವುದು. ಈ ಬಾರಿಯೂ ಎರಡು ಪಕ್ಷಗಳೇ ನಿರ್ಣಾಯಕ. ಮೊದಲಿನಿಂದಲೂ ಈ ಕ್ಷೇತ್ರ ಕಾಂಗ್ರೆಸ್‌ನ ಭದ್ರಕೋಟೆ. ಬಸವರಾಜ್ ಅವರು ಮಧ್ಯಂತರದಲ್ಲಿ ಬಿಜೆಪಿ ಸೇರಿದ್ದಾರೆ. ಕ್ಷೇತ್ರದಲ್ಲಿ ಒಂದೂ ಶಾಶ್ವತ ಕೆಲಸಗಳು ಆಗಿಲ್ಲ. ಬೇರೆ ಕ್ಷೇತ್ರಗಳಲ್ಲಿ ಶೇ 40ರಷ್ಟು ಭ್ರಷ್ಟಾಚಾರವಾಗಿದ್ದರೆ, ಇಲ್ಲಿ ಅದು ಶೇ 80ರಷ್ಟಿದೆ. ರೌಡಿಸಂ ಮಿತಿ ಮೀರಿದೆ. ಇದು ಬಿಜೆಪಿ ಅಭ್ಯರ್ಥಿ ಕೊಡುಗೆ.

- **ಕ್ಷೇತ್ರದ ಜನರಿಗೆ ನಿಮ್ಮ ಭರವಸೆ ಏನು?**

ಶಿಕ್ಷಣ, ಆರೋಗ್ಯ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗುವುದು. ಈಗಾಗಲೇ 6,500 ಮಕ್ಕಳಿಗೆ ಶಿಕ್ಷಣ ನೀಡಲಾಗುತ್ತಿದೆ. ಈಗಿನ ಶಾಸಕರ ಅವಧಿಯಲ್ಲಿ ಮಾಡಿದ್ದ ರಸ್ತೆಗಳು ಕಳಪೆಯಾಗಿವೆ. ಯಾವ ಕಾಮಗಾರಿಯೂ ಗುಣಮಟ್ಟದಿಂದ ಕೂಡಿಲ್ಲ. ಮೂಲ ಸೌಕರ್ಯಗಳ ಕೊರತೆ ಇದೆ. ಕಾವೇರಿ ನೀರು ಪೂರೈಕೆಯ ಕೆಲಸಗಳೂ ಪೂರ್ಣಗೊಂಡಿಲ್ಲ. ತ್ವರಿತ ಅನುಷ್ಠಾನಕ್ಕೆ ಗಮನಹರಿಸಲಾಗುವುದು.





ಚಿಕ್ಕಪೇಟೆಯಲ್ಲಿ ದಿನೇಶ್ ಗುಂಡೂರಾವ್ ಅವರ ಪರ ಪ್ರಚಾರದ ವೇಳೆ ನಡೆದ ಮೆರವಣಿಗೆಯಲ್ಲಿ ಜಾನಪದ ಕಲಾತಂಡಗಳ ನೃತ್ಯ –ಪ್ರಜಾವಾಣಿ ಚಿತ್ರ



ಬಿಟಿಎಂ ಲೇಔಟ್ ಕಾಂಗ್ರೆಸ್ ಅಭ್ಯರ್ಥಿ ರಾಮಲಿಂಗಾರೆಡ್ಡಿ ಅವರು ಈಜಿಪುರದ ಅಣ್ಣಯ್ಯಪ್ಪ ಗಾರ್ಡನ್‌ನಲ್ಲಿ ಮತಯಾಚನೆ ಮಾಡಿದರು –ಪ್ರಜಾವಾಣಿ ಚಿತ್ರ



ದಾಸರಹಳ್ಳಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಆರ್.ಮಂಜುನಾಥ್ ಅವರು ನೆಲೆ ಮಹೇಶ್ವರಮ್ಮ ಪಾರ್ಕ್‌ನಲ್ಲಿ ಮತಯಾಚನೆ ನಡೆಸಿದರು

ಕೆಪಿಸಿಸಿ ಅಧ್ಯಕ್ಷ ಶಿವಕುಮಾರ್ ಮನವಿ
‘ಮತದಾನಕ್ಕೆ ಮುನ್ನ ಸ್ಟೌವ್, ಸಿಲಿಂಡರ್‌ಗೆ ಪೂಜೆ ಸಲ್ಲಿಸಿ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಮೇ 10ರಂದು ಮತದಾನ ಮಾಡುವ ಮುನ್ನ ತಾಯಂದಿರು ಅಡುಗೆ ಅನಿಲ ಸಿಲಿಂಡರ್, ಸ್ಟೌವ್‌ಗಳಿಗೆ ಪೂಜೆ ಸಲ್ಲಿಸಿ, ಬಿಜೆಪಿ ಸರ್ಕಾರವನ್ನು ಕಿತ್ತೊಗೆಯಲು ಶಪಥ ಮಾಡಿ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರು ಮನವಿ ಮಾಡಿದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಮತ್ತಿಕೆರೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಚ್.ಕುಸುಮಾ ಪರ ಪ್ರಚಾರ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ‘ಅಡುಗೆ ಅನಿಲ, ಪೆಟ್ರೋಲ್, ಡಿಸೇಲ್, ಅಗತ್ಯ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದರಿಂದ, ಜನಸಾಮಾನ್ಯರು ಸಂಕಷ್ಟಕ್ಕೆ ಸಿಲುಕಿದ್ದಾರೆ’ ಎಂದು ದೂರಿದರು.

ನುಡಿದಂತೆ ನಡೆಯುವ ಕಾಂಗ್ರೆಸ್ ಪರ ಈ ಬಾರಿ ಅಲೆ ಇದೆ. ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

‘ಮುನಿರತ್ನ ಅವರಿಗೆ ಕಳೆದ ಬಾರಿ ಕಾಂಗ್ರೆಸ್ ಟಿಕೆಟ್ ನೀಡಿದ್ದರಿಂದ ಕ್ಷೇತ್ರದ ಜನತೆಗೆ ಮೋಸವಾಗಿದೆ. ಇದಕ್ಕಾಗಿ ತಮ್ಮಲ್ಲಿ ಕ್ಷಮೆ ಯಾಚಿಸುತ್ತೇನೆ’ ಎಂದರು.

ಕಾಂಗ್ರೆಸ್ ಅಭ್ಯರ್ಥಿ ಎಚ್. ಕುಸುಮಾ ಮಾತನಾಡಿ. ಕ್ಷೇತ್ರದಲ್ಲಿ ಶಾಂತಿ, ನೆಮ್ಮದಿಯ ಜೀವನ ಸಾಗಿಸಲು ಶ್ರಮಿಸುತ್ತೇನೆ’ ಎಂದರು.

‘ಮೋದಿ ಮುಖ ನೋಡಿ ವೋಟು ಕೊಡಬೇಕಾ?’

ಪ್ರಜಾವಾಣಿ ವಾರ್ತೆ

ತುಮಕೂರು: ‘ಮೂರೂವರೆ ವರ್ಷಗಳಲ್ಲಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಮಾಡಿದ ಅಭಿವೃದ್ಧಿ ಕೆಲಸಗಳ ಆಧಾರದ ಮೇಲೆ ಮತ ಕೇಳದೆ ಪ್ರಧಾನಿ ನರೇಂದ್ರ ಮೋದಿ ಮುಖ ನೋಡಿ ವೋಟು ಕೊಡಿ ಎಂದು ಎನ್ನುತ್ತಿದ್ದಾರೆ. ಮೋದಿ ನೋಡಿ ವೋಟು ಹಾಕಬೇಕೆ’ ಎಂದು ಜೆಡಿಎಸ್ ಮುಖಂಡ ಎಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದರು.

ನಗರದಲ್ಲಿ ಗುರುವಾರ ಕಾಂಗ್ರೆಸ್ ಮಾಜಿ ಶಾಸಕ ಶಫಿ ಅಹ್ಮದ್ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡು ಅವರು ಮಾತನಾಡಿದರು.

‘ರಾಜ್ಯಕ್ಕೆ ಮೋದಿ ಅವರ ಕೊಡುಗೆ ಏನು? ಯಾವ ಕೊಡುಗೆ ಕೊಟ್ಟಿದ್ದಾರೆ, ನೆರವು ನೀಡಿದ್ದಾರೆ ಎಂದು ಅವರು ವೋಟು ಕೇಳುತ್ತಾರೆ’ ಎಂದರು.

ದಾಸರು, ರಾಣಿ ಅಬ್ಬಕ್ಕ ಅವರಂತಹವರನ್ನು ನೆನಪಿಸಿಕೊಂಡು ವೋಟು ಕೊಡಿ ಎನ್ನುತ್ತಿದ್ದಾರೆ. ನೆರೆ, ಬರ ಬಂದಾಗ ನೆರವು ನೀಡದೆ ಈಗ ಹೇಗೆ ವೋಟು ಕೇಳುತ್ತಾರೆ ಎಂದು ಕುಮಾರಸ್ವಾಮಿ ಹರಿಹಾಯ್ದರು.

ಮೀಸಲಾತಿ ವಿಚಾರದಲ್ಲಿ ಪಂಚಮಸಾಲಿ ಲಿಂಗಾಯತರಿಗೆ ನಾಮ ಹಾಕಿದರು. ಮುಸ್ಲಿಮರಿಗೆ ನೀಡಿದ್ದ ಶೇ 4ರಷ್ಟು ಮೀಸಲಾತಿ ಕಿತ್ತುಕೊಂಡರು. ಸುಪ್ರೀಂ ಕೋರ್ಟ್‌ನಲ್ಲಿ ಒಂದು ಹೇಳಿಕೆ, ಹೊರಗಡೆ ಅದಕ್ಕೆ ತದ್ವಿರುದ್ಧ ಹೇಳಿಕೆ ಕೊಡುತ್ತಾರೆ. ಮೀಸಲಾತಿ ವಿಚಾರವನ್ನು ಯಾವ ಕೆರೆಗೆ ತೆಗೆದುಕೊಂಡು ಹೋಗಿ ಹಾಕಿದ್ದಾರೊ ಗೊತ್ತಿಲ್ಲ ಎಂದರು.

ಅಭ್ಯರ್ಥಿಗಳ ಪ್ರಚಾರ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾನಕ್ಕೆ 13 ದಿನ ಬಾಕಿ ಇದ್ದು, ದಿನದಿಂದ ದಿನಕ್ಕೆ ಅಭ್ಯರ್ಥಿಗಳು ಪ್ರಚಾರ ಚುರುಕುಗೊಳಿಸಿದ್ದಾರೆ.

ಮತದಾರನ ಮನವೊಲಿಸಲು ಪ್ರಚಾರ ಸಭೆಗಳು, ರ‍್ಯಾಲಿಗಳನ್ನು ನಡೆಸುತ್ತಿದ್ದಾರೆ. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಗರದಲ್ಲಿ ಅಲ್ಲಲ್ಲಿ ಪ್ರಚಾರ ಮಾಡಿದರು. ಮಲ್ಲೇಶ್ವರದ ಹಲವು ಅಪಾರ್ಟ್‌ಮೆಂಟ್‌ಗಳಿಗೆ ತೆರಳಿ ಜನರೊಂದಿಗೆ ಸಂವಾದ ನಡೆಸಿದರು.

ಬಿಟಿಎಂ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ರಾಮಲಿಂಗಾರೆಡ್ಡಿ ಅವರು ಈಜಿಪುರ,ಆಡುಗೋಡಿ, ಕೋರಮಂಗಲದಲ್ಲಿ ಪ್ರಚಾರ ಸಭೆಗಳನ್ನು ನಡೆಸಿದರು. ಈ ಬಾರಿ ಅತಿ ಹೆಚ್ಚಿನ ಮತದಿಂದ ಗೆಲ್ಲಿಸಲು ಕಾರ್ಯಕರ್ತರು ಹಾಗೂ ನಾಗರಿಕರು ಪಣತೊಟ್ಟಿದ್ದಾರೆ ಎಂದರು.

ದಾಸರಹಳ್ಳಿ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಆರ್.ಮಂಜುನಾಥ್ ಅವರು ಗುರುವಾರ ಹಲವು ಲೇಔಟ್‌ಗಳಲ್ಲಿ ಪ್ರಚಾರ ನಡೆಸಿದರು. ದಾಸರಹಳ್ಳಿ, ಗೃಹಲಕ್ಷ್ಮಿ ಬಡಾವಣೆ, ಕರೀಂ ಸಾಬ್ ಬಡಾವಣೆ, ಶ್ರೀಗಂಧ ನಗರ, ಎಎಸ್‌ಬಿ ಲೇಔಟ್ ಸೇರಿ ಹಲವಡೆ ನಿವಾಸಿಗಳನ್ನು ಭೇಟಿಯಾಗಿ ಮತ ಯಾಚಿಸಿದರು.

ಗಾಂಧಿ ನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ದಿನೇಶ್ ಗುಂಡುರಾವ್ ಅವರು ಚಿಕ್ಕಪೇಟೆಯಲ್ಲಿ ಗಾಂಧಿನಗರ ಕ್ಷೇತ್ರದ ವ್ಯಾಪ್ತಿಗೆ ಕೆಲವು ರಸ್ತೆಗಳಲ್ಲಿ ಮೆರವಣಿಗೆ ನಡೆಸಿದರು. ಚಿಕ್ಕಪೇಟೆಯ ವರ್ತಕರು ರುಮಾಲು ಪೇಟ ತೊಡಿಸಿ ಬರ ಮಾಡಿಕೊಂಡರು.



ಮಲ್ಲೇಶ್ವರ ಕ್ಷೇತ್ರ ವ್ಯಾಪ್ತಿಯಲ್ಲಿ ಬ್ರಿಗೇಡ್ ಗೇಟ್ ವೇ ವಸತಿ ಸಮುಚ್ಚಯದಲ್ಲಿ ನಿವಾಸಿಗಳೊಂದಿಗೆ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂವಾದ ನಡೆಸಿದರು –ಪ್ರಜಾವಾಣಿ ಚಿತ್ರ

ಶಿವಾಜಿನಗರ ಜೆಡಿಎಸ್ ಅಭ್ಯರ್ಥಿ ಅಬ್ದುಲ್ ಜಾಫರ್ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಾಜಿನಗರದ ಜೆಡಿಎಸ್ ಅಭ್ಯರ್ಥಿ ಅಬ್ದುಲ್ ಜಾಫರ್ ಆಲಿ ನಾಮಪತ್ರ ತಿರಸ್ಕರಿಸಿರುವುದನ್ನು ಪ್ರಶ್ನಿಸಿದ ರಿಟ್ ಅರ್ಜಿಯೊಂದನ್ನು ಹೈಕೋರ್ಟ್ ವಜಾಗೊಳಿಸಿದೆ.

ಚುನಾವಣಾ ಆಯೋಗದ ಕ್ರಮವನ್ನು ಪ್ರಶ್ನಿಸಿ ಬೆನ್ಸನ್ ಟೌನ್ ನಿವಾಸಿ ಅಬ್ದುಲ್ ಜಾಫರ್ ಆಲಿ ಎಂಬುವರು ಸಲ್ಲಿಸಿದ್ದ ಅರ್ಜಿಯನ್ನು ರಜಾಕಾಲದ ನ್ಯಾಯಪೀಠದಲ್ಲಿದ್ದ ನ್ಯಾಯಮೂರ್ತಿ ರವಿ ವಿ. ಹೊಸಮನಿ ಗುರುವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಚುನಾವಣಾ ಆಯೋಗದ ಪರ ವಕೀಲ ಶರತ್ ಆರ್. ದೊಡವಾಡ ವಾದ ಮಂಡಿಸಿ, ‘ಅರ್ಜಿದಾರರು ನಾಮಪತ್ರ ಸಲ್ಲಿಕೆಗೆ ಕೊನೆಯ ದಿನವಾದ ಏಪ್ರಿಲ್ 20ರಂದು ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸುವಂತೆ ಮನವಿ ಮಾಡಿದ್ದಾರೆ. ಆದರೆ, ನಿಯಮಗಳ ಪ್ರಕಾರ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆಗೆ 7 ದಿನಗಳ ನೋಟಿಸ್ ಅವಧಿ ಸೇರಿದಂತೆ 10 ದಿನಗಳ ಅವಶ್ಯಕತೆ ಇದೆ. ಅದರಂತೆ ಏಪ್ರಿಲ್ 10ರವರೆಗೆ ಸಲ್ಲಿಕೆಯಾಗಿರುವ ಎಲ್ಲ ಮನವಿಗಳನ್ನು ಪರಿಶೀಲಿಸಿ ಮತದಾರರ ಪಟ್ಟಿಗೆ ಹೆಸರು ಸೇರ್ಪಡೆ ಮಾಡಲಾಗಿದೆ‘ ಎಂದರು.

‘ಅರ್ಜಿದಾರರು ಕೊನೇ ಕ್ಷಣದಲ್ಲಿ ಮನವಿ ನೀಡಿರುವ ಕಾರಣ ಅದನ್ನು ಹಾಗೆಯೇ ಇರಿಸಲಾಗಿದೆ. ಮನವಿ ಕುರಿತು ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ. ನಾಮಪತ್ರ ಸಲ್ಲಿಕೆಯಾದಾಗ ಅರ್ಜಿದಾರರ ಹೆಸರು ಮತಪಟ್ಟಿಯಲ್ಲಿ ಇಲ್ಲದ ಕಾರಣ ನಾಮಪತ್ರವನ್ನು ತಿರಸ್ಕರಿಸಲಾಗಿದೆ. ಆದ್ದರಿಂದ, ಚುನಾವಣೆಯ ಕೊನೆಯ ಹಂತದಲ್ಲಿ ಹೈಕೋರ್ಟ್ ಇಂತಹ ವಿಚಾರಗಳಲ್ಲಿ ಮಧ್ಯಪ್ರವೇಶ ಮಾಡಬಾರದು’ ಎಂದು ಸುಪ್ರೀಂಕೋರ್ಟ್‌ನ ಪೂರ್ವನಿದರ್ಶನಗಳನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ‘ಅರ್ಜಿದಾರರು ಕಡೆ ಗಳಿಗೆಯಲ್ಲಿ ತಮ್ಮ ಹೆಸರನ್ನು ಮತಪಟ್ಟಿಯಲ್ಲಿ ಸೇರಿಸುವಂತೆ ಸಲ್ಲಿಸಿದ್ದ ಅರ್ಜಿಯನ್ನು ಚುನಾವಣಾ ಅಧಿಕಾರಿಗಳು ಬಾಕಿ ಇರಿಸಿದ್ದಾರೆ. ನಾಮಪತ್ರ ಸಲ್ಲಿಸಲು ಕಡೆಯ ದಿನವಾದ ಏಪ್ರಿಲ್ 20ರಂದು ನಾಮಪತ್ರ ಸಲ್ಲಿಸಿದ್ದ ಸಂದರ್ಭದಲ್ಲಿ ಅವರು ಹೆಸರು ಮತದಾರರ ಪಟ್ಟಿಯಲ್ಲಿ ಇರಲಿಲ್ಲ. ಹೀಗಾಗಿ, ಚುನಾವಣಾ ಆಯೋಗ ಕೈಗೊಂಡಿರುವ ಕ್ರಮ ನಿಯಮಬದ್ಧವಾಗಿದೆ. ಆದ್ದರಿಂದ, ಈ ಹಂತದಲ್ಲಿ ಕೋರ್ಟ್ ಮಧ್ಯಪ್ರವೇಶ ಮಾಡಲಾಗದು’ ಎಂದು ಅರ್ಜಿ ವಜಾಗೊಳಿಸಿದೆ.

‘ಚುನಾವಣಾ ಅಧಿಕಾರಿಗಳಿಂದ ಬಿಜೆಪಿ ಪರ ಕೆಲಸ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ಥಳೀಯ ಚುನಾವಣಾ ಅಧಿಕಾರಿಗಳು ಬಿಜೆಪಿ ಪರ ಕೆಲಸ ಮಾಡುತ್ತಿದ್ದಾರೆ’ ಎಂದು ಆಮ್ ಆದ್ಮಿ ಪಕ್ಷದ(ಎಎಪಿ) ವಕೀಲರ ಘಟಕದ ಸದಸ್ಯ ಗಂಗಾಧರ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಎಎಪಿ ಅಭ್ಯರ್ಥಿಗಳಿಗೆ ಬಿಜೆಪಿ ಅಭ್ಯರ್ಥಿಗಳು ತೊಂದರೆ ನೀಡುತ್ತಿದ್ದಾರೆ. ನಾವು ನೀಡುವ ದೂರುಗಳಿಗೆ ಚುನಾವಣಾ ಅಧಿಕಾರಿಗಳಿಂದ ಸ್ಪಂದನೆ ಸಿಗುತ್ತಿಲ್ಲ. ಆಯೋಗವು ಇದನ್ನು ಗಂಭೀರವಾಗಿ ಪರಿಗಣಿಸಿ ನ್ಯಾಯಸಮ್ಮತ ಚುನಾವಣೆಗೆ ಅವಕಾಶ ಮಾಡಿಕೊಡಬೇಕು’ ಎಂದು ಆಗ್ರಹಿಸಿದರು.

‘ಗಾಂಧಿನಗರ, ಬೆಂಗಳೂರು ದಕ್ಷಿಣ, ಮಹಾಲಕ್ಷ್ಮೀ ಲೇಔಟ್, ರಾಜರಾಜೇಶ್ವರಿನಗರ ಕ್ಷೇತ್ರಗಳಲ್ಲಿ ಎಎಪಿಗೆ ನೋಟಿಸ್‌ಗಳನ್ನು ನೀಡಿ ಕಿರುಕುಳ ನೀಡಲಾಗುತ್ತಿದೆ. ಮನೆ–ಮನೆಗೆ ತೆರಳಿ ಪ್ರಚಾರ ಮಾಡುವುದಕ್ಕೂ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ. 48 ಗಂಟೆ ಮೊದಲೇ ಎಲ್ಲ ವಿವರಗಳನ್ನು ನೀಡಿ ಅನುಮತಿ ಪಡೆಯಬೇಕೆಂದು ಹೇಳುತ್ತಿದ್ದಾರೆ. ಸಾಮಾಜಿಕ ಜಾಲತಾಣಗಳ ವೈಯಕ್ತಿಕ ಖಾತೆಗಳಲ್ಲಿ ಜಾಹೀರಾತಲ್ಲದ ಪೋಸ್ಟ್ ಹಾಕುವುದಕ್ಕೂ ಆಕ್ಷೇಪ ವ್ಯಕ್ತಪಡಿಸುತ್ತಿದ್ದಾರೆ’ ಎಂದು ದೂರಿದರು.

ಮತದಾರರ ನೋಂದಣಿ ಪ್ರಕ್ರಿಯೆಗೆ ಒತ್ತು ನೀಡಿದ್ದ ಅಧಿಕಾರಿಗಳು
ಆರು ಲಕ್ಷ ಮತದಾರರು ಹೆಚ್ಚಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 28 ಕ್ಷೇತ್ರಗಳಲ್ಲಿ ಅಂತಿಮವಾಗಿ 97.13 ಲಕ್ಷ ಮತದಾರರಿದ್ದು, ಕಳೆದ ನವೆಂಬರ್‌ನಲ್ಲಿ ಪ್ರಕಟಿಸಿದ್ದ ಪಟ್ಟಿಯಲ್ಲಿ 91 ಲಕ್ಷ ಮತದಾರರಿದ್ದರು. ಯುವ ಮತದಾರರ ಸಂಖ್ಯೆ ಹೆಚ್ಚಾಗಿದೆ. ಮತದಾರರ ನೋಂದಣಿ ಪ್ರಕ್ರಿಯೆಗೆ ಹೆಚ್ಚು ಒತ್ತು ನೀಡಿದ್ದರಿಂದ ಸುಮಾರು ಆರು ಲಕ್ಷ ಮತದಾರರು ನೋಂದಣಿಯಾಗಿದ್ದಾರೆ.

ಜ.5ರಂದು ಪ್ರಕಟಿಸಿದ್ದ ಮತದಾರರ ಸಂಖ್ಯೆಗೆ ಹೋಲಿಸಿದರೆ 5,03 ಲಕ್ಷ ಮತದಾರರು ಹೆಚ್ಚಾಗಿದ್ದಾರೆ. ನವೆಂಬರ್‌ನಲ್ಲಿ ಪ್ರಕಟಿಸಿದ್ದ ಮತದಾರರ ಪಟ್ಟಿಯಲ್ಲಿ 57,787 ಯುವಕರಿದ್ದರು. ಇದೀಗ ಈ ಸಂಖ್ಯೆ 1,43,536 ಆಗಿದೆ. ಮತದಾರರ ಸಂಖ್ಯೆ ಹೆಚ್ಚಾಗಿರುವುದರಿಂದ ಮತಗಟ್ಟೆಗಳ ಸಂಖ್ಯೆಯೂ ಅಧಿಕವಾಗಿದೆ. 3,083 ಮತಗಟ್ಟೆಗಳಿಂದ 3,223ಕ್ಕೇರಿದೆ.

ಬೆಂಗಳೂರು ನಗರ ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ (ಡಿಇಒ) ವ್ಯಾಪ್ತಿಯಲ್ಲಿ 2.49 ಲಕ್ಷ ಮತದಾರರು ಸೇರಿಕೊಂಡಿದ್ದಾರೆ. ಬೆಂಗಳೂರು ದಕ್ಷಿಣ ವಿಧಾನಸಭೆ ಕ್ಷೇತ್ರ ಅತಿಹೆಚ್ಚು ಮತದಾರರನ್ನು (6,95,742) ಹೊಂದಿದ್ದರೆ, ನಂತರದ ಸ್ಥಾನದಲ್ಲಿ ಮಹದೇವಪುರ (6,07,158) ಇದೆ. ಯಶವಂತಪುರ, ಕೆ.ಆರ್. ಪುರ, ಬ್ಯಾಟರಾಯನಪುರ ವಿಧಾನಸಭೆ ಕ್ಷೇತ್ರಗಳಲ್ಲಿ 5 ಲಕ್ಷಕ್ಕೂ ಹೆಚ್ಚು ಮತದಾರರಿದ್ದಾರೆ. ಶಿವಾಜಿನಗರದಲ್ಲಿ ಅತಿ ಕಡಿಮೆ (1,94,055) ಮತದಾರರಿದ್ದಾರೆ.

ಬೆಂಗಳೂರು ಸೆಂಟ್ರಲ್ ವ್ಯಾಪ್ತಿಯ ವಿಧಾನಸಭೆ ಕ್ಷೇತ್ರಗಳ ಮತ ಎಣಿಕೆ ಬಸವನಗುಡಿ ಗಾಂಧಿಬಜಾರ್‌ನಲ್ಲಿರುವ ಬಿಎಂಎಸ್ ಮಹಿಳೆಯರ ಕಾಲೇಜಿನಲ್ಲಿ ನಡೆಯಲಿದೆ. ದಕ್ಷಿಣ– ಜಯನಗರ 4ನೇ ಬ್ಲಾಕ್‌ನಲ್ಲಿರುವ ಎಸ್‌ಎಸ್‌ಎಂಆರ್‌ವಿ ಪಿಯು ಕಾಲೇಜು, ಉತ್ತರ– ವಸಂತನಗರದ ಮೌಂಟ್ ಕಾರ್ಮೆಲ್ ಕಾಲೇಜು, ನಗರ ಡಿಇಒ ವ್ಯಾಪ್ತಿ ಕ್ಷೇತ್ರಗಳ ಮತ ಎಣಿಕೆ ವಿಠ್ಠಲಮಲ್ಯ ರಸ್ತೆಯಲ್ಲಿರುವ ಸೇಂಟ್ ಜೋಸೆಫ್ಸ್ ಇಂಡಿಯನ್ ಹೈಸ್ಕೂಲ್‌ನಲ್ಲಿ ನಡೆಯಲಿದೆ.

ಮನೆಯಿಂದ ಮತದಾನ: 80 ವರ್ಷಕ್ಕೂ ಮೇಲ್ಪಟ್ಟ ಮತದಾರರಿಗೆ ಮನೆಯಿಂದ ಮತದಾನ ಮಾಡುವ ಅವಕಾಶ ಕಲ್ಪಿಸಲಾಗಿದ್ದು, 2.35 ಲಕ್ಷ ಮತದಾರರಲ್ಲಿ 9,152 ಮಂದಿ ಈ ಸೌಲಭ್ಯಕ್ಕೆ ನೋಂದಣಿ ಮಾಡಿಸಿಕೊಂಡಿದ್ದಾರೆ. 26 ಸಾವಿರ ಅಂಗವಿಕಲ ಮತದಾರರಲ್ಲಿ 119 ಮಂದಿ ಸೌಲಭ್ಯ ಆಯ್ಕೆ ಮಾಡಿಕೊಂಡಿದ್ದಾರೆ.

'ನಮ್ಮ ನಡೆ ಮತಗಟ್ಟೆಯ ಕಡೆ': ಮತದಾರರಲ್ಲಿ ಮತಗಟ್ಟೆಯ ಕುರಿತು ಜಾಗೃತಿ ಮೂಡಿಸಲು 'ನಮ್ಮ ನಡೆ ಮತಗಟ್ಟೆಯ ಕಡೆ' ಕಾರ್ಯಕ್ರಮವನ್ನು ರಾಜ್ಯದ ಎಲ್ಲಾ ಮತಗಟ್ಟೆಗಳಲ್ಲಿ ಏಕಕಾಲಕ್ಕೆ ರಾಷ್ಟ್ರೀಯ ಹಬ್ಬದ ಮಾದರಿಯಲ್ಲಿ ಹಮ್ಮಿಕೊಳ್ಳಲು ನಿರ್ಧರಿಸಲಾಗಿದೆ.

ಮತದಾನ ಮೇ 10 ರಂದು ನಡೆಯಲಿದ್ದು, 'ನಮ್ಮ ನಡೆ ಮತಗಟ್ಟೆಯ ಕಡೆ' ಕಾರ್ಯಕ್ರಮವನ್ನು ಏ.30ರಂದು ಬೆಳಿಗ್ಗೆ 8 ಗಂಟೆಗೆ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಏಕಕಾಲದಲ್ಲಿ ಹಮ್ಮಿಕೊಳ್ಳಲು ಯೋಜನೆ ರೂಪಿಸಲಾಗಿದೆ.

ಅಂಕಿ-ಅಂಶಗಳು

97,13,349 ಒಟ್ಟು ಮತದಾರರು	50,24,775 ಪುರುಷರು	1,761 ಇತರರು
46,88,574 ಮಹಿಳೆಯರು	933 ಲಿಂಗಾನುಪಾತ	1,43,536 ಯುವ ಮತದಾರರು
2,37,206 80 ವರ್ಷ ಮೇಲ್ಪಟ್ಟವರು	25,790 ಅಂಗವಿಕಲರು	2,017 ಎನ್‌ಆರ್‌ಐ ಮತದಾರರು

ನಾಲ್ಕು ಹೆಚ್ಚುವರಿ ಜಿಲ್ಲಾ ಚುನಾವಣಾಧಿಕಾರಿ (ಡಿಇಒ) ವ್ಯಾಪ್ತಿ ಮತದಾರರು

ಡಿಇಒ	ಪುರುಷರು	ಮಹಿಳೆಯರು	ಒಟ್ಟು ಮತದಾರರು
ಬೆಂಗಳೂರು ಕೇಂದ್ರ	9,14,963	8,75,453	17,90,650
ಬೆಂಗಳೂರು ಉತ್ತರ	11,24,272	10,71,209	21,95,968
ಬೆಂಗಳೂರು ದಕ್ಷಿಣ	10,63,764	9,88,206	20,52,336
ಬೆಂಗಳೂರು ನಗರ	19,21,776	17,51,945	36,74,395

‘ಜೆಡಿಎಸ್‌ಗೆ ಮತ ಹಾಕಿದರೆ ಬಿಜೆಪಿಗೆ ಹಾಕಿದಂತೆ’

ಪ್ರಜಾವಾಣಿ ವಾರ್ತೆ

ಹಾಸನ: ‘ಜೆಡಿಎಸ್‌ಗೆ ಮತ ಹಾಕಿದರೆ, ಬಿಜೆಪಿಗೇ ಹಾಕಿದಂತೆ. ದೇವೇಗೌಡರು, ಮೋದಿ ಸಾಹೇಬರು ಮಾತನಾಡಿಕೊಂಡಿದ್ದಾರೆ. ಏಕಂದ್ರೆ ಅವರಿಗೆ ಬರೋದು 20– 25 ಸೀಟು ಮಾತ್ರ’ ಎಂದು ಶಾಸಕ ಪ್ರೀತಂ ಗೌಡ ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಪ್ರಚಾರದ ಸಂದರ್ಭದಲ್ಲಿ ಪ್ರೀತಂ ಗೌಡ ಮಾತನಾಡಿದ್ದು, ‘ಎಲ್ಲ ನದಿ ನೀರು ಸಮುದ್ರಕ್ಕೆ ಹರಿಯುವಂತೆ, ಎಲ್ಲರೂ ನಮ್ಮ ಹತ್ತಿರಕ್ಕೇ ಬರಬೇಕು. ಅವರಿಗೆ ವೋಟು ಹಾಕಿದರೂ, ಬರೋದು ನಮ್ಮ ಹತ್ತಿರವೇ’ ಎಂದಿದ್ದಾರೆ.

ಕೆಪಿಸಿಸಿ ಅಧ್ಯಕ್ಷರ ಸಮ್ಮುಖದಲ್ಲಿ ಪಕ್ಷಕ್ಕೆ ಸೇರ್ಪಡೆ
‘ಕೈ’ ಹಿಡಿದ ಜೆಡಿಎಸ್ ಮುಖಂಡರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜೆಡಿಎಸ್ ಮುಖಂಡರಾದ ಕನಕಪುರದ ನಾರಾಯಣಗೌಡ ಮತ್ತು ಬೆಂಗಳೂರು ದಕ್ಷಿಣ ಕ್ಷೇತ್ರದ ಪ್ರಭಾಕರ ರೆಡ್ಡಿ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹಾಗೂ ಸಂಸದ ಡಿ.ಕೆ. ಸುರೇಶ್ ಅವರ ಸಮ್ಮುಖದಲ್ಲಿ ಗುರುವಾರ ಕಾಂಗ್ರೆಸ್ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಮಾತನಾಡಿದ ಡಿ.ಕೆ. ಶಿವಕುಮಾರ್, ‘ನಾರಾಯಣ ಗೌಡರು ನನ್ನ ವಿರುದ್ಧ ಸ್ಪರ್ಧಿಸಿದ್ದರು. 40 ವರ್ಷಗಳಿಂದ ಸಹಕಾರಿ ಕ್ಷೇತ್ರದಲ್ಲಿ ಅವರು ಕೆಲಸ ಮಾಡಿಕೊಂಡು ಬಂದಿದ್ದಾರೆ. ಕನಕಪುರ ತಾಲ್ಲೂಕು ಅಭಿವೃದ್ಧಿಯಾಗುವುದಾದರೆ ನಾನು ಕಾಂಗ್ರೆಸ್ ಸೇರುತ್ತೇನೆ ಎಂದು ಪಕ್ಷ ಸೇರುತ್ತಿದ್ದಾರೆ. ಅವರ ಜೊತೆಗೆ, ಈ ಹಿಂದೆ ಬೆಂಗಳೂರು ದಕ್ಷಿಣ ಲೋಕಸಭಾ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಪ್ರಭಾಕರ ರೆಡ್ಡಿ ಕೂಡಾ ಪಕ್ಷ ಸೇರಿದ್ದಾರೆ’ ಎಂದು ಹೇಳಿದರು.

‘ನಾರಾಯಣ ಗೌಡರಿಗೆ ರಾಮನಗರದಲ್ಲಿ ಉತ್ತಮ ಹಿಡಿತವಿದೆ. ಅವರು ಅಲ್ಲಿನ ನಮ್ಮ ಅಭ್ಯರ್ಥಿ ಇಕ್ಬಾಲ್ ಹುಸೇನ್ ಅವರನ್ನು ಗೆಲ್ಲಿಸಲು ಕೆಲಸ ಮಾಡಲಿದ್ದಾರೆ’ ಎಂದರು.



ಜೆಡಿಎಸ್ ಮುಖಂಡರಾದ ಕನಕಪುರದ ನಾರಾಯಣಗೌಡ ಮತ್ತು ಬೆಂಗಳೂರು ದಕ್ಷಿಣ ಕ್ಷೇತ್ರದ ಪ್ರಭಾಕರ ರೆಡ್ಡಿ ಅವರು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಮ್ಮುಖದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು


ನಾವು ಮತದಾರರ 'ಟೀಂ': ಪಿಎಫ್‌ಐ ಜತೆ ನಂಟಿಲ್ಲ- ಅಬ್ದುಲ್ ಮಜೀದ್

• ಸಚ್ಚಿದಾನಂದ ಕುರಗುಂದ

ಬೆಂಗಳೂರು: ಸೋಷಿಯಲ್ ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ತನ್ನದೇ ಆದ ಕಾರ್ಯಸೂಚಿ ಮೂಲಕ ಮತದಾರರನ್ನು ಸೆಳೆಯಲು ಪ್ರಯತ್ನಿಸುತ್ತಿದೆ. ನಿಷೇಧಿತ ಪಿಎಫ್‌ಐ ಸಂಘಟನೆಯ ರಾಜಕೀಯ ಮುಖವಾಣಿ ಎನ್ನುವ ಆರೋಪಗಳನ್ನು ಎದುರಿಸುತ್ತಿರುವ ಎಸ್‌ಡಿಪಿಐ, 16 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಪಕ್ಷದ ಸಂಘಟನೆ, ಆರೋಪಗಳು ಮತ್ತು ನಿಲುವುಗಳ ಕುರಿತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಅಬ್ದುಲ್ ಮಜೀದ್ ಮೈಸೂರು ವಿವರಿಸಿದ್ದಾರೆ.

ಪ್ರಜಾವಾಣಿ ಸಂದರ್ಶನ

ಅಬ್ದುಲ್ ಮಜೀದ್



• **ಎಸ್‌ಡಿಪಿಐ ಕಾಂಗ್ರೆಸ್ ಮತ್ತು ಬಿಜೆಪಿಯ 'ಬಿ ಟೀಂ' ಎಂದು ಪರಸ್ಪರ ಆರೋಪಿಸುತ್ತಿವೆ? ಹಾಗಾದರೆ ಎಸ್‌ಡಿಪಿಐಗೆ ತನ್ನದೇ ಆದ ಅಸ್ಮಿತೆ ಇಲ್ಲವೇ?**

ಎಸ್‌ಡಿಪಿಐ ಯಾವುದೇ ಪಕ್ಷದ 'ಬಿ ಟೀಂ' ಅಲ್ಲ. ನಾವು ಮತದಾರರ 'ಎ ಟೀಂ'. ಮತದಾರರ ಹಿತಾಸಕ್ತಿಯೇ ಮುಖ್ಯ. ಪ್ರತಿಸ್ಪರ್ಧಿ ಯಾರೂ ಎನ್ನುವುದು ನಮಗೆ ಮುಖ್ಯವೇ ಅಲ್ಲ. ಯಾವುದೇ ಪಕ್ಷದ ವೋಟ್ ಬ್ಯಾಂಕ್ ಅನ್ನು ಎಸ್‌ಡಿಪಿಐ ಕಿತ್ತುಕೊಳ್ಳುತ್ತಿಲ್ಲ.

• **ಪಿಎಫ್‌ಐನ ರಾಜಕೀಯ ಸಂಘಟನೆ ಎಸ್‌ಡಿಪಿಐ ಎನ್ನುವ ಆರೋಪಕ್ಕೆ ಏನು ಹೇಳುತ್ತೀರಿ?**

ಕೆಲವು ಪಟ್ಟಭದ್ರ ಸಂಘಟನೆಗಳು ಷಡ್ಯಂತ್ರ ಮಾಡಿ ನಮಗೆ ಇಂತಹ ಹಣೆಪಟ್ಟಿ ಕಟ್ಟುವ ಪ್ರಯತ್ನವನ್ನು ನಿರಂತರವಾಗಿ ಮಾಡುತ್ತಿವೆ. ನಾವು ಧ್ವನಿ ಇಲ್ಲದವರ ಮತ್ತು ತುಳಿತಕ್ಕೆ ಒಳಗಾದವರ ಪರ ಗಟ್ಟಿಯಾಗಿ ನಿಂತಿದ್ದೇವೆ. ರೈತರ ಪರವೂ ಹೋರಾಟ ಮಾಡಿದ್ದೇವೆ. ಎಸ್‌ಡಿಪಿಐ ಕೋಮುವಾದ ಅಥವಾ ದ್ವೇಷ ಬಿತ್ತುವ ಪಕ್ಷವಲ್ಲ. ಆದರೆ, ಮುಸ್ಲಿಂ ಸಮುದಾಯಕ್ಕೆ ಸಂಬಂಧಿಸಿದ ವಿಷಯಗಳನ್ನು ಮಾತನಾಡಿದ ಕೂಡಲೇ ನಮಗೆ ಕೋಮುವಾದ ಪಕ್ಷ ಎನ್ನುವ ಹಣೆಪಟ್ಟಿ ಕಟ್ಟಲಾಗುತ್ತಿದೆ. ನಮಗೆ ರಾಜಕೀಯ ವೃತ್ತಿ ಅಲ್ಲ, ಹೊಣೆಗಾರಿಕೆ. ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಯಾವುದೇ ರೀತಿ ರಾಜಿ ಮಾಡಿಕೊಳ್ಳದೆ ಹೋರಾಟ ಮಾಡುತ್ತಿದ್ದೇವೆ.

• **ಪಿಎಫ್‌ಐ ನಿಷೇಧದಿಂದ ನಿಮಗೆ ಹಿನ್ನಡೆಯಾಗಿದೆಯೇ?**

ಪಿಎಫ್‌ಐಗೂ ನಮಗೂ ಯಾವುದೇ ರೀತಿ ಸಂಬಂಧ ಇಲ್ಲ. ಅದನ್ನು ನಿಷೇಧಿಸಿದ್ದರಿಂದ ಯಾವುದೇ ರೀತಿಯ ಹಿನ್ನಡೆಯೂ ಆಗಿಲ್ಲ. ನಮ್ಮದು ಸ್ವತಂತ್ರ ಪಕ್ಷ. ಸ್ವತಂತ್ರವಾಗಿಯೇ ಹೋರಾಟ ಮಾಡುತ್ತಿದ್ದೇವೆ. ಕೆಲವು ವಿಷಯಗಳಲ್ಲಿ ಮಾತ್ರ ಆ ಸಂಘಟನೆ ಬೆಂಬಲ ನೀಡಿತ್ತು ಅಷ್ಟೇ.

• **ಎಸ್‌ಡಿಪಿಐ ಮುಸ್ಲಿಮರ ಪಕ್ಷ ಎನ್ನುವ ಹಣೆಪಟ್ಟೆಯೂ ನಿಮಗೆ ಇದೆಯಲ್ಲ?**

ಮುಸ್ಲಿಂ ಸಮುದಾಯವನ್ನು ಸಂಕಷ್ಟಕ್ಕೆ ಸಿಲುಕಿಸುವ ವಿಷಯಗಳನ್ನು ಕೈಗೆತ್ತಿಕೊಂಡು ತೀವ್ರ ಸ್ವರೂಪದ ಹೋರಾಟ ಮಾಡುತ್ತೇವೆ ಎನ್ನುವುದು ಒಂದು ಕಾರಣ ಇರಬಹುದು. ಆದರೆ, ನಮ್ಮದು ಎಲ್ಲ ವರ್ಗಗಳನ್ನು ಒಳಗೊಳ್ಳುತ್ತಿರುವ ಪಕ್ಷ. ಇದೇ ನಮ್ಮ ಉದ್ದೇಶ ಮತ್ತು ಆಶಯ. ನಾವು ಕೇವಲ ಕೋಮುವಾದದ ವಿಷಯಗಳಿಗೆ ಮಾತ್ರ ಸೀಮಿತವಾಗಿಲ್ಲ. ಕೋವಿಡ್ ಸಂದರ್ಭದಲ್ಲಿ ನಾವು ಯಾವುದೇ ಜಾತಿ, ಧರ್ಮ ನೋಡದೆ ಎಲ್ಲ ಸಮುದಾಯಗಳಿಗೆ ನೆರವಾಗಿದ್ದೇವೆ. 16 ಕ್ಷೇತ್ರಗಳಲ್ಲಿ ಸ್ಪರ್ಧಿಸಿರುವವರಲ್ಲಿ ಐವರು ಹಿಂದುಳಿದ ವರ್ಗದವರು ಮತ್ತು ಒಬ್ಬರು ಕ್ರೈಸ್ತ ಸಮುದಾಯದವರು ಇದ್ದಾರೆ.

• **ಕಾಂಗ್ರೆಸ್ ವಿರುದ್ಧ ಏಕೆ ಅಸಮಾಧಾನ?**

ಹಿಜಾಬ್ ಸೇರಿದಂತೆ ಹಲವು ಮಹತ್ವದ ವಿಷಯಗಳಲ್ಲಿ ಗಟ್ಟಿಯಾದ ನಿಲುವು ಕೈಗೊಳ್ಳದೆ ಕಾಂಗ್ರೆಸ್ ಎಡವಿದೆ. ಜಾತ್ಯತೀತ ಪಕ್ಷ ಎಂದು ಪ್ರತಿಪಾದಿಸುತ್ತಿರುವ ಕಾಂಗ್ರೆಸ್, ಮೃದು ಹಿಂದೂತ್ವ ಧೋರಣೆ ಅನುಸರಿಸಿತು. ಬಿಜೆಪಿಯ 'ಐಟಿ ಸೆಲ್'ಗೆ ಹೆದರಿ ಓಲೈಕೆ ರಾಜಕಾರಣದಲ್ಲೇ ತೊಡಗಿತು. ಪೌರತ್ವ (ತಿದ್ದುಪಡಿ) ಕಾಯ್ದೆ (ಸಿಎಎ) ಮತ್ತು ರಾಷ್ಟ್ರೀಯ ಪೌರತ್ವದ ನೋಂದಣಿ (ಎನ್‌ಆರ್‌ಸಿ) ಮುಂತಾದ ವಿಷಯಗಳಲ್ಲೂ ಕಾಂಗ್ರೆಸ್ ದೃಢವಾದ ನಿರ್ಧಾರ ಕೈಗೊಳ್ಳಲಿಲ್ಲ. ಜಾತ್ಯತೀತ ಪಕ್ಷದ ನಾಯಕರು ಎನಿಸಿಕೊಂಡವರು ಸರ್ಕಾರದ ನಿಲುವುಗಳ ವಿರುದ್ಧ ನಡೆಯುವ ಹೋರಾಟದ ನಾಯಕತ್ವ ವಹಿಸಿಕೊಳ್ಳಲಿಲ್ಲ. ವೋಟ್ ಮಾತ್ರ ಬೇಕು, ಮುಸ್ಲಿಂ ಸಮಸ್ಯೆಗಳು ಬೇಡ ಎಂದರೆ ಹೇಗೆ?

• **ಹಿಜಾಬ್‌ನಂತಹ ವಿಷಯಗಳು ಈ ಬಾರಿ ಚುನಾವಣೆಯಲ್ಲಿ ಪರಿಣಾಮ ಬೀರಲಿದೆಯೇ?**

ಖಂಡಿತ. ಬಟ್ಟೆ ಧರಿಸುವುದು ವೈಯಕ್ತಿಕ ಹಕ್ಕು ಮತ್ತು ಸ್ವಾತಂತ್ರ್ಯ. ಸಮವಸ್ತ್ರದ ಜತೆ 'ಸ್ಕಾರ್ಫ್' ಹಾಕಿಕೊಳ್ಳುತ್ತೇವೆ ಎಂದು ವಿದ್ಯಾರ್ಥಿಗಳು ಹೇಳಿದ್ದರು. ಆದರೆ, ಬಿಜೆಪಿ ಇದನ್ನು ಚುನಾವಣೆ ಕಾರ್ಯಸೂಚಿಯಾಗಿ ಪರಿವರ್ತಿಸಿ ಈ ವಿಷಯವನ್ನು ದೊಡ್ಡದಾಗಿ ಮಾಡಿತು. ನಾವು ಮಕ್ಕಳ ಪರ ನಿಂತು ನೈತಿಕ ಬೆಂಬಲ ಕೊಟ್ಟಿದ್ದೇವೆ.

• **ಈ ಬಾರಿ ಯಾವ ಪಕ್ಷದ ಜತೆ ಹೊಂದಾಣಿಕೆ?**

ಯಾವ ಪಕ್ಷದ ಜತೆಯೂ ಈ ಬಾರಿ ಹೊಂದಾಣಿಕೆ ಮಾಡಿಕೊಳ್ಳುವುದಿಲ್ಲ. ಕಳೆದ ಬಾರಿಯ ಚುನಾವಣೆಯಲ್ಲೂ ಹೊಂದಾಣಿಕೆ ಮಾಡಿಕೊಂಡಿರಲಿಲ್ಲ. ಬಿಜೆಪಿ ಸೋಲಿಸುವ ಸಾಧ್ಯವಿರುವ ಪಕ್ಷಗಳಿಗೆ ಬೆಂಬಲಿಸುವಂತೆ ಮಾತ್ರ ಸೂಚಿಸಲಾಗಿತ್ತು.

ಮಂಗಳೂರಿನಲ್ಲಿ ಕಾಂಗ್ರೆಸ್‌ನ ಐದನೇ 'ಗ್ಯಾರಂಟಿ' ಘೋಷಿಸಿದ ರಾಹುಲ್ ಗಾಂಧಿ

ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ

ಪ್ರಜಾವಾಣಿ ವಾರ್ತೆ

ಮಂಗಳೂರು: 'ಕಾಂಗ್ರೆಸ್ ನೇತೃತ್ವದ ಸರ್ಕಾರವು ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ದಿನದಿಂದಲೇ ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣದ ಸೌಲಭ್ಯ ಒದಗಿಸಲಾಗುವುದು' ಎಂದು ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಗುರುವಾರ ಘೋಷಿಸಿದರು.

ಕಾಂಗ್ರೆಸ್ ಈಗಾಗಲೇ ನಾಲ್ಕು ಭರವಸೆಗಳ 'ಗ್ಯಾರಂಟಿ ಕಾರ್ಡ್' ಅನ್ನು ಚುನಾವಣಾ ಪ್ರಣಾಳಿಕೆಯ ರೂಪದಲ್ಲಿ ಬಿಡುಗಡೆ ಮಾಡಿದೆ. ಮಂಗಳೂರಿನ ಅಡ್ಯಾರ್ ಗಾರ್ಡನ್‌ನಲ್ಲಿ ನಡೆದ ಪ್ರಚಾರ ಸಭೆಯಲ್ಲಿ ರಾಹುಲ್ ಅವರು ಮಹಿಳೆಯರಿಗೆ 'ಉಚಿತ ಬಸ್ ಪ್ರಯಾಣ'ದ ಐದನೇ 'ಗ್ಯಾರಂಟಿ' ಘೋಷಿಸಿದರು. ಸಭೆಯಲ್ಲಿ ಸೇರಿದ್ದ ಸಾವಿರಾರು ಮಂದಿ ಎದ್ದು ನಿಂತು ಚಪ್ಪಾಳೆಯ ಮೂಲಕ ಈ ಘೋಷಣೆಯನ್ನು ಸ್ವಾಗತಿಸಿದರು.



ಉಡುಪಿ ಜಿಲ್ಲೆಯ ಕಾಪು ತಾಲ್ಲೂಕಿನ ಉಚ್ಚಿಲದಲ್ಲಿ ಮೀನುಗಾರರ ಸಂವಾದ ಕಾರ್ಯಕ್ರಮದಲ್ಲಿ ಮೀನುಗಾರ ಮಹಿಳೆ ಕಟಪಾಡು ಪ್ರೇಮಾ ಅವರು ರಾಹುಲ್ ಗಾಂಧಿಗೆ ಅಂಜಲ್ ಮೀನನ್ನು ಉಡುಗೊರೆಯಾಗಿ ನೀಡಿದರು

'ನಾವು ಘೋಷಿಸಿರುವ ಐದೂ ಭರವಸೆಗಳು ನಮ್ಮ ಸರ್ಕಾರ ಅಸ್ತಿತ್ವಕ್ಕೆ ಬಂದ ಮೊದಲ ದಿನದಿಂದಲೇ ಜಾರಿಗೆ ಬರಲಿವೆ. ಮೊದಲ ಕ್ಯಾಬಿನೆಟ್ ಸಭೆಯಲ್ಲೇ ಎಲ್ಲ ಭರವಸೆಗಳಿಗೆ ಅಂಕಿತ ಹಾಕಲಾಗುವುದು. ಕಾಂಗ್ರೆಸ್‌ನ 'ಗ್ಯಾರಂಟಿ ಕಾರ್ಡ್' ಅನ್ನು ಸುಳ್ಳು ಭರವಸೆಗಳ ಕಾರ್ಡ್ ಎಂದು ಬಿಜೆಪಿ ಮುಖಂಡರು ಹಾಗೂ ಪ್ರಧಾನಿ ನರೇಂದ್ರ ಮೋದಿ ಟೀಕಿಸಿದ್ದಾರೆ. ಕರ್ನಾಟಕದಲ್ಲಿ ನಾವು ಈ ಭರವಸೆಗಳನ್ನು ಜಾರಿ ಮಾಡಿದ ಕೂಡಲೇ ನೀವು ದೇಶದಾದ್ಯಂತ ಇವುಗಳನ್ನು ಜಾರಿ ಮಾಡುವಿರಾ' ಎಂದು ಅವರು ಮೋದಿಗೆ ಸವಾಲು ಹಾಕಿದರು.

ಇದಕ್ಕೂ ಮುನ್ನ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, 'ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್‌ಗೆ ನಾನು ಹಾಗೂ ಸಿದ್ದರಾಮಯ್ಯ ಸಹಿ ಮಾಡಿದ್ದೇವೆ. ಅಧಿಕಾರ ವಹಿಸಿಕೊಂಡ ದಿನದಿಂದಲೇ ಅವುಗಳನ್ನು ಜಾರಿ ಮಾಡದಿದ್ದರೆ, ಇನ್ನು ಮುಂದೆ ಮತಯಾಚಿಸಲು ನಿಮ್ಮ ಮುಂದೆ ಬರುವುದಿಲ್ಲ' ಎಂದರು.

'ಮೀನುಗಾರರಿಗೆ ವಿಮೆ' (ಉಡುಪಿ ವರದಿ): ಜಿಲ್ಲೆಯ ಕಾಪು ತಾಲ್ಲೂಕಿನ ಉಚ್ಚಿಲದಲ್ಲಿ ಮೀನುಗಾರರ ಜತೆ ಸಂವಾದ ನಡೆಸಿದ ರಾಹುಲ್ ಗಾಂಧಿ, 'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮೀನುಗಾರರಿಗೆ ₹10 ಲಕ್ಷದ ಜೀವ ವಿಮಾ ಸೌಲಭ್ಯ, ಮೀನುಗಾರ ಮಹಿಳೆಯರಿಗೆ ₹1 ಲಕ್ಷದವರೆಗೆ ಶೂನ್ಯ ಬಡ್ಡಿದರದ ಸಾಲ ಹಾಗೂ ಡೀಸೆಲ್ ಮೇಲಿನ ಸಬ್ಸಿಡಿಯನ್ನು ₹25ಕ್ಕೆ ಹೆಚ್ಚಿಸಿ ಪ್ರತಿದಿನ 500 ಲೀಟರ್ ಡೀಸೆಲ್ ವಿತರಿಸಲಾಗುವುದು ಎಂದು ಘೋಷಿಸಿದರು.

ಕರಾವಳಿಯ ಬಂದರುಗಳನ್ನು ನಿಯಮಿತವಾಗಿ ಹೂಳೆತ್ತಲು ಕ್ರಮ ತೆಗೆದುಕೊಳ್ಳಲಾಗುವುದು. ಸಮುದ್ರದ ಮಧ್ಯೆ ಮೀನುಗಾರರಿಗೆ ಅನಾರೋಗ್ಯ ಕಾಡಿದರೆ ತುರ್ತು ವೈದ್ಯಕೀಯ ನೆರವು ನೀಡಲು 'ಸೀ ಅಂಬುಲೆನ್ಸ್' ಸೌಲಭ್ಯ ನೀಡಲಾಗುವುದು ಎಂದು ಹೇಳಿದರು.

ಯುಪಿಎ ಸರ್ಕಾರ ಅಧಿಕಾರಕ್ಕೆ ಬಂದ ಕೂಡಲೇ ಜಾತಿ ಜನಗಣತಿ ವರದಿ ಬಿಡುಗಡೆ ಹಾಗೂ ಶೇ 50ರ ಮೀಸಲಾತಿ ಮಿತಿಯನ್ನು ತೆಗೆದುಹಾಕಲಾಗುವುದು ಎಂದರು.

ಮೀನು ಮುಟ್ಟಿ ದೇವಸ್ಥಾನಕ್ಕೆ ಹೋಗದ ರಾಹುಲ್

ಉಚ್ಚಿಲದಲ್ಲಿ ಮೀನುಗಾರರ ಸಂವಾದ ಕಾರ್ಯಕ್ರಮದಲ್ಲಿ ಮೀನುಗಾರ ಮಹಿಳೆ ಕಟಪಾಡಿಯ ಪ್ರೇಮಾ ಅವರು ರಾಹುಲ್ ಗಾಂಧಿಗೆ ಅಂಜಲ್ ಮೀನನ್ನು ಉಡುಗೊರೆಯಾಗಿ ನೀಡಿದರು. ಮೀನು ಸ್ವೀಕರಿಸಿ, ಮಹಿಳೆಯ ಜತೆ ಫೋಟೊ ತೆಗೆಸಿಕೊಂಡ ರಾಹುಲ್, ಬಳಿಕ ಪಕ್ಕದಲ್ಲಿಯೇ ಇದ್ದ ಮಹಾಲಕ್ಷ್ಮೀ ದೇವಸ್ಥಾನದ ಒಳಗೆ ಹೋಗಲು ನಿರಾಕರಿಸಿದರು. ಸ್ಥಳೀಯ ಮುಖಂಡರು ದೇವಸ್ಥಾನದ ಒಳಗೆ ಬರುವಂತೆ ಮನವಿ ಮಾಡಿದಾಗ 'ಮೀನು ಮುಟ್ಟಿದ್ದೇನೆ ದೇವಸ್ಥಾನದ ಒಳಗೆ ಬರುವುದಿಲ್ಲ' ಎಂದು ತಿಳಿಸಿದರು. ಅರ್ಚಕರು ದೇಗುಲದ ಪ್ರಾಂಗಣದಲ್ಲಿಯೇ ರಾಹುಲ್ ಗಾಂಧಿ ಅವರನ್ನು ಗೌರವಿಸಿದರು.

ಅಮಿತ್ ಶಾ ವಿರುದ್ಧ ಕಾಂಗ್ರೆಸ್ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಾಜ್ಯದಲ್ಲಿ ಹಿಂಸಾಚಾರ ಆಗುತ್ತದೆ' ಎಂದು ಹೇಳುವ ಮೂಲಕ ಕೇಂದ್ರ ಸಚಿವ ಅಮಿತ್ ಶಾ ಅವರು ಮತದಾರರಿಗೆ ಬೆದರಿಕೆ ಒಡ್ಡಿದ್ದಾರೆ. ಹೀಗಾಗಿ ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು' ಎಂದು ಹೈಗ್ರೌಂಡ್ಸ್ ಠಾಣೆಗೆ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಎಐಸಿಸಿ ವಕ್ತಾರ ಗೌರವ್ ವಲ್ಲಭ್ ಅವರು ಗುರುವಾರ ದೂರು ಸಲ್ಲಿಸಿದರು.

ಬಳಿಕ ಮಾತನಾಡಿದ ಡಿ.ಕೆ. ಶಿವಕುಮಾರ್, 'ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕೋಮು ಸಂಘರ್ಷ, ಗಲಭೆಗಳಾಗುತ್ತವೆ ಎಂದು ಶಾ ಆಧಾರರಹಿತ ಆರೋಪ ಮಾಡಿ, ಕಾಂಗ್ರೆಸ್‌ಗೆ ಯಾರೂ ಮತ ಹಾಕಬಾರದೆಂದು ಹೆದರಿಸುವ ಪ್ರಯತ್ನ ಮಾಡಿದ್ದಾರೆ. ಈ ರೀತಿ ಬೆದರಿಕೆ ಹಾಕುವುದು ಎಷ್ಟು ಸರಿ? ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇಂತಹ ಭಾಷಣಗಳಿಗೆ ಅವಕಾಶವಿಲ್ಲ. ಹೀಗಾಗಿ ಅವರ ವಿರುದ್ಧ ಐಪಿಸಿಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ದೂರು ದಾಖಲಿಸಿದ್ದೇವೆ' ಎಂದರು.

'ರಾಜ್ಯ ಚುನಾವಣಾ ಪ್ರಕ್ರಿಯೆಯಲ್ಲಿ ಶಾ ಭಾಗವಹಿಸದಂತೆ ಚುನಾವಣಾ ಆಯೋಗ ನಿಷೇಧ ಹೇರಬೇಕು. ಎಐಸಿಸಿ ಮೂಲಕ ಕೇಂದ್ರ ಚುನಾವಣಾ ಆಯೋಗಕ್ಕೂ ಈ ವಿಚಾರವಾಗಿ ಮಾಹಿತಿ ನೀಡಲಾಗಿದ್ದು, ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕು. ಇದು ದೊಡ್ಡ ಪ್ರಕರಣವಾಗಿದ್ದು, ಇದಕ್ಕೆ ಸಂಬಂಧಿಸಿದ ಸಾಕ್ಷಿಗಳು ಮಾಧ್ಯಮಗಳಲ್ಲಿದ್ದು, ಈ ನೆಲದ ಕಾನೂನಿನಂತೆ ಈ ಪ್ರಕರಣದಲ್ಲಿ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಕಾಂಗ್ರೆಸ್‌ಗೆ ಸೋಲಿನ ಭೀತಿ: ಸಿ.ಎಂ. ಬೊಮ್ಮಾಯಿ

ಹಾವೇರಿ: ಕಾಂಗ್ರೆಸ್ ಅವರಿಗೆ ಸೋಲಿನ ಭೀತಿ ಎದುರಾಗಿದೆ. ಹೀಗಾಗಿಯೇ ಅವರು ಅಮಿತ್ ಶಾ ಅವರನ್ನು ಬ್ಯಾನ್ ಮಾಡಬೇಕು ಎಂದು ಚುನಾವಣಾ ಆಯೋಗಕ್ಕೆ ದೂರು ನೀಡಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಶಿಗ್ಗಾವಿಯ ಕೋಣನಕೇರಿ ಗ್ರಾಮದಲ್ಲಿ ಗುರುವಾರ ಮಾಧ್ಯಮದವರೊಂದಿಗೆ ಮಾತನಾಡುತ್ತಾ, 'ಅವರು ದೂರು ಕೊಡಲಿ. ಅದಕ್ಕೆ ಕಾನೂನು ಪ್ರಕಾರ ಏನು ಆಗಬೇಕೋ ಆಗುತ್ತೆ. ಅದರಲ್ಲಿ ಯಾವುದೇ ಸತ್ಯ ಇಲ್ಲ, ಯಾವುದೇ ಹುರುಳಿಲ್ಲ. ಅದು ತಿರಸ್ಕಾರವಾಗುತ್ತೆ' ಎಂದು ಅವರು ಪ್ರತಿಕ್ರಿಯಿಸಿದರು.

ತೋಳ್ಬಲ, ಹಣಬಲ: ಜಿಲ್ಲಾ ಘಟಕದ ಅಧ್ಯಕ್ಷರಿಗೆ ಸೂಕ್ಷ್ಮ, ಅತಿಸೂಕ್ಷ್ಮ ಮತಗಟ್ಟೆಗಳ ವಿಚಾರವಾಗಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪತ್ರ ಬರೆದ ಸಂಬಂಧ ಮಾತನಾಡಿದ ಸಿಎಂ, ಕಾಂಗ್ರೆಸ್ ಪಕ್ಷ ತೋಳ್ಬಲ, ಹಣಬಲದಿಂದ ಚುನಾವಣೆ ಮಾಡುತ್ತಿರುವುದು ಸ್ಪಷ್ಟವಾಗಿದೆ. ಹಿಂದೆ ಹಲವಾರು ಸಂದರ್ಭಗಳಲ್ಲಿ ನಮ್ಮ ಕಾರ್ಯಕರ್ತರಿಗೆ ಪೆಟ್ಟುಗಳು ಬಿದ್ದಿವೆ. ಕಾಂಗ್ರೆಸ್ ಪುಂಡಾಟಿಕೆಯಿಂದ ನಮ್ಮ ಮತ್ತು ಮತದಾರರ ಸುರಕ್ಷತೆಗೆ ನಾವು ನಮ್ಮ ಕರ್ತವ್ಯ ಮಾಡಿದ್ದೇವೆ ಎಂದರು.



ಶಿಗ್ಗಾವಿ ತಾಲ್ಲೂಕಿನ ಹೊಸೂರು ಗ್ರಾಮದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಗುರುವಾರ ಚುನಾವಣಾ ಪ್ರಚಾರ ನಡೆಸಿದರು

'2 ಬಿ'ಯಲ್ಲೇ ಮುಸ್ಲಿಮರಿಗೆ ಮತ್ತೆ ಮೀಸಲಾತಿ'

ಒಂದನೇ ಪುಟದಿಂದ...

ಹೀಗೆ ಮಾಡುವಾಗ ಹಿಂದುಳಿದ ವರ್ಗಗಳ ಆಯೋಗದಿಂದ ವರದಿ ಪಡೆದಿಲ್ಲ. ಪಕ್ಷ ಅಧಿಕಾರಕ್ಕೆ ಬಂದರೆ ಅವರಿಗೆ ನೀಡಿದ್ದ ಮೀಸಲಾತಿ ಮರಳಿ ನೀಡಲಾಗುವುದು. ನ್ಯಾಯಮೂರ್ತಿ ಸದಾಶಿವ ಆಯೋಗದ ಶಿಫಾರಸುಗಳನ್ನು ಕಡೆಗಣಿಸಿದ ಬಿಜೆಪಿ ಸರ್ಕಾರ ಪರಿಶಿಷ್ಟ ಜಾತಿಯವರ ಒಳಮೀಸಲಾತಿ ವಿಂಗಡಿಸಿದೆ. ಈ ಗೊಂದಲಕ್ಕೆ ತೆರೆ ಎಳೆಯಲಾಗುವುದು ಎಂದೂ ಭರವಸೆ ನೀಡಿದೆ.

ರಾಜ್ಯದ ಜನಸಂಖ್ಯೆಯ ಶೇ 20ರಷ್ಟಿರುವ ಧಾರ್ಮಿಕ ಅಲ್ಪಸಂಖ್ಯಾತರಿಗೆ ಬಜೆಟ್‌ನಲ್ಲಿ ಶೇ 5ರಷ್ಟು ಅನುದಾನ ಮೀಸಲು, ಕೋಮುವೈಷಮ್ಯ ಹರಡುವವರ ವಿರುದ್ಧ ಕಠಿಣ ಕ್ರಮ, ಕೋಮು ಸೌಹಾರ್ದಕ್ಕೆ ಶ್ರಮಿಸುವವರಿಗೆ ವಿಶೇಷ ಪ್ರೋತ್ಸಾಹ, ಧಾರ್ಮಿಕ ಹಕ್ಕುಗಳಿಗೆ ಚ್ಯುತಿ ಬಾರದಂತೆ ಮದರಸಾಗಳಲ್ಲಿ ಆಧುನಿಕ ಶಿಕ್ಷಣ ನೀಡುವ ಅಂಶಗಳನ್ನು ಪ್ರಣಾಳಿಕೆ ಒಳಗೊಂಡಿದೆ.

ರೈತ ಚೈತನ್ಯ: ಕೃಷಿ ಪಂಪ್‌ಸೆಟ್‌ಗೆ ಉಚಿತ ಗುಣಮಟ್ಟದ ವಿದ್ಯುತ್, ಪ್ರತಿ ತಾಲ್ಲೂಕಿನಲ್ಲೂ 100 ಟನ್ ಸಾಮರ್ಥ್ಯದ ಶೀತಲೀಕರಣ ಘಟಕ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ಪ್ರತಿ 100 ಕಿ.ಮೀ.ಗೆ ಒಂದು ಮೂಲಸೌಕರ್ಯ ಒಳಗೊಂಡ ಪ್ರಯಾಣಿಕ, ಚಾಲಕರ ಹಬ್ ಸ್ಥಾಪಿಸುವ ಅಂಶಗಳನ್ನು ಸೇರಿಸಲಾಗಿದೆ.

ಭದ್ರಾ ಮೇಲ್ದಂಡೆಗೆ ₹ 5 ಸಾವಿರ ಕೋಟಿ: ನೀರಾವರಿ ಯೋಜನೆಗಳನ್ನು ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಲಾಗಿದ್ದು, ಭದ್ರಾ ಮೇಲ್ದಂಡೆ ಯೋಜನೆಗೆ ₹ 5,000 ಕೋಟಿ ನೀಡಿ, ಮುಂದಿನ ನಾಲ್ಕು ವರ್ಷಗಳಲ್ಲಿ ಯೋಜನೆ ಪೂರ್ಣಗೊಳಿಸುವ ಭರವಸೆ ನೀಡಿದೆ. ಎತ್ತಿನಹೊಳೆ, ಮಹದಾಯಿ, ಮೇಕೆದಾಟು ಯೋಜನೆಯನ್ನೂ ಪೂರ್ಣಗೊಳಿಸುವುದಾಗಿ ಹೇಳಿದೆ.

ತಲಾ ₹ 1,000 ಕೋಟಿ ಯೋಜನೆ: ತಲಾ ₹ 1,000 ಕೋಟಿ ವೆಚ್ಚದಲ್ಲಿ ಮಂಡ್ಯದಲ್ಲಿ ಹೊಸ ಮೈಷುಗರ್, ಕೋಲಾರದಲ್ಲಿ ಟೊಮೆಟೊ ಕ್ಲಸ್ಟರ್, ಅಥಣಿಯಲ್ಲಿ ಚರ್ಮೋದ್ಯಮದ ಕ್ಲಸ್ಟರ್, ರಾಮನಗರ, ಚಿಕ್ಕಬಳ್ಳಾಪುರದಲ್ಲಿ ರೇಷ್ಮೆ ಕ್ಲಸ್ಟರ್ ಸ್ಥಾಪಿಸುವುದಾಗಿ ಹೇಳಿದೆ.

ಜೆಡಿಎಸ್ ಕೊಟ್ಟ ಭರವಸೆಗಳು

- ಆರ್ಥಿಕವಾಗಿ ದುರ್ಬಲ ವರ್ಗದ ಕುಟುಂಬಗಳ ವಿದ್ಯಾರ್ಥಿಗಳಿಗೆ ಉಚಿತ ಉನ್ನತ ಶಿಕ್ಷಣ
- ನಗರ ಪ್ರದೇಶದ ಜನರಿಗೆ ಹೊಸ 'ಉದ್ಯೋಗ ಖಾತ್ರಿ' ಯೋಜನೆ
- ಮಲೆನಾಡು, ಕರಾವಳಿ ಭಾಗದಲ್ಲಿ 1,314 ಕಾಲುಸಂಕಗಳ ನಿರ್ಮಾಣ
- ಗ್ರಾಮ ಪಂಚಾಯಿತಿಗೆ ಒಂದರಂತೆ 6 ಸಾವಿರ ಮಾದರಿ ಶಾಲೆಗಳ ಸ್ಥಾಪನೆ
- ಅಂಗವಿಕಲ ಮಕ್ಕಳ ಕುಟುಂಬಕ್ಕೆ ನೆರವು, ಉದ್ಯೋಗದಾತರಿಗೆ ಪ್ರೋತ್ಸಾಹ ಧನ
- ರಾಜ್ಯದ 39.94 ಲಕ್ಷ ಕುಟುಂಬಗಳಿಗೆ ಸ್ವಂತ ಸೂರು
- ಆರು ತಿಂಗಳವರೆಗೆ ಗರ್ಭಿಣಿಯರಿಗೆ ₹ 6,000
- ಸ್ತ್ರೀಶಕ್ತಿ ಸ್ವಸಹಾಯ ಗುಂಪುಗಳ ಸಾಲ ಮನ್ನಾ
- ಅಂಗನವಾಡಿ ಕಾರ್ಯಕರ್ತೆಯರಿಗೆ ಪಿಂಚಣಿ
- ಆಟೊ ಚಾಲಕರಿಗೆ ಮಾಸಿಕ ₹ 2,000
- ನೋಂದಾಯಿತ ಖಾಸಗಿ ಭದ್ರತಾ ಸಿಬ್ಬಂದಿಗೆ ₹ 2,000
- ಶಾಲಾ ಮಕ್ಕಳಿಗೆ ಉಚಿತ ಬೈಸಿಕಲ್‌ಗಳ ಮರು ಪರಿಚಯ
- ಪದವಿ ವಿದ್ಯಾರ್ಥಿನಿಯರಿಗೆ ಎಲೆಕ್ಟ್ರಿಕ್ ಸ್ಕೂಟರ್
- ರೈತ ಯುವಕರನ್ನು ಮದುವೆ ಆಗುವ ಯುವತಿಯರಿಗೆ ₹ 2 ಲಕ್ಷ ಪ್ರೋತ್ಸಾಹ ಧನ

ಅಮೂಲ್ ಹೊರಹಾಕುವ ವಾಗ್ದಾನ

ಜೆಡಿಎಸ್ ಅಧಿಕಾರಕ್ಕೆ ಬಂದರೆ ಕರ್ನಾಟಕದಿಂದ 'ಅಮೂಲ್' ಅನ್ನು ಹೊರಹಾಕುವ ವಾಗ್ದಾನ ಮಾಡಿದೆ. 'ಅಮೂಲ್ ಎಸೆಯಿರಿ-ನಂದಿನಿಯನ್ನು ಉಳಿಸಿ' ಎಂದು ಘೋಷಣೆ ಮಾಡಿದ್ದು, ನಂದಿನಿ ಬ್ರ್ಯಾಂಡ್ ಉಳಿಸಲು ಮತ್ತು ಬಲಪಡಿಸುವ ಭರವಸೆಯನ್ನು ನೀಡಿದೆ.

ಖಾಸಗಿ ವಲಯದಲ್ಲೂ ಕನ್ನಡಿಗರಿಗೆ ಉದ್ಯೋಗ ಮೀಸಲಾತಿ ಕಾಯ್ದೆ ಜಾರಿ, ಮೈಸೂರಿನಲ್ಲಿ 'ಡಿಸ್ನಿವರ್ಲ್ಡ್' ಸಹಯೋಗದಲ್ಲಿ ಅಮ್ಯೂಸ್‌ಮೆಂಟ್ ಪಾರ್ಕ್ ಸ್ಥಾಪನೆ ಮೊದಲಾದ ಅಂಶಗಳನ್ನು ಪ್ರಣಾಳಿಕೆ ಒಳಗೊಂಡಿದೆ.

'ಮೋದಿ ವಿಷದ ಹಾವಿದ್ದಂತೆ'

ಒಂದನೇ ಪುಟದಿಂದ...

'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಜನ ದಂಗೆ ಏಳುತ್ತಾರೆ ಎಂದು ಹೇಳಿ, ಅಮಿತ್ ಶಾ ಕನ್ನಡಿಗರಿಗೆ ಅವಮಾನಿಸಿದ್ದಾರೆ. ಇಲ್ಲಿಯವರೆಗೆ ದಂಗೆಗಳು ನಡೆದಿರುವುದು ಗುಜರಾತ್‌ನಲ್ಲಿ ಮಾತ್ರ' ಎಂದು ಕುಟುಕಿದರು.

ತಮ್ಮ ಹೇಳಿಕೆ ಕುರಿತಂತೆ ನಂತರ ಟ್ವೀಟ್ ಮಾಡಿರುವ ಖರ್ಗೆ, 'ನನ್ನ ಹೇಳಿಕೆಯ ಉದ್ದೇಶ ಯಾರೊಬ್ಬರ ಭಾವನೆಗೂ ನೋವುಂಟು ಮಾಡುವುದು ಆಗಿರಲಿಲ್ಲ. ತಿಳಿದೋ, ತಿಳಿಯದೆಯೋ ಯಾರಿಗಾದರೂ ಇದರಿಂದ ನೋವಾಗಿದ್ದಲ್ಲಿ, ಅದು ನನ್ನ ಉದ್ದೇಶ ಆಗಿರಲಿಲ್ಲ ಎಂದು ತಿಳಿಸಬಯಸುತ್ತೇನೆ' ಎಂದು ಹೇಳಿದ್ದಾರೆ.

'ಒಡಕುಂಟು ಮಾಡುವುದು, ಸೌಹಾರ್ದ ಕದಡುವುದು ಮತ್ತು ಬಡವರು ಹಾಗೂ ದಲಿತರ ಕುರಿತ ದ್ವೇಷಪೂರಿತ, ಪೂರ್ವಾಗ್ರಹ ಪೀಡಿತ ಧೋರಣೆಯನ್ನು ಹೊಂದಿರುವುದೇ ಬಿಜೆಪಿಯ ಚಿಂತನೆ ಮತ್ತು ಸಿದ್ಧಾಂತವಾಗಿದೆ. ಇಂಥ ದ್ವೇಷ ರಾಜಕಾರಣವನ್ನು ಕುರಿತು ನಾನು ಚರ್ಚಿಸಿದ್ದೇನೆ. ಪ್ರಧಾನಿ ಮೋದಿ ಅಥವಾ ಯಾರೊಬ್ಬರನ್ನು ಕುರಿತು ವೈಯಕ್ತಿಕವಾಗಿ ನೀಡಿದ ಹೇಳಿಕೆ ಅದಾಗಿರಲಿಲ್ಲ. ಅವರು ಬಿಂಬಿಸುವ ಚಿಂತನೆಯನ್ನಷ್ಟೇ ಉಲ್ಲೇಖಿಸಿ ನೀಡಿದ ಹೇಳಿಕೆ ಅದು' ಎಂದೂ ಅವರು ತಿಳಿಸಿದ್ದಾರೆ.

'ಮೋದಿ ವಿರುದ್ಧದ ನಮ್ಮ ಹೋರಾಟವೂ ವ್ಯಕ್ತಿಗತ ನೆಲೆಯದ್ದಲ್ಲ. ಅದು, ಸಿದ್ಧಾಂತದ ಹೋರಾಟ' ಎಂದು ಮಲ್ಲಿಕಾರ್ಜುನ ಖರ್ಗೆ ತಿಳಿಸಿದ್ದಾರೆ.

'ಭ್ರಷ್ಟಾಚಾರವೇ 'ಕೈ' ಗ್ಯಾರಂಟಿ'

ಒಂದನೇ ಪುಟದಿಂದ...

'ವಿರೋಧ ಪಕ್ಷಗಳು ಕೇವಲ ಅಧಿಕಾರಕ್ಕೆ ಬರುವ ವಿಚಾರ ಮಾತನಾಡುತ್ತಿದ್ದಾರೆ. ನಾವು ಮುಂದಿನ 25 ವರ್ಷದಲ್ಲಿ ದೇಶವನ್ನು ಅಭಿವೃದ್ಧಿ ಹೊಂದಿದ ದೇಶವನ್ನಾಗಿ ರೂಪಿಸುವ ವಿಚಾರದ ಬಗ್ಗೆ ಮಾತನಾಡುತ್ತಿದ್ದೇವೆ. ದೇಶದ ಅಭಿವೃದ್ಧಿ ಆದರೆ, ಜನರ ಅಭಿವೃದ್ಧಿಯೂ ಹೌದು. 25 ವರ್ಷಗಳ ಅಮೃತಕಾಲದಲ್ಲಿ ನಾವು ಏನು ಮಾಡುತ್ತೇವೆ ಎಂಬುದನ್ನು ಹೇಳುತ್ತಿದ್ದೇವೆ' ಎಂದರು.

800 ವರ್ಷಗಳ ಕಾಲ ಭಾರತ ಗುಲಾಮಗಿರಿಯಲ್ಲಿತ್ತು. 1920 ರಲ್ಲಿ ಮಹಾತ್ಮಾ ಗಾಂಧಿಯವರು ಸ್ವಾತಂತ್ರ್ಯ ಪಡೆದೇ ತೀರುತ್ತೇವೆ ಎಂದು ಕರೆ ನೀಡಿದರು. ಇದು ದೇಶದಲ್ಲಿ ದೊಡ್ಡ ಸಂಚಲನ ಮೂಡಿಸಿದ್ದೂ ಅಲ್ಲದೇ, ಸ್ವಾತಂತ್ರ್ಯ ಹೋರಾಟದ ಸ್ವರೂಪ ತೀವ್ರವಾಯಿತು. ಮುಂದಿನ 25 ವರ್ಷ ಭಾರತ ವಿಕಸಿತ ದೇಶವಾಗಲು ಸಂಕಲ್ಪ ಮಾಡಬೇಕು. ಭಾರತದ ವಿಕಾಸದ ಮೂಲಕ ಕರ್ನಾಟಕದ ವಿಕಾಸವಾಗುತ್ತದೆ. ಕರ್ನಾಟಕದ ವಿಕಾಸದಿಂದ ಭಾರತವೂ ವಿಕಾಸ ಆಗುತ್ತದೆ ಎಂದು ಮೋದಿ ತಿಳಿಸಿದರು.

ಕುವೆಂಪು ಮತ್ತು ಕೋಡಿಂಗ್: ಕನ್ನಡಿಗರು ಭಾಷೆ, ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಅಪಾರ ಒಲವು ಹೊಂದಿರುವವರು. ಇಲ್ಲಿನ ಜನರಲ್ಲಿ ಸಾಹಿತ್ಯವನ್ನು ಓದುವ ಪರಂಪರೆ ಜೀವಂತವಾಗಿದೆ. ಯುವ ಜನತೆಯಂತೂ ಕೋಡಿಂಗ್ ಮಾಡುತ್ತಲೇ ಮತ್ತು ಕುವೆಂಪು ಕವಿತೆಗಳನ್ನೂ ಓದುತ್ತಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇಲ್ಲಿ ಅಧ್ಯಾತ್ಮ ಮತ್ತು ಸಾಮಾಜಿಕ ಜಾಗೃತಿ ಒಟ್ಟಿಗೆ ನಡೆಯುತ್ತಿದೆ. ಕನಕದಾಸರು ಮತ್ತು ಶಿವಶರಣರು ತಮ್ಮ ವಚನ ಮತ್ತು ಭಕ್ತಿ ಸಾಹಿತ್ಯದ ಮೂಲಕ ಸಮಾಜದಲ್ಲಿ ಪರಿವರ್ತನೆಯನ್ನು ತಂದರು ಎಂದು ಮೋದಿ ತಿಳಿಸಿದರು.

ಶಿವಮೊಗ್ಗದ ವಿರೂಪಾಕ್ಷಪ್ಪ, ಚಿತ್ರದುರ್ಗದ ಫಕೀರಪ್ಪ, ವಿಜಯನಗರದ, ದಕ್ಷಿಣ ಕನ್ನಡದ ಅರುಣ್ ಶೇಟ್, ಬೆಂಗಳೂರಿನ ಬಿ.ಆರ್. ಯೋಗೀಶ್ ಅವರ ಪ್ರಶ್ನೆಗಳಿಗೆ ಮೋದಿ ಉತ್ತರ ನೀಡಿದರು.

'ನಮ್ಮ 'ಗ್ಯಾರಂಟಿ' ಕಾಪಿ ಮಾಡಿದ್ದರು'

ಬೆಂಗಳೂರು: 'ಬಿಜೆಪಿ ನೀಡಿದ್ದ ಭರವಸೆಗಳ ಬಗ್ಗೆ ಪ್ರಧಾನಿಗೆ ಗೊತ್ತಿಲ್ಲವೇ. ನಾವು ಬಿಜೆಪಿಯವರಂತೆ ಎಲ್ಲರ ಖಾತೆಗೆ ₹ 15 ಲಕ್ಷ ಹಾಕುತ್ತೇವೆಂದು ಹೇಳಿಲ್ಲ. ರೈತರ ₹ 1 ಲಕ್ಷದವರೆಗಿನ ಸಾಲ ಮನ್ನಾ, ಪಂಪ್‌ಸೆಟ್‌ಗೆ ನೀಡುವ ವಿದ್ಯುತ್‌ನ್ನು 7 ತಾಸಿನಿಂದ 10 ತಾಸಿಗೆ ಹೆಚ್ಚಿಸುವುದಾಗಿ ಅವರು ಹೇಳಿದ್ದರು. ಕಾಂಗ್ರೆಸ್ ಗ್ಯಾರಂಟಿ ಮಾದರಿಯಲ್ಲಿ ಮಹಿಳೆಯರಿಗೆ ಪ್ರೋತ್ಸಾಹಧನ ನೀಡುವ ಭರವಸೆಯನ್ನೂ ಅವರು ನೀಡಿದ್ದರು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಕುಟುಕಿದರು.

'ನಮ್ಮ ಗ್ಯಾರಂಟಿ ಯೋಜನೆ ಬಗ್ಗೆ ಮಾತನಾಡುವ ಮೂಲಕ ಮೋದಿ, ಜನರ ವಿಶ್ವಾಸ ಗಳಿಸಲು ತಮ್ಮ ಸರ್ಕಾರ ವಿಫಲವಾಗಿದೆ ಎಂದು ಒಪ್ಪಿಕೊಂಡಿದ್ದಾರೆ' ಎಂದ ಶಿವಕುಮಾರ್, 'ಅಧಿಕಾರಕ್ಕೆ ಬಂದ ಮೊದಲ ಸಚಿವ ಸಂಪುಟದಲ್ಲಿ ಕಾಂಗ್ರೆಸ್ ಪಕ್ಷದ ನಾಲ್ಕು ಯೋಜನೆಗಳಾದ ಗೃಹಜ್ಯೋತಿ, ಗೃಹಲಕ್ಷ್ಮಿ, ಅನ್ನಭಾಗ್ಯ, ಯುವನಿಧಿ ಯೋಜನೆ ಜಾರಿ ಮಾಡುವುದು ನಿಶ್ಚಿತ. ಇದು ಕಾಂಗ್ರೆಸ್ ಪಕ್ಷದ ಸಂಕಲ್ಪ. ಈ ಯೋಜನೆ ಜಾರಿ ಮಾಡದಿದ್ದರೆ ನಾವು ಮತ್ತೆ ಜನರ ಮುಂದೆ ಮತ ಯಾಚಿಸುವುದಿಲ್ಲ' ಎಂದು ತಿಳಿಸಿದರು.

'ಬಿಜೆಪಿ ಡಬಲ್ ಎಂಜಿನ್ ಸರ್ಕಾರ ಬೆಲೆ ಏರಿಕೆ ನಿಯಂತ್ರಿಸಲು ವಿಫಲವಾಗಿವೆ. ಮತದಾನ ಮಾಡುವ ಮುನ್ನ ಅಡುಗೆ ಅನಿಲ ಸಿಲಿಂಡರ್‌ಗೆ ನಮಿಸಿ ಮತ ಹಾಕಿ ಎಂದು 2014ರ ಲೋಕಸಭೆ ಚುನಾವಣೆ ಸಮಯದಲ್ಲಿ ದೇಶದ ಮತದಾರರಿಗೆ ಬಿಜೆಪಿಯವರು ಹೇಳಿದ್ದರು. ಈಗ ಅದನ್ನೇ ಮಾಡಬೇಕು ಎಂದು ರಾಜ್ಯದ ಜನರಿಗೆ ನಾವು ಹೇಳುತ್ತಿದ್ದೇವೆ' ಎಂದರು

ಕಾರ್ಯಕರ್ತರಿಗೆ 10 ದಿನಗಳ ಗುರಿ

'ಮುಂದಿನ 10 ದಿನಗಳು ಅತ್ಯಂತ ನಿರ್ಣಾಯಕವಾದುದು. ನಾನೂ ಸಾಮಾನ್ಯ ಕಾರ್ಯಕರ್ತನಾಗಿ ನಿಮ್ಮ ಜತೆ ಕೆಲಸ ಮಾಡುತ್ತೇನೆ. ಪ್ರತಿಯೊಂದು ಬೂತ್‌ನಲ್ಲೂ ಬಿಜೆಪಿ ವಿಜಯ ಸಾಧಿಸುವಂತೆ ಮಾಡುವ ಪಣ ತೊಡಬೇಕು' ಎಂದು ಪ್ರಧಾನಿ ಮೋದಿ ಪಕ್ಷದ ಕಾರ್ಯಕರ್ತರಿಗೆ ಸಲಹೆ ನೀಡಿದರು.

'ಪ್ರತಿಯೊಂದು ಬೂತ್‌ನಲ್ಲೂ 10 ಮಹಿಳಾ ಮತ್ತು 10 ಪುರುಷ ಕಾರ್ಯಕರ್ತರನ್ನು ಜೊತೆಗೂಡಿಸಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಾಧನೆಯನ್ನು ಮನೆ- ಮನೆಗೆ ಹೋಗಿ ಜನರಿಗೆ ತಿಳಿಸಬೇಕು. ಹಿರಿಯರಿಗೆ ಗೌರವ ಸಲ್ಲಿಸಿ, ಕಿರಿಯರನ್ನು ಪ್ರೀತಿಯಿಂದ ಮಾತನಾಡಿಸಿ ಎಲ್ಲರ ಮನ ಗೆಲ್ಲುವ ಕೆಲಸ ಮಾಡಬೇಕು. ಕರ್ನಾಟಕದಲ್ಲಿ ಸದೃಢ, ಸ್ಥಿರ ಮತ್ತು ಡಬಲ್ ಎಂಜಿನ್ ಸರ್ಕಾರ ಏಕೆ ಬೇಕು ಎಂಬುದನ್ನು ಅವರಿಗೆ ಮನವರಿಕೆ ಮಾಡಬೇಕು. ಈ ಮೂಲಕ ಎಲ್ಲ ಬೂತ್‌ಗಳಲ್ಲೂ ಜಯ ಸಾಧಿಸಬೇಕು' ಎಂದು ಸಲಹೆ ನೀಡಿದರು.

'ವಿಷ'ದ ಮಾತಿಗೆ ಪ್ರತಿಕ್ರಿಯೆ

'ವಿಷಸರ್ಪ' ಹೇಳಿಕೆ ಹಿಂದಿದೆ ಸೋನಿಯಾ ಆದೇಶ'

ಬೆಳಗಾವಿ: 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಷಸರ್ಪ ಎಂದಿದ್ದಾರೆ. ಸೋನಿಯಾ ಮೇಡಂ ಅವರ ಆದೇಶ ಪಾಲಿಸಲು ಇಂಥ ಹೇಳಿಕೆ ನೀಡಿದ್ದಾರೆ. ಕಾಂಗ್ರೆಸ್ಸಿಗರೇ ಮೋದಿ ಅವರ ಸಾವು ಬಯಸುತ್ತಿದ್ದಾರೆ' ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಸ್ಮೃತಿ ಇರಾನಿ ತಿರುಗೇಟು ನೀಡಿದರು.

ಬೆಳಗಾವಿ ಗ್ರಾಮೀಣ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ನಾಗೇಶ ಮನ್ನೋಳಕರ ಪರ, ಹಿಂಡಲಗಾ ಗ್ರಾಮದಲ್ಲಿ ಗುರುವಾರ ಪ್ರಚಾರ ಮಾಡಿ ಅವರು ಮಾತನಾಡಿದರು.

ಖರ್ಗೆ ವಿರುದ್ಧ ಬಿಜೆಪಿ ಷಡ್ಯಂತ್ರ- ಸುರ್ಜೇವಾಲಾ

ಬೆಂಗಳೂರು: 'ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಬಿಜೆಪಿ ಷಡ್ಯಂತ್ರ ಮಾಡುತ್ತಿದೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ದಲಿತ ಕುಟುಂಬದಲ್ಲಿ ಜನಿಸಿದ ಖರ್ಗೆ ಅವರು ಪರಿಶ್ರಮದ ಮೂಲಕ 60 ವರ್ಷಗಳ ಸಾರ್ವಜನಿಕ ಕ್ಷೇತ್ರದಲ್ಲಿ ಒಂಬತ್ತು ಬಾರಿ ನಿರಂತರವಾಗಿ ಗೆಲುವು ಸಾಧಿಸಿ ಬ್ಲಾಕ್ ಅಧ್ಯಕ್ಷ ಸ್ಥಾನದಿಂದ ಎಐಸಿಸಿ ಅಧ್ಯಕ್ಷ ಸ್ಥಾನದವರೆಗೆ ಏರಿದ್ದಾರೆ. ಬಿಜೆಪಿ ಎಂದಿಗೂ ದಲಿತರನ್ನು ಅಧ್ಯಕ್ಷರನ್ನಾಗಿ ಮಾಡುವುದಿಲ್ಲ' ಎಂದಿದ್ದಾರೆ.

ಎಐಸಿಸಿ ಅಧ್ಯಕ್ಷರ ವಿರುದ್ಧ ಶೋಭಾ ದೂರು

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರ ಕುರಿತು ಮಲ್ಲಿಕಾರ್ಜುನ ಖರ್ಗೆ ಅವರು ನರಗುಂದದಲ್ಲಿ ನೀಡಿರುವ ಹೇಳಿಕೆಯ ವಿರುದ್ಧ ಬಿಜೆಪಿ ರಾಜ್ಯ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕಿ ಶೋಭಾ ಕರಂದ್ಲಾಜೆ ಚುನಾವಣಾ ಆಯೋಗಕ್ಕೆ ದೂರು ನೀಡಿದರು.

ಆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ರಾಜ್ಯದ ಜನರು ಎಲ್ಲವನ್ನೂ ಗಮನಿಸುತ್ತಿದ್ದಾರೆ. ಕರ್ನಾಟಕದ ಜನರು ವಿದ್ಯಾವಂತರು ಮತ್ತು ಬುದ್ಧಿವಂತರು. ಯಾರೇನು ಮಾತನಾಡಿದ್ದಾರೆ ಎಂಬುದು ಕ್ಷಣದಲ್ಲಿ ಜನರನ್ನು ತಲುಪುತ್ತದೆ. ರಾಜ್ಯದ ಜನರು ಕಾಂಗ್ರೆಸ್‌ಗೆ ತಕ್ಕ ಪಾಠ ಕಲಿಸಲಿದ್ದಾರೆ ಎಂದರು.

ಜಾತ್ರೆ, ಸಂತೆಯಲ್ಲಿ ಅಂಗಡಿ ಹಾಕುವ ಯುವಕ ಪಕ್ಷೇತರ ಅಭ್ಯರ್ಥಿ

ಚುನಾವಣೆ ಕಣದಲ್ಲಿ ಗೋಬಿ ವ್ಯಾಪಾರಿ

• ಚಂದ್ರು ಎಂ. ರಾಥೋಡ್

ನರೇಗಲ್: ಸಂವಿಧಾನದ ಓದಿನಿಂದ ಬದುಕಿನಲ್ಲಿ ಗುಣಾತ್ಮಕ ಬದಲಾವಣೆಯೊಂದಿಗೆ, ಸಾಮಾನ್ಯ ವ್ಯಕ್ತಿಯೂ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶವಿದೆ ಎಂದು ಅರಿತ ಗೋಬಿಮಂಚೂರಿ ಯುವ ವ್ಯಾಪಾರಿಯೊಬ್ಬ ರೋಣ ವಿಧಾನಸಭಾ ಕ್ಷೇತ್ರದಿಂದ ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ.

ನರೇಗಲ್ ಪಟ್ಟಣದ ಮೂರನೇ ವಾರ್ಡ್‌ನ ಆಶ್ರಯ ಕಾಲೊನಿ ನಿವಾಸಿ ಶಿವಾನಂದ ಶಂಕ್ರಪ್ಪ ರಾಠೋಡ ಸ್ಪರ್ಧಾ ಕಣದಲ್ಲಿರುವ ಯುವಕ.

ಶಿವಾನಂದ ಅವರು ಪಟ್ಟಣದ ಸುತ್ತಮುತ್ತಲಿನ ವಿವಿಧ ಗ್ರಾಮಗಳಲ್ಲಿ ನಡೆಯುವ ಜಾತ್ರೆ, ಸಂತೆಗಳಲ್ಲಿ ಗೋಬಿ ಮಾರಾಟ ಮಾಡಿ ಜೀವನ ಸಾಗಿಸುತ್ತಾರೆ. ತನ್ನದೇ ಕಾಲೊನಿಯ ಜನರು ನಿತ್ಯ ಅನುಭವಿಸುವ ಕಷ್ಟಗಳಿಗೆ ಯಾವೊಬ್ಬ ಜನಪ್ರತಿನಿಧಿಯೂ ಸ್ಪಂದಿಸದ ಸಿಟ್ಟು ಅವರಿಗಿದೆ. ದಲಿತರಿಗೆ ಸ್ವಂತ ಸೂರಿಲ್ಲ. ಕಾಲೊನಿಗಳಿಗೆ ಅಚ್ಚುಕಟ್ಟಾದ ರಸ್ತೆಗಳಿಲ್ಲ, ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲ. ಶೌಚಾಲಯವಿಲ್ಲದೇ ಪರದಾಡುವ ಮಹಿಳೆಯರನ್ನು ಕಂಡು ಹಲವರಿಗೆ ಮನವಿ ಮಾಡಿದರೂ ಪರಿಹಾರ ಸಿಗಲಿಲ್ಲ. ಈ ಕಾರಣಕ್ಕೆ ಅವರೇ ಚುನಾವಣೆಗೆ ನಿಲ್ಲುವ ನಿರ್ಧಾರ ಮಾಡಿದ್ದಾರೆ. 'ನರೇಗಲ್ ಪಟ್ಟಣದಲ್ಲಿ ಮನೆ ಇಲ್ಲದ ಎಷ್ಟೋ ಬಡವರು ಬೀದಿಯಲ್ಲಿ, ಯಾರದೋ ಹೊಲಗಳಲ್ಲಿ ಗುಡಿಸಲು ಹಾಕಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅವರ ಮಕ್ಕಳು ಶಿಕ್ಷಣದಿಂದ ವಂಚಿತರಾಗಿದ್ದಾರೆ. ಅಂತಹವರಿಗೆ ಮನೆಗಳನ್ನು ನೀಡದೆ ಭ್ರಷ್ಟ ವ್ಯವಸ್ಥೆ ಉಳ್ಳವರಿಗೆ, ಲಾಬಿ ಮಾಡುವವರಿಗೆ, ಶ್ರೀಮಂತರಿಗೆ ಮನೆಗಳನ್ನು ಕೊಟ್ಟಿದೆ. ಇದರಿಂದ ಬೇಸತ್ತು ಸಾಮಾಜಿಕ ನ್ಯಾಯಕ್ಕಾಗಿ ಚುನಾ ವಣೆಯಲ್ಲಿ ಸ್ಪರ್ಧಿಸಿದ್ದೇನೆ' ಎನ್ನುತ್ತಾರೆ ಶಿವಾನಂದ.

'ಎಸ್ಸೆಸ್ಸೆಲ್ಸಿ ಅನುತ್ತೀರ್ಣನಾಗಿರುವೆ. ಆದರೆ ಎರಡು ವರ್ಷಗಳಿಂದ ಡಾ. ಬಿ.ಆರ್.ಅಂಬೇಡ್ಕರ್ ರಚಿಸಿದ ಸಂವಿಧಾನ ಓದುತ್ತಿದ್ದೇನೆ. ಸಂವಿಧಾನ ಓದಿನಿಂದ ನನ್ನಲ್ಲಿ ಸಾಕಷ್ಟು ಬದಲಾವಣೆಗಳು ಆಗಿರುವುದನ್ನು ಕಂಡುಕೊಂಡಿದ್ದೇನೆ. ಸಾಮಾನ್ಯ ವ್ಯಕ್ತಿ ಕೂಡ ಚುನಾವಣೆಯಲ್ಲಿ ಸ್ಪರ್ಧಿಸುವ ಹಕ್ಕಿದೆ ಎಂದು ಸಂವಿಧಾನ ತಿಳಿಸಿದೆ. ಅದರಂತೆ ನ್ಯಾಯ ನೀತಿ, ಅಭಿವೃದ್ಧಿ, ಸಮಾನತೆಗಾಗಿ ಸ್ಪರ್ಧೆ ಮಾಡಿದ್ದೇನೆ' ಎಂದು ತಿಳಿಸಿದರು.



ಮತಯಾಚನೆ ಮಾಡುತ್ತಿರುವ ಶಿವಾನಂದ ರಾಠೋಡ

> **ಪ್ರತಿ ಜಾತ್ರೆಯಲ್ಲಿ ನನ್ನ ದುಡಿಮೆಯಲ್ಲಿ ₹500 ಚುನಾವಣೆ ಖರ್ಚು ಎಂದು ತೆಗೆದು ಇಡುತ್ತಿದ್ದೆ. ಈಗ ಅದೇ ಹಣವನ್ನು ಪ್ರಚಾರಕ್ಕೆ ಬಳಕೆ ಮಾಡುತ್ತಿದ್ದೇನೆ**
> **ಶಿವಾನಂದ ಶಂಕ್ರಪ್ಪ ರಾಠೋಡ**
> ಪಕ್ಷೇತರ ಅಭ್ಯರ್ಥಿ

ಗೀತಾ ಶಿವರಾಜ್‌ಕುಮಾರ್ ಕಾಂಗ್ರೆಸ್ ಸೇರ್ಪಡೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ದಿವಂಗತ ಎಸ್. ಬಂಗಾರಪ್ಪ ಅವರ ಪುತ್ರಿ, ನಟ ಶಿವರಾಜ್ ಕುಮಾರ್ ಪತ್ನಿ ಗೀತಾ ಅವರು ಶುಕ್ರವಾರ (ಏಪ್ರಿಲ್ 28) ಕಾಂಗ್ರೆಸ್ ಸೇರ್ಪಡೆ ಆಗಲಿದ್ದಾರೆ.

ಗೀತಾ ಶಿವರಾಜ್‌ಕುಮಾರ್ ಅವರ ಸಹೋದರರಾದ ಕುಮಾರ ಬಂಗಾರಪ್ಪ (ಬಿಜೆಪಿ) ಮತ್ತು ಮಧು ಬಂಗಾರಪ್ಪ (ಕಾಂಗ್ರೆಸ್) ಸೊರಬ ಕ್ಷೇತ್ರದಲ್ಲಿ ಪರಸ್ಪರ ಸ್ಪರ್ಧಿಸುತ್ತಿದ್ದಾರೆ. ಕಾಂಗ್ರೆಸ್ ಸೇರಿದ ಬಳಿಕ ಗೀತಾ ಅವರು ಮಧು ಬಂಗಾರಪ್ಪ ಪರ ಸಕ್ರಿಯವಾಗಿ ಚುನಾವಣಾ ಪ್ರಚಾರದಲ್ಲಿ ಭಾಗವಹಿಸಲಿದ್ದಾರೆ.



ಗೀತಾ

2014ರಲ್ಲಿ ಜೆಡಿಎಸ್ ಸೇರ್ಪಡೆಯಾಗಿದ್ದ ಗೀತಾ ಶಿವರಾಜ್ ಕುಮಾರ್, ಲೋಕಸಭಾ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರದಿಂದ ಆ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದರು. ಬಿಜೆಪಿ ಅಭ್ಯರ್ಥಿ ಬಿ.ಎಸ್. ಯಡಿಯೂರಪ್ಪ ವಿರುದ್ಧ ಸೋಲು ಕಂಡಿದ್ದರು.

ಮೂಡಿಗೆರೆ ಮಾಜಿ ಶಾಸಕ, ಜೆಡಿಎಸ್ ಮುಖಂಡ ಬಿ.ಬಿ. ನಿಂಗಯ್ಯ ಅವರು ಕೂಡಾ ಶುಕ್ರವಾರ ಕಾಂಗ್ರೆಸ್ ಸೇರಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಚಾಮರಾಜನಗರ ಎರಡು ಕ್ಷೇತ್ರಗಳಲ್ಲಿ ಜೆಡಿಎಸ್‌ಗೂ ಇದೆ ನೆಲೆ

‘ಕೈ’ ಕೋಟೆಯಲ್ಲಿ ‘ತಾವರೆ’ ಬೇರು

• ಸೂರ್ಯನಾರಾಯಣ ವಿ.


ವಿ. ಸೋಮಣ್ಣ ಚಾಮರಾಜನಗರ, ಬಿಜೆಪಿ


ಎ.ಆರ್‌.ಕೃಷ್ಣಮೂರ್ತಿ ಕೊಳ್ಳೇಗಾಲ, ಕಾಂಗ್ರೆಸ್


ಎಂ.ಆರ್. ಮಂಜುನಾಥ್ ಹನೂರು, ಜೆಡಿಎಸ್


ಎಚ್‌.ಎಂ.ಗಣೇಶ್ ಪ್ರಸಾದ್ ಗುಂಡ್ಲುಪೇಟೆ, ಕಾಂಗ್ರೆಸ್

ಚಾಮರಾಜನಗರ: ಅಭಿವೃದ್ಧಿಯಲ್ಲಿ ಹಿಂದುಳಿದಿರುವ ಚಾಮರಾಜನಗರ ಜಿಲ್ಲೆಯು 2013ರವರೆಗೂ ಕಾಂಗ್ರೆಸ್‌ನ ಭದ್ರಕೋಟೆ ಆಗಿತ್ತು. ಹಿಂದಿನ ಚುನಾವಣೆಯಲ್ಲಿ ನಾಯಕತ್ವದ ಕೊರತೆಯಿಂದ ಅದುರಿದ್ದ ‘ಕೈ’ ಕೋಟೆಯ ಬಿರುಕಿನಲ್ಲಿ ಬೇರು ಬಿಡಲಾರಂಭಿಸಿದ್ದ ಬಿಜೆಪಿ ಈಗ ಗಟ್ಟಿಯಾಗಿದೆ.

ಸಚಿವ ಸೋಮಣ್ಣ, ಚಾಮರಾಜನಗರದಿಂದ ಕಣಕ್ಕಿಳಿದಿರುವುದರಿಂದ ‘ತಾವರೆ’ ಬೇರು ಬಲಿಷ್ಠಗೊಳ್ಳಬಹುದೆಂಬುದು ಬಿಜೆಪಿಯ ನಿರೀಕ್ಷೆ. ಕಳೆದ ಚುನಾವಣೆಯಲ್ಲಿ ಒಂದು ಕ್ಷೇತ್ರದಲ್ಲಿ ಗೆದ್ದಿದ್ದ ಬಿಎಸ್‌ಪಿಯ ‘ಆನೆ’ ಬಲ ಕುಂದಿದಂತಿದೆ. ಕಳೆದ ಸಲ ಜೆಡಿಎಸ್ ಬಿತ್ತಿದ್ದ ‘ಬೀಜ’ ಮೊಳಕೆಯೊಡೆದು ಗಿಡವಾಗಿದ್ದು, ತಳವೂರುವ ಹುಮ್ಮಸ್ಸಿನಲ್ಲಿದೆ.

2008, 2013ರಲ್ಲಿ ಜಿಲ್ಲೆಯ ನಾಲ್ಕೂ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಗೆದ್ದಿತ್ತು. 2017ರಲ್ಲಿ ಎಚ್‌.ಎಸ್. ಮಹದೇವಪ್ರಸಾದ್ ನಿಧನದ ನಂತರ ನಾಯಕತ್ವ ದುರ್ಬಲವಾಗಿ, 2018ರಲ್ಲಿ ಚಾಮರಾಜನಗರ, ಹನೂರು ಕ್ಷೇತ್ರಗಳಲ್ಲಿ ಜಯ ಸಾಧಿಸಿತ್ತು. ಗುಂಡ್ಲುಪೇಟೆ, ಕೊಳ್ಳೇಗಾಲವನ್ನು ಕಳೆದುಕೊಂಡಿತು. ಗುಂಡ್ಲುಪೇಟೆ ಬಿಜೆಪಿ, ಕೊಳ್ಳೇಗಾಲ ಬಿಎಸ್‌ಪಿ ಪಾಲಾಗಿದ್ದವು.

2019ರ ಲೋಕಸಭಾ ಚುನಾವಣೆಯಲ್ಲಿ ಗೆದ್ದ ಬಳಿಕ ಬಿಜೆಪಿ ಬಲಿಷ್ಠವಾಗಿದೆ. ಮತ್ತೊಬ್ಬ ನಾಯಕ ಆರ್‌.ಧ್ರುವನಾರಾಯಣ ಅವರನ್ನು ಕಳೆದುಕೊಂಡಿರುವ ಕಾಂಗ್ರೆಸ್, ಬಿಜೆಪಿ ಸರ್ಕಾರದ ಆಡಳಿತ ವಿರೋಧಿ ಅಲೆಯನ್ನೇ ಮುಂದಿಟ್ಟುಕೊಂಡು ಮತ ಕೇಳುತ್ತಿದೆ.

ಹನೂರು ಬಿಟ್ಟು ಉಳಿದೆಡೆ ಕಾಂಗ್ರೆಸ್– ಬಿಜೆಪಿ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ. ಹನೂರಿನಲ್ಲಿ ಜೆಡಿಎಸ್ ಪೈಪೋಟಿ ನೀಡಲಿದ್ದು, ತ್ರಿಕೋನ ಸ್ಪರ್ಧೆ ಖಚಿತ. ಚಾಮರಾಜನಗರದಲ್ಲಿ ಬಿಎಸ್‌ಪಿ, ಕೊಳ್ಳೇಗಾಲದಲ್ಲಿ ಜೆಡಿಎಸ್ ಫಲಿತಾಂಶದ ಮೇಲೆ ಪರಿಣಾಮ ಬೀರುವುದು ನಿಚ್ಚಳ.

ಸಚಿವ ವಿ.ಸೋಮಣ್ಣ ಸ್ಪರ್ಧೆಯಿಂದಾಗಿ ಚಾಮರಾಜನಗರ ಗಮನ ಸೆಳೆದಿದ್ದು, ಕಾಂಗ್ರೆಸ್‌ನಿಂದ ‘ಹ್ಯಾಟ್ರಿಕ್’ ಶಾಸಕ ಸಿ.ಪುಟ್ಟರಂಗಶೆಟ್ಟಿ ಸ್ಪರ್ಧಿಸಿದ್ದಾರೆ. ಬಿಜೆಪಿಯಲ್ಲಿ ಆಕಾಂಕ್ಷಿಗಳ ಅಸಮಾಧಾನದ ಹೊಗೆ ಆರಿದ್ದು, ಲಿಂಗಾಯತ, ನಾಯಕ, ಪರಿಶಿಷ್ಟ ಜಾತಿ– ಎಡಗೈ ಸಮುದಾಯದ ಮತದಾರರನ್ನೇ ಹೆಚ್ಚಾಗಿ ನೆಚ್ಚಿಕೊಂಡಿದೆ. ಪರಿಶಿಷ್ಟ ಜಾತಿ –ಬಲಗೈ ಸಮುದಾಯದ ಮತಗಳ ಮೇಲೂ ಕಣ್ಣಿಟ್ಟಿದೆ.

ಕಾಂಗ್ರೆಸ್ ಶಾಸಕ ಪುಟ್ಟರಂಗಶೆಟ್ಟಿ ಮೇಲೆ ದಲಿತ ಮುಖಂಡರಿಗಿರುವ ಅತೃಪ್ತಿಯ ಲಾಭ ಪಡೆಯಲೂ ಯತ್ನಿಸುತ್ತಿದೆ. ಕಾಂಗ್ರೆಸ್‌ಗೆ ಹೋಗುವ ಲಿಂಗಾಯತ ಮತಗಳ ಮೇಲೂ ಕಣ್ಣಿಟ್ಟಿದೆ.

ಜೆಡಿಎಸ್‌ನಿಂದ ಸ್ಪರ್ಧಿಸಿರುವ, ಲಿಂಗಾಯತರಾದ ಆಲೂರು ಮಲ್ಲು ಅವರನ್ನು ಕಣದಿಂದ ಹಿಂದೆ ಸರಿಸಲು ಸೋಮಣ್ಣ ಮಾಡಿದ ಪ್ರಯತ್ನ ಕೈಗೂಡಿಲ್ಲ. ನಾಮಪತ್ರ ವಾಪಸ್ ಪಡೆಯಲು ಆಮಿಷ ಒಡ್ಡಿರುವ ಆಡಿಯೊ ಬಹಿರಂಗಗೊಂಡಿರುವುದು ದೊಡ್ಡ ಸದ್ದು ಮಾಡಿದೆ.

ಪುಟ್ಟರಂಗಶೆಟ್ಟಿ ಅವರ ಧೋರಣೆ ಪಕ್ಷದ ದಲಿತ ನಾಯಕರಿಗೆ ಹಿಡಿಸಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಧ್ರುವನಾರಾಯಣ ಗೆಲುವಿಗೆ ಶ್ರಮಿಸಲಿಲ್ಲವೆಂಬ ಅತೃಪ್ತಿಯೂ ಧ್ರುವನಾರಾಯಣ ಅವರ ಬೆಂಬಲಿಗರಲ್ಲಿದೆ. ಬಿಎಸ್‌ಪಿ, ಎಸ್‌ಡಿಪಿಐ ಮೈತ್ರಿ ಮಾಡಿಕೊಂಡಿವೆ. ಬಿಎಸ್‌ಪಿಯು ದಲಿತರು, ಮುಸ್ಲಿಮರ ಮತ ಪಡೆದಷ್ಟೂ ಕಾಂಗ್ರೆಸ್ ಗೆಲುವಿಗೆ ಹೆಚ್ಚು ಶ್ರಮಪಡಬೇಕಾಗುತ್ತದೆ.


ಶಾಸಕ, ಬಿಜೆಪಿಯ ಸಿ.ಎಸ್‌.ನಿರಂಜನಕುಮಾರ್ ಮತ್ತು ಕಾಂಗ್ರೆಸ್‌ನ ಎಚ್‌.ಎಂ.ಗಣೇಶ್ ಪ್ರಸಾದ್ ನಡುವೆ ನೇರ ಹಣಾಹಣಿಗೆ ಸಾಕ್ಷಿಯಾಗಲಿರುವ ಗುಂಡ್ಲುಪೇಟೆಯಲ್ಲಿ ಬಿಜೆಪಿಗೆ ಬಂಡಾಯ ಬಿಸಿತುಪ್ಪವಾಗಿದೆ. ನಿರಂಜನ ವಿರುದ್ಧ ಮುನಿಸಿಕೊಂಡಿರುವ ಎಂ.ಪಿ.ಸುನಿಲ್ ಬಂಡಾಯವೆದ್ದು ಕಣಕ್ಕಿಳಿದಿದ್ದಾರೆ. ಜೆಡಿಎಸ್ ಅಭ್ಯರ್ಥಿಯಾಗಿರುವ ಕಡಬೂರು ಮಂಜುನಾಥ್ ಕೂಡ ಹಿಂದೆ ಬಿಜೆಪಿಯಲ್ಲಿದ್ದವರು. ಇಬ್ಬರೂ ಬಿಜೆಪಿ ಮತಬುಟ್ಟಿಗೆ ಕೈಹಾಕುವುದರಿಂದ ಪಕ್ಷದ ಮುಂದೆ ದೊಡ್ಡ ಸವಾಲಿದೆ.

ಹನೂರಿನಲ್ಲಿ ಕಾಂಗ್ರೆಸ್‌ನಿಂದ ಕಣಕ್ಕಿಳಿದಿರುವ ‘ಹ್ಯಾಟ್ರಿಕ್’ ಶಾಸಕ ಆರ್‌.ನರೇಂದ್ರ ಎದುರು ಬಿಜೆಪಿಯ ಡಾ.ಪ್ರೀತನ್ ನಾಗಪ್ಪ ಅನುಕಂಪವನ್ನೇ ನೆಚ್ಚಿಕೊಂಡಿದ್ದಾರೆ. ಜೆಡಿಎಸ್‌ನಿಂದ ಎಂ.ಆರ್. ಮಂಜುನಾಥ್ ಅಭ್ಯರ್ಥಿಯಾಗಿದ್ದಾರೆ.

ಬಿಜೆಪಿಯ ದತ್ತೇಶ್‌ಕುಮಾರ್, ಟಿಕೆಟ್ ತಪ್ಪಿದ್ದರಿಂದ ಕಾಂಗ್ರೆಸ್‌ನತ್ತ ಮುಖಮಾಡಿದ್ದಾರೆ. ಆಕಾಂಕ್ಷಿಗಳಾಗಿದ್ದ ವೆಂಕಟೇಶ್, ನಿಶಾಂತ್ ಮೌನವಾಗಿದ್ದಾರೆ. ಕ್ಷೇತ್ರ ಅಭಿವೃದ್ಧಿಯಾಗದಿರುವುದರಿಂದ ಮತದಾರರಲ್ಲಿ ನರೇಂದ್ರ ಕುರಿತು ಅತೃಪ್ತಿ ಇದೆ.

ಬೆಂಗಳೂರಿನ ಉದ್ಯಮಿ ಮಂಜುನಾಥ್ ಕಳೆದ ಚುನಾವಣೆಯಲ್ಲಿ ಕೊನೆ ಕ್ಷಣದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಅಖಾಡಕ್ಕೆ ಇಳಿದಿದ್ದರು. ಹೆಚ್ಚು ಮತಗಳಿಕೆಯಲ್ಲಿ ಮೂರನೇ ಸ್ಥಾನ ಗಳಿಸಿದ್ದ ಅವರು (44,957 ಮತಗಳು, ಶೇ 26.39) ಬಿಜೆಪಿ, ಕಾಂಗ್ರೆಸ್ ಅಭ್ಯರ್ಥಿಗಳಿಗೆ ಪ್ರಬಲ ಪೈಪೋಟಿ ನೀಡಿದ್ದರು. ಐದು ವರ್ಷಗಳಿಂದ ಕ್ಷೇತ್ರದಲ್ಲಿ ಪಕ್ಷ ಸಂಘಟಿಸಿದ್ದಾರೆ. ವಿಧಾನ ಪರಿಷತ್, ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಪಕ್ಷ ಉತ್ತಮ ಸಾಧನೆ ಮಾಡಿದ್ದು, ಅದು ಪುನರಾವರ್ತನೆ ಯಾಗಲಿದೆ ಎಂಬ ವಿಶ್ವಾಸದಲ್ಲಿ ಅವರಿದ್ದಾರೆ.

ಕ್ಷೇತ್ರ 4



ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ಚಾಮರಾಜನಗರ	ಕಾಂಗ್ರೆಸ್	ಕಾಂಗ್ರೆಸ್
ಗುಂಡ್ಲುಪೇಟೆ	ಕಾಂಗ್ರೆಸ್	ಬಿಜೆಪಿ
ಕೊಳ್ಳೇಗಾಲ	ಕಾಂಗ್ರೆಸ್	ಬಿಎಸ್‌ಪಿ
ಹನೂರು	ಕಾಂಗ್ರೆಸ್	ಕಾಂಗ್ರೆಸ್

ಅಂಕಿ ಅಂಶ

- **8,61,489** ಜಿಲ್ಲೆಯಲ್ಲಿರುವ ಒಟ್ಟು ಮತದಾರರು
- **4,26,547** ಪುರುಷರು
- **4,34,873** ಮಹಿಳೆಯರು
- **69** ಲೈಂಗಿಕ ಅಲ್ಪಸಂಖ್ಯಾತರು
- **61** ನಾಲ್ಕೂ ಕ್ಷೇತ್ರಗಳಲ್ಲಿ ಕಣದಲ್ಲಿರುವ ಅಭ್ಯರ್ಥಿಗಳು

ಎನ್‌.ಮಹೇಶ್ ವಿರುದ್ಧ ಒಂದಾದ ವಿರೋಧಿಗಳು

ಕೊಳ್ಳೇಗಾಲ ಮೀಸಲು ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿ, ಶಾಸಕ ಎನ್‌.ಮಹೇಶ್ ವಿರುದ್ಧ ವಿರೋಧಿ ಬಣಗಳೆಲ್ಲವೂ ಒಂದಾಗಿವೆ. ಪಕ್ಷದಲ್ಲಿ ಬಂಡಾಯವೂ ಎದ್ದಿದೆ.

ಕಳೆದ ಬಾರಿ ಬಿಎಸ್‌ಪಿಯಿಂದ ಗೆದ್ದಿದ್ದ ಎನ್‌.ಮಹೇಶ್ ಅವರನ್ನು ಕಾಂಗ್ರೆಸ್ – ಜೆಡಿಎಸ್ ಮೈತ್ರಿ ಸರ್ಕಾರ ಪತನದ ನಂತರ ಪಕ್ಷದಿಂದ ಉಚ್ಚಾಟಿಸಲಾಗಿತ್ತು. ಬಿಜೆಪಿಗೆ ಸೇರ್ಪಡೆಗೊಂಡಿದ್ದ ಅವರು ಅಲ್ಲಿಂದಲೇ ಕಣಕ್ಕಿಳಿದಿದ್ದಾರೆ. ಕಳೆದ ಸಲ ಗೆದ್ದಿದ್ದ ಬಿಎಸ್‌ಪಿ, ಅಭ್ಯರ್ಥಿಯನ್ನು ಕಣಕ್ಕಿಳಿಸಿ ಕೊನೆ ಕ್ಷಣದಲ್ಲಿ ನಾಮಪತ್ರ ವಾಪಸ್ ಪಡೆದು ಕಾಂಗ್ರೆಸ್ ಅಭ್ಯರ್ಥಿ ಎ.ಆರ್‌.ಕೃಷ್ಣಮೂರ್ತಿಗೆ ಬೆಂಬಲ ವ್ಯಕ್ತಪಡಿಸಿದೆ.

ಬಿಜೆಪಿ ಜಿಲ್ಲಾ ಎಸ್‌ಸಿ ಮೋರ್ಚಾ ಅಧ್ಯಕ್ಷ ಕಿನಕಹಳ್ಳಿ ರಾಚಯ್ಯ ಬಂಡಾಯವೆದ್ದು, ಪಕ್ಷೇತರರಾಗಿ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್ ಟಿಕೆಟ್ ಕೈತಪ್ಪಿದ್ದಕ್ಕೆ ಎಸ್‌.ಬಾಲರಾಜು ಬಿಜೆಪಿ ಸೇರಿರುವುದು ಆ ಪಕ್ಷಕ್ಕೆ ಪ್ಲಸ್ ಪಾಯಿಂಟ್.

ಕ್ಷೇತ್ರದಲ್ಲಿ ಜೆಡಿಎಸ್‌ಗೂ ನೆಲೆ ಇದ್ದು, ಬಿ.ಪುಟ್ಟಸ್ವಾಮಿ ಕಣಕ್ಕಿಳಿದಿದ್ದಾರೆ.

ಸಾಕ್ಷಾತ್ ಸಮೀಕ್ಷೆ

ಕೊಡಗು ಗೆಲುವಿಗಾಗಿ ಹ್ಯಾಟ್ರಿಕ್ ವೀರರ ಕಸರತ್ತು

ಬಿಜೆಪಿ ನೆಲ; ಕಾಂಗ್ರೆಸ್ ಛಲ


ಎಂ.ಪಿ. ಅಪ್ಪಚ್ಚುರಂಜನ್ ಮಡಿಕೇರಿ, ಬಿಜೆಪಿ


ಡಾ.ಮಂತರ್‌ಗೌಡ ಮಡಿಕೇರಿ, ಕಾಂಗ್ರೆಸ್


ನಾಪಂಡ ಮುತ್ತಪ್ಪ ಮಡಿಕೇರಿ ಜೆಡಿಎಸ್


ಕೆ.ಜಿ.ಬೋಪಯ್ಯ ವಿರಾಜಪೇಟೆ ಬಿಜೆಪಿ


ಎ.ಎಸ್‌.ಪೊನ್ನಣ್ಣ ವಿರಾಜಪೇಟೆ ಕಾಂಗ್ರೆಸ್

• ಕೆ.ಎಸ್‌.ಗಿರೀಶ

ಮಡಿಕೇರಿ: ಸತತ ನಾಲ್ಕು ಚುನಾವಣೆಗಳಿಂದಲೂ ‘ಬಿಜೆಪಿಯ ಭದ್ರಕೋಟೆ’ ಎನಿಸಿರುವ ಕೊಡಗಿನ ಎರಡೂ ವಿಧಾನಸಭಾ ಕ್ಷೇತ್ರಗಳಿಗೆ ಲಗ್ಗೆ ಇಡಲು ಕಾಂಗ್ರೆಸ್ ಈ ಬಾರಿ ಯುವಕರನ್ನು ಕಣಕ್ಕಿಳಿಸಿದೆ. ಆದರೆ, ಬಿಜೆಪಿಯು ‘ಹ್ಯಾಟ್ರಿಕ್’ ಗೆಲುವು ಪಡೆದಿರುವ ಹಿರಿಯರನ್ನೇ ಕಣಕ್ಕಿಳಿಸಿ, ‘ಟಿಪ್ಪು ಜಯಂತಿ’ ಅಸ್ತ್ರವನ್ನೇ ಮತ್ತೆ ಕಾಂಗ್ರೆಸ್‌ನತ್ತ ಪ್ರಯೋಗಿಸಿದೆ.

ಎಸ್‌ಡಿಪಿಐ, ಸರ್ವೋದಯ ಕರ್ನಾಟಕ ಪಕ್ಷದ ಸ್ಪರ್ಧೆಯಿಂದ ಆಗಲಿರುವ ಮತ ವಿಭಜನೆ ಕಾಂಗ್ರೆಸ್ ಪಾಲಿಗೆ ನಕಾರಾತ್ಮಕ ಅಂಶ. ಒಂದೇ ಕುಟುಂಬದವರಿಗೆ ಸತತವಾಗಿ ಟಿಕೆಟ್ ನೀಡುವುದರ ವಿರುದ್ಧ ಎದ್ದಿರುವ ಅಸಮಾಧಾನದ ಹೊಗೆ ಹಾಗೂ ₹ 7 ಕೋಟಿಗೂ ಅಧಿಕ ಹಣ ವ್ಯಯಿಸಿದರೂ ಕುಸಿಯುತ್ತಲೇ ಇರುವ ಜಿಲ್ಲಾಧಿಕಾರಿ ಕಚೇರಿಯ ತಡೆಗೋಡೆಯು ಬಿಜೆಪಿ ಪಾಲಿಗೂ ‘ಮೈನಸ್ ಪಾಯಿಂಟ್’. ಈ ಸನ್ನಿವೇಶದ ಲಾಭ ಪಡೆಯಲು ಜೆಡಿಎಸ್ ಹವಣಿಸಿದ್ದು, ಚುನಾವಣಾ ಕಣ ಕಳೆದ ಬಾರಿಗಿಂತಲೂ ಹೆಚ್ಚಿನ ಕುತೂಹಲ ಕೆರಳಿಸಿದೆ.

ಮಡಿಕೇರಿ ಕ್ಷೇತ್ರದಲ್ಲಿ 2004ರಲ್ಲಿ ಕೆ.ಜಿ.ಬೋಪಯ್ಯ, 2008ರಿಂದ ಸತತ ಮೂರು ಬಾರಿ ಎಂ.ಪಿ. ಅಪ್ಪಚ್ಚುರಂಜನ್ ಗೆದ್ದಿದ್ದಾರೆ. ವಿರಾಜಪೇಟೆ ಕ್ಷೇತ್ರದಲ್ಲಿ 2004ರಲ್ಲಿ ಬಿಜೆಪಿಯಿಂದ ಎಚ್‌.ಡಿ.ಬಸವರಾಜು ನಂತರ 2008ರಿಂದ ಸತತವಾಗಿ ಕೆ.ಜಿ.ಬೋಪಯ್ಯ ಗೆದ್ದಿದ್ದಾರೆ. ಅತಿವೃಷ್ಟಿಯಾದಾಗಲೆಲ್ಲ ಗುಡ್ಡ, ಬೆಟ್ಟಗಳನ್ನು ಹತ್ತಿ ಸಂತ್ರಸ್ತರಿಗೆ ಸಾಂತ್ವನ ಹೇಳಿರುವುದು ಇವರಿಬ್ಬರ ಪಾಲಿಗೆ ‘ಪ್ಲಸ್ ಪಾಯಿಂಟ್’ ಎನಿಸಿದೆ.

ಹಿಂದಿನ ಮೂರು ಚುನಾವಣೆಗಳಲ್ಲಿ ಮಡಿಕೇರಿಯಲ್ಲಿ 2ನೇ ಸ್ಥಾನದಲ್ಲಿದ್ದ ಬಿ.ಎ.ಜೀವಿಜಯ ಕಣದಲ್ಲಿಲ್ಲ. ಜೆಡಿಎಸ್ ಬಿಟ್ಟು ಕಾಂಗ್ರೆಸ್ ಸೇರಿದರೂ ಟಿಕೆಟ್ ಲಭಿಸಿಲ್ಲ. ಸದ್ಯ, ಅವರು ಕಾಂಗ್ರೆಸ್‌ನ ಡಾ.ಮಂತರ್‌ಗೌಡ ಪರವಾಗಿ ಹೆಚ್ಚು ಪ್ರಚಾರಕ್ಕೆ ಹೋಗದೆ, ಬಂಡಾಯದ ಮಾತುಗಳನ್ನೂ ಆಡದೇ ಮೌನಕ್ಕೆ ಜಾರಿದ್ದಾರೆ. ಮಡಿಕೇರಿಯ ಕಾಂಗ್ರೆಸ್ ಅಭ್ಯರ್ಥಿ ಡಾ.ಮಂತರ್‌ಗೌಡ, ಹಾಸನ ಜಿಲ್ಲೆಯ ಅರಕಲಗೂಡಿನ ಜೆಡಿಎಸ್ ಅಭ್ಯರ್ಥಿ ಎ.ಮಂಜು ಪುತ್ರ. 2021ರ ಡಿಸೆಂಬರ್‌ನಲ್ಲಿ ನಡೆದಿದ್ದ ವಿಧಾನಪರಿಷತ್ ಚುನಾವಣೆಯಲ್ಲಿ ಅವರು 102 ಮತಗಳ ಅಂತರದಿಂದ, ಬಿಜೆಪಿ ಅಭ್ಯರ್ಥಿ ಎಂ.ಪಿ.ಅಪ್ಪಚ್ಚುರಂಜನ್ ಅವರ ಸೋದರ ಸುಜಾ ಕುಶಾಲಪ್ಪ ವಿರುದ್ಧ ಸೋತಿದ್ದರು. ಕ್ಷೇತ್ರಕ್ಕೆ ಹೊಸಬರಾಗಿದ್ದರೂ ಅವರು ಪಡೆದಿದ್ದ ಮತಗಳು ಬಿಜೆಪಿ ಮಾತ್ರವಲ್ಲ, ಕಾಂಗ್ರೆಸ್‌ನ ಹುಬ್ಬೇರುವಂತೆ ಮಾಡಿದ್ದವು.

2021ರಿಂದಲೂ ಸತತವಾಗಿ ಕ್ಷೇತ್ರದಲ್ಲಿ ನಿಕಟ ಸಂಪರ್ಕವನ್ನಿರಿಸಿಕೊಂಡಿರುವ ಅವರು ಯುವ ಸಮುದಾಯದವನ್ನೇ ಹೆಚ್ಚು ಕೇಂದ್ರೀಕರಿಸಿದ್ದಾರೆ. ಬಿಜೆಪಿ ಅಭ್ಯರ್ಥಿ, ಕೊಡವ ಸಮುದಾಯದ ಎಂ.ಪಿ.ಅಪ್ಪಚ್ಚುರಂಜನ್ ಕಳೆದ ಚುನಾವಣೆಗಳಂತೆ ‘ಬೂತ್‌ಮಟ್ಟದ ಪ್ರಚಾರ’ ನಡೆಸುತ್ತಿದ್ದಾರೆ.

ಜೀವಿಜಯ ಅವರು ಪಕ್ಷದಿಂದ ಹೊರನಡೆದ ಬಳಿಕ ನಿಸ್ತೇಜವಾಗಿದ್ದ ಜೆಡಿಎಸ್, ಈ ಬಾರಿ ಕೊಡವರಾದ ನಾಪಂಡ ಮುತ್ತಪ್ಪ ಅವರಿಗೆ ಟಿಕೆಟ್ ನೀಡಿದ್ದು, ಅವರು ಬಿರುಸಿನ ಪ್ರಚಾರ ನಡೆಸುತ್ತಾ, ಮಡಿಕೇರಿ ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ಇರುವಂತೆ ನೋಡಿಕೊಂಡಿದ್ದಾರೆ. ‘ಮುತ್ತಪ್ಪ ಕೊಡವ ಸಮುದಾಯದವರ ಮತ ವಿಭಜನೆಗೆ ಕಾರಣರಾಗಬಹುದು’ ಎಂದು ಕಾಂಗ್ರೆಸ್ ಆಸೆಗಣ್ಣಿನಿಂದ ನೋಡುತ್ತಿದೆ. ಎಸ್‌ಡಿಪಿಐನ ಅಮಿನ್ ಮೊಯಿಸಿನ್ ಸ್ಪರ್ಧೆಯಿಂದ ಕಾಂಗ್ರೆಸ್‌ನ ಮತಗಳ ವಿಭಜನೆ ಯಾಗುವ ಸಾಧ್ಯತೆಯೂ ಇದೆ. ಇದೂ ಫಲಿತಾಂಶದ ಮೇಲೆ ನೇರ ಪ್ರಭಾವ ಬೀರಲಿದೆ.

ಕೊಡವರೇ ಹೆಚ್ಚಾಗಿರುವ ವಿರಾಜಪೇಟೆ ಕ್ಷೇತ್ರದಲ್ಲಿ ಬಿಜೆಪಿ, ಕಾಂಗ್ರೆಸ್ ಮಧ್ಯೆ ನೇರ ಹಣಾಹಣಿ ಇದೆ. ‘ಹ್ಯಾಟ್ರಿಕ್’ ಗೆಲುವು ಸಾಧಿಸಿರುವ ಅರೆಭಾಷೆ ಗೌಡ ಸಮುದಾಯಕ್ಕೆ ಸೇರಿದ ಕೆ.ಜಿ. ಬೋಪಯ್ಯ, ಸತತ 4ನೇ ಬಾರಿ ಗೆಲುವು ಸಾಧಿಸಲು ಬಿಡುವಿಲ್ಲದೆ ಪ್ರಚಾರ ನಡೆಸಿದ್ದಾರೆ. ಅವರ ವಿರುದ್ಧ ಹೈಕೋರ್ಟ್ ವಕೀಲ, ಕೊಡವ ಸಮುದಾಯದ ಎ.ಎಸ್‌.ಪೊನ್ನಣ್ಣ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿದೆ. ಪೊನ್ನಣ್ಣ ಪ್ರಚಾರದ ತಂತ್ರಗಾರಿಕೆಯನ್ನೇ ಬದಲಿಸಿಕೊಂಡಿರುವುದು ಕಾಂಗ್ರೆಸ್ ಹೈಕಮಾಂಡ್‌ಗೂ ಅಚ್ಚರಿ ತಂದಿದೆ.

ಕಳೆದ ಬಾರಿ ಜೆಡಿಎಸ್‌ನಿಂದ ಸ್ಪರ್ಧಿಸಿದ್ದ ಸಂಕೇತ್ ಪೂವಯ್ಯ ಕಾಂಗ್ರೆಸ್ ಸೇರಿ ಪೊನ್ನಣ್ಣ ಅವರಿಗೆ ಬೆಂಬಲ ನೀಡಿರುವುದು ಅವರಿಗೆ ‘ಪ್ಲಸ್ ಪಾಯಿಂಟ್’. ಸರ್ವೋದಯ ಕರ್ನಾಟಕ ಪಕ್ಷದಿಂದ ಮನು ಸೋಮಯ್ಯ ಕಣಕ್ಕಿಳಿದಿರುವುದರಿಂದ ಕಾಂಗ್ರೆಸ್‌ಗೆ ಮತಗಳ ವಿಭಜನೆಯ ಭೀತಿ ತರಿಸಿದೆ. ಅದಕ್ಕಾಗಿಯೇ ಪೊನ್ನಣ್ಣ ಕಾಡಂಚಿನ ಪ್ರದೇಶಗಳ ರೈತರು, ಬುಡಕಟ್ಟು ನಿವಾಸಿಗಳ ಕಡೆಗೆ ಗಮನ ಕೇಂದ್ರೀಕರಿಸಿದ್ದಾರೆ.

ವಿಚಾರವಾದಿ ಎ.ಕೆ.ಸುಬ್ಬಯ್ಯ ಅವರ ಪುತ್ರರಾದ ಪೊನ್ನಣ್ಣ ತಲಕಾವೇರಿಯಲ್ಲಿ ಪೂಜೆ ಸಲ್ಲಿಸಿ, ‘ನಾನು ಕಾವೇರಮ್ಮನ ಪುತ್ರ’ ಎಂದು ಘೋಷಿಸಿಕೊಂಡಿದ್ದಾರೆ. ಬಹಿರಂಗವಾಗಿ ಅಲ್ಪಸಂಖ್ಯಾತರನ್ನು ಓಲೈಸುವ ಸಣ್ಣ ಪ್ರಯತ್ನವನ್ನೂ ಅವರು ನಡೆಸಿಲ್ಲ. ‘ಚುನಾವಣೆ ಸಮೀಪಿಸಿದ್ದರೂ ಟಿಪ್ಪು ಜಯಂತಿಗೆ ಕಾರಣರಾದ ಸಿದ್ದರಾಮಯ್ಯ ಅವರನ್ನು ಪ್ರಚಾರಕ್ಕೆ ಕರೆಸದಿರುವುದು ಅವರ ಮತ್ತೊಂದು ತಂತ್ರಗಾರಿಕೆ’ ಎಂದೇ ವಿಶ್ಲೇಷಿಸಲಾಗುತ್ತಿದೆ. ಈ ಬಾರಿ ಮತದಾರರು ಇತಿಹಾಸವನ್ನು ಮರುಕಳಿಸುತ್ತಾರೋ ಬದಲಾವಣೆ ಬಯಸುತ್ತಾರೋ ಎಂಬುದು ಕುತೂಹಲಕಾರಿ.

ಅಂಕಿ ಅಂಶ

- **4,57,735** ಜಿಲ್ಲೆಯಲ್ಲಿರುವ ಒಟ್ಟು ಮತದಾರರು
- **2,24,875** ಪುರುಷರು
- **2,31,415** ಮಹಿಳೆಯರು
- **23** ಲೈಂಗಿಕ ಅಲ್ಪಸಂಖ್ಯಾತರು
- **24** ಕಣದಲ್ಲಿರುವ ಅಭ್ಯರ್ಥಿಗಳು

ಕ್ಷೇತ್ರ 2




ಕೊಡಗು ಜಿಲ್ಲೆಯ ಕ್ಷೇತ್ರಗಳು 02


ಕ್ಷೇತ್ರ	2013	2018
ಮಡಿಕೇರಿ	ಬಿಜೆಪಿ	ಬಿಜೆಪಿ
ವಿರಾಜಪೇಟೆ	ಬಿಜೆಪಿ	ಬಿಜೆಪಿ


ಯಾದಗಿರಿ ನಾಲ್ಕು ಕ್ಷೇತ್ರಗಳಲ್ಲೂ ಜಾತಿ ಲೆಕ್ಕಾಚಾರ, ಅಭಿವೃದ್ಧಿಯ ಜಪ

ಗಿರಿ ಜಿಲ್ಲೆಯಲ್ಲಿ ಗೆಲುವಿನ ಗರಿ ಯಾರಿಗೆ?

• ಬಿ.ಜಿ.ಪ್ರವೀಣಕುಮಾರ


ರಾಜೂಗೌಡ ಸುರಪುರ, ಬಿಜೆಪಿ


ವೆಂಕಟರೆಡ್ಡಿ ಮುದ್ನಾಳ ಯಾದಗಿರಿ, ಬಿಜೆಪಿ


ಶರಣಬಸಪ್ಪ ಶಹಾಪುರ, ಕಾಂಗ್ರೆಸ್


ಚಿಂಚನಸೂರ ಗುರುಮಠಕಲ್, ಕಾಂಗ್ರೆಸ್


ಶರಣಗೌಡ ಗುರುಮಠಕಲ್, ಜೆಡಿಎಸ್

ಯಾದಗಿರಿ: ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳ ಪೈಕಿ ಎರಡರಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ನೇರ ಹಣಾಹಣಿಯಿದ್ದರೆ, ಇನ್ನೆರಡು ಕ್ಷೇತ್ರಗಳಲ್ಲಿ ರಾಷ್ಟ್ರೀಯ ಪಕ್ಷಗಳನ್ನು ಹಿಮ್ಮೆಟ್ಟಿಸುವ ಹುಮ್ಮಸ್ಸಿನಲ್ಲಿ ಜೆಡಿಎಸ್ ಇದೆ.

ಯಾದಗಿರಿ ಮತ್ತು ಸುರಪುರದಲ್ಲಿ ಬಿಜೆಪಿ ತನ್ನ ಹಿಡಿತ ಇನ್ನಷ್ಟು ಗಟ್ಟಿಗೊಳಿಸಲು ಯತ್ನಿಸಿದರೆ, ಶಹಾಪುರದ ಸುಭದ್ರ ಕೋಟೆಯಲ್ಲಿ ಬಿರುಕು ಮೂಡದು ಎಂಬ ವಿಶ್ವಾಸ ಕಾಂಗ್ರೆಸ್‌ಗೆ ಇದೆ. ಗುರುಮಠಕಲ್‌ನಲ್ಲಿನ ಪಕ್ಷದ ಪ್ರಭಾವ ಶಹಾಪುರಕ್ಕೂ ವಿಸ್ತರಿಸಬೇಕು ಎಂಬ ಉಮೇದು ಜೆಡಿಎಸ್‌ನಲ್ಲಿ ಕಾಣಸಿಗುತ್ತಿದೆ.

ನಿರೀಕ್ಷಿತ ಮಟ್ಟದಲ್ಲಿ ಪ್ರಗತಿ ಕಾಣದ ಮತ್ತು ಮೂಲಸೌಲಭ್ಯ ವಂಚಿತ ಜಿಲ್ಲೆಯಲ್ಲಿ ಜಾತಿಗಳ ಲೆಕ್ಕಾಚಾರದ ಜೊತೆಗೆ ‘ಅಭಿವೃದ್ಧಿ’ ಮಂತ್ರ ಜಪಿಸುತ್ತ ಮತ್ತು ಭರಪೂರ ಭರವಸೆಗಳನ್ನು ಕೊಡುತ್ತ ಮತದಾರರನ್ನು ಸೆಳೆಯುವ ಪ್ರಯತ್ನ ನಡೆದಿದೆ.

ಯಾದಗಿರಿ ಕ್ಷೇತ್ರದ ಬಿಜೆಪಿ ಶಾಸಕ ವೆಂಕಟರೆಡ್ಡಿ ಮುದ್ನಾಳ ಅವರು ಪುನರಾಯ್ಕೆ ಬಯಸಿದರೆ, ‘ಅದು ಅಷ್ಟು ಸುಲಭದ ಸಂಗತಿಯಲ್ಲ’ ಎಂದು ಕಾಂಗ್ರೆಸ್‌ನ ಅಭ್ಯರ್ಥಿ ಚನ್ನಾರೆಡ್ಡಿ ಪಾಟೀಲ ತುನ್ನೂರು ಸವಾಲು ಹಾಕಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಆಪ್ತ ಎಂದೇ ಗುರುತಿಸಿಕೊಂಡಿರುವ ಚನ್ನಾರೆಡ್ಡಿ ಅವರಿಗೆ ಈ ಚುನಾವಣೆ ಪ್ರತಿಷ್ಠೆಯ ವಿಷಯವಾಗಿದೆ. ಪಕ್ಷದೊಳಗಿನ ಆಂತರಿಕ ಭಿನ್ನಮತ ಶಮನಗೊಳಿಸಿ, ಗೆಲ್ಲಲು ಅವರು ಹರಸಾಹಸ ಪಡಬೇಕಿದೆ.

‘ವೆಂಕಟರೆಡ್ಡಿ ಮುದ್ನಾಳ ಕುಟುಂಬದ ಸದಸ್ಯರಿಗೆ ಕಾಮಗಾರಿಗಳ ಗುತ್ತಿಗೆ ನೀಡುತ್ತಾರೆ’ ಎಂಬ ಆರೋಪ ವಿರೋಧಿಗಳದ್ದು. ‘ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಕೋಟ್ಯಂತರ ರೂಪಾಯಿ ಅನುದಾನ ತಂದಿದ್ದೇನೆ’ ಎನ್ನುವುದು ಮುದ್ನಾಳ ಅವರ ಸಮರ್ಥನೆ.

‘ಪಕ್ಷದಲ್ಲಿ ಹಿರಿಯರಿಗೆ ಗೌರವ ಸಿಗುತ್ತಿಲ್ಲ’ ಎಂದು ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಯಾಗಿ, ಪುನಃ ಅದೇ ಕಾರಣಕ್ಕೆ ಬಿಜೆಪಿ ಬಿಟ್ಟು ಜೆಡಿಎಸ್ ಸೇರಿ ಯಾದಗಿರಿಯಿಂದ ಕಣಕ್ಕಿಳಿದಿರುವ 87 ವರ್ಷದ ಡಾ. ಎ.ಬಿ. ಮಾಲಕರೆಡ್ಡಿ ಅವರು ಶಿಷ್ಯರ ಬಳಗವನ್ನು ನಂಬಿದ್ದಾರೆ. ಕಾಂಗ್ರೆಸ್‌ನಿಂದ ತಮ್ಮ ಪುತ್ರಿಗೆ ಅಥವಾ ತಮಗೆ ಟಿಕೆಟ್ ಸಿಗುವ ನಿರೀಕ್ಷೆ ಹುಸಿಯಾದ ಬಳಿಕ ಜೆಡಿಎಸ್ ಸೇರಿದ ಅವರು ಜಿಲ್ಲೆಯ ಹಿರಿಯ ರಾಜಕಾರಣಿಯಾಗಿ ತಮ್ಮ ಪ್ರಭಾವ ಕಾಯ್ದುಕೊಳ್ಳುವರೇ ಎಂಬುದೇ ಕುತೂಹಲವನ್ನು ಹುಟ್ಟಿಸಿದೆ.

ಕಾಂಗ್ರೆಸ್‌ನ ಭದ್ರಕೋಟೆಯಾದ ಶಹಾಪುರದಲ್ಲಿ ಈ ಬಾರಿ ಬಿಜೆಪಿ ಮತ್ತು ಜೆಡಿಎಸ್ ಪ್ರಬಲವಾದ ಪೈಪೋಟಿ ನೀಡಲಿವೆ. ಬಿಜೆಪಿಯ ಅಭ್ಯರ್ಥಿ ಅಮೀನರೆಡ್ಡಿ ಪಾಟೀಲ ಯಾಳಗಿ ಮತ್ತು ಟಿಕೆಟ್ ಸಿಗದ ಕಾರಣಕ್ಕೆ ಬಿಜೆಪಿ ತೊರೆದು ಜೆಡಿಎಸ್‌ನಿಂದ ಕಣಕ್ಕಿಳಿದಿರುವ ಗುರು ಪಾಟೀಲ ಶಿರವಾಳ ಅವರಿಗೂ ಇದು ಅಸ್ತಿತ್ವದ ಪ್ರಶ್ನೆಯಾಗಿದೆ. ಶಿರವಾಳ ಅವರ ಬೆಂಬಲಿಗರಾದ ನಗರಸಭೆಯ ಕೆಲ ಸದಸ್ಯರು ಜೆಡಿಎಸ್ ಪರ ಪ್ರಚಾರ ನಡೆಸಿದ್ದಾರೆ. ಉಳಿದವರು ಮೊದಲಿನಂತೆ ಪಕ್ಷಕ್ಕೆ ನಿಷ್ಠರಾಗಿ ಬಿಜೆಪಿಯಲ್ಲೇ ಉಳಿಯುವರೇ ಅಥವಾ ತಮ್ಮ ನಾಯಕ ಪರವಾಗಿ ನಿಂತು ಗೆಲ್ಲಿಸುವರೇ ಎಂಬ ಬಗ್ಗೆ ರಾಜಕೀಯ ವಲಯದಲ್ಲಿ ಚರ್ಚೆ ನಡೆದಿದೆ. ಈ ಹೊಯ್ದಾಟದಿಂದ ಮತಗಳು ವಿಭಜನೆಗೊಂಡು ಇದರ ಲಾಭ ಕಾಂಗ್ರೆಸ್‌ನ ಶಾಸಕ ಶರಣಬಸಪ್ಪಗೌಡ ದರ್ಶನಾಪುರ ಅವರಿಗೆ ಆಗುವುದೇ ಎಂಬ ಲೆಕ್ಕಾಚಾರವೂ ಜೋರಾಗಿದೆ.

ಪರಿಶಿಷ್ಟ ಪಂಗಡದ ವಾಲ್ಮೀಕಿ ನಾಯಕ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿರುವ ಸುರಪುರದಲ್ಲಿ ಹಿಡಿತ ಕಾಯ್ದುಕೊಂಡಿರುವ ಬಿಜೆಪಿಯ ಶಾಸಕ ನರಸಿಂಹ ನಾಯಕ (ರಾಜೂಗೌಡ) ಮತದಾರರ ವಿಶ್ವಾಸ ಗಳಿಸಲು ಬಗೆಬಗೆಯ ಪ್ರಯತ್ನ ನಡೆಸಿದ್ದು, ಕಾಂಗ್ರೆಸ್‌ನ ರಾಜಾ ವೆಂಕಟಪ್ಪ ನಾಯಕ ಅವರು ಕೂಡ ತಾವೂ ಏನು ಕಡಿಮೆಯಿಲ್ಲ ಎಂಬಂತೆ ಪೈಪೋಟಿ ಒಡ್ಡುತ್ತಿದ್ದಾರೆ. ಚುನಾವಣೆ ಘೋಷಣೆಗೂ ಮುನ್ನವೇ ಸಕಲ ಸಿದ್ಧತೆ ಮಾಡಿಕೊಂಡು ಕ್ಷೇತ್ರದಲ್ಲಿ ನಿರಂತರವಾಗಿ ಪಕ್ಷದ ಸಭೆ, ಸಮಾವೇಶಗಳನ್ನು ಆಯೋಜಿಸಿ ಜನರನ್ನು ತಮ್ಮ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡರು, ಆರೋಪ–ಪ್ರತ್ಯಾರೋಪ ಮಾಡಿದರು, ಸಾಧನೆಗಳನ್ನು ಹೇಳಿಕೊಂಡರು. ಆದರೆ, ಈಚೆಗೆ ನಡೆದ ಎರಡೂ ಪಕ್ಷಗಳ ಕಾರ್ಯಕರ್ತರ ಕಲ್ಲು ತೂರಾಟ ಪ್ರಕರಣವು ಚುನಾವಣೆಯ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ.

ಗುರುಮಠಕಲ್ ಕ್ಷೇತ್ರದ ಪರಿಸ್ಥಿತಿಯು ಭಿನ್ನವಾಗಿಲ್ಲ. ಜೆಡಿಎಸ್‌ನ ಶಾಸಕ ನಾಗನಗೌಡ ಕಂದಕೂರ ಬದಲು ಅವರ ಪುತ್ರ ಶರಣಗೌಡ ಕಂದಕೂರ ಕಣಕ್ಕಿಳಿದಿದ್ದು, ಈಗಾಗಲೇ ಯುವಜನರ ಜೊತೆಗೆ ಹಲವು ಹಂತದ ಸಂವಾದಗಳನ್ನು ನಡೆಸಿ ಮನಗೆಲ್ಲಲು ಪ್ರಯತ್ನಿಸಿದ್ದಾರೆ. ಕೋಲಿ ಸಮಾಜದ ಮತಗಳ ಮೇಲೆ ಕಣ್ಣು ನೆಟ್ಟಿರುವ ಬಿಜೆಪಿಯು ಅದೇ ಸಮಾಜದ ಲಲಿತಾ ಅನುಪುರ ಅವರನ್ನು ಕಣಕ್ಕಿಳಿಸಿದ್ದು, ಬಿಜೆಪಿ ತೊರೆದು ಕಾಂಗ್ರೆಸ್ ಸೇರಿರುವ ಕೋಲಿ ಸಮಾಜದ ಮುಖಂಡ ಬಾಬುರಾವ ಚಿಂಚನಸೂರ ಅವರನ್ನು ಮಣಿಸಲು ಬಗೆಬಗೆಯ ತಂತ್ರಗಳನ್ನು ರೂಪಿಸುತ್ತಿದೆ.

ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕ್ ಖರ್ಗೆ ವಿರುದ್ಧ ಸದಾ ಕಿಡಿಕಾರುತ್ತಿದ್ದ ಬಾಬುರಾವ ಚಿಂಚನಸೂರ ದಿಢೀರ್ ಕಾಂಗ್ರೆಸ್ ಸೇರಿದ್ದು ಕಾಂಗ್ರೆಸ್‌ನ ಕೆಲ ಮುಖಂಡರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಅವರಿಂದ ಕಾಂಗ್ರೆಸ್ ಟಿಕೆಟ್ ತಪ್ಪಿರುವುದಕ್ಕೆ ಆಕಾಂಕ್ಷಿಗಳಲ್ಲಿ ಬೇಸರವಿದೆ. ‘ಬಿಜೆಪಿಯಲ್ಲಿ ಎಲ್ಲಾ ಅಧಿಕಾರವನ್ನು ಅನುಭವಿಸಿ, ಕಾಂಗ್ರೆಸ್‌ಗೆ ಸೇರಿದ್ದಾರೆ. ಅವರ ನಡೆಯು ಸ್ವಾರ್ಥದಿಂದ ಕೂಡಿದೆ ಹೊರತು ಮತ್ತೇನೂ ಅಲ್ಲ’ ಎಂದು ಬಿಜೆಪಿ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸುವುದು ಮುಂದುವರೆದಿದೆ.

ಇದೆಲ್ಲದರ ಮಧ್ಯೆ ಚಿಂಚನಸೂರ ಅವರು ಈಚೆಗೆ ನಡೆದ ರಸ್ತೆ ಅಪಘಾತದಲ್ಲಿ ಗಾಯಗೊಂಡಿದ್ದು, ಪ್ರಚಾರ ಸಭೆಗಳಲ್ಲಿ ಭಾಗವಹಿಸಲು ಆಗದಂತಹ ಸ್ಥಿತಿಯಿದೆ. ಅವ ಪತ್ನಿ ಅಮರೇಶ್ವರಿ ಕಣ್ಣೀರು ಹಾಕುತ್ತ, ಪತಿಯ ಪರ ಮತಯಾಚಿಸುತ್ತಿದ್ದಾರೆ. ಇಲ್ಲಿ ಜಾತಿ ವಿಷಯ ಮುಖ್ಯವಾಗುವುದೇ, ಪಕ್ಷಾಂತರ ವಿಷಯವು ಮುಂಚೂಣಿಗೆ ಬರುವುದೇ ಅಥವಾ ಮತಗಳು ವಿಭಜನೆಗೊಂಡು ಪ್ರಾದೇಶಿಕ ಪಕ್ಷಕ್ಕೆ ಗೆಲುವಿನ ಹಾದಿ ಸುಗಮಗೊಳಿಸುವುದೇ ಎಂಬುದೇ ಕುತೂಹಲ.

ಕ್ಷೇತ್ರ 4



ಪಕ್ಷಗಳ ಬಲಾಬಲ

ಕ್ಷೇತ್ರ	2013	2018
ಯಾದಗಿರಿ	ಕಾಂಗ್ರೆಸ್	ಬಿಜೆಪಿ
ಶಹಾಪುರ	ಕೆಜೆಪಿ	ಕಾಂಗ್ರೆಸ್
ಸುರಪುರ	ಕಾಂಗ್ರೆಸ್	ಬಿಜೆಪಿ
ಗುರುಮಠಕಲ್	ಕಾಂಗ್ರೆಸ್	ಜೆಡಿಎಸ್

ಅಂಕಿ ಅಂಶ

- **9,88,590** ಜಿಲ್ಲೆಯಲ್ಲಿರುವ ಒಟ್ಟು ಮತದಾರರು
- **4,95,294** ಪುರುಷರು
- **4,93,243** ಮಹಿಳೆಯರು
- **53** ಲೈಂಗಿಕ ಅಲ್ಪಸಂಖ್ಯಾತರು
- **37** ನಾಲ್ಕೂ ಕ್ಷೇತ್ರಗಳಲ್ಲಿ ಕಣದಲ್ಲಿರುವ ಅಭ್ಯರ್ಥಿಗಳು

ಸೆಲೆಬ್ರಿಟಿ ಮಾತು

ಪ್ರಜಾಪ್ರಭುತ್ವ ಗಟ್ಟಿಗೊಳಿಸೋಣ



ನಮ್ಮ ದೇಶ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಗಟ್ಟಿಯಾಗಿ ನಿಂತಿದೆ. ಈ ದೇಶವನ್ನು ಇನ್ನಷ್ಟು ಸಶಕ್ತವಾಗಿ ಕಟ್ಟಲು ಪ್ರತಿಯೊಬ್ಬರೂ ಕಡ್ಡಾಯವಾಗಿ ಮತದಾನ ಮಾಡಬೇಕು. ನನ್ನ ಮತ ನನ್ನ ಹಕ್ಕು, ಅದು ಪವಿತ್ರವಾದದ್ದು ಎಂಬ ಬಗ್ಗೆ ಮತದಾರರಲ್ಲಿ ಅರಿವು ಮೂಡಿಸುವ ಕೆಲಸ ತುರ್ತಾಗಿ ಆಗಬೇಕು. ಯೋಗ್ಯ ವ್ಯಕ್ತಿಗೆ ಮತದಾನ ಮಾಡಿದರೆ, ಪ್ರಜಾಪ್ರಭುತ್ವ ಬಲಗೊಳಿಸಲು ಕೊಡುಗೆ ನೀಡಿದಂತಾಗುತ್ತದೆ. ಜತೆಗೆ ಅಭಿವೃದ್ಧಿಯ ಕಾರ್ಯಗಳೂ ನಡೆಯುತ್ತವೆ. ಯಾವುದೇ ಆಸೆ-ಆಮಿಷಗಳಿಗೆ ಮಾರುಹೋಗದೆ ತಪ್ಪದೆ ಮತದಾನ ಮಾಡಬೇಕು. ನಿಮ್ಮೊಂದಿಗೆ ನಿಮ್ಮ ಸ್ನೇಹಿತರಿಗೂ ಮತ ಹಾಕಲು ಪ್ರೇರೇಪಿಸುವ ಮೂಲಕ ಪ್ರಜಾಪ್ರಭುತ್ವವನ್ನು ಇನ್ನಷ್ಟು ಸದೃಢಗೊಳಿಸಬೇಕು.

ಶಂಭು ಬಳಿಗಾರ, ಜಾನಪದ ತಜ್ಞ

ಪ್ರಜಾ ಪತ್ರ

ಹೊಸ ಮುಖಗಳಿಗೆ ಆದ್ಯತೆ ನೀಡಿ



ರಾಜ್ಯದಲ್ಲಿ ನಡೆಯುವ ಚುನಾವಣೆಯಲ್ಲಿ ಪ್ರತಿಯೊಬ್ಬರು ಕಡ್ಡಾಯವಾಗಿ ಮತದಾನ ಮಾಡಬೇಕು. ಈ ಚುನಾವಣೆಯಲ್ಲಿ ಯವಕರಿಗೆ ಅದರಲ್ಲೂ ಹೊಸ ಮುಖಗಳಿಗೆ ಹೆಚ್ಚಿನ ಆದ್ಯತೆ ನೀಡಬೇಕು. ಪ್ರಸ್ತುತ ರಾಜ್ಯದಲ್ಲಿ ನಿರುದ್ಯೋಗ ತಾಂಡವವಾಡುತ್ತಿದ್ದು, ಅಡುಗೆ ಅನಿಲ ಬೆಲೆ, ಪೆಟ್ರೋಲ್– ಡೀಸೆಲ್ ಸೇರಿ ದಿನಬಳಕೆ ವಸ್ತುಗಳ ಬೆಲೆ ಗಗನಕ್ಕೇರಿದ್ದು, ಜನಸಾಮಾನ್ಯರು ಜೀವನ ನಡೆಸುವುದು ದುಸ್ತರವಾಗಿದೆ. ಈ ಎಲ್ಲ ಸಮಸ್ಯೆಗಳ ಬಗ್ಗೆ ವಿಧಾನಸೌಧದಲ್ಲಿ ಗಟ್ಟಿ ಧ್ವನಿಯಲ್ಲಿ ಪ್ರಶ್ನಿಸುವ ಜನ ಪ್ರತಿನಿಧಿಯನ್ನು ಆಯ್ಕೆ ಮಾಡಬೇಕು. ಯುವಕರು ಅಧಿಕಾರಕ್ಕೆ ಬಂದರೆ ಮಾತ್ರ ರಾಜ್ಯದಲ್ಲಿ ಬದಲಾವಣೆ ಮಾಡಲು ಸಾಧ್ಯ.

ರೂಪಶ್ರೀ ಎಸ್. ಗಣಿ, ಬೆಳಗಾವಿ

ಯೋಗ್ಯ ಅಭ್ಯರ್ಥಿಗೆ ಮತ ನೀಡಿ



ಚುನಾವಣೆಯಲ್ಲಿ ಎಲ್ಲ ರಾಜಕೀಯ ಪಕ್ಷ ಗಳು ಮತದಾರರನ್ನು ಓಲೈಸುವ ಸಲುವಾಗಿ ಹಲವಾರು ಆಮಿಷಗಳನ್ನು ನೀಡಿ, ವಿರೋಧಿಗಳನ್ನು ತಮ್ಮ ಮನಸ್ಸಿಗೆ ಬಂದಂತೆ ಟೀಕಿಸಿ ತಮ್ಮ ಬೇಳೆ ಬೇಯಿಸಿಕೊಳ್ಳಲು ಹವಣಿಸುತ್ತಿದ್ದಾರೆ. ಚುನಾವಣೆಯ ಸಮಯದಲ್ಲಿ ಎಲ್ಲರ ಮನೆ ಬಾಗಿಲಿಗೆ ಬಂದು, ಕೈ ಮುಗಿದು ಮತ ಯಾಚಿಸುತ್ತಾ, ಗೆದ್ದಮೇಲೆ ಯಾರನ್ನೂ ಹತ್ತಿರ ಸೇರಿಸದಿರುವ ರಾಜಕಾರಣಿಗಳನ್ನು ನೋಡಿದ್ದೇವೆ. ಜನರ ಕಷ್ಟಗಳಿಗೆ ಸ್ಪಂದಿಸುವ, ಸಮಾಜಕ್ಕೆ ಸೇವೆ ಸಲ್ಲಿಸುವ, ಜಾತಿ–ಭೇದ ಮಾಡದೆ, ಭ್ರಷ್ಟಾಚಾರ ಮುಕ್ತ ಮನಸ್ಸಿನ ಗುಣವಿರುವ ಯೋಗ್ಯ ಅಭ್ಯರ್ಥಿಗೆ ಮತ ನೀಡುವುದರ ಮೂಲಕ ಮತದಾನಕ್ಕೊಂದು ಅರ್ಥ ನೀಡಬೇಕು.

ಹಂದನಕೆರೆ ಶೇಷಗಿರಿ, ಬೆಂಗಳೂರು

ರಾಜಕೀಯ ಪಕ್ಷಗಳ ಧೋರಣೆ, ಬದ್ಧತೆ, ಪ್ರಣಾಳಿಕೆ, ಪ್ರಚಾರದ ಕಾರ್ಯವೈಖರಿ ಹೇಗಿರಬೇಕು? ಚುನಾವಣೆಗೆ ಸಂಬಂಧಿಸಿದ ಇಂತಹ ವಿಷಯಗಳ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು 100 ಶಬ್ದಗಳ ಮಿತಿ ಒಳಗೆ ಕಳುಹಿಸಿ. ವಿಳಾಸದ ಜತೆ ಭಾವಚಿತ್ರ ಇರಲಿ.

9606038256

ತಮಿಳು ನಾಡಗೀತೆ ಅರ್ಧಕ್ಕೆ ತಡೆದ ಈಶ್ವರಪ್ಪ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿ ಬಿಜೆಪಿ ವತಿಯಿಂದ ಗುರುವಾರ ಆಯೋಜಿಸಿದ್ದ ತಮಿಳು ಭಾಷಿಕರ ಸಮಾವೇಶದ ಆರಂಭದಲ್ಲಿ ಬಿತ್ತರಿಸಲಾದ ತಮಿಳುನಾಡಿನ ನಾಡಗೀತೆಯನ್ನು ಬಿಜೆಪಿ ಮುಖಂಡ ಕೆ.ಎಸ್‌.ಈಶ್ವರಪ್ಪ ಅರ್ಧಕ್ಕೇ ತಡೆದು, ಕರ್ನಾಟಕದ ನಾಡಗೀತೆ ಹಾಕಿಸಿದರು.

ಇಲ್ಲಿನ ಎನ್‌ಇಎಸ್ ಮೈದಾನದಲ್ಲಿ ಪಕ್ಷದ ನಗರ ಘಟಕ ಸಮಾವೇಶ ಆಯೋಜಿಸಿತ್ತು. ಕರ್ನಾಟಕ ವಿಧಾನಸಭೆ ಚುನಾವಣೆ ಸಹ ಉಸ್ತುವಾರಿ, ಪಕ್ಷದ ತಮಿಳುನಾಡು ರಾಜ್ಯ ಘಟಕದ ಅಧ್ಯಕ್ಷ ಅಣ್ಣಾಮಲೈ ಸಮಾವೇಶದಲ್ಲಿ ಪಾಲ್ಗೊಂಡಿದ್ದರು.

ಸಮಾವೇಶ ಆರಂಭ ಆಗುತ್ತಿದ್ದಂತೆಯೇ ಸಂಘಟಕರು, ‘ಈಗ ತಮಿಳುನಾಡು ನಾಡಗೀತೆ ಆರಂಭವಾಗಲಿದೆ. ಎಲ್ಲರೂ ಎದ್ದು ನಿಂತುಕೊಳ್ಳಿ’ ಎಂದು ಮನವಿ ಮಾಡಿದರು. ಆಗ ವೇದಿಕೆಯಲ್ಲಿದ್ದ ಈಶ್ವರಪ್ಪ, ಅಣ್ಣಾಮಲೈ ಸೇರಿದಂತೆ ಗಣ್ಯರು ಎದ್ದು ನಿಂತರು.

ಧ್ವನಿವರ್ಧಕದಲ್ಲಿ ತಮಿಳು ನಾಡಗೀತೆ ಕೇಳಿಬರುತ್ತಿದ್ದಂತೆಯೇ ಎಚ್ಚೆತ್ತುಕೊಂಡ ಈಶ್ವರಪ್ಪ, ಮೈಕ್ ಕಡೆ ಧಾವಿಸಿ ತಕ್ಷಣ ಗೀತೆಯನ್ನು ನಿಲ್ಲಿಸುವಂತೆ ಸಂಘಟಕರಿಗೆ ಸೂಚಿಸಿದರು.

‘ಧ್ವನಿಮುದ್ರಿತ ಗೀತೆ ಹಾಕುವುದು ಬೇಡ. ಬೇಕಿದ್ದರೆ ಇಲ್ಲಿರುವ ಯಾರಾದರೂ ಬಂದು ತಮಿಳು ನಾಡಗೀತೆ ಹಾಡಲಿ’ ಎಂದು ಈಶ್ವರಪ್ಪ ಆಹ್ವಾನಿಸಿದರು. ಆಗ ಹಾಡುವುದಕ್ಕೆ ಯಾರೂ ಮುಂದೆ ಬರಲಿಲ್ಲ. ಕೂಡಲೇ ಕರ್ನಾಟಕದ ನಾಡಗೀತೆಯನ್ನು ಧ್ವನಿಮುದ್ರಿಕೆಯ ಮೂಲಕ ಬಿತ್ತರಿಸಲಾಯಿತು. ವೇದಿಕೆಯಲ್ಲಿದ್ದ ಗಣ್ಯರು ನಮ್ಮ ನಾಡಗೀತೆಗೆ ಗೌರವ ಸಲ್ಲಿಸಿದರು.

ಈ ಬಗ್ಗೆ ಈಶ್ವರಪ್ಪ ಆಗಲಿ, ಅಣ್ಣಾಮಲೈ ಆಗಲಿ ಪ್ರತಿಕ್ರಿಯೆ ನೀಡಲಿಲ್ಲ.


ಶಿವಮೊಗ್ಗದಲ್ಲಿ ಗುರುವಾರ ನಡೆದ ಬಿಜೆಪಿ ತಮಿಳು ಬಾಂಧವರ ಸಭೆಯಲ್ಲಿ ಶಾಸಕ ಕೆ.ಎಸ್‌.ಈಶ್ವರಪ್ಪ ಬಳಿ ತೆರಳಿ ತಮಿಳುನಾಡು ನಾಡಗೀತೆ ಬಿತ್ತರಿಸುವುದನ್ನು ತಡೆದರು.

₹ 8.07 ಕೋಟಿ ಮೌಲ್ಯದ ಸ್ವತ್ತು ವಶ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ರಾಜ್ಯದ ವಿವಿಧೆಡೆ ಗುರುವಾರ ನಡೆಸಿರುವ ಕಾರ್ಯಾಚರಣೆಗಳಲ್ಲಿ ₹ 2.50 ಕೋಟಿ ನಗದು ಸೇರಿದಂತೆ ಒಟ್ಟು ₹ 8.07 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ.

₹ 1.50 ಲಕ್ಷ ಮೌಲ್ಯದ ಉಚಿತ ಕೊಡುಗೆಗಳು, ₹ 4.44 ಕೋಟಿ ಮೌಲ್ಯದ 89,735 ಲೀಟರ್ ಮದ್ಯ, ₹ 12.13 ಲಕ್ಷ ಮೌಲ್ಯದ 12.63 ಕೆ.ಜಿ. ಮಾದಕವಸ್ತು, ₹ 85.80 ಲಕ್ಷ ಮೌಲ್ಯದ 1.49 ಕೆ.ಜಿ ಚಿನ್ನ, 10.63 ಲಕ್ಷ ಮೌಲ್ಯದ 22.31 ಕೆ.ಜಿ. ಬೆಳ್ಳಿಯನ್ನು ವಶಪಡಿಸಿಕೊಳ್ಳಲಾಗಿದೆ.

ಚುನಾವಣಾ ನೀತಿಸಂಹಿತೆ ಜಾರಿಯಾದ ದಿನದಿಂದ ಸೋಮವಾರದವರೆಗೆ ಒಟ್ಟು ₹ 286.17 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ಚುನಾವಣಾ ಅಕ್ರಮಕ್ಕೆ ಸಂಬಂಧಿಸಿದಂತೆ 2,178 ಎಫ್‌ಐಆರ್‌ಗಳನ್ನು ದಾಖಲು ಮಾಡಲಾಗಿದೆ. ಅಬಕಾರಿ ಕಾಯ್ದೆ ಉಲ್ಲಂಘನೆ ಆರೋಪದಡಿ 21,258 ಪ್ರಕರಣ ದಾಖಲಿಸಲಾಗಿದೆ ಎಂದು ಚುನಾವಣಾ ಆಯೋಗದ ಪ್ರಕಟಣೆ ತಿಳಿಸಿದೆ.

ಶೆಟ್ಟರ್ ಗೆಲ್ಲುತ್ತಾರೆ; ರಕ್ತದಲ್ಲಿ ‘ಕೈ’ ಕಾರ್ಯಕರ್ತನ ಪತ್ರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಹುಬ್ಬಳ್ಳಿ–ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದಲ್ಲಿ ಜಗದೀಶ ಶೆಟ್ಟರ್ ಯಾವುದೇ ಕಾರಣಕ್ಕೂ ಗೆಲ್ಲಲು ಸಾಧ್ಯವಿಲ್ಲ. ಇದನ್ನು ರಕ್ತದಲ್ಲಿ ಬರೆದುಕೊಡುತ್ತೇನೆ’ ಎಂದು ಬಿಜೆಪಿ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರು ಮಂಗಳವಾರ ಹೇಳಿದ್ದಕ್ಕೆ ಪ್ರತಿಯಾಗಿ, ‘ಕಾಂಗ್ರೆಸ್ ಅಭ್ಯರ್ಥಿ ಜಗದೀಶ ಶೆಟ್ಟರ್ ನೂರಕ್ಕೆ ನೂರರಷ್ಟು ಜಯಗಳಿಸುತ್ತಾರೆ.ಜೈ ಕಾಂಗ್ರೆಸ್’ ಎಂದು ಪಕ್ಷದ ಕಾರ್ಯಕರ್ತ, ಹುಬ್ಬಳ್ಳಿಯ ಬಮ್ಮಾಪುರ ಓಣಿ ನಿವಾಸಿ ಮಂಜುನಾಥ ಯಂಟ್ರುವಿ ರಕ್ತದಲ್ಲಿ ಬರೆದಿರುವ ಪತ್ರ ಗುರುವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

20 ವರ್ಷಗಳಿಂದ ಕಾಂಗ್ರೆಸ್ ಕಾರ್ಯಕರ್ತರಾಗಿರುವ ಮಂಜುನಾಥ ಅವರು, ಅಖಿಲ ಭಾರತ ವೀರಶೈವ ಮಹಾಸಭಾದ ಕುಂದಗೋಳ ತಾಲ್ಲೂಕು ಯುವ ಘಟಕದ ಅಧ್ಯಕ್ಷ.


ಹುಬ್ಬಳ್ಳಿಯ ಮಂಜುನಾಥ ಯಂಟ್ರುವಿ ತಾವು ಬರೆದ ಪತ್ರದೊಂದಿಗೆ

ರಕ್ತ ವ್ಯರ್ಥ ಬೇಡ: ಶೆಟ್ಟರ್

ಹುಬ್ಬಳ್ಳಿ: ಇದಕ್ಕೆ ಟ್ವೀಟ್ ಮಾಡಿರುವ ಜಗದೀಶ ಶೆಟ್ಟರ್, ‘ರಕ್ತದಾನ ಶ್ರೇಷ್ಠದಾನ. ಯಾರೂ ರಕ್ತವನ್ನು ವ್ಯರ್ಥ ಮಾಡಬೇಡಿ. ಅಗತ್ಯ ಇದ್ದವರಿಗೆ ದಾನ ಮಾಡಿ’ ಎಂದಿದ್ದಾರೆ.

ಜಗದೀಶ ಶೆಟ್ಟರ್ ಅವರು ಮಂಜುನಾಥ ಅವರ ಮನೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿ, ಸನ್ಮಾನಿಸಿದರು.

ಈ ಬಗ್ಗೆ ‘ಪ್ರಜಾವಾಣಿ’ಗೆ ಪ್ರತಿಕ್ರಿಯಿಸಿದ ಅವರು, ‘ಶೆಟ್ಟರ್ ಗೆಲುವಿಗೆ ಶತಾಯಗತಾಯ ಪ್ರಯತ್ನಿಸುತ್ತೇವೆ. ನಮ್ಮವರನ್ನು ಉಳಿಸಿಕೊಳ್ಳುವುದು ನಮ್ಮ ಕರ್ತವ್ಯ’ ಎಂದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಜೀವನದಲ್ಲಿ ಅನುಭವಕ್ಕೆ ಹೆಚ್ಚು ಮಹತ್ವ ಇರುತ್ತದೆ. ಮಾಡುವ ತಪ್ಪುಗಳಿಗೆ ಸಹ ಬೆಲೆ ಇರುತ್ತದೆ.

-ಹೆನ್ರಿ ಫೋರ್ಡ್

ನಕ್ಸಲರ ದಾಳಿ ಖಂಡನೀಯ ಸುರಕ್ಷತೆಯ ನಿರ್ಲಕ್ಷ್ಯ ಅಕ್ಷಮ್ಯ

ಛತ್ತೀಸಗಢದ ದಾಂತೇವಾಡ ಜಿಲ್ಲೆಯ ಅರನ್‌ಪುರ ಎಂಬಲ್ಲಿ ಪೊಲೀಸರು (ಜಿಲ್ಲಾ ಮೀಸಲು ಪಡೆ) ಸಂಚರಿಸುತ್ತಿದ್ದ ವಾಹನವನ್ನು ನಕ್ಸಲರು ಕಚ್ಚಾ ಬಾಂಬ್ ಬಳಸಿ ಸ್ಫೋಟಿಸಿದ್ದಾರೆ. ವಾಹನದಲ್ಲಿದ್ದ 10 ಪೊಲೀಸರು ಮತ್ತು ವಾಹನದ ಚಾಲಕ ಮೃತಪಟ್ಟಿದ್ದಾರೆ. ಇದು ಅತ್ಯಂತ ಹೇಡಿತನದ ಹೀನಾಯ ಕೃತ್ಯ. ನಕ್ಸಲ್ ಚಟುವಟಿಕೆ ತಡೆ ಕಾರ್ಯಾಚರಣೆ ಮುಗಿಸಿಕೊಂಡು ನಾಲ್ಕು ವಾಹನಗಳು ಹಿಂದಿರುಗುತ್ತಿದ್ದ ಸಂದರ್ಭದಲ್ಲಿ ಈ ಕೃತ್ಯ ಎಸಗಲಾಗಿದೆ. ನಕ್ಸಲ್ ಬಾಧಿತವಾದ ಈ ಪ್ರದೇಶದಲ್ಲಿ ಪೊಲೀಸರ ಸಂಚಾರದ ಸಂದರ್ಭದಲ್ಲಿ ಅಗತ್ಯ ಮುನ್ನೆಚ್ಚರಿಕೆಗಳನ್ನು ತೆಗೆದುಕೊಂಡಿರಲಿಲ್ಲ ಎಂಬ ವಿಚಾರ ಈಗ ಚರ್ಚೆ ಆಗುತ್ತಿದೆ. ನಕ್ಸಲರು ಅಥವಾ ಭಯೋತ್ಪಾದಕರು ಇಂತಹ ಕೃತ್ಯ ಎಸಗಿದಾಗ ಸುರಕ್ಷಾ ಕ್ರಮಗಳನ್ನು ಅನುಸರಿಸಿರಲಿಲ್ಲ ಎಂಬ ಚರ್ಚೆ ನಡೆಯುವುದು ಸಾಮಾನ್ಯವಾಗುತ್ತಿದೆ. ಆದರೆ, ಅದರಿಂದ ಸರ್ಕಾರ ಮತ್ತು ಪೊಲೀಸ್ ಇಲಾಖೆಯು ಪಾಠ ಕಲಿತುಕೊಂಡಂತೆ ಕಾಣುತ್ತಿಲ್ಲ. ಖಾಸಗಿ ಮಿನಿವ್ಯಾನ್‌ನಲ್ಲಿ ಪೊಲೀಸರು ಸಂಚರಿಸಿದ್ದು ಸರಿಯಾದ ನಡೆ ಅಲ್ಲ. ನಕ್ಸಲರು ಕಚ್ಚಾ ರಸ್ತೆಯಲ್ಲಿ ಕಚ್ಚಾ ಬಾಂಬ್ ಅನ್ನು ಮೊದಲೇ ಹೂತಿಟ್ಟಿದ್ದರು ಮತ್ತು ಪೊಲೀಸರಿದ್ದ ವಾಹನ ಸಂಚರಿಸುತ್ತಿದ್ದಾಗ ರಿಮೋಟ್ ಬಳಸಿ ಬಾಂಬ್ ಸ್ಫೋಟಗೊಳ್ಳುವಂತೆ ಮಾಡಿದ್ದಾರೆ. ಪೊಲೀಸರು ಸಂಚರಿಸುವ ಮುನ್ನ ರಸ್ತೆ ಸುರಕ್ಷತೆಯ ಪರಾಮರ್ಶೆ ನಡೆದಿರಲಿಲ್ಲ ಎಂಬುದು ಕಳವಳಕಾರಿ. ಹಾಗೆಯೇ ಅರನ್‌ಪುರ ಪೊಲೀಸ್ ಶಿಬಿರದ ಸಮೀಪದಲ್ಲಿಯೇ ಈ ಕೃತ್ಯ ನಡೆದಿದೆ ಎಂಬುದು ಆತಂಕವನ್ನು ಇನ್ನಷ್ಟು ಹೆಚ್ಚಿಸುವ ವಿಚಾರ. ಪೊಲೀಸರು ಸಂಚರಿಸುವುದಕ್ಕೂ ಮುನ್ನ ರಸ್ತೆ ಸುರಕ್ಷತೆ ಪರಿಶೀಲನಾ ತಂಡವು ರಸ್ತೆಯ ಎರಡೂ ಭಾಗಗಳಲ್ಲಿ ಅಪಾಯಕಾರಿಯಾದ ಯಾವುದೇ ಚಲನವಲನ ಇಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಈ ಕೆಲಸ ಆಗಿಲ್ಲ ಎಂಬುದು ಚಿಂತೆಯ ವಿಷಯ.



ಭದ್ರತಾ ಲೋಪ ಆಗಿದೆಯೇ, ಗುಪ್ತಚರ ಮಾಹಿತಿಯನ್ನು ಲಘುವಾಗಿ ಪರಿಗಣಿಸಲಾಗಿದೆಯೇ ಎಂಬುದರ ಕುರಿತು ತನಿಖೆ ಆಗಬೇಕು

ಮಾರ್ಚ್–ಜೂನ್ ಅವಧಿಯಲ್ಲಿ ಭದ್ರತಾ ಪಡೆಗಳ ಮೇಲೆ ಗರಿಷ್ಠ ಪ್ರಮಾಣದಲ್ಲಿ ದಾಳಿ ನಡೆಸುವ ಕಾರ್ಯತಂತ್ರವನ್ನು (ಟ್ಯಾಕ್ಟಿಕಲ್ ಕೌಂಟರ್ ಅಫೆನ್ಸಿವ್ ಕ್ಯಾಂಪೇನ್) ನಕ್ಸಲರು ಕೈಗೊಳ್ಳುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಈ ಅವಧಿಯಲ್ಲಿ ಹೆಚ್ಚಿನ ದಾಳಿ ನಡೆಸಲು ಅವರಿಗೆ ಸಾಧ್ಯವಾಗಿಲ್ಲ. ಹೀಗಾಗಿ, ನಕ್ಸಲ್ ಚಟುವಟಿಕೆ ತೀವ್ರವಾಗಿ ಇಲ್ಲದ ಅರನ್‌ಪುರ ಪ್ರದೇಶದಲ್ಲಿ ನಕ್ಸಲರು ಈ ಬಾರಿ ದಾಳಿ ನಡೆಸಿದ್ದಾರೆ. ನಕ್ಸಲ್ ಚಟುವಟಿಕೆಯ ಕೇಂದ್ರವಾಗಿರುವ ಸುಕ್ಮಾ ಅಥವಾ ಬಿಜಾಪುರವನ್ನು ಬಿಟ್ಟು ಬೇರೆಡೆ ದಾಳಿ ನಡೆಸಿದ್ದಾರೆ. ನಕ್ಸಲ್ ಚಟುವಟಿಕೆ ಹೆಚ್ಚಾಗಿರುವ ಪ್ರದೇಶದಲ್ಲಿ ಭದ್ರತಾ ಪಡೆಗಳು ಹೆಚ್ಚು ಜಾಗರೂಕವಾಗಿರುತ್ತವೆ ಎಂಬುದು ಅರನ್‌ಪುರವನ್ನು ಆಯ್ದುಕೊಳ್ಳಲು ಕಾರಣ ಆಗಿರಬಹುದು. ತಮ್ಮ ಇರುವಿಕೆ ತೋರಿಸಿಕೊಳ್ಳುವುದಕ್ಕಾಗಿ ನಕ್ಸಲರು ಈ ದಾಳಿ ಎಸಗಿರಬಹುದು. ಆದರೆ, ಅವರು ತೀರಾ ದುರ್ಬಲರಾಗಿದ್ದಾರೆ ಮತ್ತು ಹತಾಶೆಯಿಂದ ಈ ದಾಳಿ ನಡೆಸಿದ್ದಾರೆ ಎಂಬುದು ಮೇಲ್ನೋಟಕ್ಕೆ ಕಾಣಿಸುತ್ತದೆ. ನಕ್ಸಲ್ ಪ್ರಾಬಲ್ಯವಿರುವ ಪ್ರದೇಶದ ವಿಸ್ತೀರ್ಣವು ದಿನ ಕಳೆದಂತೆ ಕುಗ್ಗುತ್ತಿದೆ. ಈ ಬಾರಿ ದಾಳಿ ನಡೆಯಬಹುದು ಎಂಬ ಗುಪ್ತಚರ ಮಾಹಿತಿ ಇತ್ತು. ಆದರೆ, ಅವರು ದಾಳಿ ನಡೆಸಬಹುದಾದ ಸ್ಥಳ ಮತ್ತು ಸಮಯದ ಕುರಿತು ತಿಳಿದಿರಲಿಲ್ಲ. ಹಾಗಿದ್ದರೂ ಭದ್ರತಾ ಪಡೆಗಳ ಸಂಚಾರದ ಸಂದರ್ಭದಲ್ಲಿ ಗರಿಷ್ಠ ಎಚ್ಚರ ವಹಿಸದೇ ಇದ್ದುದು ಅಕ್ಷಮ್ಯ. ನಕ್ಸಲ್ ಚಟುವಟಿಕೆಗಳನ್ನು ಮಟ್ಟ ಹಾಕುವ ಭದ್ರತಾ ಪಡೆಗಳ ಪ್ರಯತ್ನ ಇತ್ತೀಚಿನ ವರ್ಷಗಳಲ್ಲಿ ಫಲಪ್ರದವಾಗುತ್ತಿದೆ. ಸರ್ಕಾರ ಕೂಡ ಹಿಂದುಳಿದ ಮತ್ತು ನಕ್ಸಲರ ಪ್ರಭಾವ ಇರುವ ಪ್ರದೇಶಗಳಲ್ಲಿ ಅಭಿವೃದ್ಧಿಯ ಹಲವು ಕಾರ್ಯಕ್ರಮಗಳನ್ನು ಜಾರಿ ಮಾಡಿದೆ. ಹೀಗಾಗಿ, ನಕ್ಸಲರ ಪ್ರಾಬಲ್ಯದ ಪ್ರದೇಶ ಗಣನೀಯವಾಗಿ ಕುಗ್ಗಿದೆ. ನಕ್ಸಲ್ ನಿಯಂತ್ರಣದಲ್ಲಿ ಭದ್ರತಾ ಪಡೆಗಳ ಪಾತ್ರವು ಶ್ಲಾಘನೀಯ. ಜೀವದ ಹಂಗು ತೊರೆದು ಹೋರಾಟ ನಡೆಸುವ ಭದ್ರತಾ ಸಿಬ್ಬಂದಿಯ ಜೀವದ ಬಗ್ಗೆ ಅಸಡ್ಡೆ ತೋರಿದ್ದು ಸರಿಯಲ್ಲ. ಅರನ್‌ಪುರ ದಾಳಿಯ ಕುರಿತು ಸಮಗ್ರವಾದ ತನಿಖೆ ನಡೆಯಬೇಕು. ಭದ್ರತಾ ಲೋಪ ಆಗಿದೆಯೇ, ಗುಪ್ತಚರ ಮಾಹಿತಿಯನ್ನು ಲಘುವಾಗಿ ಪರಿಗಣಿಸಲಾಗಿದೆಯೇ ಎಂಬುದರ ಕುರಿತೂ ತನಿಖೆ ಆಗಬೇಕು. ಭದ್ರತಾ ಲೋಪವಾಗಿದ್ದರೆ ಅದಕ್ಕೆ ಕಾರಣರಾದವರ ಮೇಲೆ ಕಠಿಣವಾದ ಕ್ರಮ ಕೈಗೊಳ್ಳಬೇಕು. ಇಂತಹ ದಾಳಿಗಳಿಗೆ ಮುಂದೆಂದೂ ಅವಕಾಶ ಸಿಗಬಾರದು. ಅಂತಹ ಕ್ರಮ ಕೈಗೊಳ್ಳಬೇಕು. ಯಾವುದೇ ಲೋಪಗಳಿಗೆ ಅವಕಾಶವಿರದ ರೀತಿಯಲ್ಲಿ ಕಾರ್ಯಾಚರಣೆ ನಿಯಮ ರೂಪಿಸಬೇಕು ಮತ್ತು ಕಟ್ಟುನಿಟ್ಟಾಗಿ ಪಾಲಿಸಬೇಕು.

ದಿನದ ಟ್ವೀಟ್

ನೆಕ್ಕಿ ನೋಡಲು...!

ಹಾವನ್ನು ನೆಕ್ಕಿ ನೋಡೋಕೆ ಅದೇನು ಉಪ್ಪಿನಕಾಯಿನಾ? ಸೋಲಿನ ಹತಾಶೆಯಲ್ಲಿ ಕಾಂಗ್ರೆಸ್ ಅಧ್ಯಕ್ಷರು ತಲೆ ಬುಡ ಇಲ್ಲದ ಮಾತನಾಡುತ್ತಿದ್ದಾರೆ!

(ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಗೆ ಪ್ರತಿಕ್ರಿಯೆ)



ತೇಜಸ್ವಿ ಸೂರ್ಯ, ಬಿಜೆಪಿ ಸಂಸದ

ಕಿಡಿನುಡಿ

ನರೇಂದ್ರ ಮೋದಿ ಅವರು ಬಿಜೆಪಿ ಕಾರ್ಯಕರ್ತರನ್ನು ಉದ್ದೇಶಿಸಿ ವರ್ಚುವಲ್ ಮೂಲಕ ಮಾತನಾಡಿದ್ದಾರೆ. ಈ ಸಮಯದಲ್ಲಿ ರಾಜ್ಯದಲ್ಲಿನ ಭ್ರಷ್ಟಾಚಾರದ ಬಗ್ಗೆ ಚಕಾರ ಎತ್ತಿಲ್ಲ. ತಾವು ಪ್ರಧಾನಿಯಾಗುವ ಮೊದಲು ದೇಶದಲ್ಲಿ ವಿವಿಧ ಯೋಜನೆಗಳಡಿ ಒಂದು ಮನೆ ಕಟ್ಟಿಸಿಕೊಡಲು 300 ದಿನ ಬೇಕಾಗಿತ್ತು, ಈಗ 100 ದಿನಕ್ಕೆ ಒಂದು ಮನೆ ಕಟ್ಟುತ್ತಿದ್ದೇವೆ ಎಂದು ಹೇಳಿಕೊಂಡಿದ್ದಾರೆ. ರಾಜ್ಯದ ಎಷ್ಟು ಜನರಿಗೆ ಮನೆ ಕಟ್ಟಿಕೊಟ್ಟಿದ್ದಾರೆ ಎಂಬುದನ್ನು ಹೇಳಲಿ.



ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಮುಖಂಡ

25 ವರ್ಷಗಳ ಹಿಂದೆ

ಮಂಗಳವಾರ, 28-4-1998

• ಕಾಂಗ್ರೆಸ್ ಕಾರ್ಯಕಾರಿಣಿಗೆ ಪೈಲಟ್, ಸಂಗ್ಮಾ, ಶಿಂಧೆ

ನವದೆಹಲಿ, ಏ. 27– ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಉಪಾಧ್ಯಕ್ಷ ಸ್ಥಾನವನ್ನು ರದ್ದು ಮಾಡಿರುವ ಸೋನಿಯಾ ಗಾಂಧಿ, ಕಾಂಗ್ರೆಸ್ ಕಾರ್ಯಕಾರಿಣಿಯಿಂದ ಮೂವರನ್ನು ಕೈಬಿಟ್ಟು ಹೊಸದಾಗಿ ಮೂವರನ್ನು ಸೇರ್ಪಡೆ ಮಾಡುವ ಮೂಲಕ ಈ ಸಮಿತಿಯನ್ನು ಪುನರ್ರಚಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ಉನ್ನತ ತೀರ್ಮಾನಗಳ ಸಮಿತಿಯಾದ ಕಾರ್ಯಕಾರಿಣಿಗೆ ಈ ಹಿಂದೆಯೇ ನಾಮಕರಣಗೊಂಡಿದ್ದ ಡಾ. ಮನಮೋಹನ್ ಸಿಂಗ್, ಎ.ಕೆ.ಆಂಟನಿ, ಆಸ್ಕರ್ ಫರ್ನಾಂಡಿಸ್, ಮೀರಾ ಕುಮಾರ್ ಅವರನ್ನು ಉಳಿಸಿಕೊಂಡು ಹೊಸದಾಗಿ ಪಿ.ಎ.ಸಂಗ್ಮಾ, ಸುಶೀಲ್ ಕುಮಾರ್ ಶಿಂಧೆ ಮತ್ತು ರಾಜೇಶ್ ಪೈಲಟ್ ಅವರನ್ನು ನಾಮಕರಣ ಮಾಡಲಾಗಿದೆ.

ಕಲ್ಕತ್ತಾ ಎಐಸಿಸಿ ಅಧಿವೇಶನದಲ್ಲಿ ಕಾರ್ಯಕಾರಿಣಿಗೆ ಆಯ್ಕೆಗೊಂಡಿರುವ ಅಹಮದ್ ಪಟೇಲ್, ಅರ್ಜುನ್ ಸಿಂಗ್, ಗುಲಾಂ ನಬಿ ಆಜಾದ್, ಜಿತೇಂದ್ರ ಪ್ರಸಾದ್, ಮಾಧವರಾವ್ ಸಿಂಧ್ಯಾ, ಪ್ರಣವ್ ಕುಮಾರ್ ಮುಖರ್ಜಿ, ಆರ್.ಕೆ.ಧವನ್, ಶರದ್ ಪವಾರ್, ತಾರಿಕ್ ಅನ್ವರ್ ಮತ್ತು ಕೆ.ವಿಜಯ ಭಾಸ್ಕರ ರೆಡ್ಡಿ ಅವರನ್ನು ಸೋನಿಯಾ ಬದಲಾವಣೆ ಮಾಡಿಲ್ಲ.

• ಅಡ್ವಾಣಿ ಹೇಳಿಕೆಗೆ ವಿರೋಧ ಪಕ್ಷಗಳ ಟೀಕೆ

ನವದೆಹಲಿ, ಏ. 27 (ಪಿಟಿಐ, ಯುಎನ್ಐ)– ‘ಸಂವಿಧಾನದ ಪರಾಮರ್ಶೆ ಆಯೋಗವು ಅಧ್ಯಕ್ಷ ಮಾದರಿ ಸರ್ಕಾರ ವ್ಯವಸ್ಥೆ ಸಾಧ್ಯತೆ ಕುರಿತು ಪರಿಶೀಲಿಸಲಿದೆ ಎಂಬ ಗೃಹ ಸಚಿವ ಎಲ್.ಕೆ.ಅಡ್ವಾಣಿ ಅವರ ಹೇಳಿಕೆಯ ಹಿಂದೆ ಸಂಸದೀಯ ವ್ಯವಸ್ಥೆಯನ್ನು ಮೊಟಕುಗೊಳಿಸುವ ಹುನ್ನಾರವಿದೆ’ ಎಂದು ವಿರೋಧ ಪಕ್ಷಗಳು ಇಂದು ಟೀಕಿಸಿವೆ.

50 ವರ್ಷಗಳ ಹಿಂದೆ

ಶನಿವಾರ, 28-4-1973

• ಶ್ರೇಷ್ಠ ನ್ಯಾಯಮೂರ್ತಿ ನೇಮಕ ಪ್ರತಿಭಟಿಸಿ ಸಭಾತ್ಯಾಗ

ಬೆಂಗಳೂರು, ಏ. 27– ‘ಹಿರಿಯ ನ್ಯಾಯಮೂರ್ತಿಗಳ ಸೇವಾ ಹಿರಿತನಕ್ಕೆ’ ಧಕ್ಕೆ ತಂದು ಸರ್ವೋಚ್ಚ ನ್ಯಾಯಾಲಯದ ಶ್ರೇಷ್ಠ ನ್ಯಾಯಮೂರ್ತಿಯನ್ನು ನೇಮಿಸಿರುವ ಬಗ್ಗೆ ಉಭಯ ಸದನಗಳಲ್ಲೂ ವಿರೋಧ ಪಕ್ಷಗಳು ಪ್ರತಿಭಟನೆ ವ್ಯಕ್ತಪಡಿಸಿ ಸಭಾತ್ಯಾಗ ಮಾಡಿದವು.

ವಿಧಾನ ಪರಿಷತ್ತಿನಲ್ಲಿ ವಿರೋಧಿ ಸದಸ್ಯರು ಸಭಾತ್ಯಾಗ ಮಾಡಿದುದೇ ಅಲ್ಲದೆ, ಇಂದಿಗೆ ಸಭೆಯನ್ನೂ ಬಹಿಷ್ಕರಿಸಿದರು.

ಈ ವಿಷಯವನ್ನು ಚರ್ಚಿಸಲು ಸದನಗಳಿಗೆ ಅಧಿಕಾರ ವ್ಯಾಪ್ತಿಯಿಲ್ಲವೆಂದು ಅಧ್ಯಕ್ಷರು ಹಾಗೂ ಸಭಾಪತಿ ತಿಳಿಸಿದರೂ ಉಭಯ ಸದನಗಳಲ್ಲೂ ನಡೆದ ಬಿಸಿ ಚರ್ಚೆಯ ಕಾಲದಲ್ಲಿ ಉಪಯೋಗಿಸಲಾದ ಕೆಲ ಪದಗಳನ್ನು ಕಡತದಿಂದ ತೆಗೆದು ಹಾಕಲಾಯಿತು.

ವಿಧಾನಸಭೆಯಲ್ಲಿ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಸಭಾತ್ಯಾಗದಲ್ಲಿ ಭಾಗವಹಿಸಲಿಲ್ಲ.

ವಿಧಾನಸಭೆಯಲ್ಲಿ ‘ನ್ಯಾಯಾಂಗಕ್ಕೆ ಕಾರ್ಯಾಂಗ ಎಸಗಿರುವ ಅಪಚಾರವನ್ನು ಪ್ರತಿಭಟಿಸಿ’ ಸಭಾತ್ಯಾಗ ಮಾಡುವ ಮೊದಲು, ನೇಮಕದ ಹೊಸ ಸಂಪ್ರದಾಯಕ್ಕೆ ಶ್ರೀ ಎಚ್.ಡಿ.ದೇವೇಗೌಡ ಅವರು ತಮ್ಮ ಅಸಮ್ಮತಿ ವ್ಯಕ್ತಪಡಿಸಿದರು.

ನಾಯಕತ್ವಕ್ಕಾಗಿನ ತಿಕ್ಕಾಟದಲ್ಲಿ ಬಿಜೆಪಿ, ಕಾಂಗ್ರೆಸ್ಸಿನಲ್ಲಿ ನಡೆದಿರುವ ಛಾಯಾಸಮರ ಒಂದು ಉಪಕಥೆಯಂತಿದೆ

ಚುನಾವಣೆಯಲ್ಲಿ ನಾಯಕತ್ವದ ಬಾಜಿ!



ಜನರಾಜಕಾರಣ

ಪ್ರೊ. ಸಂದೀಪ್ ಶಾಸ್ತ್ರಿ

ನಾಯಕ ಕೇಂದ್ರಿತ ಮಾದರಿಯಲ್ಲಿ ಚುನಾವಣಾ ಹಣಾಹಣಿಯಲ್ಲಿ ತೊಡಗುವುದು ಈಚಿನ ದಿನಗಳಲ್ಲಿ ನೆಚ್ಚಿನ ಆಯ್ಕೆಯಾಗುತ್ತಿದೆ ಎಂಬ ವಾದ ಇದೆ. 2014ರಲ್ಲಿ ನಡೆದ ಲೋಕನೀತಿ–ಸಿಎಸ್‌ಡಿಎಸ್ ಚುನಾವಣೋತ್ತರ ಸಮೀಕ್ಷೆಯಲ್ಲಿ ಭಾಗಿಯಾಗಿದ್ದ, ಬಿಜೆಪಿಗೆ ಮತ ಚಲಾಯಿಸಿದ ನಾಲ್ಕನೆಯ ಒಂದರಷ್ಟು ಮಂದಿ ತಾವು ಆ ಪಕ್ಷದ ಪರವಾಗಿ ಮತ ಚಲಾವಣೆ ಮಾಡಿದ್ದಕ್ಕೆ ಕಾರಣ ನರೇಂದ್ರ ಮೋದಿ ಅವರು ಪಕ್ಷದ ಪ್ರಧಾನಿ ಅಭ್ಯರ್ಥಿಯಾಗಿದ್ದುದು ಎಂದು ಹೇಳಿದ್ದರು. 2019ರಲ್ಲಿ ಹೀಗೆ ಮತ ಚಲಾವಣೆ ಮಾಡಿದವರ ಪ್ರಮಾಣವು ಮೂರನೆಯ ಒಂದರಷ್ಟಕ್ಕೆ ಜಿಗಿಯಿತು. ಲೋಕಸಭಾ ಚುನಾವಣೆಗಳು ಹೆಚ್ಚೆಚ್ಚು ಪ್ರಮಾಣದಲ್ಲಿ, ತಮ್ಮ ಇಷ್ಟದ ಪ್ರಧಾನಿ ಯಾರಾಗಬೇಕು ಎಂಬುದನ್ನು ಹೇಳುವುದರ ಕಡೆ ವಾಲುತ್ತಿರುವುದನ್ನು ಇದು ಸ್ಪಷ್ಟವಾಗಿ ಸೂಚಿಸುತ್ತಿದೆ. ರಾಜ್ಯಗಳ ಮಟ್ಟದಲ್ಲಿ ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿಯೂ ಇದೇ ರೀತಿ ಆಗುತ್ತಿದೆಯೇ? ಕರ್ನಾಟಕದಲ್ಲಿ ನಡೆದಿರುವ ಚುನಾವಣಾ ಹಣಾಹಣಿಯು ಏನನ್ನು ಸೂಚಿಸುತ್ತಿದೆ?

ಚುನಾವಣಾ ಕಣದಲ್ಲಿ ಇರುವ ಎರಡು ಪ್ರಮುಖ ಪಕ್ಷಗಳು ಬಿಜೆಪಿ ಮತ್ತು ಕಾಂಗ್ರೆಸ್. ಈ ಎರಡೂ ಪಕ್ಷಗಳು ತಮ್ಮ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದನ್ನು ಘೋಷಿಸಿಲ್ಲ. ತಾವು ಬಹುಮತ ಸಾಧಿಸಿದ ಸಂದರ್ಭದಲ್ಲಿ, ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬುದನ್ನು ಈ ಎರಡು ಪಕ್ಷಗಳು ಹೇಳದೇ ಇರುವುದಕ್ಕೆ ಭಿನ್ನವಾದ ಕಾರಣಗಳು ಇವೆ. ತನ್ನ ಮುಖ್ಯಮಂತ್ರಿ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಎಂಬುದರಲ್ಲಿ ಜೆಡಿಎಸ್ ಪಕ್ಷಕ್ಕೆ ಯಾವ ಗೊಂದಲವೂ ಇಲ್ಲ. ಆದರೆ, ಈಗಿನ ಸಂದರ್ಭದಲ್ಲಿ ಜೆಡಿಎಸ್ ಪಕ್ಷವು ಬಹುಮತ ಸಾಧಿಸುವ ಸಾಧ್ಯತೆ ಬಹಳ ಕಡಿಮೆ. ಚುನಾವಣೆಯ ನಂತರದಲ್ಲಿ ವಿಧಾನಸಭೆಯಲ್ಲಿ ಯಾವ ಪಕ್ಷಕ್ಕೂ ಬಹುಮತ ಸಿಗದೇ ಇದ್ದ ಸಂದರ್ಭದಲ್ಲಿ, ಜೆಡಿಎಸ್ ಪಕ್ಷವು ಕಿಂಗ್‌ಮೇಕರ್ ಆಗಬಹುದು. ಆಗ ಆ ಪಕ್ಷದ ನಾಯಕನೇ ‘ಕಿಂಗ್’ ಕೂಡ ಆಗುತ್ತಾನೆ ಎಂಬುದರಲ್ಲಿ ಅನುಮಾನವಿಲ್ಲ.

ಎರಡು ಪ್ರಮುಖ ರಾಜಕೀಯ ಪಕ್ಷಗಳು ಕಟ್ಟಿರುವ ನಾಯಕತ್ವದ ಸಂಕಥನದ ಕಡೆ ಮತ್ತೆ ಗಮನ ಹರಿಸುವುದಾದರೆ, ಪಕ್ಷಗಳಲ್ಲಿ ಒಳಗೊಳಗೇ ಕೆಲಸ ಮಾಡುತ್ತಿರುವ ಕೆಲವು ಶಕ್ತಿಗಳು ಕಾಣುತ್ತವೆ. ಅವುಗಳ ಅವಲೋಕನವು ಕುತೂಹಲಕಾರಿಯೂ ಹೌದು. ಮೊದಲನೆಯದಾಗಿ, ಬಿಜೆಪಿ ಕಡೆ ಗಮನ ಹರಿಸೋಣ. ಬಿಜೆಪಿಯು ದೇಶದ ಎಲ್ಲೆಡೆ ಚುನಾವಣೆ ಸಂದರ್ಭದಲ್ಲಿ ಮುಖ್ಯಮಂತ್ರಿ ಅಭ್ಯರ್ಥಿ ಯಾರು ಎಂಬುದನ್ನು ಸ್ಪಷ್ಟವಾಗಿ ಹೇಳಿದೆ (ಕರ್ನಾಟಕದಲ್ಲಿಯೂ ಅದು ಕಳೆದ ಬಾರಿ ಈ ವಿಚಾರವಾಗಿ ಸ್ಪಷ್ಟ ಘೋಷಣೆ ಮಾಡಿತ್ತು). ಕೆಲವು ಸಂದರ್ಭಗಳಲ್ಲಿ ಪಕ್ಷವು, ಮುಖ್ಯಮಂತ್ರಿ ಯಾರಾಗುತ್ತಾರೆ ಎಂಬುದನ್ನು ಚುನಾವಣಾ ನಂತರದ ಹಂತದಲ್ಲಿ ತೀರ್ಮಾನಿಸಿದೆ. ಈ ಬಾರಿ ಕರ್ನಾಟಕದಲ್ಲಿ ಬಿಜೆಪಿಯ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರು ಚುನಾವಣಾ ಅಭಿಯಾನದಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಆದರೆ ಈ ಬಾರಿ ಅವರು ಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿ ಅಲ್ಲ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಪಕ್ಷದ ಚುನಾವಣಾ ಸಮಿತಿಯ ಮುಖ್ಯಸ್ಥರಾಗಿ ಪ್ರಚಾರ ಅಭಿಯಾನದ ಅವಿಭಾಜ್ಯ ಅಂಗವಾಗಿದ್ದರೂ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಅಧಿಕೃತವಾಗಿ ಘೋಷಿಸಿಲ್ಲ.

ಕಳೆದ ಕೆಲವು ದಿನಗಳಿಂದ ಪಕ್ಷದ ಒಳಗೆ ಹಲವು ಧ್ವನಿಗಳು ಕೇಳಿಬಂದಿವೆ, ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಬೇಕು ಎಂದು ಅವು ಪಕ್ಷದ ವರಿಷ್ಠರ ಮೇಲೆ ಒತ್ತಡ ತಂದಿವೆ. ಇಲ್ಲಿ ಜಾತಿಯು ಪ್ರಬಲವಾಗಿ ಕೆಲಸ ಮಾಡುತ್ತಿದೆ. ಲಿಂಗಾಯತ ಸಮುದಾಯದ ಮತಗಳನ್ನು ಉಳಿಸಿಕೊಳ್ಳಬೇಕು ಎಂದಾದರೆ, ಪಕ್ಷವು ಮುಖ್ಯಮಂತ್ರಿ ಅಭ್ಯರ್ಥಿಯನ್ನು ಘೋಷಿಸಬೇಕಿರುವುದು ಮುಖ್ಯವಾದದ್ದು ಎಂದು ಲಿಂಗಾಯತ ಸಮುದಾಯಕ್ಕೆ ಸೇರಿದ, ಬಿಜೆಪಿಯ ಕೆಲವು ನಾಯಕರಿಗೆ ಅನ್ನಿಸಿದೆ. ಅದರಲ್ಲೂ, ಈ ಸಮುದಾಯಕ್ಕೆ ಸೇರಿದ ಕೆಲವು ಪ್ರಮುಖ ನಾಯಕರು ಪಕ್ಷದಿಂದ ಹೊರನಡೆದ ನಂತರದಲ್ಲಿ ಈ ರೀತಿ ಅನ್ನಿಸಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ, ಪಕ್ಷದಲ್ಲಿ ಬೇರೆ ಹೆಸರುಗಳನ್ನು ಸೂಚಿಸುವ ಪರ್ಯಾಯ ದನಿಗಳೂ ಕೇಳಿಬಂದಿವೆ. ಬಿಜೆಪಿಯ ಅಸ್ತಿತ್ವವು ಲಿಂಗಾಯತ ಸಮುದಾಯದ ಆಚೆಗೂ ವಿಸ್ತರಣೆ ಕಾಣಬೇಕು ಎಂದು ಹೇಳುವವರು, ಲಿಂಗಾಯತ ಸಮುದಾಯಕ್ಕೆ ಸೇರಿರದ ವ್ಯಕ್ತಿಯೊಬ್ಬರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ. ಪಕ್ಷದ ಹಿರಿಯ ನಾಯಕ ಕೆ.ಎಸ್. ಈಶ್ವರಪ್ಪ (ಇವರು ಇತರೆ ಹಿಂದುಳಿದ ವರ್ಗಕ್ಕೆ ಸೇರಿದವರು), ಸಿ.ಟಿ. ರವಿ (ಒಕ್ಕಲಿಗ ಸಮುದಾಯಕ್ಕೆ ಸೇರಿದವರು) ಪಕ್ಷದಿಂದ ಮುಖ್ಯಮಂತ್ರಿ ಆಗಲಿ ಎಂದು ಆಶಿಸಿದ್ದಾರೆ.

ನಾಯಕರು ಒಂದಲ್ಲ ಒಂದು ಹೆಸರನ್ನು ತೇಲಿಬಿಡುವುದು, ಪ್ರತಿಸ್ಪರ್ಧಿ ಹೆಸರಿನ ಪ್ರಭಾವವನ್ನು ತಗ್ಗಿಸುವ ಉದ್ದೇಶದಿಂದಲೋ ಎಂಬುದು ಸ್ಪಷ್ಟವಿಲ್ಲ! ಹೀಗಿದ್ದರೂ, ಬಿಜೆಪಿಯಲ್ಲಿ ಇದುವರೆಗೆ ಆಗಿರುವ ಪ್ರಸಂಗಗಳನ್ನು ಗಮನಿಸಿ ಹೇಳುವುದಾದರೆ, ಅದರಲ್ಲೂ ಮುಖ್ಯವಾಗಿ ಕಳೆದ ಒಂಬತ್ತು ವರ್ಷಗಳಲ್ಲಿ ನಡೆದ ಬೆಳವಣಿಗೆಗಳ ಆಧಾರದಲ್ಲಿ ಹೇಳುವುದಾದಲ್ಲಿ, ಪ್ರಮುಖ ನೇಮಕಗಳ ಸಂದರ್ಭದಲ್ಲಿ ಪಕ್ಷದ ನಾಯಕತ್ವವು ಅಚ್ಚರಿಯ ಹೆಸರನ್ನು ಮುನ್ನೆಲೆಗೆ ತಂದಿರುವುದೇ ಹೆಚ್ಚು. ಹೀಗಾಗಿ, ಬಿಜೆಪಿಯಲ್ಲಿ ಮುಖ್ಯಮಂತ್ರಿ ಆಗಲು ಬಯಸುತ್ತಿರುವವರು (ಅಂದರೆ, ಬಿಜೆಪಿಗೆ ಬಹುಮತ ಸಿಕ್ಕರೆ, ಮುಖ್ಯಮಂತ್ರಿ ತಾವಾಗುತ್ತೇವೆ ಎಂದು ಭಾವಿಸಿರುವವರು) ತಮ್ಮ ಹೆಸರು ಮಾಧ್ಯಮಗಳಲ್ಲಿ ಹೆಚ್ಚು ಪ್ರಚಾರಕ್ಕೆ ಬರದೇ ಇರಲಿ ಎಂದು ಬೇಡಿಕೊಳ್ಳುತ್ತಿರಬಹುದು! ಏಕೆಂದರೆ, ಈ ರೀತಿ ಹೆಸರು ಮಾಧ್ಯಮಗಳ ಮೂಲಕ ಪ್ರಚಾರ ಪಡೆದರೆ ಆಗ ಆ ಹೆಸರು ‘ಅಚ್ಚರಿಯ ಆಯ್ಕೆ’ಯಾಗಿ ಬರುವ ಸಾಧ್ಯತೆ ಕಡಿಮೆ ಆಗುತ್ತದೆ!




ಕಾಂಗ್ರೆಸ್ ಪಕ್ಷದಲ್ಲಿನ ಚಿತ್ರಣ ಕೂಡ ಬಿಜೆಪಿಯಲ್ಲಿನ ಚಿತ್ರಣದಷ್ಟೇ ಕುತೂಹಲ ಮೂಡಿಸುವಂತೆ ಇದೆ. ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಬಹುಮತ ದೊರೆತಲ್ಲಿ ಮುಖ್ಯಮಂತ್ರಿ ಆಗುವ ಆಕಾಂಕ್ಷೆ ತಮಗಿದೆ ಎಂದು ಕೆಪಿಸಿಸಿ ಅಧ್ಯಕ್ಷ (ಡಿ.ಕೆ.ಶಿವಕುಮಾರ್) ಹಾಗೂ ವಿಧಾನಸಭೆಯ ವಿರೋಧ ಪಕ್ಷದ ನಾಯಕ (ಸಿದ್ದರಾಮಯ್ಯ) ಸ್ಪಷ್ಟಪಡಿಸಿದ್ದಾರೆ. ಆದರೆ ತಾವಿಬ್ಬರೂ ಜೊತೆಯಾಗಿ ಪ್ರಚಾರ ನಡೆಸದೇ ಇದ್ದರೆ, ಪಕ್ಷವು ಚುನಾವಣೆಯಲ್ಲಿ ಗೆಲ್ಲುವ ಸಾಧ್ಯತೆ ಮೇಲೆ ಗಂಭೀರ ಪರಿಣಾಮ ಉಂಟಾಗಬಹುದು ಎಂಬುದು ಇಬ್ಬರಿಗೂ ಗೊತ್ತಿದೆ. ಕೋಲಾರದಲ್ಲಿ ಮಾಡಿದ ಭಾಷಣದಲ್ಲಿ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, ಆದ್ಯತೆಯು ಚುನಾವಣೆಯನ್ನು ಗೆಲ್ಲುವುದಾಗಿರಬೇಕು, ಇತರ ಎಲ್ಲ ವಿಷಯಗಳನ್ನು ನಂತರದಲ್ಲಿ ಬಗೆಹರಿಸಿಕೊಳ್ಳಬಹುದು ಎಂಬುದನ್ನು ಪಕ್ಷದ ಎಲ್ಲರಿಗೂ ಸ್ಪಷ್ಟವಾಗಿ ಹೇಳಿದ್ದಾರೆ.

ಕಾಂಗ್ರೆಸ್ ಪಕ್ಷದಲ್ಲಿನ ಎರಡು ಬೆಳವಣಿಗೆಗಳ ಬಗ್ಗೆ ಇಲ್ಲಿ ಗಮನ ಹರಿಸಬೇಕು. ಮೊದಲನೆಯದು, ಪಕ್ಷದ ಅಭ್ಯರ್ಥಿಗಳ ಹೆಸರುಗಳನ್ನು ಅಂತಿಮಗೊಳಿಸುವ ಹಂತದಲ್ಲಿ, ಸಿದ್ದರಾಮಯ್ಯ ಹಾಗೂ ಶಿವಕುಮಾರ್ ಬೆಂಬಲಿಗರ ನಡುವೆ ಹಣಾಹಣಿ ಏರ್ಪಟ್ಟಿತ್ತು. ಟಿಕೆಟ್ ಹಂಚಿಕೆಯಲ್ಲಿ ಎರಡೂ ಕಡೆಯವರನ್ನು ಸಮಾಧಾನಪಡಿಸಲಾಗಿದೆ ಎಂದು ವರದಿಗಳು ಹೇಳುತ್ತವೆ. ಹೀಗಿದ್ದರೂ, ಚುನಾವಣೆ ಹೊತ್ತಿನಲ್ಲಿ ಬಂಡಾಯ ಚಟುವಟಿಕೆಗಳ ಪರಿಣಾಮವನ್ನು ತಳ್ಳಿಹಾಕಲು ಆಗದು. ಮುಖ್ಯಮಂತ್ರಿ ಸ್ಥಾನಕ್ಕೆ ಮಲ್ಲಿಕಾರ್ಜುನ ಖರ್ಗೆ ಅವರನ್ನು ಬೆಂಬಲಿಸುವ ಮೂಲಕ ಶಿವಕುಮಾರ್ ರಾಜಕೀಯ ವಲಯದಲ್ಲಿ ಅಲೆಗಳನ್ನು ಸೃಷ್ಟಿಸಿದರು. ವಾಸ್ತವದಲ್ಲಿ ಇದು ಎಐಸಿಸಿ ಅಧ್ಯಕ್ಷರನ್ನು ಬೆಂಬಲಿಸಿ ಆಡಿದ್ದ ಮಾತಾಗಿರಲಿಲ್ಲ; ಬದಲಿಗೆ, ಮುಖ್ಯಮಂತ್ರಿ ಸ್ಥಾನದ ಆಕಾಂಕ್ಷಿ ಆಗಿರುವ ತಮ್ಮ ಎದುರಾಳಿ ಸಿದ್ದರಾಮಯ್ಯ ಅವರಿಗೆ ನೀಡಿದ ಸಂದೇಶವಾಗಿತ್ತು ಎಂದು ಹಲವರು ಅರ್ಥೈಸಿದರು. ಹತ್ತು ಹಲವು ಅಡೆತಡೆಗಳು ಇರುವ ಓಟದ ಸ್ಪರ್ಧೆಯಲ್ಲಿ ಪಕ್ಷವು ಮೊದಲ ಅಡೆತಡೆಯನ್ನು (ಅಂದರೆ ಟಿಕೆಟ್ ಹಂಚಿಕೆ) ದಾಟಿ ಬಂದಿದೆ. ಮುಖ್ಯಮಂತ್ರಿ ವಿಚಾರದಲ್ಲಿ ತೀರ್ಮಾನ ಕೈಗೊಳ್ಳುವ ಮೊದಲು, ಚುನಾವಣಾ ಅಭಿಯಾನದಲ್ಲಿ ಒಗ್ಗಟ್ಟು ಕಾಯ್ದುಕೊಳ್ಳುವುದು ಹಾಗೂ ಬಹುಮತ ಗಿಟ್ಟಿಸುವುದು ಎರಡು ಅಡೆತಡೆಗಳಾಗಿರುವಂತೆ ಕಾಣುತ್ತಿವೆ. ಈ ಸ್ಪರ್ಧೆಯಲ್ಲಿನ ಪ್ರತಿ ಅಡೆತಡೆಯೂ ಒಂದಿಷ್ಟು ಹಠಾತ್ ತಿರುವುಗಳನ್ನು ಮತ್ತು ಅನಿರೀಕ್ಷಿತ ಬದಲಾವಣೆಗಳನ್ನು ಹೊಂದಿರುತ್ತದೆ.

ಹೀಗಾಗಿ, ನಾಯಕತ್ವಕ್ಕಾಗಿನ ತಿಕ್ಕಾಟದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ಸಿನಲ್ಲಿ ನಡೆದಿರುವ ಛಾಯಾಸಮರವು ಗಮನ ಸೆಳೆದಿರುವ ಉಪಕಥೆಯಂತೆ ಇದೆ. ಅಂತಿಮ ಫಲಿತಾಂಶ ಯಾವ ರೀತಿ ಇರಲಿದೆ, ಪಕ್ಷವೊಂದು ಪಡೆಯಬಹುದಾದ ಬಹುಮತದ ಸ್ವರೂಪ ಅಥವಾ ಯಾವುದೇ ಪಕ್ಷಕ್ಕೆ ಬಹುಮತ ಸಿಗದೇ ಇರುವ ಸಾಧ್ಯತೆಯು ನಾಯಕತ್ವಕ್ಕಾಗಿ ನಡೆದಿರುವ ಬಾಜಿಯ ಮೇಲೆ ನಿರ್ಣಾಯಕ ಪ್ರಭಾವ ಬೀರಲಿವೆ.

ಚುರುಮುರಿ



ದೀಪ ಮತ್ತು ಎಣ್ಣೆ!

• ಬಿ.ಎನ್.ಮಲ್ಲೇಶ್

‘ಗುರೂ... ವಿಷ್ಯ ಗೊತ್ತಾತ? ಎಲೆಕ್ಷನ್‌ನಲ್ಲಿ ನಮ್ ಗುಡ್ಡೆ ಡೆಪಾಜಿಟ್ ಕಳ್ಕಂಡ...’ ತೆಪರೇಸಿ ನಗುತ್ತ ಹೇಳಿದಾಗ ದುಬ್ಬೀರನಿಗೆ ಅರ್ಥವಾಗಲಿಲ್ಲ.

‘ಲೇಯ್, ಇನ್ನೂ ಎಲೆಕ್ಷನ್ನೇ ಆಗಿಲ್ಲ, ಆಗ್ಲೇ ಡೆಪಾಜಿಟ್ ಕಳ್ಕಂಡ ಅಂತೀಯಲ್ಲ, ತೆಲಿಗಿಲಿ ಸರಿ ಐತಿಲ್ಲೋ’.

‘ಅದೇ ಕಣಲೆ, ಗುಡ್ಡೆ ಪಕ್ಷೇತರ ಅಭ್ಯರ್ಥಿಯಾಗಿ ನಿಂತಿದ್ನಲ್ಲ, ನಾಮಪತ್ರ ವಾಪಸ್ ತಗೋ, ಗೂಟದ ಕಾರು ಕೊಡಿಸ್ತೀನಿ, ಲಕ್ಷಲಕ್ಷ ರೊಕ್ಕ ಕೊಡ್ತೀನಿ ಅಂತ ಯಾರಾದ್ರು ಬರಬೋದು ಅಂತ ಕಾದ್ನಂತೆ. ಆದ್ರೆ ಲಾಸ್ಟ್ ಮೊಮೆಂಟ್ ತಂಕ ಯಾರೂ ಕ್ಯಾರೆ ಅನ್ಲಿಲ್ಲಂತೆ. ಈಗ ಕಣದಲ್ಲಿ ಉಳ್ಕಂಡು ಒದ್ದಾಡ್ತದಾನೆ. ಮತ್ತೆ ಡೆಪಾಜಿಟ್ ಹೋದಂಗೆ ತಾನೆ?’

‘ಹೌದೇನೋ ಗುಡ್ಡೆ? ನಮಗೊಂದ್ ಮಾತು ಹೇಳಬಾರ್ದಾ? ಹೋಗ್ಲಿ ಬಿಡು, ಯಾವ ಸಿಂಬಲ್ ಕೊಟ್ಟಿದಾರೆ?’

ಗುಡ್ಡೆ ಮಾತಾಡಲಿಲ್ಲ.

‘ಇನ್ನೇನು, ಕಡ್ಡಿಪೆಟಿಗೇನೋ ಇಸ್ತ್ರಿ ಪೆಟಿಗೇನೋ ಕೊಟ್ಟಿರ್ತಾರೆ, ಅದ್ರ ಬದ್ಲು ಹೆಲ್ಮೆಟ್ ಕೊಟ್ಟಿದ್ರೆ ಹೆಂಡ್ತಿ ಹೊಡೆತದಿಂದ ತಪ್ಪಿಸ್ಕಾಬೋದಿತ್ತು’ ಕೊಟ್ರೇಶಿ ಕಿಸಕ್ಕೆಂದ.

‘ಅಷ್ಟರಲ್ಲಿ ಗುಡ್ಡೆ ಚೆಡ್ಡಿದೋಸ್ತ್ ಗೌಸು ಓಡುತ್ತ ಬಂದು ‘ಅರೆ ಗುಡ್ಡೆ ಬೈ, ನೀ ಇಲ್ಲಿದೀಯ, ಅಲ್ಲಿ ನಿಂಗೆ ದೀಪ ಸಿಂಬಲ್ ಕೊಟ್ಟಿದಾರೆ’ ಎಂದ.

‘ಏನು, ದೀಪನಾ? ಗುಡ್ಡೆ ದೀಪ ಆರಿ ಹೋಗಿ ಬಾಳ ಹೊತ್ತಾತಲ್ಲೋ ಗೌಸು’ ಎಂದ ತೆಪರೇಸಿ.

‘ಯಾಕೆ ಬೈ, ಕ್ಯಾ ಹುವಾ?’

‘ಕ್ಯಾ ಹುವಾ ಅಂದ್ರೆ? ಬರೀ ದೀಪ ಕೊಟ್ರೆ ಆತಾ? ಎಣ್ಣೆ ಯಾರು ಕೊಡ್ತಾರೆ?’

‘ಲೇಯ್, ಗುಡ್ಡೇನೇ ಒಂದು ದೀಪ ಇದ್ದಂಗೆ. ಅವನಿಗ್ಯಾಕೋ ಎಣ್ಣೆ? ಅವನ ಮೈಯಾಗೇನು ಕಮ್ಮಿ ಐತಾ? ಎಷ್ಟ್ ವರ್ಷದಿಂದ ಕುಡಿದಿದಾನೆ, ಒಂದ್ ಕಡ್ಡಿ ಗೀರಿದ್ರೆ ಸಾಕು, ಭಗ್ ಅಂತ ಹತ್ಕಳುತ್ತೆ...!’

ದುಬ್ಬೀರನ ಕೀಟಲೆಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ಸಂಗತ

ಉದ್ಯೋಗ ಸ್ಥಳದಲ್ಲಿ ಸುರಕ್ಷತೆ: ಏಕೆ? ಹೇಗೆ?

ಉದ್ಯೋಗ ಸ್ಥಳದಲ್ಲಿನ ಬಹುತೇಕ ಅಪಾಯಗಳನ್ನು ಸೂಕ್ತ, ಸುರಕ್ಷಿತ ಪರಿಕರಗಳ ಬಳಕೆಯಿಂದ ತಪ್ಪಿಸಬಹುದು. ಆದರೆ ಎಲ್ಲಾ ಕಡೆ ಇದು ಸಾಧ್ಯವಾಗುತ್ತಿಲ್ಲ, ಏಕೆ?

• ಡಾ. ವಿನಯ ಶ್ರೀನಿವಾಸ್

ರಾಜ್ಯ ಸಫಾಯಿ ಕರ್ಮಚಾರಿ ಆಯೋಗ ನಡೆಸಿದ ಸಮೀಕ್ಷೆಯ ವರದಿ ಕೆಲ ದಿನಗಳ ಹಿಂದೆ ಪತ್ರಿಕೆಯಲ್ಲಿ ಪ್ರಕಟವಾಗಿತ್ತು. ರಾಜ್ಯದಲ್ಲಿ ಇಂದಿಗೂ ಮ್ಯಾನ್ ಹೋಲ್‌ನೊಳಗೆ ಸ್ವತಃ ಇಳಿದು ಸ್ವಚ್ಛಗೊಳಿಸುವ 7,493 ಮಂದಿ ಇದ್ದಾರೆ ಎಂಬ ಅಂಶವನ್ನು ಸಮೀಕ್ಷೆ ತಿಳಿಸಿತ್ತು. ಒಳಚರಂಡಿಯ ಹೂಳು ತೆಗೆಯಲು ಡೀಸಿಲ್ಟಿಂಗ್, ಜೆಟ್ಟಿಂಗ್ ಯಂತ್ರಗಳನ್ನು ಬಳಸಬೇಕು, ಮ್ಯಾನ್‌ಹೋಲ್‌ಗೆ ಜನರನ್ನು ಇಳಿಸಬಾರದು ಎಂದು ಕಾನೂನು ಹೇಳಿದ್ದರೂ ಕೆಲವೆಡೆ ಹಳೆಯ ವಿಧಾನವೇ ಮುಂದುವರಿದಿದೆ.

ಅನಿವಾರ್ಯ ಸ್ಥಿತಿಯಲ್ಲಿ ಮ್ಯಾನ್‌ಹೋಲ್ ಮತ್ತು ಸೆಪ್ಟಿಕ್ ಟ್ಯಾಂಕ್‌ಗಳಿಗೆ ಜನರನ್ನು ಇಳಿಸುವಾಗ ಕನಿಷ್ಠ ಸುರಕ್ಷಾ ಪರಿಕರಗಳನ್ನೂ ಸ್ಥಳೀಯ ಸಂಸ್ಥೆಗಳು ಒದಗಿಸುವುದಿಲ್ಲವಂತೆ. ಪರಿಣಾಮ, ಇಂದಿಗೂ ರಾಜ್ಯದಲ್ಲಿ ಮ್ಯಾನ್ಯುವಲ್ ಸ್ಕ್ಯಾವೆಂಜರ್‌ಗಳು ಮೃತಪಡುವ ಸುದ್ದಿಯನ್ನು ಆಗಾಗ್ಗೆ ಕೇಳುತ್ತಲೇ ಇದ್ದೇವೆ. ನಿಮ್ಮ ಮನೆಗಳ ಮುಂದೆ ಕಸ ತುಂಬಿಕೊಂಡು ಹೋಗುವ ನಗರಸಭೆಯ ವಾಹನದೊಂದಿಗೆ ಬರುವ ನೌಕರರನ್ನು ಗಮನಿಸಿ. ಹೆಚ್ಚಿನವರು ಯಾವ ಸುರಕ್ಷಿತ ಪರಿಕರಗಳನ್ನೂ ಧರಿಸಿರುವುದಿಲ್ಲ. ಬರಿಕೈಗಳಿಂದಲೇ ಡಬ್ಬಿಯ ಕಸವನ್ನು ಬಳಿದು ವಾಹನಕ್ಕೆ ತುಂಬುತ್ತಿರುತ್ತಾರೆ. ಆಸ್ಪತ್ರೆಯ ಪ್ರಯೋಗಾಲಯಗಳಲ್ಲಿ ರೋಗಿಗಳ ರಕ್ತ, ಮೂತ್ರ, ಮಲದಂತಹ ಮಾದರಿಗಳನ್ನು ಸಂಗ್ರಹಿಸುವ ತಂತ್ರಜ್ಞರೂ ಅನೇಕ ಕಡೆ ಕೈಗವಸು, ಮಾಸ್ಕ್ ಇಲ್ಲದೆಯೇ ಕೆಲಸದಲ್ಲಿ ತೊಡಗಿರುತ್ತಾರೆ. ಇಂತಹ ಅಸಡ್ಡೆ ಮತ್ತು ನಿರ್ಲಕ್ಷ್ಯವನ್ನು ಹಲವಾರು ಉದ್ಯೋಗ ಸ್ಥಳಗಳಲ್ಲಿ ಕಾಣಬಹುದು.

ಬಹುತೇಕ ಅಪಾಯಗಳನ್ನು ಸೂಕ್ತ, ಸುರಕ್ಷಿತ ಪರಿಕರಗಳು ಅಥವಾ ನಿರ್ದಿಷ್ಟ ಉಪಕ್ರಮಗಳ ಬಳಕೆಯಿಂದ ತಪ್ಪಿಸಬಹುದು. ಆದರೆ ಎಲ್ಲಾ ಕಡೆ ಇದು ಸಾಧ್ಯವಾಗುತ್ತಿಲ್ಲ, ಏಕೆ? ಇದಕ್ಕೆ ಮುಖ್ಯ ಕಾರಣಗಳು ಮೂರು. ಮೊದಲನೆಯದು, ಸಮಸ್ಯೆಯ ಅರಿವು ನೌಕರರಿಗೆ, ಆಡಳಿತ ವರ್ಗದವರಿಗೆ ಇದ್ದರೂ, ಸುರಕ್ಷಿತ ಕ್ರಮಗಳಿಗೆ ಒತ್ತು ಕೊಡದಿರುವುದು. ಎರಡನೆಯದು, ಸೂಕ್ತ ಪರಿಕರಗಳನ್ನು ಒದಗಿಸಲು ಆಡಳಿತ ವರ್ಗದವರು ನಿರ್ಲಕ್ಷ್ಯ ತೋರುವುದು. ಮೂರನೆಯದು, ಆಡಳಿತ ನಿರ್ವಾಹಕರು ಸೂಕ್ತ ಸಲಕರಣೆಗಳನ್ನು ಪೂರೈಕೆ ಮಾಡಿದರೂ ಉಡಾಫೆಯ ಮನೋಭಾವದಿಂದಲೋ ಅಥವಾ ಅಪಾಯದ ಗಾಂಭೀರ್ಯವನ್ನು ಅರಿಯದೆಯೋ ನೌಕರರು ಅವುಗಳನ್ನು ಬಳಕೆ ಮಾಡದಿರುವುದು. ಮೂರು ಸನ್ನಿವೇಶಗಳಲ್ಲಿಯೂ ನೌಕರರ ಆರೋಗ್ಯ ಅಪಾಯದಲ್ಲಿರುತ್ತದೆ ಎಂಬುದನ್ನು ನೆನಪಿನಲ್ಲಿಡುವುದು ಮುಖ್ಯ.

ಸುರಕ್ಷತಾ ಕ್ರಮಗಳು ಎಂದೊಡನೆ ಅವು ದುಬಾರಿ, ಅವುಗಳ ಪೂರೈಕೆ ಕಠಿಣ ಎಂದೇನೂ ಇಲ್ಲ. ಎಷ್ಟೋ ಸ್ಥಳಗಳಲ್ಲಿ ಕೈ, ಕುತ್ತಿಗೆಯನ್ನು ಮುಚ್ಚಿಕೊಳ್ಳುವ ಮೇಲುಡುಗೆ, ಬೂಟು, ಕೈಗವಸು, ಹೆಲ್ಮೆಟ್‌ನಂತಹವೇ ಬಹಳಷ್ಟು ರಕ್ಷಣೆಯನ್ನು ಒದಗಿಸಬಲ್ಲವು. ಕನ್ನಡಕ, ಮಾಸ್ಕ್‌ನಿಂದ ಕೂಡ ಉದ್ಯೋಗ ಸ್ಥಳದಲ್ಲಿನ ಅನೇಕ ಸಮಸ್ಯೆಗಳನ್ನು ತಡೆಯಬಹುದು. ನಿರ್ದಿಷ್ಟ ಕಾಯಿಲೆಗಳ ವಿರುದ್ಧ ಹಾಕಿಸಿಕೊಳ್ಳುವ ಲಸಿಕೆಗಳೂ ವಿವಿಧ ಸೋಂಕುಗಳ ವಿರುದ್ಧ ರಕ್ಷಣೆಯನ್ನು ಒದಗಿಸಬಲ್ಲವು. ಕಾರ್ಖಾನೆಗಳಲ್ಲಿ ಮೂಲಸೌಕರ್ಯ ನಿರ್ವಹಣೆಗೆ ಆದ್ಯತೆ ನೀಡಬೇಕು. ಅಲ್ಲಿ ಉತ್ಪತ್ತಿಯಾಗುವ ವಿಷಕಾರಕ ಉಪ ಉತ್ಪನ್ನಗಳ ಸಮರ್ಪಕ ವಿಲೇವಾರಿ, ದೋಷಯುಕ್ತ ಉಪಕರಣಗಳ ದುರಸ್ತಿಯಂತಹ ಕ್ರಮಗಳು ನಿಯಂತ್ರಣ ಮಂಡಳಿಯ ಆದೇಶದ ಅನುಸಾರ ನಡೆಯಬೇಕು. ಅನಾಹುತವಾದ ನಂತರ ಪಶ್ಚಾತ್ತಾಪ ಪಡುವುದರಲ್ಲಿ ಯಾವುದೇ ಅರ್ಥವಿಲ್ಲ.

ಹೊಲಗದ್ದೆಗಳಲ್ಲಿ ಕೆಲಸ ಮಾಡುವ ರೈತರೂ ಇಂತಹ ಸಮಸ್ಯೆಗಳಿಂದ ದೂರವಿಲ್ಲ. ಮುಖ್ಯವಾಗಿ, ಕೀಟನಾಶಕ ಮತ್ತು ಕಳೆನಾಶಕ ಔಷಧಗಳನ್ನು ಸಿಂಪಡಿಸುವವರು ಸಿಂಪಡಣೆ ಮುಗಿದ ನಂತರ ಕೈಕಾಲುಗಳನ್ನು ಸರಿಯಾಗಿ ಸ್ವಚ್ಛಗೊಳಿಸಿಕೊಳ್ಳುವುದು ಮತ್ತು ಸಿಂಪಡಿಸುವಾಗ ಮೂಗು, ಬಾಯಿಯನ್ನು ಮಾಸ್ಕ್‌ನಿಂದ ಮುಚ್ಚಿಕೊಳ್ಳುವುದು ಬಹಳ ಮುಖ್ಯ. ಕನ್ನಡಕಗಳನ್ನು ಹಾಕಿಕೊಂಡರೆ ಅದು ಇನ್ನೂ ಸುರಕ್ಷಿತ. ಈ ಬಗ್ಗೆ ಮಾಲೀಕರು ಅವರಿಗೆ ತಿಳಿಹೇಳಬೇಕು.



ವೈದ್ಯರು, ಶುಶ್ರೂಷಕರು ಮತ್ತು ಇತರ ಸಿಬ್ಬಂದಿ ವರ್ಗದವರು ರೋಗಿಗಳಿಗೆ ಚಿಕಿತ್ಸೆ ನೀಡುವ ಸಂದರ್ಭದಲ್ಲಿ ಮಾಸ್ಕ್, ಕೈಗವಸು, ಮೇಲುಡುಗೆಗಳನ್ನು ಧರಿಸುವುದು, ಆರೈಕೆ ಮುಗಿದ ನಂತರ ಕೈಗಳನ್ನು ಸ್ವಚ್ಛಗೊಳಿಸಿಕೊಳ್ಳುವುದು ಅವರ ವೈಯಕ್ತಿಕ ಆರೋಗ್ಯದ ದೃಷ್ಟಿಯಿಂದ ಬಹಳ ಮುಖ್ಯ. ರೋಗಿಗಳೊಂದಿಗೆ ನಿಕಟ ಸಂಪರ್ಕಕ್ಕೆ ಬರುವ ಸಿಬ್ಬಂದಿ ಹೆಪಟೈಟಿಸ್ ಬಿ ಹಾಗೂ ಕೆಲವು ಬಗೆಯ ಫ್ಲೂಗಳ ವಿರುದ್ಧದ ಲಸಿಕೆಗಳನ್ನು ತೆಗೆದುಕೊಂಡಿದ್ದರೆ ಒಳಿತು.

ಮನೆಗೆಲಸಕ್ಕೆಂದು ನೇಮಿಸಿಕೊಂಡ ಎಷ್ಟೋ ಮಹಿಳೆಯರು ಸಾಬೂನಿನ ಅಲರ್ಜಿ, ಕಾಲು ಬೆರಳುಗಳ ಸಂದಿಯಲ್ಲಿ ಶಿಲೀಂಧ್ರದ ಸೋಂಕಿನಂತಹ (ಕೆಸರು ಗುಳ್ಳೆ) ಸಮಸ್ಯೆಗಳಿಂದ ಬಳಲುತ್ತಾರೆ. ವಿಪರೀತ ಯಾತನೆಯನ್ನು ಅನುಭವಿಸುತ್ತಾರೆ. ಇದನ್ನು ಗಮನಿಸಿ, ಪರಿಹಾರ ಒದಗಿಸುವ ಸಂವೇದನಾಶೀಲತೆ ಮನೆಯ ಮಾಲೀಕರಿಗೆ ಇರಬೇಕು. ನಿಜ, ಆರೋಗ್ಯವೇ ನಿಜವಾದ ಸಂಪತ್ತು. ಹಾಗಿದ್ದ ಮೇಲೆ, ಉದ್ಯೋಗ ಸ್ಥಳಗಳಲ್ಲಿ ನೌಕರರ ಆರೋಗ್ಯವನ್ನು ಕಾಪಾಡುವಂತಹ ಸೂಕ್ತ ಕ್ರಮಗಳನ್ನು ಅಳವಡಿಸಿಕೊಳ್ಳುವ ಅಗತ್ಯ ಖಂಡಿತಾ ಇದೆ. ಈ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿಯನ್ನು ಮೂಡಿಸಲೆಂದೇ ಪ್ರತಿವರ್ಷ ಏಪ್ರಿಲ್ 28ರಂದು ‘ವಿಶ್ವ ಉದ್ಯೋಗ ಸ್ಥಳದಲ್ಲಿನ ಸುರಕ್ಷತೆ ಮತ್ತು ಆರೋಗ್ಯದ ದಿನ’ ಆಚರಿಸಲಾಗುತ್ತದೆ.

ಮುಂದುವರಿದ ದೇಶಗಳು ನೌಕರರ ಸುರಕ್ಷತೆಗಾಗಿ ಆಧುನಿಕ ಸೂಕ್ಷ್ಮಾತಿಸೂಕ್ಷ್ಮ ತಂತ್ರಜ್ಞಾನದ ಬಳಕೆಗೆ ಒತ್ತು ನೀಡುತ್ತಿವೆ. ತಂತ್ರಜ್ಞಾನದ ಜೊತೆ ಜೊತೆಗೆ ಈ ಸರಳ ಉಪಕ್ರಮಗಳೂ ನೌಕರರ ಸುರಕ್ಷತೆ ಮತ್ತು ಆರೋಗ್ಯಕ್ಕೆ ಪೂರಕವಾಗುತ್ತವೆ ಎಂಬುದನ್ನು ಖಂಡಿತಾ ಅಲ್ಲಗಳೆಯಲಾಗುವುದಿಲ್ಲ.

ವಾಚಕರ ವಾಣಿ

ಮತದಾರನಿಗೆ ತಪ್ಪಿನ ಅರಿವು ಮೂಡಿಸಿ

ಕಾನೂನಿನ ದೃಷ್ಟಿಯಲ್ಲಿ ವರದಕ್ಷಿಣೆ ಕೊಡುವುದು ಮತ್ತು ತೆಗೆದುಕೊಳ್ಳುವುದು ಎರಡೂ ಅಪರಾಧವೇ. ಲಂಚ ತೆಗೆದುಕೊಳ್ಳುವುದು ಮತ್ತು ಕೊಡುವುದು ಸಹ ಅಪರಾಧ. ಬಾಲ್ಯವಿವಾಹ ಮಾಡಿದ ಪೋಷಕರೂ ತಾವು ಎಸಗಿದ ಅಪರಾಧಕ್ಕೆ ಶಿಕ್ಷೆಗೆ ಅರ್ಹರು. ಇಂತಹ ವಿಶಿಷ್ಟ ಕಾನೂನುಗಳು ನಮ್ಮಲ್ಲಿ ಇರುವಾಗ, ಅಪರಾಧಿಕ ಹಿನ್ನೆಲೆಯುಳ್ಳ ಮತ್ತು ಭ್ರಷ್ಟಾಚಾರದಲ್ಲಿ ಶಾಮೀಲಾಗಿ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳಿಗೆ ಶಿಕ್ಷೆ ನೀಡುವುದು ಮಾತ್ರವಲ್ಲ ಅಂತಹ ಅಭ್ಯರ್ಥಿಯಿಂದ ಹಣ, ವಸ್ತುಗಳನ್ನು ಪಡೆದು ಆತನ ಪರವಾಗಿ ಮತದಾನ ಮಾಡಿ, ಭ್ರಷ್ಟಾಚಾರಕ್ಕೆ ಕುಮ್ಮಕ್ಕು ನೀಡಿದ ಮತದಾರನಿಗೂ ತಪ್ಪು ಅರಿವಾಗುವ ರೀತಿಯಲ್ಲಿ ಯಾವುದಾದರೂ ಕ್ರಮ ಕೈಗೊಳ್ಳುವ ಕುರಿತು ಚುನಾವಣಾ ಆಯೋಗ ಚಿಂತಿಸಬೇಕು.

ಭ್ರಷ್ಟರಿಗೆ ಮತ ನೀಡಿದ ಮತದಾರನೇ ಮೊದಲ ನಾಡದ್ರೋಹಿ ಎಂದು ಘೋಷಿಸುವ ಕಾರ್ಯವಾಗಬೇಕಿದೆ. ಅಂದಾಗ ಮಾತ್ರ ನಮ್ಮದು ಭ್ರಷ್ಟಾಚಾರಮುಕ್ತ ದೇಶವಾಗಬಲ್ಲದು. ಹೀಗಾಗಲು ಜಾತಿ, ಧರ್ಮ, ಪ್ರತಿಜ್ಞೆ, ಆಣೆ, ಪ್ರಮಾಣದಂತಹ ವ್ಯಸನಗಳ ಜೇಡರ ಬಲೆಯಿಂದ ಮತದಾರ ನಿರ್ಭಯವಾಗಿ ಹೊರಬಂದು, ಪ್ರಾಮಾಣಿಕ ಅಭ್ಯರ್ಥಿಗೆ ಗೋಪ್ಯವಾಗಿ ಮತದಾನ ಮಾಡುವಂತಾಗಲಿ.

ಎ.ಎಸ್.ಮಕಾನದಾರ, ಗದಗ

ಅರ್ಜಿ ಸ್ವೀಕಾರ: ಗೊಂದಲವೇಕೆ?

ಹೊಸ ಮತದಾರರ ಹೆಸರು ಸೇರ್ಪಡೆಗೆ ಈ ತಿಂಗಳ 11ರವರೆಗೂ ಅವಕಾಶ ಕಲ್ಪಿಸಲಾಗಿತ್ತು. ಅದರಂತೆ ಕೊನೆಯ ದಿನ ಇಬ್ಬರು ಹೊಸ ಮತದಾರರ ಹೆಸರು ಸೇರ್ಪಡೆ ಮಾಡಲು ನಾನು ಸೈಬರ್ ಸೆಂಟರ್‌ನಲ್ಲಿ ಅರ್ಜಿ ಹಾಕಿದೆ. ಅರ್ಜಿ ಸ್ವೀಕಾರ ಆಯಿತು. ನಮ್ಮ ಅರ್ಜಿಗೆ ಪ್ರತಿಯಾಗಿ ನಮಗೆ ರೆಫರೆನ್ಸ್ ಐ.ಡಿ. ಸಂಖ್ಯೆ ಬಂತು. ಸಂಬಂಧಿಸಿದ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಂಡು ಆಯಾ ಮತಗಟ್ಟೆಯ ಸಿಬ್ಬಂದಿಗೆ ನೀಡಿದೆ. ಅವರು ಚುನಾವಣಾ ವಿಭಾಗದಿಂದ ನಮಗೆ ನಿರ್ದೇಶನ ಬಂದಾಗ ನಾವು ವಾರ್ಡ್‌ಗೆ ಭೇಟಿ ನೀಡಿ, ಪರಿಶೀಲನೆ ನಡೆಸಿ ಮಾಹಿತಿ ನೀಡಿದ ನಂತರ ಹೊಸ ಮತದಾರರು ಸೇರ್ಪಡೆಯಾಗುತ್ತಾರೆ ಎಂದು ಹೇಳಿದರು. ಆದರೆ ಇಲ್ಲಿಯವರೆಗೂ ಅರ್ಜಿಯ ಐ.ಡಿ. ನಂಬರ್ ಪರಿಶೀಲನೆಗೆ ಒಳಗಾಗಿಲ್ಲ.

ಚುನಾವಣೆ ವಿಭಾಗದಲ್ಲಿ ಕೇಳಿದರೆ, ‘10ನೇ ತಾರೀಖಿನವರೆಗೆ ಸಲ್ಲಿಸಲಾದ ಎಲ್ಲ ಅರ್ಜಿಗಳನ್ನೂ ಪರಿಶೀಲಿಸಿ ಸೇರ್ಪಡೆ ಮಾಡಿದ್ದು ನಂತರ ಆ ಸಾಫ್ಟ್‌ವೇರ್ ಅನ್ನು ಫ್ರೀಜ್ ಮಾಡಲಾಗಿದೆ’ ಎಂದು ಹೇಳುತ್ತಿದ್ದಾರೆ. ಪತ್ರಿಕೆಗಳಲ್ಲಿ ಏಪ್ರಿಲ್ 11 ಕೊನೆಯ ದಿನವೆಂದು ಮಾಹಿತಿ ನೀಡಲಾಗಿತ್ತಾದರೂ ಅಂದು ಸಲ್ಲಿಸಿದ ಅರ್ಜಿಗಳನ್ನು ಪರಿಗಣಿಸದಿರುವುದು ಎಷ್ಟು ಸರಿ?

ಅಶೋಕ ಓಜಿನಹಳ್ಳಿ, ಕೊಪ್ಪಳ

ಏನಾಗುತ್ತಿತ್ತು ಗೊತ್ತಾ?

ಇಷ್ಟು ದಿನ ರಾಜಕಾರಣಿಗಳ ಪ್ರಕಾರ,
ಪಕ್ಷ ಎಂದರೆ ತಮ್ಮನ್ನು ಬೆಳೆಸಿದ ತಾಯಿ ಇದ್ದಂತೆ
ತಮಗೆ ಸರ್ವಸ್ವವನ್ನೂ ನೀಡಿದ ತಂದೆಯಂತೆ
ಪಕ್ಷದ ಒಳಿತಿಗಾಗಿ ತಮ್ಮ
ಜೀವನವನ್ನೇ ತ್ಯಾಗ ಮಾಡಲು ಸಿದ್ಧ!
ಪಕ್ಷದ ಉಳಿವಿಗಾಗಿ ಏನೇ ಕಷ್ಟ
ಬಂದರೂ ಸಹಿಸಿಕೊಳ್ಳಲು ಬದ್ಧ!
ಆದರೆ... ಈ ಧೋರಣೆ ಇದ್ದಕ್ಕಿದ್ದಂತೆ
ಈಗ ಬದಲಾಗಿ ಬಿಟ್ಟಿದೆಯಲ್ಲಾ!
ಪಕ್ಷ ಎಂದರೆ ಈಗ...
ನಾವು ಬೆಳೆಸದಿದ್ದರೆ ಇದು ಬೆಳೆಯುತ್ತಿತ್ತಾ?
ನಾವಿಲ್ಲದಿದ್ದರೆ ಪಕ್ಷದ ಸ್ಥಿತಿ ಏನಾಗುತ್ತಿತ್ತು ಗೊತ್ತಾ?

ಜೆ.ಬಿ.ಮಂಜುನಾಥ, ಪಾಂಡವಪುರ

ಚುನಾವಣಾ ದಿನಾಂಕ: ಇನ್ನೊಂದು ಮುಖವಿದೆ

ರಾಜ್ಯ ವಿಧಾನಸಭಾ ಚುನಾವಣೆಯ ಮತದಾನಕ್ಕೆ ಮೇ 10ರ ಬುಧವಾರವನ್ನು ಚುನಾವಣಾ ಆಯೋಗ ನಿಗದಿ ಮಾಡಿದೆ. ವಾರಾಂತ್ಯದ ದಿನಗಳಾದರೆ ಚುನಾವಣಾ ದಿನಾಂಕದ ರಜೆಯನ್ನು ಇನ್ನಿತರ ರಜೆಗಳ ಜೊತೆ ಸೇರಿಸಿಕೊಂಡು ಪ್ರವಾಸ, ಮೋಜು- ಮಸ್ತಿಗಾಗಿ ಹೊರಟುಬಿಡಬಹುದು, ಅಂತಹ ಮತದಾರರು ಮತದಾನದಲ್ಲಿ ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲವಾದ್ದರಿಂದ, ಮತ ಪ್ರಮಾಣ ಏರಿಸಲು ಆಯೋಗ ಈ ಕ್ರಮ ಕೈಗೊಂಡಿದೆ ಎಂದು ಹೇಳಲಾಗಿದೆ. ಆದರೆ ಕಂಪನಿಗಳ ಕೆಲಸಗಾರರು, ಕೆಲ ಸರ್ಕಾರಿ ನೌಕರರು, ನಗರಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು, ಬೆಂಗಳೂರು, ಮೈಸೂರಿನಂತಹ ನಗರ ಪ್ರದೇಶಗಳಲ್ಲಿರುವ ವಲಸೆ ಕೆಲಸಗಾರರು ಮತದಾನದಲ್ಲಿ ಭಾಗವಹಿಸಲು ದೂರದ ಊರುಗಳಿಗೆ, ಕರ್ನಾಟಕದ ಅಂಚಿನಲ್ಲಿರುವ ಗ್ರಾಮಗಳಿಗೆ ತೆರಳಬೇಕಾಗಿರುತ್ತದೆ. ಅಂತಹವರು ಒಂದೇ ದಿನದಲ್ಲಿ ಹೋಗಿಬರಲು ಸಾಧ್ಯವೇ? ಸಮಾಧಾನಚಿತ್ತರಾಗಿ ಹೋಗಿ ಬರಲು ಕನಿಷ್ಠ ಎರಡು ದಿನಗಳಾದರೂ ರಜೆ ಹಾಕಬೇಕಾಗಿರುತ್ತದೆ. ಹೀಗಾಗಿ, ಚುನಾವಣಾ ದಿನಾಂಕ ನಿಗದಿ ಮಾಡುವಾಗ ಇಂತಹ ವಿಷಯವನ್ನೂ ಆಯೋಗವು ಗಣನೆಗೆ ತೆಗೆದುಕೊಳ್ಳಬೇಕಿತ್ತು.

ರೆಡ್ಡೆಪ್ಪ ಕೆ.ಎಂ., ಶ್ರೀನಿವಾಸಪುರ

ಮತದಾನದ ಗೋಪ್ಯತೆ ಉಳಿಯುವುದೇ?

80 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾದವರು ಹಾಗೂ ಅಂಗವಿಕಲರಿಗೆ ಇದೇ 29ರಿಂದ ಮೇ 6ರವರೆಗೆ ಮನೆಯಿಂದಲೇ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿದೆ ಎಂದು ರಾಜ್ಯ ಮುಖ್ಯ ಚುನಾವಣಾ ಅಧಿಕಾರಿ ಮನೋಜ್ ಕುಮಾರ್ ಮೀನಾ ಅವರು ತಿಳಿಸಿರುವುದು ವರದಿಯಾಗಿದೆ (ಪ್ರ.ವಾ., ಏ. 27). ಇದರಿಂದ ಮತದಾನದ ಗೋಪ್ಯತೆ ಉಳಿದೀತೆ?

ಮತಪತ್ರಗಳನ್ನು ಡೌನ್‌ಲೋಡ್ ಮಾಡಿ ಮತ ಚಲಾಯಿಸುವ ಪ್ರಕ್ರಿಯೆ ನಡೆಸಲು ಮತ್ತು ಗೋಪ್ಯತೆ ಉಳಿಸಿಕೊಳ್ಳಲು 80 ವರ್ಷ ಮೇಲ್ಪಟ್ಟವರಿಗೆ ಹೇಗೆ ಸಾಧ್ಯ? ಇಂತಹ ಮತಗಳು ಸಾರಾಸಗಟಾಗಿ, ತಂತ್ರಜ್ಞಾನ ಬಲ್ಲ ಹಾಗೂ ಆಸಕ್ತಿ ವಹಿಸುವ ಯಾವುದೋ ಒಂದು ಪಕ್ಷದ ಪಾಲಾಗುವ ಅಪಾಯ ಇದೆ. ಈ ಹೊಸ ಪ್ರಯೋಗವು ಪ್ರಜಾಪ್ರಭುತ್ವಕ್ಕೆ ಮಾರಕ ಆಗುವ ಸಾಧ್ಯತೆಯಿದ್ದು, ಈ ಬಗ್ಗೆ ಮತದಾರರಲ್ಲಿ ಚರ್ಚೆಯಾಗಲಿ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಪ್ರಜಾವಾಣಿ ವಾರ್ತೆ

ಮನದ ಮಾತಿಗೆ 100ರ ಸಂಭ್ರಮ

ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನರನ್ನು ಉದ್ದೇಶಿಸಿ ಮಾತನಾಡುವ 'ಮನದ ಮಾತು (ಮನ್ ಕಿ ಬಾತ್)' ಕಾರ್ಯಕ್ರಮವು ಮುಂದಿನ ವಾರ 100ನೇ ಕಂತನ್ನು ಪೂರೈಸಲಿದೆ. ಮೋದಿ ಅವರು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಕೆಲವೇ ತಿಂಗಳ ನಂತರ 2014ರ ಅಕ್ಟೋಬರ್ 3ರಂದು ಮನದ ಮಾತು ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿತ್ತು. ದೇಶದ ಜನರೊಂದಿಗೆ ತಮ್ಮ ಮನದಾಳದ ಮಾತನ್ನು ಹಂಚಿಕೊಳ್ಳಲು, ದೇಶದ ಜನರ ಮಾತನ್ನು ಆಡಲು ಈ ರೇಡಿಯೊ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಗಿದೆ ಎಂದು ಮೋದಿ ಅವರು ಹೇಳಿದ್ದರು. ಅಂದಿನಿಂದ ಈವರೆಗೆ ತಿಂಗಳಿಗೆ ಒಮ್ಮೆ ಮೋದಿ ಅವರು, ಮನದ ಮಾತು ಕಾರ್ಯಕ್ರಮದಲ್ಲಿ ದೇಶವನ್ನು ಉದ್ದೇಶಿಸಿ ಮಾತನಾಡಿದ್ದಾರೆ.

ಪ್ರಧಾನಿ ಮೋದಿ ಅವರು ಸಾಮಾಜಿಕ ಜಾಲತಾಣಗಳಲ್ಲಿ ಸಕ್ರಿಯವಾಗಿಯೇ ಇದ್ದಾರೆ. ತಮ್ಮ ಅನಿಸಿಕೆಗಳು, ಅಭಿಪ್ರಾಯಗಳು, ಹೊಸ ವಿಚಾರಗಳು, ತಮ್ಮ ಸರ್ಕಾರದ ಕೆಲವು ನಿರ್ಧಾರ ಮತ್ತು ಆಡಳಿತಾತ್ಮಕ ಕ್ರಮಗಳ ಬಗ್ಗೆ ಮಾಹಿತಿ ನೀಡಲು ಮೋದಿ ಅವರು ಟ್ವಿಟರ್ ಅನ್ನು ಬಳಸಿಕೊಳ್ಳುತ್ತಾರೆ. ಮೋದಿ ಅವರ ವೈಯಕ್ತಿಕ ಟ್ವಿಟರ್ ಮತ್ತು ಯೂಟ್ಯೂಬ್ ಖಾತೆ, ಪ್ರಧಾನಿ ಕಾರ್ಯಾಲಯದ ಅಧಿಕೃತ ಟ್ವಿಟರ್ ಮತ್ತು ಯೂಟ್ಯೂಬ್ ಖಾತೆಗಳಲ್ಲಿ ಈ ವಿಷಯಗಳು ಪ್ರಕಟವಾಗುತ್ತವೆ. ಪ್ರಧಾನಿ ಆಗುವ ಮುನ್ನವೇ ಟ್ವಿಟರ್, ಫೇಸ್‌ಬುಕ್‌ನಲ್ಲಿ ಅವರು ಜನಪ್ರಿಯರಾಗಿದ್ದರು. ಸಾಮಾಜಿಕ ಜಾಲತಾಣಗಳನ್ನು ರಾಜಕಾರಣಿಗಳ ಪೈಕಿ ಹೆಚ್ಚು ಬಳಸಿಕೊಂಡವರು ಮೋದಿ. ಹೀಗಿದ್ದೂ ಅವರು, ತಮ್ಮ ಮನದ ಮಾತನ್ನು ಆಡಲು 'ಮನದ ಮಾತು' ಎಂಬ ತಿಂಗಳ ರೇಡಿಯೊ ಕಾರ್ಯಕ್ರಮವನ್ನು ಆರಂಭಿಸಿದ್ದರು. ಪ್ರಸಾರ ಭಾರತಿಯ ರೇಡಿಯೊ ವಾಹಿನಿಗಳಲ್ಲಿ, ದೂರದರ್ಶನದಲ್ಲಿ ಪ್ರಸಾರವಾಗುವ ಈ ಕಾರ್ಯಕ್ರಮವು ಖಾಸಗಿ ಎಫ್‌.ಎಂ ವಾಹಿನಿಗಳು, ಮೋದಿ ಮತ್ತು ಪ್ರಧಾನಿ ಕಾರ್ಯಾಲಯದ ಯೂಟ್ಯೂಬ್ ವಾಹಿನಿಗಳಲ್ಲೂ ಪ್ರಸಾರವಾಗುತ್ತದೆ.

ಮೋದಿ ಅವರು ತಮ್ಮ ಮನದ ಮಾತು ಕಾರ್ಯಕ್ರಮದಲ್ಲೇ ತಮ್ಮ ಹಲವು ಜನಪ್ರಿಯ ಕಾರ್ಯಕ್ರಮಗಳನ್ನು, ಅಭಿಯಾನಗಳನ್ನು ಘೋಷಿಸಿದ್ದರು. 'ಸ್ವಚ್ಛ ಭಾರತ ಅಭಿಯಾನ', 'ಬೇಟಿ ಬಚಾವೊ, ಬೇಟಿ ಪಢಾವೊ (ಮಗಳನ್ನು ಉಳಿಸಿ, ಮಗಳನ್ನು ಓದಿಸಿ)', 'ನಮಾಮಿ ಗಂಗಾ', 'ವಿಶ್ವ ಯೋಗ ದಿನ' ಮೊದಲಾದ ಕಾರ್ಯಕ್ರಮಗಳು ಮೊದಲು ಘೋಷಣೆಯಾಗಿದ್ದು ಮೋದಿ ಅವರ ಮನದ ಮಾತು ರೇಡಿಯೊ ಕಾರ್ಯಕ್ರಮದಲ್ಲಿಯೇ. ಆರಂಭದ ದಿನಗಳಲ್ಲಿ ಮೋದಿ ಅವರು ಮನದ ಮಾತು ಕಾರ್ಯಕ್ರಮಕ್ಕೆ ತಾವೇ ವಿಷಯ ಆಯ್ಕೆ ಮಾಡಿಕೊಳ್ಳುತ್ತಿದ್ದರು. ನಂತರದ ದಿನಗಳಲ್ಲಿ ಸಾರ್ವಜನಿಕರಿಂದ ವಿಷಯಗಳನ್ನು ಆಹ್ವಾನಿಸಿದರು. ಈಗ 100ನೇ ಕಂತಿಗೂ ಸಾರ್ವಜನಿಕರಿಂದ ವಿಷಯಗಳನ್ನು ಕೇಳಿದ್ದಾರೆ.

ಸ್ತ್ರೀ ಶಕ್ತಿಗೆ ಸ್ಫೂರ್ತಿ



ದೇಶದ ಸಾಮಾನ್ಯ ಜನರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಾತನಾಡುವ ಪ್ರಸಾರ ಕಾರ್ಯಕ್ರಮ 'ಮನದ ಮಾತು'. ವಿವಿಧ ವಿಷಯಗಳು ಮತ್ತು ಜ್ವಲಂತ ಸಮಸ್ಯೆಗಳ ಬಗ್ಗೆ ಮೋದಿ ಅವರು ಜನರೊಂದಿಗೆ ಮಾತನಾಡುತ್ತಾರೆ. ಕೇಳದ, ಕಾಣದ, ಆದರೆ ದೊಡ್ಡ ರೀತಿಯಲ್ಲಿ ಕೆಲಸ ಮಾಡಿದ ನಿಜವಾದ ಹೀರೋಗಳನ್ನು ಗುರುತಿಸಿದ್ದಾರೆ.

ಉತ್ತಮ ನಾಯಕರಾದವರು ಯಾವುದೇ ಉತ್ಪ್ರೇಕ್ಷೆಯಿಲ್ಲದೆ ಸತತವಾಗಿ ಮಾತನಾಡಿದಾಗ ಜನರು ಅದನ್ನು ಆಲಿಸುತ್ತಾರೆ, ನಂಬುತ್ತಾರೆ ಮತ್ತು ಆ ಮಾತುಗಳನ್ನು ಅನುಸರಿಸುತ್ತಾರೆ. ವಿಶೇಷವಾಗಿ ಅವರ ಮಾತುಕತೆ ಮತ್ತು ಯೋಜನೆಗಳಿಂದ ಬಹಳಷ್ಟು ಪ್ರಯೋಜನ ಪಡೆದ ಮಹಿಳೆಯರು ಇಂದು ವಿವಿಧ ಕ್ಷೇತ್ರಗಳಲ್ಲಿ ಬಹಳ ಸಾಧನೆ ಮಾಡಿದ್ದಾರೆ. ಮಹಿಳೆಯರು ಅಸಾಧಾರಣ ಕೆಲಸ ಮಾಡಿದಾಗ ಅವರನ್ನು ಕರೆದು ಪ್ರಶಂಸಿಸಲಾಗುತ್ತದೆ. ಆಗ ರಾಷ್ಟ್ರವು ಅವರನ್ನು ಸ್ವೀಕರಿಸುತ್ತದೆ; ಅವರು ಅನೇಕ ಯುವ ಜನರಿಗೆ ಮಾದರಿಯಾಗುತ್ತಾರೆ. ಆದ್ದರಿಂದ ಹೆಣ್ಣು ಮಕ್ಕಳು ಇದೀಗ ಬಹುದೊಡ್ಡ ಕನಸು ಕಾಣುತ್ತಿದ್ದಾರೆ.

ಸುಧಾಮೂರ್ತಿ, ಶಿಕ್ಷಣ ತಜ್ಞೆ, ಲೇಖಕಿ ಮತ್ತು ದಾನಿ

'ಜನರ ಮಾತು ಕೇಳಿಸಿಕೊಳ್ಳುವುದಿಲ್ಲ'

ಮನದ ಮಾತು ಕಾರ್ಯಕ್ರಮದಲ್ಲಿ ಮೋದಿ ಅವರು ತಮ್ಮ ಮನದ ಮಾತುಗಳನ್ನು ಆಡುತ್ತಾರೆಯೇ ಹೊರತು, ದೇಶವಾಸಿಗಳ ಮನದ ಮಾತನ್ನಲ್ಲ ಎಂಬುದು ವಿರೋಧ ಪಕ್ಷಗಳ ಟೀಕೆ. ಇದಲ್ಲದೆ ಈ ಕಾರ್ಯಕ್ರಮದ ಬಗ್ಗೆ ಇನ್ನೂ ಹಲವು ಟೀಕೆಗಳಿವೆ.

ಇದು ಏಕಮುಖದ ಮಾತಿನ ಕಾರ್ಯಕ್ರಮ. ಮೋದಿ ಅವರು ತಾವು ಮಾತನಾಡಲಷ್ಟೇ ಬಯಸುತ್ತಾರೆ, ದೇಶವಾಸಿಗಳ ಮಾತನ್ನು ಕೇಳಿಸಿಕೊಳ್ಳಲು ಬಯಸುವುದಿಲ್ಲ. ಹೀಗಾಗಿ ಮನದ ಮಾತು ಕಾರ್ಯಕ್ರಮಕ್ಕೆ ರೇಡಿಯೊವನ್ನು ಆಯ್ಕೆ ಮಾಡಿಕೊಂಡಿದ್ದಾರೆ ಎಂಬುದು ಈ ಕಾರ್ಯಕ್ರಮದ ಬಗ್ಗೆ ವಿರೋಧ ಪಕ್ಷಗಳು ಮುಂದಿಡುವ ಮತ್ತೊಂದು ಟೀಕೆ.

ಈ ಕಾರ್ಯಕ್ರಮದಲ್ಲಿ ಮೋದಿ ಅವರು ದೇಶದ ಯಾವುದೋ ಮೂಲೆಯಲ್ಲಿರುವ ಸಾಮಾನ್ಯ ವ್ಯಕ್ತಿಗಳು, ಅವರ ಸಾಧನೆಗಳನ್ನು ಆಗಾಗ್ಗೆ ಪ್ರಸ್ತಾಪಿಸಿದ್ದಾರೆ. ಸಾಮಾನ್ಯ ವ್ಯಕ್ತಿಗಳ ವಿಚಾರ ಪ್ರಸ್ತಾವಕ್ಕೆ ಹೆಚ್ಚಿನ ಮೆಚ್ಚುಗೆ ವ್ಯಕ್ತವಾಗುತ್ತದೆ. ಆದರೆ, ಅದಕ್ಕಿಂತಲೂ ಹೆಚ್ಚು ಟೀಕೆ ವ್ಯಕ್ತವಾಗುತ್ತದೆ. ಯಾವ ರಾಜ್ಯದಲ್ಲಿ ಚುನಾವಣೆ ನಡೆಯುತ್ತಿರುತ್ತದೆಯೋ ಆ ರಾಜ್ಯದ ವ್ಯಕ್ತಿಗಳ ಬಗ್ಗೆ ಮೋದಿ ಮಾತನಾಡುತ್ತಾರೆ. ಆ ಮೂಲಕ ಪ್ರಚಾರ ಪಡೆಯುತ್ತಾರೆ ಎಂಬುದು ಈ ಕಾರ್ಯಕ್ರಮದ ಬಗ್ಗೆ ಇರುವ ಇನ್ನೊಂದು ಟೀಕೆ.

'ಪ್ರತಿಕ್ರಿಯೆ, ಟೀಕೆಗೆ ಅವಕಾಶವಿಲ್ಲ'

ಮನದ ಮಾತು ಕಾರ್ಯಕ್ರಮದ ಧ್ವನಿಮುದ್ರಿತ ಆವೃತ್ತಿಯನ್ನು, ಮೋದಿ ಅವರ ವೈಯಕ್ತಿಕ ಯೂಟ್ಯೂಬ್ ಖಾತೆ, ಬಿಜೆಪಿಯ ಯೂಟ್ಯೂಬ್ ಖಾತೆ ಮತ್ತು ಪ್ರಧಾನಿ ಕಾರ್ಯಾಲಯದ ಯೂಟ್ಯೂಬ್ ಖಾತೆಯಲ್ಲೂ ಪ್ರಸಾರ ಮಾಡಲಾಗುತ್ತದೆ. ಆರಂಭದ ದಿನಗಳಲ್ಲಿ ಈ ಯೂಟ್ಯೂಬ್ ವಾಹಿನಿಗಳಲ್ಲಿ ಪ್ರತಿಕ್ರಿಯೆ ನೀಡಲು, ಲೈಕ್ ಮತ್ತು ಡಿಸ್‌ಲೈಕ್ ನೀಡಲು ಅವಕಾಶ ನೀಡಲಾಗಿತ್ತು. 2020ರಲ್ಲಿ ಡಿಸ್‌ಲೈಕ್‌ಗಳು ಹೆಚ್ಚಿನ ಸಂಖ್ಯೆಯಲ್ಲಿ ಬಂದಿದ್ದವು. ಆಗ ಆ ವಿಡಿಯೊಗಳಿಗೆ ಪ್ರತಿಕ್ರಿಯೆ ನೀಡುವ, ಲೈಕ್ ಅಥವಾ ಡಿಸ್‌ಲೈಕ್ ಒತ್ತುವ ಆಯ್ಕೆಯನ್ನು ತೆಗೆದುಹಾಕಲಾಯಿತು.

2020ರ ಸೆಪ್ಟೆಂಬರ್ 17ರಂದು ಮೋದಿ ಅವರ ಜನ್ಮದಿನಾಚರಣೆಯನ್ನು, ದೇಶದ ನಿರುದ್ಯೋಗಿ ಯುವಕರು 'ನಿರುದ್ಯೋಗ ದಿನ'ವನ್ನಾಗಿ ಆಚರಿಸಿದ್ದರು. ಅದೇ ಸಂದರ್ಭದಲ್ಲಿ ಸರ್ಕಾರ ಮತ್ತು ಮೋದಿ ಅವರ ಅಧಿಕೃತ ಯೂಟ್ಯೂಬ್ ವಾಹಿನಿಗಳಲ್ಲಿ ಪ್ರಸಾರವಾಗಿದ್ದ ಮನದ ಮಾತು ಕಾರ್ಯಕ್ರಮಕ್ಕೆ ಸಾವಿರಾರು ಸಂಖ್ಯೆಯಲ್ಲಿ ಟೀಕೆ ವ್ಯಕ್ತವಾಗಿತ್ತು. ಹಲವರು, 'ನಿಮ್ಮ ಮಾತು ನಿಲ್ಲಿಸಿ, ನಮ್ಮ ಮಾತು ಕೇಳಿಸಿಕೊಳ್ಳಿ. ನಮಗೆ ಉದ್ಯೋಗ ನೀಡಿ' ಎಂದು ಆಗ್ರಹಿಸಿದ್ದರು. ಬಿಜೆಪಿಯ ಅಧಿಕೃತ ಯೂಟ್ಯೂಬ್ ವಾಹಿನಿಯಲ್ಲಿ ಪ್ರಸಾರವಾಗಿದ್ದ ಕಾರ್ಯಕ್ರಮಕ್ಕೆ ಕೆಲವೇ ನಿಮಿಷಗಳಲ್ಲಿ 4.7 ಲಕ್ಷ ಡಿಸ್‌ಲೈಕ್‌ಗಳು ಬಂದಿದ್ದವು. ಆ ವಾಹಿನಿಯಲ್ಲಿ ಪ್ರಸಾರವಾಗುವ ಕಾರ್ಯಕ್ರಮಗಳಿಗೆ ಪ್ರತಿಕ್ರಿಯೆ ನೀಡುವ, ಲೈಕ್ ಅಥವಾ ಡಿಸ್‌ಲೈಕ್ ವ್ಯಕ್ತಪಡಿಸುವ ಆಯ್ಕೆಯನ್ನು ಕೆಲವೇ ಗಂಟೆಗಳಲ್ಲಿ ತೆಗೆದುಹಾಕಲಾಯಿತು. ಆ ಕಾರ್ಯಕ್ರಮಕ್ಕೆ ಬಂದಿದ್ದ ಎಲ್ಲಾ ಪ್ರತಿಕ್ರಿಯೆಗಳನ್ನು ಅಳಿಸಿಹಾಕಲಾಯಿತು. ಇದನ್ನೂ ವಿರೋಧ ಪಕ್ಷಗಳು ಟೀಕಿಸಿದವು. ಜನರ ಮನದ ಮಾತನ್ನು ಕೇಳಿಸಿಕೊಳ್ಳಲು ಮೋದಿ ಬಯಸುವುದಿಲ್ಲ ಎಂಬುದನ್ನು ಇದು ಸೂಚಿಸುತ್ತದೆ ಎಂದು ವಿರೋಧ ಪಕ್ಷಗಳು ಹೇಳಿದ್ದವು.

ಮನದ ಮಾತು@100: ಸಿದ್ಧತೆ ಜೋರು

ಮೋದಿ ಅವರ 'ಮನದ ಮಾತು' ಕಾರ್ಯಕ್ರಮವು 100ನೇ ಕಂತಿನ ಮೈಲಿಗಲ್ಲು ತಲುಪುತ್ತಿದ್ದು, ಇದನ್ನು ದೊಡ್ಡ ರೀತಿಯಲ್ಲಿ ಆಚರಿಸಲು ಸಿದ್ಧತೆಗಳು ನಡೆಯುತ್ತಿವೆ. ನೂರನೇ ಸಂಚಿಕೆಯನ್ನು ಸ್ಮರಣೀಯಗೊಳಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಸರ್ಕಾರದ ಜೊತೆಗೆ ಬಿಜೆಪಿ ಸಹ ಬಿರುಸಿನ ತಯಾರಿಯಲ್ಲಿ ತೊಡಗಿದೆ. 100ನೇ ಕಂತಿನ ಕಾರ್ಯಕ್ರಮವನ್ನು ಹೇಗೆ ವಿಭಿನ್ನವಾಗಿ ಹಾಗೂ ಅರ್ಥಪೂರ್ಣವಾಗಿ ನಡೆಸಬಹುದು ಎಂದು ಸರ್ಕಾರವು ಜನರಿಂದ ಸಲಹೆಗಳನ್ನು ಆಹ್ವಾನಿಸಿತ್ತು. ಜನರು ಈಗಾಗಲೇ ತಮ್ಮ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಸಲಹೆಗಳ ಆಧಾರದ ಮೇಲೆ ಇದೇ ಏಪ್ರಿಲ್ 30ರಂದು ದೇಶದಾದ್ಯಂತ ವೈವಿಧ್ಯಮಯ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

100ನೇ ಸಂಚಿಕೆಯ ನೆನಪಿಗಾಗಿ ₹100 ಮುಖಬೆಲೆಯ ನಾಣ್ಯ ಹಾಗೂ ಅಂಚೆಚೀಟಿಯನ್ನು ಕೇಂದ್ರ ಸರ್ಕಾರ ಹೊರತಂದಿದೆ. ವಿವಿಧ ವಲಯದ ಗಣ್ಯರ ಜೊತೆ ನಡೆದ ಮನದ ಮಾತು ಕುರಿತ ಸಂವಾದ ಸಭೆಯಲ್ಲಿ ಕೇಂದ್ರ ಸಚಿವ ಅಮಿತ್ ಶಾ ಅವರು ನಾಣ್ಯ ಹಾಗೂ ಅಂಚೆಚೀಟಿಯನ್ನು ಬಿಡುಗಡೆ ಮಾಡಿದರು. ನಾಲ್ಕು ಬಗೆಯ ಲೋಹಗಳಿಂದ ಮಾಡಲಾದ ₹100 ಮುಖಬೆಲೆಯ ನಾಣ್ಯದ ಮೇಲೆ ಮನದ ಮಾತು 100ನೇ ಕಂತು ಎಂದು ಬರೆಯಲಾಗಿದೆ. ಈ ನಾಣ್ಯವು ಸಾಮಾನ್ಯ ನಾಣ್ಯಗಳಂತೆ ಚಲಾವಣೆಯಲ್ಲಿ ಇರುವುದಿಲ್ಲ. ಸಾಮಾನ್ಯ ನಾಣ್ಯಗಳಿಗಿಂತ ಇದಕ್ಕೆ ಹೆಚ್ಚಿನ ಬೆಲೆ ಇರಲಿದ್ದು, ಆರ್‌ಬಿಐ ದರ ನಿಗದಿ ಮಾಡಲಿದೆ. ಖರೀದಿಸಲು ಜನರಿಗೆ ಅವಕಾಶವಿದೆ. ನೂರನೇ ಕಾರ್ಯಕ್ರಮದ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ರಸಪ್ರಶ್ನೆ ಕಾರ್ಯಕ್ರಮದಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಭಾಗಿಯಾಗಿದ್ದಾರೆ. ಇದರಲ್ಲಿ ಪಾಲ್ಗೊಳ್ಳುವಂತೆ ಪ್ರಧಾನಿ ಕರೆ ನೀಡಿದ್ದರು.

ನೂರನೇ ಕಂತನ್ನು ಹೆಚ್ಚು ಜನರಿಗೆ ತಲುಪಿಸಲು ಬಿಜೆಪಿ ಮುಂದಾಗಿದೆ. ಕಾರ್ಯಕ್ರಮವನ್ನು ಈ ಬಾರಿ ವಿಶ್ವದ ಹಲವು ದೇಶಗಳಲ್ಲಿ ಪ್ರಸಾರ ಮಾಡಲು ಸಿದ್ಧತೆಗಳನ್ನು ನಡೆಸಲಾಗುತ್ತಿದೆ. ಪ್ರಧಾನಿ ಮೋದಿ ಅವರು ವಿಶ್ವನಾಯಕರಾಗಿ ಗುರುತಿಸಿಕೊಂಡಿದ್ದು, ಅವರ ಸ್ಫೂರ್ತಿದಾಯಕ ಮಾತುಗಳನ್ನು ಇಡೀ ಜಗತ್ತಿಗೆ ಕೇಳಿಸಲಿದ್ದೇವೆ ಎಂದು ಬಿಜೆಪಿ ಹೇಳಿದೆ. ಅಲ್ಲದೆ, ದೇಶದ 1 ಲಕ್ಷಕ್ಕೂ ಹೆಚ್ಚು ಕೇಂದ್ರಗಳಲ್ಲಿ ಪ್ರಧಾನಿ ಮನದ ಮಾತುಗಳನ್ನು ಜನರಿಗೆ ಕೇಳಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಬಹುತೇಕ ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಶೇಷ ಕೇಂದ್ರಗಳನ್ನು ತೆರೆಯಲಾಗುತ್ತಿದ್ದು, ಇಲ್ಲಿ ಬಾನುಲಿ ಕಾರ್ಯಕ್ರಮ ಪ್ರಸಾರಕ್ಕೆ ಏರ್ಪಾಡು ಮಾಡಲಾಗುತ್ತಿದೆ.

ಪ್ರತೀ ಲೋಕಸಭಾ ಕ್ಷೇತ್ರದಲ್ಲಿ 100ನೇ ಕಂತಿನ ಮನದ ಮಾತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರತೀ ಕ್ಷೇತ್ರದಲ್ಲಿ 100 ಕಾರ್ಯಕ್ರಮಗಳನ್ನು ಆಯೋಜಿಸಲು ತೀರ್ಮಾನಿಸಲಾಗಿದೆ. ಪ್ರತೀ ಕಾರ್ಯಕ್ರಮದಲ್ಲಿ 100 ಜನರು ಭಾಗವಹಿಸುವಂತೆ ಕಾರ್ಯಕ್ರಮವನ್ನು ವಿನ್ಯಾಸ ಮಾಡಲಾಗಿದೆ. ವೈದ್ಯರು, ಶಿಕ್ಷಕರು ಸೇರಿದಂತೆ ಎಲ್ಲ ವಲಯಗಳ ಜನರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಆಯಾ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಲೋಕಸಭಾ ಸದಸ್ಯರು, ರಾಜ್ಯಸಭಾ ಸದಸ್ಯರು ಪಾಲ್ಗೊಳ್ಳುವಂತೆ ಸೂಚಿಸಲಾಗಿದೆ. ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ, ಕೇಂದ್ರ ಸಚಿವರಾದ ಅಮಿತ್ ಶಾ, ರಾಜನಾಥ್ ಸಿಂಗ್ ಸೇರಿದಂತೆ ಹಲವು ಗಣ್ಯರು ತಮ್ಮ ಕ್ಷೇತ್ರಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದಾರೆ.

ತಮ್ಮ ಮನದ ಮಾತು ಕಾರ್ಯಕ್ರಮದಲ್ಲಿ ಪ್ರಧಾನಿ ಅವರು ಈವರೆಗೆ ಪ್ರಸ್ತಾಪಿಸಿರುವ, ಎಲೆಮರೆಯ ಕಾಯಿಯಂತಿರುವ ಸಾಧಕರನ್ನು ಸ್ಮರಿಸುವುದು ಹಾಗೂ ಅವರನ್ನು ಗೌರವಿಸುವುದು ಈ ಕಾರ್ಯಕ್ರಮದ ಕಾರ್ಯಕ್ರಮ ಪಟ್ಟಿಯಲ್ಲಿದೆ. ಆಯಾ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿರುವ ಇಂತಹ ಸಾಧಕರನ್ನು ಕಾರ್ಯಕ್ರಮದ ದಿನ ಸನ್ಮಾನಿಸಲಾಗುವುದು. ಜೊತೆಗೆ, ಪದ್ಮಭೂಷಣ ಮತ್ತು ಪದ್ಮವಿಭೂಷಣ ಪ್ರಶಸ್ತಿಗೆ ಭಾಜನರಾದವರನ್ನೂ ಇದೇ ವೇಳೆ ಸನ್ಮಾನಿಸುವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ. ಕಾರ್ಯಕ್ರಮವನ್ನು ಎಲ್ಲ ಶಿಕ್ಷಣ ಸಂಸ್ಥೆಗಳಿಗೂ ತಲುಪಿಸುವ ಯತ್ನಗಳು ನಡೆಯುತ್ತಿವೆ. ದೇಶದ ವಿಶ್ವವಿದ್ಯಾಲಯಗಳು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 100ನೇ ಕಂತಿನ ಕಾರ್ಯಕ್ರಮದ ಮಾಹಿತಿ ನೀಡುವ ಬ್ಯಾನರ್ ಅಳವಡಿಸಲು ಸೂಚಿಸಲಾಗಿದೆ.



ಸಚಿವ ಅಮಿತ್ ಶಾ ಅವರು ₹100 ಮುಖಬೆಲೆಯ ನಾಣ್ಯವನ್ನು ಬಿಡುಗಡೆ ಮಾಡಿದರು – ಪಿಟಿಐ ಚಿತ್ರ

ಆಧಾರ:www.mygov.in/campaigns/, ಪ್ರಧಾನಿ ಮೋದಿ ಅವರ ಟ್ವೀಟ್‌ಗಳು, ಪ್ರಧಾನಿ ಕಾರ್ಯಾಲಯದ ಟ್ವೀಟ್‌ಗಳು, ಪಿಟಿಐ

ಸಂಶೋಧನಾ ವರದಿಯಲ್ಲಿ ಉಲ್ಲೇಖ

3 ಬರಗಾಲಗಳಿಂದ ಸಿಂಧೂ ನಗರಗಳ ಅವಸಾನ'

ನವದೆಹಲಿ (ಪಿಟಿಐ): ಸರಣಿಯಂತೆ ಎರಗಿದ ಹಾಗೂ ಸುದೀರ್ಘ ಕಾಲ ಕಾಡಿದ ಮೂರು ಬರಗಾಲ ಪರಿಸ್ಥಿತಿಗಳಿಂದ ಸಿಂಧೂ ಬಯಲಿನ ನಾಗರಿಕತೆಯ ದೊಡ್ಡ ನಗರಗಳು ಅವಸಾನ ಆಗಿರಬಹುದು ಎಂದು ಹೊಸ ಅಧ್ಯಯನವೊಂದು ತಿಳಿಸಿದೆ.

ಈಗ್ಗೆ 4,200 ವರ್ಷಗಳ ಹಿಂದೆ ಶುರುವಾದ ಬರಗಾಲವು ಅಲ್ಲಿಂದ ಸುಮಾರು ಎರಡು ಶತಮಾನ ಮುಂದುವರಿದಿತ್ತು ಎಂದು 'ಕಮ್ಯುನಿಕೇಷನ್ಸ್ ಅರ್ಥ್ ಆ್ಯಂಡ್ ಎನ್ವಿರಾನ್‌ಮೆಂಟ್' ನಿಯತಕಾಲಿಕದಲ್ಲಿ ಪ್ರಕಟವಾಗಿರುವ ಸಂಶೋಧನಾ ವರದಿಯಲ್ಲಿ ಹೇಳಲಾಗಿದೆ.

'ಒಂದೊಂದು ಬರಗಾಲಗವೂ 25 ವರ್ಷದಿಂದ 90 ವರ್ಷಗಳವರೆಗೆ ಇದ್ದವು' ಎಂದು ಕೇಂಬ್ರಿಜ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಹಾಗೂ ಸಂಶೋಧನಾ ವರದಿಯ ಸಹಲೇಖಕ ಕ್ಯಾಮರಾನ್ ಪೆಟ್ರಿ ಅವರು ಹೇಳಿದ್ದಾರೆ.

ಉತ್ತರಾಖಂಡದ ಪಿತ್ತೋರ್‌ಗಢದ ಗುಹೆಯಿಂದ ಸಂಗ್ರಹಿಸಿದ ಕಲ್ಲಿನ ಮಾದರಿಯೊಂದನ್ನು ಬಳಸಿಕೊಂಡು ಸಂಶೋಧಕರು ಮಳೆಯ ಐತಿಹಾಸಿಕ ದತ್ತಾಂಶಗಳನ್ನು ನಕ್ಷೆಯ ರೂಪದಲ್ಲಿ ರಚಿಸಿದ್ದಾರೆ. ಸ್ಟಾಲಗ್ಮೈಟ್ ಎಂಬ ಸ್ವರೂಪದ ಕಲ್ಲಿನ ಮೇಲೆ ಸೃಷ್ಟಿಯಾಗುವ ವಿವಿಧ ಪದರಗಳ ಬೆಳವಣಿಗೆಯನ್ನು ಸಂಶೋಧನೆಗೆ ಒಳಪಡಿಸಿ, ಮಳೆ ಸುರಿದ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಇಂಗಾಲ ಹಾಗೂ ಕ್ಯಾಲ್ಸಿಯಂನಂತಹ ವಾತಾವರಣದ ಅಂಶಗಳನ್ನು ಅಂದಿನ ವಾತಾವರಣದ ವಿಶ್ಲೇಷಣೆಗೆ ಬಳಸಿಕೊಳ್ಳಲಾಗಿದೆ.

ಬರಗಾಲದ ಅವಧಿ ಎಷ್ಟಿತ್ತು ಹಾಗೂ ಎಷ್ಟು ವರ್ಷಗಳ ಹಿಂದೆ ಅದು ಸಂಭವಿಸಿತ್ತು ಎಂದು ತಿಳಿದುಕೊಳ್ಳಲು ಹೆಚ್ಚು ನಿಖರತೆಯಿಂದ ಕೂಡಿರುವ 'ಯುರೇನಿಯಂ ಡೇಟಿಂಗ್' ಪ್ರಕ್ರಿಯೆಯನ್ನು ತಜ್ಞರ ತಂಡ ನಿರ್ವಹಿಸಿದೆ.

ಹೀಗೆ ವಿವಿಧ ಆಯಾಮಗಳಲ್ಲಿ ಸಂಗ್ರಹಿಸಿದ ಭಿನ್ನ ಮಾದರಿಯ ಸಾಕ್ಷ್ಯಗಳನ್ನು ಒಟ್ಟಾಗಿಸಿ ನೋಡಿದಾಗ, ಈ ಎಲ್ಲ ಬರಗಾಲಗಳ ಸ್ವರೂಪಗಳು ಒಂದಕ್ಕೊಂದು ಸಂಬಂಧಿಸಿವೆ ಎಂಬ ವಿಚಾರ ಸಂಶೋಧನೆಯ ವೇಳೆ ದೃಢಪಟ್ಟಿತು ಎಂದು ಸಂಶೋಧನೆಯ ನೇತೃತ್ವ ವಹಿಸಿರುವ ಲೇಖಕಿ ಅಲೆನಾ ಗಿಶ್ಚೆ ಅವರು ಹೇಳಿದ್ದಾರೆ. ಇವರು ಕೇಂಬ್ರಿಜ್ ವಿಶ್ವವಿದ್ಯಾಲಯದ ಅರ್ಥ್ ಸೈನ್ಸಸ್ ವಿಭಾಗದಲ್ಲಿ ತಮ್ಮ ಪಿಎಚ್‌.ಡಿ ಅಧ್ಯಯನದ ಭಾಗವಾಗಿ ಈ ಸಂಶೋಧನೆ ನಡೆಸಿದ್ದಾರೆ.

ಬೇಸಿಗೆ ಹಾಗೂ ಚಳಿಗಾಲದಲ್ಲಿ ಸುರಿದ ವಾಡಿಕೆಗಿಂತ ಕಡಿಮೆ ಪ್ರಮಾಣದ ಮಳೆಯ ನಿಖರ ಅವಧಿಗಳನ್ನು ಗಿಶ್ಚೆ ಅವರ ತಂಡ ಗುರುತಿಸಿದೆ. ಬರಗಾಲದಿಂದಾಗಿ ಈ ಎರಡೂ ಫಸಲು ಬೆಳೆಯುವ ಋತುಗಳ ಮೇಲೆ ಆಗಿರುವ ಪರಿಣಾಮವು, ಇಂದಿನ ಜಾಗತಿಕ ಹವಾಮಾನ ಬದಲಾವಣೆಯನ್ನು ಅರ್ಥಮಾಡಿಕೊಳ್ಳಲು ಅತಿ ಮಹತ್ವದ್ದೆನಿಸಿದೆ ಎಂದು ಪೆಟ್ರಿ ಅವರು ಹೇಳಿದ್ದಾರೆ. ಈ ಎರಡೂ ಋತುಗಳಲ್ಲಿ ಕಂಡುಬಂದ ಬರಗಾಲದ ಅವಧಿಯು ಕ್ರಮೇಣ ದೀರ್ಘವಾಗುತ್ತಾ ಹೋಯಿತು. ಮೂರನೇ ಬರಗಾಲವು ಸುದೀರ್ಘ ಅವಧಿಯವರೆಗೆ ವಿಸ್ತರಿಸಿತ್ತು ಎಂದು ಸಂಶೋಧಕರು ಹೇಳಿದ್ದಾರೆ.

ಸ್ವಾವಲಂಬನೆ ಪಾಠ ಕಲಿಸಿದ ಬರಗಾಲ

ದೀರ್ಘಕಾಲ ಕಾಡಿದ ಬರಗಾಲವು ಬೃಹತ್ ನಗರಗಳ ಅವಸಾನಕ್ಕೆ ಕಾರಣವಾಯಿತು. ನಗರಗಳ ಜನರು ತಮ್ಮ ವಾಸಸ್ಥಾನವನ್ನು ನಗರಗಳಿಂದ ಹಳ್ಳಿಗಳಿಗೆ ಬದಲಿಸಿಕೊಂಡರು. ನಗರಗಳು ಖಾಲಿಯಾಗಿ, ಸಿಂಧೂ ಬಯಲಿನ ನಾಗರಿಕತೆಯ ಪೂರ್ವದ ಭಾಗದಲ್ಲಿದ್ದ ಹಳ್ಳಿಗಳಿಗೆ ಜನರು ಸ್ಥಳಾಂತರಗೊಂಡರು. ಸುಮಾರು 200 ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ, ಸಿಂಧೂ ನಾಗರಿಕತೆಯ ಜನರು ಸುಸ್ಥಿರತೆ ಸಾಧಿಸಲು ಹಲವು ಕ್ರಮಗಳನ್ನು ಅಳವಡಿಸಿಕೊಂಡರು. ಬೇಸಿಗೆ ಋತುವಿಗೆ ಹೊಂದಿಕೊಳ್ಳುವ ಬೆಳೆಗಳು ಹಾಗೂ ಬರಗಾಲವನ್ನು ತಡೆದುಕೊಳ್ಳುವ ಸಿರಿಧಾನ್ಯಗಳನ್ನು ಬೆಳೆಯಲು ಜನರು ಮುಂದಾದರು. ಜನರ ಜೀವನ ವಿಧಾನವೂ ಸ್ವಾವಲಂಬನೆಯತ್ತ ಹೊರಳಿಕೊಂಡಿತು ಎಂದು ವರದಿ ಹೇಳಿದೆ.

ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೇರಳದಲ್ಲಿ 'ಲವ್ ಜಿಹಾದ್'ಗೆ ಪ್ರೇರಣೆ ನೀಡಲಾಗುತ್ತಿದೆ ಎಂದು ಹೇಳಲಾಗುವ ಪೋಸ್ಟರ್‌ಗಳು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿವೆ. ಮುಸ್ಲಿಂ ಯುವಕ ಹಾಗೂ ಹಿಂದೂ ಯುವತಿ ಇರುವ ವಿಡಿಯೊ ಜಾಹೀರಾತು ವಿವಾದಕ್ಕೆ ಕಾರಣವಾಗಿದೆ. ಬ್ಯಾಗ್ ತಯಾರಿಕಾ ಸಂಸ್ಥೆ ವಿಐಪಿ ಸ್ಕೈಬ್ಯಾಗ್‌ನ ಜಾಹೀರಾತು ಇದಾಗಿದೆ ಎಂದು ಆರೋಪಿಸಲಾಗಿದೆ. ಮುಕೇಶ್ ನರೇಶ್ ಎಂಬ ಜಾಲತಾಣ ಬಳಕೆದಾರರು ಜಾಹೀರಾತಿಗೆ ವಿರೋಧ ವ್ಯಕ್ತಪಡಿಸಿದ್ದಾರೆ. ಆದರೆ ಈ ವಿಡಿಯೊವನ್ನು ತಿರುಚಲಾಗಿದ್ದು, ಈ ವಿಡಿಯೊ ಕುರಿತಂತೆ ಮಾಡಲಾಗಿರುವ ಆರೋಪಗಳು ಸುಳ್ಳು.



ವಿಡಿಯೊದಲ್ಲಿ ಎರಡು ಬೇರೆ ಬೇರೆ ದೃಶ್ಯಗಳನ್ನು ಸೇರಿಸಿ ಎಡಿಟ್ ಮಾಡಲಾಗಿದೆ ಎಂದು 'ದಿ ಕ್ವಿಂಟ್' ಹೇಳಿದೆ. ಮಲಯಾಳ ಚಿತ್ರರಂಗದ ಸುಮಿ ರಶೀಕ್ ಹಾಗೂ ವಿಷ್ಣು ವಿಜಯನ್ ಅವರು ನಟಿಸಿದ್ದ 'ಸೂಫಿಯುಮ್ ಸುಜಾತಯುಮ್' ಚಿತ್ರದ ಗೀತೆಯ ತುಣುಕೊಂದು ಈ ವಿಡಿಯೊದಲ್ಲಿದೆ. ಸ್ಕೈಬ್ಯಾಗ್ ಸಂಸ್ಥೆಯು 2015ರಲ್ಲಿ ನಿರ್ಮಿಸಿದ್ದ, ಬಾಲಿವುಡ್ ನಟ ವರುಣ್ ಧವನ್ ಕಾಣಿಸಿಕೊಂಡಿರುವ ಜಾಹೀರಾತಿನ ಒಂದು ದೃಶ್ಯವನ್ನು ಈ ವಿಡಿಯೊಗೆ ಸೇರಿಸಲಾಗಿದೆ. ಇದು ನಕಲಿ ವಿಡಿಯೊ ಎಂದು ವಿಐಪಿ ಬ್ಯಾಗ್ಸ್ ಸ್ಪಷ್ಟನೆ ನೀಡಿದ್ದು, ಪೊಲೀಸರಿಗೆ ದೂರನ್ನೂ ನೀಡಿದೆ. ವಿಡಂಬನೆ ಉದ್ದೇಶಕ್ಕೆ ತೆರೆಯಲಾಗಿರುವ 'ಪಫಿಂಗ್ಟನ್ ಘೋಸ್ಟ್' ಎಂಬ ಫೇಸ್‌ಬುಕ್ ಪುಟದಲ್ಲಿ, ತಿರುಚಲಾದ ಈ ವಿಡಿಯೊವನ್ನು ಮೊದಲು ಅಪ್‌ಲೋಡ್ ಮಾಡಲಾಗಿದೆ. ಇದನ್ನೇ ಕಂಪನಿಯ ಜಾಹೀರಾತು ಎಂಬುದಾಗಿ ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು 'ದಿ ಕ್ವಿಂಟ್' ವರದಿ ಮಾಡಿದೆ.

ಬೆರಗಿನ ಬೆಳಕು

ಗುರುರಾಜ ಕರಜಗಿ



ಕದಡಿದ ನೆಮ್ಮದಿ


ಗುಡಿಸಿಲೇ ನೊಣಹುಲ್ಲು ಕಡ್ಡಿ ಮಣ್ಣೆನ್ನುತಲಿ |
ಬಡವನಲಿ ಕೊರತೆಗಳ ನೆಡುವುದರಿದಲ್ಲ ||
ಕೆಡಿಸಿದಾ ಗುಡಿಸಲಿನ ನೆಮ್ಮದಿಯ ಮತ್ತೆಂತು |
ಕೊಡಲಹುದವಂಗೆ ನೀಂ – ಮಂಕುತಿಮ್ಮ || 872 ||

ಪದ-ಅರ್ಥ: ಗುಡಿಸಿಲೇನೊಣಹುಲ್ಲು = ಗುಡಿಸಿಲು + ಏನು + ಒಣಹುಲ್ಲು, ನೆಡುವುದರಿದಲ್ಲ = ನೆಡುವುದು + ಅರಿದು(ಸರಿ, ಸೂಕ್ತ) + ಅಲ್ಲ, ಕೊಡಲಹುದವಂಗೆ = ಕೊಡಲು + ಅಹುದು + ಅವಂಗೆ(ಅವನಿಗೆ).

ವಾಚ್ಯಾರ್ಥ: ಈ ಗುಡಿಸಲೇನು? ಬರೀ ಒಣಹುಲ್ಲು, ಕಡ್ಡಿ, ಮಣ್ಣಿನಿಂದಾದ್ದು ಎಂದು ಹೇಳಿ ಅಲ್ಲಿ ವಾಸಿಸುತ್ತಿರುವ ಬಡವನಲ್ಲಿ ಕೊರತೆಗಳನ್ನು ನೆಟ್ಟು ನೆಮ್ಮದಿಯನ್ನು ಕೆಡಿಸುವುದು ಸರಿಯಲ್ಲ. ಹಾಗೆ ಹಾಳಾದ ಅವನ ನೆಮ್ಮದಿಯನ್ನು ನೀನು ಯಾವ ರೀತಿಯಿಂದ ತುಂಬಿ ಕೊಡಬಲ್ಲೆ?

ವಿವರಣೆ: ಬದುಕಿನಲ್ಲಿ ಅತ್ಯಂತ ಮುಖ್ಯವಾದದ್ದು ಮತ್ತು ಅವಶ್ಯವಾದದ್ದು ನೆಮ್ಮದಿ. ನೆಮ್ಮದಿಯನ್ನು ಪಡೆಯುವುದು ಬದುಕಿನ ಉದ್ದೇಶವೂ ಹೌದು. ನಾನೊಮ್ಮೆ ದೆಹಲಿಯಿಂದ ಬರುವಾಗ ರೈಲು ನಿಲ್ದಾಣಕ್ಕೆ ಹೋದೆ. ಆಗ ರಾತ್ರಿ ಹತ್ತು ಗಂಟೆಯಾಗಿರಬೇಕು. ಫೆಬ್ರುವರಿ ತಿಂಗಳು, ಮೈ ಕೊರೆಯುವ ಚಳಿ. ಪ್ಲಾಟ್‌ಫಾರ್ಮ್ ಮೇಲೊಂದು ಕಲ್ಲು ಬೆಂಚು. ಅಲ್ಲೊಬ್ಬ ಮೊಣಕಾಲು ಮಡಚಿಕೊಂಡು ಮಲಗಿ ಗೊರಕೆ ಹೊಡೆಯುತ್ತಿದ್ದಾನೆ. ಅವನಿಗೆ ಹೊದ್ದಿಕೆ ಇಲ್ಲ. ಆದರೂ ನಿದ್ರೆಗೆ ತೊಂದರೆ ಇಲ್ಲ. ನಾನು ರೈಲಿನಲ್ಲಿ ಏರಿದೆ. ಅದು ಪ್ರಥಮ ದರ್ಜೆಯ ಹವಾನಿಯಂತ್ರಿತ ಬೋಗಿ. ನನ್ನ ಪಕ್ಕದಲ್ಲೊಬ್ಬರು ಮಲಗಿದ್ದರು. ಒಳಗಡೆ ಅತ್ಯಂತ ಮೃದುವಾದ ಹಾಸಿಗೆ, ಬೆಚ್ಚನೆಯ ಹೊದ್ದಿಕೆ, ಸರಿಯಾದ ಶಾಖವನ್ನು ನೀಡುವ ಹವಾನಿಯಂತ್ರಣ ವ್ಯವಸ್ಥೆ ಎಲ್ಲವೂ ಇದ್ದವು. ಪಾಪ! ಪಕ್ಕದವರು ನಿದ್ರೆ ಬರದೆ ರಾತ್ರಿಯೆಲ್ಲ ಒದ್ದಾಡುತ್ತಿದ್ದರು. ಮರುದಿನ ಬೆಳಿಗ್ಗೆ ಹೇಳಿದರು, "ನಿನ್ನೆ ರಾತ್ರಿಯೆಲ್ಲ ನಿದ್ರೆ ಬರಲಿಲ್ಲ, ಏನೋ ಯೋಚನೆಗಳು!". ಏನೂ ಇಲ್ಲದೆ ಚಳಿಯಲ್ಲಿ ಕಲ್ಲುಬೆಂಚಿನ ಮೇಲೆ ಮಲಗಿದವನಿಗೆ ಸೊಂಪಾದ ನಿದ್ರೆ. ಇವರಿಗೆ ಎಲ್ಲ ಅನುಕೂಲಗಳಿದ್ದೂ ನಿದ್ರೆಯಿಲ್ಲ! ನಿದ್ರೆಗೆ ಅನನುಕೂಲತೆಗಳು ಬೇಕಿಲ್ಲ. ಬೇಕಿದ್ದದ್ದು ಮನಸ್ಸಿನ ನೆಮ್ಮದಿ. ಆ ನೆಮ್ಮದಿಗೆ ಹಣ, ಸೌಕರ್ಯ, ಅಲಂಕಾರ, ಸ್ಥಾನ, ಅಧಿಕಾರ ಯಾವುದೂ ಬೇಕಿಲ್ಲ. ಈ ಮಾತನ್ನು ಕಗ್ಗ ತಿಳಿಸುತ್ತದೆ. ಬಡವನೊಬ್ಬ ಗುಡಿಸಲಿನಲ್ಲಿ ಇದ್ದಾನೆ. ಅವನು ಅಲ್ಲಿಯೇ ನೆಮ್ಮದಿಯನ್ನು, ಶಾಂತಿಯನ್ನು ಪಡೆದಿದ್ದಾನೆ. ಒಬ್ಬ ಸಮಾಜಸುಧಾರಕನೆಂಬುವವನು, ಇದೇನು ಗುಡಿಸಲು? ಬರೀ ಒಣಹುಲ್ಲು, ಕಡ್ಡಿ, ಮಣ್ಣುಗಳ ಗೂಡು. ಇದು ಅಸ್ಥಿರವಾದದ್ದು, ಅಭದ್ರವಾದದ್ದು ಎಂದು ಭಯ ಹುಟ್ಟಿಸಿ ಅವನ ನೆಮ್ಮದಿಯನ್ನು ಕೆಡಿಸುವುದು ಸರಿಯೆ? ಅವನಿಗೆ ತನ್ನ ಗುಡಿಸಲಿನ ಬಗ್ಗೆಯೇ ಕೀಳರಿಮೆ ಬಂದರೆ ಮತ್ತೆ ಅಲ್ಲಿ ಆತ ನೆಮ್ಮದಿಯನ್ನು ಪಡೆದಾನೆಯೇ? ಮುಂದೆ ನಾವೆಷ್ಟೇ ಹೇಳಿದರೂ ಆತನಿಗೆ ಮೊದಲಿನ ನೆಮ್ಮದಿ ಬರುವುದು ಕಷ್ಟ. ಅದಕ್ಕೇ ಕಗ್ಗ ಹೇಳುತ್ತದೆ, ವ್ಯವಸ್ಥೆಯನ್ನು ಸರಿಮಾಡುವ ಆತುರದಲ್ಲಿ ಭರದಲ್ಲಿ, ವ್ಯವಸ್ಥೆಯಲ್ಲಿಯೇ ನೆಮ್ಮದಿಯನ್ನು ಪಡೆದಿದ್ದವರ ಮನಸ್ಸನ್ನು ಕೆಡಿಸುವುದು ಬೇಡ. ಸವಲತ್ತುಗಳಿಗಿಂತ ನೆಮ್ಮದಿ ಮುಖ್ಯ.

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಏಪ್ರಿಲ್ 28, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ಅಷ್ಟಮಿ ಗಂ. 16-02 ನಕ್ಷತ್ರ: ಪುಷ್ಯ ಗಂ. 9-53 ಯೋಗ: ಶೂಲ ಗಂ. 09-38, ಕರಣ: ಬವ ಗಂ. 16-02, ಮೇಷ ಮಾಸದ 14 ನೇ ದಿನ, ಮಳೆನಕ್ಷತ್ರ: ಭರಣಿ 1. ರಾಹುಕಾಲ : ಬೆಳಿಗ್ಗೆ 10-30 – 12-00, ಸೂರ್ಯೋದಯ : 06-14 ಸೂರ್ಯಾಸ್ತ : 06-42, ಮುಸ್ಲಿಂ ದಿನಾಂಕ : 07 ಶವ್ವಾಲ್
ಅದೃಷ್ಟ ಸಂಖ್ಯೆ : 5, 9

ಮೇಷ: ಬಾಣಸಿಗರಿಗೆ ನಿಮ್ಮ ಕಾರ್ಯದ ಶುಚಿತ್ವವು ರುಚಿತ್ವದಷ್ಟೇ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ. ಅನಿರೀಕ್ಷಿತ ಬಂಧುಗಳ ಆಗಮನ ದಿನಚರಿಯನ್ನು ಬದಲು ಮಾಡುತ್ತದೆ. ಜಿಜ್ಞಾಸಿಗಳಿಗೆ ಉತ್ತಮ ಸಹ ಚರ್ಚೆಗಳು ದೊರೆಯುತ್ತಾರೆ.

ವೃಷಭ: ನಿಮ್ಮ ಪ್ರಭಾವದಿಂದ ಬೇರೆಯವರು ಲಾಭ ಪಡೆಯುವಷ್ಟು ಯೋಗ್ಯತೆ ನಿಮ್ಮದಾಗುತ್ತದೆ. ವಿದ್ಯಾರ್ಥಿಗಳಿಗೆ ಸ್ವಪ್ರಯತ್ನದ ಪರಿಶ್ರಮಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ. ಪಿತ್ರಾರ್ಜಿತ ಆಸ್ತಿ ಸಿಗುವುದು.

ಮಿಥುನ: ನಿಮ್ಮ ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯ ಸಮ್ಮತ ಬಗೆಹರಿಸಿಕೊಳ್ಳುವ ಪ್ರಯತ್ನ ಮಾಡಿ. ಪಿತೃ ಸಮಾನರಿಂದ ಮನೆಯಲ್ಲಿ ನಡೆಯುವ ಶುಭ ಸಮಾರಂಭಕ್ಕೆ ಆಶೀರ್ವಾದ ಪಡೆಯಲು ಮರೆಯದಿರಿ.

ಕರ್ಕಾಟಕ: ಉತ್ಸಾಹದಿಂದ ಕೆಲಸ ಆರಂಭಿಸಿದಲ್ಲಿ ಸಮಸ್ಯೆಗಳು ಪರಿಹಾರಗೊಳ್ಳಲಿವೆ. ಬಹುಜನರ ಒಡನಾಟದಿಂದ ವಿಶ್ವಾಸ, ಪ್ರೀತಿ ಪಡೆಯುವಂತಾಗುವುದು. ದಾನ- ಧರ್ಮ ಸ್ವಭಾವ ದುರುಪಯೋಗಪಡಿಸಿಕೊಳ್ಳದಂತೆ ಜಾಗ್ರತೆ ವಹಿಸಿ.

ಸಿಂಹ: ಕುಟುಂಬ ನಿರ್ವಹಣೆಗಾಗಿ ಅಧಿಕ ಮಟ್ಟಿನ ಖರ್ಚು ಮಾಡಬೇಕಾದ ಪರಿಸ್ಥಿತಿ ಎದುರಾದರೂ ಆದಾಯಕ್ಕೇನೂ ಕೊರತೆ ಇರುವುದಿಲ್ಲ. ವೈಯಕ್ತಿಕ ಜೀವನ ತೃಪ್ತಿ ಎನಿಸಲಿದೆ, ಮನೆಯಲ್ಲಿಯೂ ನೆಮ್ಮದಿಯ ವಾತಾವರಣ ಇರಲಿದೆ.

ಕನ್ಯಾ: ಗುಂಪು ಚಟುವಟಿಕೆಯಲ್ಲಿ ಮುಂದಾಳತ್ವವು ನಿಮ್ಮದಾಗಲಿದೆ. ಗೌರವಾನ್ವಿತ ವ್ಯಕ್ತಿಯೆಂದು ಅನಿಸಿಕೊಂಡ ನಿಮಗೆ ಸಮಾಜದಲ್ಲಿ ಅಪಮಾನವಾಗಬಹುದು. ವೃತ್ತಿಯಲ್ಲಿ ನಿರ್ಧಾರ ತೆಗೆದುಕೊಳ್ಳುವಾಗ ದುಡುಕಬೇಡಿ.

ತುಲಾ: ಮೃದು ಧೋರಣೆ ಸಿಬ್ಬಂದಿ ವರ್ಗಕ್ಕೆ ಮತ್ತು ನಿಮ್ಮ ಪರಿವಾರಕ್ಕೆ ಆಶ್ಚರ್ಯವೆನಿಸುವುದು. ನೀವು ಮಾಡುತ್ತಿರುವ ಪರೋಪಕಾರದ ಕೆಲಸಗಳಿಗೆ ಸಕಾರಾತ್ಮಕ ಪ್ರತಿಫಲ ಕಟ್ಟಿಟ್ಟ ಬುತ್ತಿಯಾಗಿರುತ್ತದೆ. ಅದರ ಫಲ ನಿರೀಕ್ಷಿಸಬೇಡಿ.

ವೃಶ್ಚಿಕ: ಅನಿರೀಕ್ಷಿತ ವರ್ಗಾವಣೆಯಿಂದ ಅನುಕೂಲ ಉಂಟಾಗುವುದು. ಕುಟುಂಬದ ಅಭಿವೃದ್ಧಿಗೆ ಉತ್ತಮ ಯೋಚನೆಗಳು ಬರಲಿದೆ, ಅದನ್ನು ಉಪಯೋಗಿಸಿಕೊಳ್ಳಿ. ಪ್ರಯಾಣದಿಂದ ಆಯಾಸವಾಗಬಹುದು.

ಧನು: ಮೇಲಧಿಕಾರಿಗಳ ಜೊತೆಯಲ್ಲಿ ಮಿತ್ರತ್ವವನ್ನು ಕಾಪಾಡಿಕೊಳ್ಳಿ, ಇಲ್ಲವಾದಲ್ಲಿ ಪಶ್ಚಾತ್ತಾಪ ಪಡಬೇಕಾಗುವುದು. ಸ್ವಂತ ಉದ್ಯೋಗಿಗಳಿಗೆ ವೃತ್ತಿಯಲ್ಲಿ ಲಾಭವಾಗುವುದು. ನೂತನ ವಸ್ತ್ರ ಖರೀದಿಯ ಯೋಗವಿದೆ.

ಮಕರ: ನಿಮ್ಮ ವ್ಯವಹಾರಿಕವಾದ ಕಲ್ಪನೆಗಳು ಗರಿಗೆದರುವುವು. ಸ್ವಂತ ಉದ್ಯಮದಲ್ಲಿರುವವರು ತಮ್ಮ ಕಾರ್ಯ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಿಕೊಳ್ಳುವುದರಲ್ಲಿ ಬಹಳ ಉತ್ಸಾಹ ತೋರಿ ಅದರಲ್ಲಿ ಸಫಲತೆಯನ್ನು ಹೊಂದುವರು.

ಕುಂಭ: ಸಲಹೆ ಸೂಚನೆಗಳನ್ನು ಹೆಚ್ಚಿನ ಯೋಚನೆ ಇಲ್ಲದೆ ನಿಮ್ಮ ಮೇಲಧಿಕಾರಿಗಳು ಒಪ್ಪುವಂತೆ ಆಗುತ್ತದೆ. ಮಕ್ಕಳ ಸರ್ವತೋಮುಖ ಚಟು ವಟಿಕೆ ಮತ್ತು ವಿದ್ಯಾಭ್ಯಾಸವು ಉತ್ತಮವಾಗಿದ್ದು, ಕುಟುಂಬದಲ್ಲಿ ಶಾಂತಿ ತುಂಬಿರುತ್ತವೆ.

ಮೀನ: ಕುಟುಂಬದಲ್ಲಿದ್ದ ಭಿನ್ನಾಭಿಪ್ರಾಯ ಹೋಗಲಾಡಿಸಿ ಸಂಘಟಿಸಲು, ಮನೆಯವರಲ್ಲಿ ಚರ್ಚೆ ಮಾಡಲು ಸುದಿನ. ನಿರೀಕ್ಷೆಗೆ ತಕ್ಕ ಪ್ರತಿಕ್ರಿಯೆಯಿಂದ ನೆಮ್ಮದಿ ಹೆಚ್ಚುವುದು. ಕೆಲಸ ಕಾರ್ಯದಲ್ಲಿ ಕಷ್ಟಗಳು ಎದುರಾಗಬಹುದು.

ಪದಬಂಧ 5302


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಯೋಗವಿದ್ದರೆ ಮಾತ್ರ ಅಗಲುವಿಕೆ! (3)
3.ಕುದುರೆ ಲಾಯವಿದು (3)
6.ರೀತಿಯೊಡನೆ ಬರುವ ಜೋಡುನುಡಿ (3)
7.ಇಬ್ಬಂದಿಯೇನಿಲ್ಲ! ಕಚೇರಿಯ ನೌಕರ ವರ್ಗ! (3)
8.ವಿರಳವಾಗಿರುವ ನಲ್ಮೆ (3)
9.ಚಿತೆಯೊಳಗೆ ಶೂನ್ಯವಿದ್ದಾಗ ಈ ಯೋಚನೆ! (2)
10.ಬದಿಯಲ್ಲಿರುವ ಜೈನ ದೇವಾಲಯ (3)
12.ತೀರ ದೂರವಿರುವ ದಡ! (2)
14.ಬಿನ್ನಹ ಹೀಗೆ ಬಂದಿದೆ (3)
15.ರಾಜನ ದರ್ಬಾರು (3)
16.ಮರದ ಹತ್ತಿರ ನಡೆದ ಕಾಳಗ (3)
17.ಕುಂಬಾರನ ಚಕ್ರವಿದು (3)
18.ಸಿದ್ಧತೆಗೊಂದು ಪರ್ಯಾಯ ಪದ (3)

ಮೇಲಿಂದ ಕೆಳಕ್ಕೆ

1.ಕೆಂಗಲ್ ಹನುಮಂತಯ್ಯ ನಿರ್ಮಿಸಿದ ಭವ್ಯ ಕಟ್ಟಡ (5)
2.ಗರಿ ಹಿಡಿದವನ ಹಿರಿಮೆ! (3)
3.ಮಧುರವಾದುದನ್ನು ಹೀಗೆನ್ನಿ (3)
4.ವಿಲಾಸಪ್ರಿಯತೆಯಿದು (4)
5.ಮಂದಿ ಹತ್ತಿರವಿರುವ ಸೂಕರ (2)
9.ಮಂದಿ ಆಯುತ್ತಿರುವ ಹರುಕು ಬಟ್ಟೆ ಇಲ್ಲಿದೆ (2)
10.ಬಡವರ ನಾಡಿನಲ್ಲಿ ಆವರಿಸಿದ ಕ್ಷಾಮ (2)
11.ವಿರಮಿಸಿಕೊಳ್ಳುವ ಮನೆಯಿದು (5)
12.ಚುರುಕಾದ ಗಮನ (4)
13.ಉತ್ತಮ ಜಾತಿಯ ಜೇನುತುಪ್ಪ (3)
14.ಸರಸದ ವಿರುದ್ಧ ಪದ (3)
15.ಓದಲೆಂದು ಬರೆದ ಪತ್ರ! (2)



5301ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಋಗ್ವೇದ 4.ಸಂಭವ 6.ಜವಾಬುದಾರಿ 7.ನಭ 9.ನವ 10.ಶಿಷ್ಯ 11.ಸುತ 13.ಮನೋವಿಕಾರ 16.ಮೆದುಳು 17.ನೆನಪು

ಮೇಲಿಂದ ಕೆಳಕ್ಕೆ
1.ಋತುಮಾನ 2.ದನುಜ 3.ಸಬೂಬು 4.ಸಂಚಾರಿ 5.ವಜ್ರೋತ್ಸವ 8.ಭವಿಷ್ಯ 9.ನನಸು 10.ಶಿರೋನಾಮೆ 12.ತಲೆಗಾಪು 13.ಮರಳು 14.ವಿಶೇಷ 15.ರವಾನೆ

ಸುಡೊಕು 5688

				8			6	7
	7		1		6			3
3		5		2		9		
	8	7					1	
		4	7	6	3	8		
5	9						7	4
		2		7		1		5
1	4		2		5		9	
	5			4		2		8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5687 ನಸುಡೊಕು

2	7	9	4	5	3	6	8	1
6	4	3	1	8	7	2	5	9
8	1	5	2	6	9	7	3	4
3	8	4	7	2	6	1	9	5
7	9	2	8	1	5	4	6	3
5	6	1	9	3	4	8	2	7
9	2	7	5	4	8	3	1	6
1	5	6	3	7	2	9	4	8
4	3	8	6	9	1	5	7	2

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,813
ಇಂದಿನ ಅಂತ್ಯ	17,915
▲	102
ದಿನದ ಗರಿಷ್ಠ	17,931

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹475
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹475

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1630 (1665))
ಸೋಯಾ (ರಿಫೈನ್ಡ್)	₹970 (980)
ಸೂರ್ಯಕಾಂತಿ (ರಿಫೈನ್ಡ್)	₹1030 (1040)
ಪಾಮೋಲೀನ್	₹935 (940)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹149.50
ಆರ್‌ಎಸ್‌ಎಸ್-5	₹144
ಗುಡ್ ಲಾಟ್	₹132.50

ಈರುಳ್ಳಿ ಧಾರಣೆ



(ಕ್ವಿಂಟಲ್‌ಗೆ)


ದಪ್ಪ	₹1000-1600
ಮಧ್ಯಮ	₹800-1000
ಸಣ್ಣ	₹400-800

ಅದೃಷ್ಟ ಬಲದ ಆಟ, ಕೌಶಲ ಆಧಾರಿತ ಆಟಕ್ಕೆ ಪ್ರತ್ಯೇಕ ತೆರಿಗೆ

ಆನ್‌ಲೈನ್ ಆಟದ ವರ್ಗೀಕರಣ?

ಮುಖ್ಯಾಂಶಗಳು

- ಭಿನ್ನ ಬಗೆಯ ಆಟಗಳಿಗೆ ಭಿನ್ನ ಹಂತದ ತೆರಿಗೆ
- ಜಿಎಸ್‌ಟಿ ಮಂಡಳಿ ಸಭೆಯಲ್ಲಿ ಅಂತಿಮ ತೀರ್ಮಾನ



ನವದೆಹಲಿ (ಪಿಟಿಐ): ಆನ್‌ಲೈನ್ ಆಟಗಳನ್ನು ಅದೃಷ್ಟದ ಆಧಾರದಲ್ಲಿ ನಡೆಯುವುದು ಹಾಗೂ ಕೌಶಲದ ಆಧಾರದಲ್ಲಿ ನಡೆಯುವುದು ಎಂದು ವರ್ಗೀಕರಿಸಲು ಕೇಂದ್ರ ಹಣಕಾಸು ಸಚಿವಾಲಯವು ಚಿಂತನೆ ನಡೆಸಿದೆ. ಆನ್‌ಲೈನ್ ಆಟಗಳನ್ನು ಈ ಬಗೆಯಲ್ಲಿ ವರ್ಗೀಕರಿಸಿದ ನಂತರ, ಎರಡಕ್ಕೂ ಬೇರೆ ಬೇರೆ ಪ್ರಮಾಣದಲ್ಲಿ ಜಿಎಸ್‌ಟಿ ವಿಧಿಸುವ ಆಲೋಚನೆಯು ಸಚಿವಾಲಯಕ್ಕೆ ಇದೆ ಎಂದು ಮೂಲಗಳು ಹೇಳಿವೆ.

ಆನ್‌ಲೈನ್ ಆಟಗಳಲ್ಲಿ ಗೆಲುವು ಸಾಧಿಸುವುದು ಜೂಜು ಅಥವಾ ಬಾಜಿಗೆ ಸಮ ಎಂದಾದರೆ ಅದಕ್ಕೆ ಶೇ 28ರಷ್ಟು ತೆರಿಗೆ ವಿಧಿಸಲಾಗುತ್ತದೆ. ಕೌಶಲ ಆಧರಿಸಿ ಆಟಗಳಲ್ಲಿ ಜಯ ಸಾಧಿಸಬಹುದು ಎಂದಾದರೆ ಅಂತಹ ಆಟಗಳಿಗೆ ಶೇ 18ರಷ್ಟು ತೆರಿಗೆ ವಿಧಿಸಲಾಗುತ್ತದೆ. ಈ ವಿಚಾರವಾಗಿ ಅಂತಿಮ ತೀರ್ಮಾನವನ್ನು ಜಿಎಸ್‌ಟಿ ಮಂಡಳಿ ಕೈಗೊಳ್ಳಲಿದೆ. ಮಂಡಳಿಯ ಮುಂದಿನ ಸಭೆಯು ಮೇ ಅಥವಾ ಜೂನ್ ತಿಂಗಳಲ್ಲಿ ನಡೆಯುವ ಸಾಧ್ಯತೆ ಇದೆ.

'ಆನ್‌ಲೈನ್ ಆಟಗಳೆಲ್ಲ ಜೂಜು ಅಥವಾ ಬಾಜಿಗೆ ಸಮ ಅಲ್ಲ. ಹಣಕಾಸು ಸಚಿವಾಲಯವು ತನ್ನ ಅಭಿಪ್ರಾಯವನ್ನು ಜಿಎಸ್‌ಟಿ ಮಂಡಳಿಗೆ ತಿಳಿಸಲಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಕೌಶಲ ಆಧರಿಸಿದ ಆನ್‌ಲೈನ್ ಆಟವೆಂದರೆ ಯಾವುದು, ಅದೃಷ್ಟದ ಆಧಾರದಲ್ಲಿ ನಡೆಯುವ ಆಟ ಯಾವುದು ಎಂಬುದನ್ನು ಗುರುತಿಸುವ ಕೆಲಸ ಆಗಬೇಕಿದೆ.

ಈಗಿರುವ ನಿಯಮಗಳ ಅನ್ವಯ ಆನ್‌ಲೈನ್ ಆಟಗಳಿಗೆ ಶೇ 18ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಕೋವಿಡ್ ಲಾಕ್‌ಡೌನ್ ಸಂದರ್ಭದಲ್ಲಿ ದೇಶದಲ್ಲಿ ಆನ್‌ಲೈನ್ ಆಟಗಳನ್ನು ಆಡುವವರ ಸಂಖ್ಯೆಯು ಭಾರಿ ಪ್ರಮಾಣದಲ್ಲಿ ಹೆಚ್ಚಳವಾಗಿತ್ತು. ಕೆಪಿಎಂಜಿ ಸಿದ್ಧಪಡಿಸಿದ ವರದಿಯೊಂದರ ಅನ್ವಯ, 2024–25ರ ಹೊತ್ತಿಗೆ ದೇಶದ ಆನ್‌ಲೈನ್ ಆಟ ಉದ್ಯಮವು ₹ 29 ಸಾವಿರ ಕೋಟಿ ಗಾತ್ರಕ್ಕೆ ಬೆಳೆಯಲಿದೆ.

ಆನ್‌ಲೈನ್ ಆಟಗಳಿಗೆ ವಿಧಿಸಬೇಕಿರುವ ತೆರಿಗೆ ಪ್ರಮಾಣ ಕುರಿತು ಸಚಿವರ ಸಮಿತಿಯೊಂದು, ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಡಿಸೆಂಬರ್‌ನಲ್ಲಿ ವರದಿ ಸಲ್ಲಿಸಿದೆ. ಆನ್‌ಲೈನ್ ಆಟಗಳಿಗೆ ಶೇ 28ರಷ್ಟು ತೆರಿಗೆ ವಿಧಿಸಬೇಕು ಎಂದು ಸಮಿತಿಯು ಹೇಳಿದೆ. ಆದರೆ, ತೆರಿಗೆಯನ್ನು ಲೆಕ್ಕಹಾಕುವಾಗ ಪೋರ್ಟಲ್‌ಗಳು ಪಡೆಯುವ ಶುಲ್ಕವನ್ನು ಪರಿಗಣಿಸಬೇಕೋ ಅಥವಾ ಆಟವಾಡಲು ಬರುವವರು ಬಾಜಿಯ ರೂಪದಲ್ಲಿ ಕಟ್ಟುವ ಮೊತ್ತವನ್ನೂ ಸೇರಿಸಿ ಪರಿಗಣಿಸಬೇಕೋ ಎಂಬ ವಿಚಾರವಾಗಿ ಒಮ್ಮತ ಮೂಡಿರಲಿಲ್ಲ. ಹೀಗಾಗಿ ಇಡೀ ವಿಷಯವನ್ನು ಜಿಎಸ್‌ಟಿ ಮಂಡಳಿಯ ವಿವೇಚನೆಗೆ ಬಿಡುವ ತೀರ್ಮಾನವನ್ನು ಸಮಿತಿಯು ಕೈಗೊಂಡಿತ್ತು.

ಇಡೀ ಮೊತ್ತಕ್ಕೆ ಶೇ 28ರಷ್ಟು ತೆರಿಗೆ ವಿಧಿಸಿದರೆ, ಆಟದಲ್ಲಿ ಗೆದ್ದವರಿಗೆ ಕೊಡಲು ಸಿಗುವ ಮೊತ್ತವು ಕಡಿಮೆ ಆಗುತ್ತದೆ. ಆಗ, ನ್ಯಾಯಬದ್ಧವಾಗಿ ತೆರಿಗೆ ಕಡಿತ ಮಾಡುವ ಪೋರ್ಟಲ್‌ಗಳಿಂದ ಜನ ವಿಮುಖರಾಗುತ್ತಾರೆ. ಆನ್‌ಲೈನ್ ಆಟ ಇಷ್ಟಪಡುವವರು, ನ್ಯಾಯಬದ್ಧವಾಗಿ ತೆರಿಗೆ ಕಡಿತ ಮಾಡದೆ ಇರುವ ಪೋರ್ಟಲ್‌ಗಳತ್ತ ಮುಖ ಮಾಡುವ ಸಾಧ್ಯತೆ ಇರುತ್ತದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದರು.

ಎಚ್‌ಯುಎಲ್ ನಿವ್ವಳ ಲಾಭ ಶೇ 13ರಷ್ಟು ಏರಿಕೆ

ನವದೆಹಲಿ (ಪಿಟಿಐ): ಎಫ್‌ಎಂಸಿಜಿ ವಲಯದ ಪ್ರಮುಖ ಕಂಪನಿ ಹಿಂದುಸ್ತಾನ್ ಯೂನಿಲಿವರ್ ಲಿಮಿಟೆಡ್ (ಎಚ್‌ಯುಎಲ್) ನಿವ್ವಳ ಲಾಭವು 2023ರ ಮಾರ್ಚ್ 31ಕ್ಕೆ ಕೊನೆಗೊಂಡ ನಾಲ್ಕನೇ ತ್ರೈಮಾಸಿಕದಲ್ಲಿ ಶೇ 12.74ರಷ್ಟು ಹೆಚ್ಚಾಗಿ ₹ 2,601 ಕೋಟಿಗೆ ತಲುಪಿದೆ.

2021–22ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಕಂಪನಿಯು ₹ 2,307 ಕೋಟಿ ನಿವ್ವಳ ಲಾಭ ಗಳಿಸಿತ್ತು. ವರಮಾನ ₹ 15,375 ಕೋಟಿ ಆಗಿದೆ.

2022–23ನೇ ಹಣಕಾಸು ವರ್ಷಕ್ಕೆ ನಿವ್ವಳ ಲಾಭ ಶೇ 14.06ರಷ್ಟು ಹೆಚ್ಚಾಗಿ ₹ 10,143 ಕೋಟಿಗೆ ತಲುಪಿದೆ. ಕಾರ್ಯಾಚರಣಾ ವರಮಾನ ಶೇ 15.49ರಷ್ಟು ಏರಿಕೆ ಕಂಡು ₹ 59,443 ಕೋಟಿಗೆ ತಲುಪಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಲಾಭಾಂಶ: 2022–23ನೇ ಹಣಕಾಸು ವರ್ಷಕ್ಕೆ ಪ್ರತಿ ಷೇರಿಗೆ ₹ 22ರಷ್ಟು ಅಂತಿಮ ಲಾಭಾಂಶ ನೀಡಲು ಕಂಪನಿಯ ಆಡಳಿತ ಮಂಡಳಿ ಶಿಫಾರಸು ಮಾಡಿದೆ.

ಏರ್ ಇಂಡಿಯಾ: ಸಾವಿರಕ್ಕೂ ಅಧಿಕ ಪೈಲಟ್ ನೇಮಕ?

ನವದೆಹಲಿ (ಪಿಟಿಐ): ಏರ್ ಇಂಡಿಯಾ ವಿಮಾನಯಾನ ಕಂಪನಿಯು ಕ್ಯಾಪ್ಟನ್, ಟ್ರೈನರ್ ಒಳಗೊಂಡು ಒಟ್ಟು ಸಾವಿರಕ್ಕೂ ಅಧಿಕ ಪೈಲಟ್‌ಗಳನ್ನು ನೇಮಿಸಿಕೊಳ್ಳಲಿದೆ.

ಟಾಟಾ ಸಮೂಹದ ಒಡೆತನದ ಕಂಪನಿಯು ತನ್ನ ಜಾಲ ಮತ್ತು ಕಾರ್ಯಾಚರಣೆ ವಿಸ್ತರಿಸುವ ಭಾಗವಾಗಿ ಈ ನೇಮಕ ಮಾಡಿಕೊಳ್ಳಲಿದೆ. ಕಂಪನಿಯಲ್ಲಿ ಸದ್ಯ 1,800ಕ್ಕೂ ಅಧಿಕ ಪೈಲಟ್‌ಗಳಿದ್ದಾರೆ.

ಸುದ್ದಿ 2 ನಿಮಿಷ

ತುಸು ತಗ್ಗಿದ ವಿಪ್ರೊ ನಿವ್ವಳ ಲಾಭ

ನವದೆಹಲಿ (ಪಿಟಿಐ): ಐ.ಟಿ. ವಲಯದ ಪ್ರಮುಖ ಕಂಪನಿ ವಿಪ್ರೊದ ನಿವ್ವಳ ಲಾಭವು 2023ರ ಮಾರ್ಚ್‌ಗೆ ಕೊನೆಗೊಂಡ ನಾಲ್ಕನೇ ತ್ರೈಮಾಸಿಕದಲ್ಲಿ ಶೇ 0.4ರಷ್ಟು ಇಳಿಕೆ ಕಂಡು ₹ 3,074 ಕೋಟಿಗೆ ತಲುಪಿದೆ.

2022ರ ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ₹ 3,087 ಕೋಟಿ ನಿವ್ವಳ ಲಾಭ ಆಗಿತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ. ತ್ರೈಮಾಸಿಕದಲ್ಲಿ ವರಮಾನವು ಶೇ 11.17ರಷ್ಟು ಹೆಚ್ಚಾಗಿ ₹ 23,190 ಕೋಟಿಗೆ ಏರಿಕೆ ಕಂಡಿದೆ.

2022–23ನೇ ಹಣಕಾಸು ವರ್ಷಕ್ಕೆ ನಿವ್ವಳ ಲಾಭ ಶೇ 7.1ರಷ್ಟು ಹೆಚ್ಚಾಗಿ ₹ 11,350 ಕೋಟಿಗೆ, ವರಮಾನವು ಶೇ 14.4ರಷ್ಟು ಹೆಚ್ಚಾಗಿ ₹90,487 ಕೋಟಿಗೆ ಏರಿಕೆ ಆಗಿದೆ ಎಂದು ಕಂಪನಿ ತಿಳಿಸಿದೆ.

ಷೇರು ಮರುಖರೀದಿ: ಕಂಪನಿಯು ₹ 12 ಸಾವಿರ ಕೋಟಿ ಮೊತ್ತದ ಷೇರು ಮರುಖರೀದಿ ಮಾಡುವುದಾಗಿ ಘೋಷಿಸಿದೆ. ಪ್ರತಿ ಷೇರಿಗೆ ₹ 445ರಂತೆ 26.96 ಕೋಟಿ ಈಕ್ವಿಟಿ ಷೇರುಗಳನ್ನು ಮರಳಿ ಖರೀದಿಸಲು ಆಡಳಿತ ಮಂಡಳಿ ಒಪ್ಪಿಗೆ ನೀಡಿರುವುದಾಗಿ ಕಂಪನಿ ತಿಳಿಸಿದೆ.

ಪ್ರವರ್ತಕರು ಮತ್ತು ಪ್ರವರ್ತಕರ ಸಮೂಹದ ಸದಸ್ಯರು ಪ್ರಸ್ತಾಪಿತ ಷೇರು ಮರುಖರೀದಿ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸೂಚನೆ ನೀಡಿರುವುದಾಗಿ ಕಂಪನಿ ಹೇಳಿದೆ.

ಟೆಕ್ ಮಹೀಂದ್ರ ನಿವ್ವಳ ಲಾಭ ಶೇ 34ರಷ್ಟು ಕುಸಿತ

ಮುಂಬೈ (ಪಿಟಿಐ): ದೇಶದ ಐದನೆಯ ಅತಿದೊಡ್ಡ ಐ.ಟಿ. ಸೇವಾ ಕಂಪನಿ ಟೆಕ್ ಮಹೀಂದ್ರ, ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ತನ್ನ ನಿವ್ವಳ ಲಾಭದಲ್ಲಿ ಶೇಕಡ 34.69ರಷ್ಟು ಕುಸಿತ ದಾಖಲಾಗಿದೆ ಎಂದು ತಿಳಿಸಿದೆ. ಕಂಪನಿಯು ಮಾರ್ಚ್ ತ್ರೈಮಾಸಿಕದಲ್ಲಿ ₹ 1,117 ಕೋಟಿ ಲಾಭ ಗಳಿಸಿದೆ.

ಮಾರ್ಚ್ 31ಕ್ಕೆ ಕೊನೆಗೊಂಡ ಇಡೀ ಹಣಕಾಸು ವರ್ಷದಲ್ಲಿ ಕಂಪನಿಯ ತೆರಿಗೆ ನಂತರದ ಲಾಭವು ₹ 4,831 ಕೋಟಿ ಆಗಿದೆ. ಇದು ಹಿಂದಿನ ವರ್ಷದಲ್ಲಿ ₹ 5,566 ಕೋಟಿ ಆಗಿತ್ತು.

ಖನಿಜಗಳು, ಸರಕುಗಳು ಮತ್ತು ಇಂಧನ ಕ್ಷೇತ್ರದಲ್ಲಿ ಶ್ರೀಮಂತವಾಗಿರುವ ಕಂಪನಿಗಳು ಮುಂದಿನ ದಿನಗಳಲ್ಲಿ ತಂತ್ರಜ್ಞಾನದ ಮೇಲೆ ಹೆಚ್ಚಿನ ವೆಚ್ಚ ಮಾಡಲಿವೆ. ಈ ಮಾರುಕಟ್ಟೆಯನ್ನು ಬಳಸಿಕೊಳ್ಳಲು ಕಂಪನಿಯು ಮುಂದಾಗಿದೆ ಎಂದು ಸಿಇಒ ಸಿ.ಪಿ. ಗುರ್ನಾನಿ ತಿಳಿಸಿದ್ದಾರೆ.

ಕಂಪನಿಯು ಪ್ರತಿ ಷೇರಿಗೆ ₹ 32ರಷ್ಟು ಅಂತಿಮ ಡಿವಿಡೆಂಡ್ ಘೋಷಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-450
ನಡುಗೋಲು	500-600
ರಾಶಿ	700-750
ರಾಶಿ ಉತ್ತಮ	800-900
ಜರಡಿ	1000 - 1050
ಹೆರಕಿದ್ದು	1,300-1,400
ಹಸಿರು ಸಾಧಾರಣ	850-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1200-1500
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	48000-53000
ಕುಮಟಾ	
ಚಿಪ್ಪು	24309-33369
ಕೋಕ	16069-31111
ಹಳೆಚಾಲಿ	35591-39619
ಹೊಸಚಾಲಿ	33019-36919
ಕಾರ್ಕಳ	
ಹೊಸತು	30000-40000
ಹಳತು	40000-53000
ಕುಂದಾಪುರ	
ಹಳೆಚಾಲಿ	43000-46000
ಹೊಸಚಾಲಿ	36000-39000
ಮಡಿಕೇರಿ	
ಕಚ್ಚಾ	36680-36680
ಶಿಕಾರಿಪುರ	
ಆಪಿ	39498-39498
ಸಾಗರ	
ಬಿಳಿಗೋಟು	21319-30899
ಚಾಲಿ	31899-37009
ಕೋಕ	21119-33899
ಕೆಂಪುಗೋಟು	27689-34119
ರಾಶಿ	32009-47529
ಸಿಪ್ಪೆಗೋಟು	4878-21199
ಶಿವಮೊಗ್ಗ	
ಬೆಟ್ಟೆ	40799-52869
ಗೊರಬಲು	20199-34258
ರಾಶಿ	30661-47699
ಸರಕು	45099-82240
ಶಿರಸಿ	
ಬೆಟ್ಟೆ	34601-44369
ಬಿಳಿಗೋಟು	21329-34199
ಚಾಲಿ	32669-37119
ಕೆಂಪುಗೋಟು	26601-34699
ರಾಶಿ	40180-46098
ಯಲ್ಲಾಪುರ	
ಆಪಿ	50699-55559
ಬಿಳಿಗೋಟು	24899-34479
ಚಾಲಿ	35060-38666
ಕೆಂಪುಗೋಟು	27126-34710
ಹಳೆಚಾಲಿ	---
ರಾಶಿ	40299-48779
ತಟ್ಟಿಬೆಟ್ಟೆ	36299-44690
ಆಪಿ	50699-55559

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15400	15500	15400	191.60 ಸೆಂಟ್ಸ್
ಎಸಿ	7980	7600	7800	
ಆರ್‌ಪಿ	10500	10625	10400	ಲಂಡನ್
ಆರ್‌ಸಿ	5830	228 on OT	5650	2413 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

27-4-2023

ಜಾವಾ 70/80(ಹೊಸ)	11000-11050
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	10900-11000
ದಪ್ಪ ಗುಜರಾತ್(ಹೊಸ)	11800-11900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1640(1675)
ಒಂದು ವಾರದ ಡೆಲಿವರಿ	1635(1670)
ಸೋಯಾ ಕಚ್ಚಾ	870(895)
ಪಾಮ್ ವಾರದ ಡೆಲಿವರಿ	933(938)
ಸೂರ್ಯಕಾಂತಿ ಎಣ್ಣೆ ಕಚ್ಚಾ	900(920)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
60,175 (59,950)
ಬೆಳ್ಳಿ ಕೆ.ಜಿ 74,325 (74,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಭಾರತದ ಬ್ಯಾಂಕ್‌ಗಳಿಗೆ ತಾಳಿಕೊಳ್ಳುವ ಗುಣವಿದೆ: ಗವರ್ನರ್ ದಾಸ್

ಮುಂಬೈ (ಪಿಟಿಐ): ಭಾರತದ ಬ್ಯಾಂಕ್‌ಗಳು ಸ್ಥಿತಿಸ್ಥಾಪಕತ್ವ ಗುಣ ಹೊಂದಿದ್ದು, ಜಾಗತಿಕ ಹಣಕಾಸು ವ್ಯವಸ್ಥೆಯಲ್ಲಿ ಈಚೆಗೆ ಆಗಿರುವ ಘಟನೆಗಳ ಪರಿಣಾಮಕ್ಕೆ ಒಳಗಾಗಿಲ್ಲ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಗವರ್ನರ್ ಶಕ್ತಿಕಾಂತ ದಾಸ್ ಗುರುವಾರ ಹೇಳಿದ್ದಾರೆ.

ಜಾಗತಿಕ ಸಮಾವೇಶವೊಂದರಲ್ಲಿ ಅವರು ಮಾತನಾಡಿದರು. ಹಲವು ಅಹಿತಕರ ಘಟನೆಗಳು ನಡೆಯುತ್ತಿದ್ದರೂ ಭಾರತದ ಬ್ಯಾಂಕ್‌ಗಳು ಕನಿಷ್ಠ ಮಟ್ಟಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿಯೇ ಬಂಡವಾಳ ಸಂಗ್ರಹವನ್ನು ಹೊಂದಿವೆ ಎಂದು ಅವರು ತಿಳಿಸಿದ್ದಾರೆ.

ಜಾಗತಿಕ ಮಟ್ಟದಲ್ಲಿ ಕೇಂದ್ರೀಯ ಬ್ಯಾಂಕ್‌ಗಳು ರೂಢಿಗತವಲ್ಲದ ನಿಯಮಗಳನ್ನು ಅಳವಡಿಸಿಕೊಳ್ಳುತ್ತಿವೆ. ಈ ಕಾರಣದಿಂದಾಗಿ ಹಣಕಾಸು ವಲಯದಲ್ಲಿ ಅಚ್ಚರಿ ಎನ್ನುವಂತಹ ಘಟನೆಗಳು ಯಾವುದೇ ಕಡೆಯಿಂದಲಾದರೂ ಬರಬಹುದು. ಹೀಗಾಗಿ ಎಚ್ಚರಿಕೆಯಿಂದ ಇರಬೇಕು ಎಂದು ಅವರು ಸಲಹೆ ನೀಡಿದ್ದಾರೆ.

ಟ್ರಂಪ್ ಅತ್ಯಾಚಾರ ಎಸಗಿದ್ದರು: ಲೇಖಕಿ ಕ್ಯಾರೊಲ್ ಆರೋಪ

ನ್ಯೂಯಾರ್ಕ್ (ಎಎಫ್‌ಪಿ): 'ಮೂರು ದಶಕಗಳ ಹಿಂದೆ ಡೊನಾಲ್ಡ್ ಟ್ರಂಪ್ ನನ್ನ ಮೇಲೆ ಅತ್ಯಾಚಾರ ಎಸಗಿದ್ದರು' ಎಂದು ಅಮೆರಿಕದ ಲೇಖಕಿ ಇ. ಜೀನ್ ಕ್ಯಾರೊಲ್ ಮ್ಯಾನ್‌ಹಟನ್‌ನ ಫೆಡರಲ್ ಕೋರ್ಟ್‌ಗೆ ಹಾಜರಾಗಿ ಸಾಕ್ಷ್ಯ ನುಡಿದಿದ್ದಾರೆ.

ಈ ಪ್ರಕರಣ, ಮುಂದಿನ ವರ್ಷ ನಡೆಯಲಿರುವ ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಸ್ಪರ್ಧಿಸಲು ಪ್ರಬಲ ಆಕಾಂಕ್ಷಿಯಾಗಿರುವ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಪ್ ಅವರಿಗೆ ಮತ್ತೊಂದು ಸಂಕಷ್ಟ ತಂದೊಡ್ಡಿದೆ.

'1990ರಲ್ಲಿ ಮ್ಯಾನ್‌ಹಟನ್‌ನ ಬರ್ಗ್‌ಡ್ರಾಫ್ ಗುಡ್‌ಮ್ಯಾನ್ ವಿಭಾಗದ ಡ್ರೆಸ್ಸಿಂಗ್ ರೂಂನಲ್ಲಿ ನನ್ನ ಮೇಲೆ ಅತ್ಯಾಚಾರ ನಡೆಸಿದರು. ಹಾಗಾಗಿ, ನಾನು ಇಲ್ಲಿಗೆ ಬರುವಂತಾಗಿದೆ. ಈ ಘಟನೆ ಬಳಿಕ ಪ್ರಣಯ ಜೀವನದ ಮೇಲೆ ನನಗೆ ಜಿಗುಪ್ಸೆ ಮೂಡಿತು. ಟ್ರಂಪ್ ನನ್ನ ಗೌರವಕ್ಕೆ ಚ್ಯುತಿ ತಂದಿದ್ದಾರೆ' ಎಂದು ಕೋರ್ಟ್‌ನಲ್ಲಿ 79 ಹರೆಯದ ಕ್ಯಾರೊಲ್ ಹೇಳಿದರು.

ಕಳೆದ ವರ್ಷವೂ ಈ ಬಗ್ಗೆ ಪ್ರಸ್ತಾಪಿಸಿದ್ದೆ. ಆದರೆ, ಇದನ್ನು ಟ್ರಂಪ್ ಅಲ್ಲಗೆಳೆದಿದ್ದರು ಎಂದು ನಿಯತಕಾಲಿಕವೊಂದರ ಮಾಜಿ ಅಂಕಣಗಾರ್ತಿಯೂ ಆಗಿರುವ ಅವರು ಹೇಳಿದ್ದಾರೆ.

ಈಗಾಗಲೇ, ನೀಲಿಚಿತ್ರ ತಾರೆ ಸ್ಟಾರ್ಮಿ ಡೇನಿಯಲ್ಸ್ ಅವರೊಂದಿಗಿನ ಅನೈತಿಕ ಸಂಬಂಧ ಗುಟ್ಟಾಗಿರಿಸಲು ನಟಿಗೆ ಹಣ ನೀಡಿದ ಆರೋಪಕ್ಕೆ ಸಂಬಂಧಿಸಿ ಟ್ರಂಪ್ ಕೋರ್ಟ್ ವಿಚಾರಣೆ ಎದುರಿಸುತ್ತಿದ್ದಾರೆ. ಈಗ ಕ್ಯಾರೊಲ್ ಮೇಲಿನ ಅತ್ಯಾಚಾರ ಆರೋಪ ಸಾಬೀತಾದರೆ ಅಧ್ಯಕ್ಷೀಯ ಚುನಾವಣೆಯಲ್ಲಿ ಟ್ರಂಪ್ ಅವರಿಗೆ ಭಾರಿ ಹಿನ್ನಡೆಯಾಗಲಿದೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

'ಕ್ಯಾರೊಲ್ ಆರೋಪವು ರಾಜಕೀಯ ಪ್ರೇರಿತವಾಗಿದೆ. ಅವರು ಹಣಕ್ಕಾಗಿ ಈ ಆರೋಪ ಮಾಡುತ್ತಿದ್ದಾರೆ' ಎಂದು ಟ್ರಂಪ್ ಪರ ವಕೀಲ ಜೋ ಟಾಕೊಪಿನ ಪ್ರತಿಕ್ರಿಯಿಸಿದ್ದಾರೆ.

ಪಪುವಾ ನ್ಯೂಗಿನಿಗೆ ಜೋ ಬೈಡನ್ ಮೇನಲ್ಲಿ ಭೇಟಿ

ಪೋರ್ಟ್ ಮೊರೆಸ್ಬಿ (ಎಎಫ್‌ಪಿ): ಪಪುವಾ ನ್ಯೂಗಿನಿಗೆ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಮುಂದಿನ ತಿಂಗಳು ಭೇಟಿ ನೀಡಲಿದ್ದಾರೆ. ಅಲ್ಲದೇ, ಈ ಪುಟ್ಟ ರಾಷ್ಟ್ರಕ್ಕೆ ಭೇಟಿ ನೀಡಿದ ಅಮೆರಿಕದ ಮೊದಲ ಅಧ್ಯಕ್ಷ ಎಂಬ ಕೀರ್ತಿಗೂ ಅವರು ಭಾಜನರಾಗಲಿದ್ದಾರೆ ಎಂದು ವಿದೇಶಾಂಗ ಸಚಿವ ಜಸ್ಟಿನ್ ಟಕಾಚೆಂಕೊ ತಿಳಿಸಿದ್ದಾರೆ.

ಜಪಾನ್‌ನಲ್ಲಿ ಜಿ7 ಶೃಂಗಸಭೆ ಮತ್ತು ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ನಡೆಯುವ ಕ್ವಾಡ್ ಶೃಂಗಸಭೆಯ ನಡುವೆ ಪ್ರಯಾಣ ಕೈಗೊಳ್ಳುವಾಗ ಮೇ ತಿಂಗಳಲ್ಲಿ ಪೋರ್ಟ್ ಮೊರೆಸ್ಬಿಯಲ್ಲಿ ಕೆಲಕಾಲ ತಂಗಲು ಬೈಡನ್ ಯೋಜಿಸಿದ್ದಾರೆ ಎಂದು ವಿದೇಶಾಂಗ ಸಚಿವರು ತಿಳಿಸಿದ್ದಾರೆ.

'ಬೈಡನ್ ಅವರು ಮೇ 22ರಂದು ಬೆಳಿಗ್ಗೆ ಇಲ್ಲಿಗೆ ಬಂದಿಳಿಯಲಿದ್ದು, ಮೂರು ತಾಸು ಮಾತ್ರ ತಂಗಲಿದ್ದಾರೆ. ಈ ವೇಳೆ ನಡೆಯಲಿರುವ ಮಾತುಕತೆಯು ಭದ್ರತೆ ಮತ್ತು ಹವಾಮಾನ ಬದಲಾವಣೆ ಹಾಗೂ ಆರ್ಥಿಕತೆ ಮೇಲೆ ಕೇಂದ್ರೀಕರಿಸುವ ನಿರೀಕ್ಷೆಯಿದೆ' ಎಂದು ಟಕಾಚೆಂಕೊ ಹೇಳಿದರು. ಚೀನಾ ಅಧ್ಯಕ್ಷ ಷಿ ಜಿನ್ ಪಿಂಗ್ ಅವರು 2018ರಲ್ಲಿ ಪೋರ್ಟ್ ಮೊರೆಸ್ಬಿಗೆ ಭೇಟಿ ನೀಡಿದ್ದರು.

'ದ್ವಿಪಕ್ಷೀಯ ಒಪ್ಪಂದ ಅನುಸಾರವೇ ಪರಿಹಾರ'

ನವದೆಹಲಿ (ಪಿಟಿಐ): ಪ್ರಸ್ತುತ ಚಾಲ್ತಿಯಲ್ಲಿರುವ ದ್ವಿಪಕ್ಷೀಯ ಒಪ್ಪಂದಗಳ ಪರಿಮಿತಿಯಲ್ಲಿಯೇ, ವಾಸ್ತವ ಗಡಿರೇಖೆಯಲ್ಲಿ (ಎಲ್‌ಎಸಿ) ಶಾಂತಿ ಸ್ಥಾಪಿಸುವ, ಭಾರತ ಮತ್ತು ಚೀನಾ ನಡುವಣ ಗಡಿವಿವಾದ ಬಗೆಹರಿಸುವ ಪ್ರಕ್ರಿಯೆ ನಡೆಯಬೇಕು ಎಂದು ಭಾರತ ತನ್ನ ನಿಲುವು ಸ್ಪಷ್ಟಪಡಿಸಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಚೀನಾದ ರಕ್ಷಣಾ ಸಚಿವ ಲೀ ಶಾಂಗ್‌ಫು ಜೊತೆಗೆ ಗುರುವಾರ ನಡೆಸಿದ ಸಭೆಯಲ್ಲಿ ಈ ಅಂಶವನ್ನು ಮನದಟ್ಟು ಮಾಡಿಕೊಟ್ಟಿದ್ದಾರೆ. 'ಭಾರತ–ಚೀನಾ ಬಾಂಧವ್ಯ ವೃದ್ಧಿಯು ಗಡಿಯಲ್ಲಿ ಶಾಂತಿ ಸ್ಥಾಪನೆ ಪ್ರಕ್ರಿಯೆಯನ್ನು ಅವಲಂಬಿಸಿದೆ' ಎಂದೂ ಹೇಳಿದ್ದಾರೆ.

ಪೂರ್ವ ಲಡಾಖ್‌ನಲ್ಲಿ ವಾಸ್ತವ ಗಡಿ ರೇಖೆಯ (ಎಲ್‌ಎಸಿ) ಬಳಿ ನಡೆದಿದ್ದ ಸೇನಾ ಸಂಘರ್ಷದ ಬಳಿಕ ಮೂರು ವರ್ಷಗಳಿಂದ ಬಿಗುವಿನ ಸ್ಥಿತಿ ಇದೆ. ಈ ಮಧ್ಯೆಯೇ ಚೀನಾದ ರಕ್ಷಣಾ ಸಚಿವರ ಜೊತೆಗೆ ದ್ವಿಪಕ್ಷೀಯ ಚರ್ಚೆ ನಡೆಯಿತು. ಭಾರತ ಆತಿಥ್ಯ ವಹಿಸಿರುವ ಶಾಂಘೈ ಸಹಕಾರ ಸಂಘಟನೆ (ಎಸ್‌ಸಿಒ) ಸಭೆಯಲ್ಲಿ ಪಾಲ್ಗೊಳ್ಳಲು ಚೀನಾದ ರಕ್ಷಣಾ ಸಚಿವ ಆಗಮಿಸಿದ್ದಾರೆ.

ಚೀನಾ ದ್ವಿಪಕ್ಷೀಯ ಒಪ್ಪಂದವನ್ನು ಪೂರ್ವಲಡಾಖ್‌ನಲ್ಲಿ ವಾಸ್ತವ ಗಡಿರೇಖೆಯಲ್ಲಿ ಉಲ್ಲಂಘಿಸಿರುವುದು, ಉಭಯ ದೇಶಗಳ ದ್ವಿಪಕ್ಷೀಯ ಬಾಂಧವ್ಯದ ಪೂರ್ಣ ಅಡಿಪಾಯವನ್ನೇ ಅಲುಗಾಡಿಸಿದೆ ಎಂದು ಸಚಿವ ರಾಜನಾಥ್ ಸಿಂಗ್ ಇದೇ ಸಂದರ್ಭದಲ್ಲಿ ಪುನರುಚ್ಚರಿಸಿದರು.

ಉಭಯ ರಕ್ಷಣಾ ಸಚಿವರ ಭೇಟಿ ಕುರಿತು ಹೇಳಿಕೆಯನ್ನು ನೀಡಿರುವ ರಕ್ಷಣಾ ಸಚಿವಾಲಯವು, 'ಗಡಿಯಲ್ಲಿನ ಬೆಳವಣಿಗೆಗಳು ಹಾಗೂ ದ್ವಿಪಕ್ಷೀಯ ಬಾಂಧವ್ಯ ಕುರಿತಾಗಿ ಉಭಯ ದೇಶಗಳ ರಕ್ಷಣಾ ಸಚಿವರು ಮುಕ್ತವಾಗಿ ಚರ್ಚಿಸಿದರು' ಎಂದು ತಿಳಿಸಿದೆ.

'ಭಾರತ ಮತ್ತು ಚೀನಾ ಬಾಂಧವ್ಯ ವೃದ್ಧಿ ಗಡಿಯಲ್ಲಿ ಶಾಂತಿ ಸ್ಥಾಪನೆ ಅವಲಂಬಿಸಿದೆ. ಈ ಸಂಬಂಧಿಸಿದ ಎಲ್ಲ ವಿವಾದಗಳು ದ್ವಿಪಕ್ಷೀಯ ಒಪ್ಪಂದಕ್ಕೆ ಅನುಗುಣವಾಗೇ ನಡೆಯಬೇಕು ಎಂದು ರಕ್ಷಣಾ ಸಚಿವರು ಸ್ಪಷ್ಟಪಡಿಸಿದ್ದಾರೆ' ಎಂದು ತಿಳಿಸಿದೆ.

ಕೀನ್ಯಾ: ಮೃತರ ಸಂಖ್ಯೆ 98ಕ್ಕೆ ಏರಿಕೆ

ಮಲಿಂದಿ, ಕೀನ್ಯಾ (ಎಎಫ್‌ಪಿ): ಸಮಾಧಿ ಸ್ಥಿತಿಯಲ್ಲಿ ಪ್ರಾರ್ಥನೆಗೆ ಸಂಬಂಧಿಸಿದ ಪ್ರಕರಣದಲ್ಲಿ, ಹಸಿವಿನಿಂದ ಮೃತಪಟ್ಟವರ ಸಂಖ್ಯೆ ಗುರುವಾರ 98ಕ್ಕೆ ಏರಿದೆ. ಹಲವರು ನಾಪತ್ತೆಯಾಗಿದ್ದು, ಕುಟುಂಬದ ಸದಸ್ಯರು ಆಪ್ತರ ಕುರಿತ ಸುದ್ದಿಯ ನಿರೀಕ್ಷೆಯಲ್ಲಿದ್ದಾರೆ.

ಕೀನ್ಯಾದ ಮಲಿಂದಿ ಪಟ್ಟಣ ಬಳಿ ಶಕಹೋಲ ಅರಣ್ಯದಲ್ಲಿ 12ಕ್ಕೂ ಹೆಚ್ಚು ಶವಗಳು ಹೂತಿದ್ದ ಸ್ಥಿತಿಯಲ್ಲಿ ಪತ್ತೆಯಾಗಿತ್ತು.

ಧಾರ್ಮಿಕ ನಾಯಕ ಪೌಲ್ ಮ್ಯಾಂಕೆಝಿ ನಿತೆಂಗೆ ತನ್ನ ಅನುಯಾಯಿಗಳಿಗೆ ಹಸಿವಿನಿಂದ ಪ್ರಾರ್ಥಿಸುವುದೇ ದೇವರನ್ನು ಕಾಣುವ ಮಾರ್ಗ ಎಂದು ಉಪದೇಶ ಮಾಡಿದ್ದೇ ಈ ಅನಾಹುತಕ್ಕೆ ಕಾರಣ ಎಂದು ಆರೋಪಿಸಲಾಗಿದೆ. 'ಶಕಹೋಲ ಅರಣ್ಯ ಹತ್ಯಾಕಾಂಡ' ಎಂದು ಕೃತ್ಯವನ್ನು ಗುರುತಿಸಲಾಗಿದೆ.

ಕೃತ್ಯ ನಡೆದ ಸ್ಥಳವನ್ನು ಕಾರ್ಯಾಚರಣೆ ಪ್ರದೇಶ ಎಂದು ಘೋಷಿಸಿರುವ ಸರ್ಕಾರ, ಬೆಳಗಿನಿಂದ ಸಂಜೆಯವರೆಗೂ ಕರ್ಫ್ಯೂ ವಿಧಿಸಿದೆ. ಮಾಧ್ಯಮ ಪ್ರತಿನಿಧಿಗಳು ಹಾಗೂ ಮಾನವಹಕ್ಕುಗಳ ಹೋರಾಟದ ಕಾರ್ಯಕರ್ತರ ಪ್ರವೇಶಕ್ಕೆ ನಿರ್ಬಂಧ ಹೇರಲಾಗಿದೆ.

ಸಂಕ್ಷಿಪ್ತ ಸುದ್ದಿ

ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ಡಿಎನ್‌ಎಲ್‌ಎ

ನವದೆಹಲಿ (ಪಿಟಿಐ): ಅಸ್ಸಾಂನ ದಿಮಾ ಹಸಾವೊ ಜಿಲ್ಲೆಯಲ್ಲಿ ಸಕ್ರಿಯವಾಗಿದ್ದ ದಿಮಾಸಾ ನ್ಯಾಷನಲ್ ಲಿಬರೇಷನ್ ಆರ್ಮಿ (ಡಿಎನ್‌ಎಲ್‌ಎ) ಸಂಘಟನೆಯು ಗುರುವಾರ ಸರ್ಕಾರದ ಜೊತೆಗೆ ಶಾಂತಿ ಒಪ್ಪಂದಕ್ಕೆ ಸಹಿ ಹಾಕಿತು.

ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಮುಖ್ಯಮಂತ್ರಿ ಹಿಮಂತ ಬಿಸ್ವಾಶರ್ಮಾ ಅವರು ಈ ವೇಳೆ ಉಪಸ್ಥಿತರಿದ್ದರು. ಬಳಿಕ ಮಾತನಾಡಿದ ಅಮಿತ್ ಶಾ, 'ಅಸ್ಸಾಂನಲ್ಲಿ ಯಾವುದೇ ಬುಡಕಟ್ಟು ಉಗ್ರಗಾಮಿ ಸಂಘಟನೆ ಸಕ್ರಿಯವಾಗಿಲ್ಲ. ಈ ಒಪ್ಪಂದದೊಂದಿಗೆ ಎಲ್ಲ ಬುಡಕಟ್ಟು ಉಗ್ರಗಾಮಿ ಸಂಘಟನೆಗಳು ಮುಖ್ಯವಾಹಿನಿಗೆ ಸೇರಿದಂತಾಗಿವೆ' ಎಂದು ಹೇಳಿದರು.

ವಾಜಪೇಯಿ ಕುರಿತ ಕೃತಿ ಮೇ 10ರಂದು ಬಿಡುಗಡೆ

ನವದೆಹಲಿ (ಪಿಟಿಐ): ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಕುರಿತ 'ವಾಜಪೇಯಿ: ದಿ ಆ್ಯಕ್ಸೆಂಟ್ ಆಫ್ ದಿ ಹಿಂದೂ ರೈಟ್' ಎಂಬ ಕೃತಿಯ ಮೊದಲನೇ ಆವೃತ್ತಿಯು ಮೇ 10ರಂದು ಪುಸ್ತಕ ಮಳಿಗೆಗಳಲ್ಲಿ ಲಭ್ಯವಿದೆ ಎಂದು ಪುಸ್ತಕದ ಪ್ರಕಾಶಕರು ತಿಳಿಸಿದ್ದಾರೆ.

ಅಭಿಷೇಕ್ ಚೌಧರಿ ಎಂಬ ಲೇಖಕರು ಈ ಪುಸ್ತಕವನ್ನು ರಚಿಸಿದ್ದಾರೆ. ನ್ಯೂ ಇಂಡಿಯಾ ಫೌಂಡೇಷನ್ ಸಹಕಾರದೊಂದಿಗೆ ಪಿಕಡೋರ್ ಇಂಡಿಯಾ ಸಂಸ್ಥೆ ಪ್ರಕಟಿಸಿದೆ.

ಅಂಗಾಂಗ ದಾನ: ಕೇಂದ್ರದ ನೌಕರರಿಗೆ 42 ಎಸ್‌ಸಿಎಲ್

ನವದೆಹಲಿ (ಪಿಟಿಐ): ಅಂಗಾಂಗ ದಾನ ಮಾಡುವ ಕೇಂದ್ರ ಸರ್ಕಾರದ ಉದ್ಯೋಗಿಗಳಿಗೆ ಶಸ್ತ್ರಚಿಕಿತ್ಸೆಯ ನಂತರ ಚೇತರಿಸಿಕೊಳ್ಳಲು ಸಮಯ ಬೇಕಾಗುವುದನ್ನು ಪರಿಗಣಿಸಿ 42 ದಿನಗಳ ವಿಶೇಷ ಸಾಂದರ್ಭಿಕ ರಜೆ (ಎಸ್‌ಸಿಎಲ್) ಸೌಲಭ್ಯ ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

'ಅಂಗಾಂಗ ಕಸಿಗೆ ದಾನಿಗಳಿಂದ ಅಂಗಾಂಗ ತೆಗೆಯುವುದು ಒಂದು ದೊಡ್ಡ ಶಸ್ತ್ರಚಿಕಿತ್ಸೆಯೇ ಆಗಿದೆ ' ಎಂದು ಸಿಬ್ಬಂದಿ ಸಚಿವಾಲಯ ಹೊರಡಿಸಿದ ಆದೇಶದಲ್ಲಿ ತಿಳಿಸಲಾಗಿದೆ.



ಸುಡಾನ್‌ನ ಅಲ್‌ಫೇರ್ ನಗರದಲ್ಲಿ ಸಿಲುಕಿರುವ ಕನ್ನಡಿಗರು

ನೆರವಿಗೆ ಬಾರದ 'ಕಾವೇರಿ'

ಪ್ರಜಾವಾಣಿ ವಾರ್ತೆ

ದಾವಣಗೆರೆ: ಸಂಘರ್ಷ ಪೀಡಿತ ಸುಡಾನ್‌ನಲ್ಲಿರುವ ಭಾರತೀಯರನ್ನು ಸ್ವದೇಶಕ್ಕೆ ಕರೆತರಲು ಕೇಂದ್ರ ಸರ್ಕಾರ ಆರಂಭಿಸಿರುವ 'ಆಪರೇಷನ್ ಕಾವೇರಿ' ಕಾರ್ಯಾಚರಣೆಯು, ಸಂಕಷ್ಟಕ್ಕೆ ಸಿಲುಕಿರುವ ಕೆಲವು ಕನ್ನಡಿಗರ ನೆರವಿಗೆ ಬಂದಿಲ್ಲ.

'ಆಪರೇಷನ್ ಕಾವೇರಿ ಬಗ್ಗೆ ನಮಗೆ ಯಾವುದೇ ಮಾಹಿತಿ ಇಲ್ಲ. ರಾಜಧಾನಿ ಖಾರ್ಟೂಮ್‌ನಿಂದ 500 ಕಿಲೋ ಮೀಟರ್ ದೂರದಲ್ಲಿರುವ ಅಲ್‌ಫೇರ್ ನಗರದಲ್ಲಿ 68 ಜನ ಸಿಲುಕಿಕೊಂಡಿದ್ದೇವೆ. ನಮ್ಮನ್ನು ಕರೆದೊಯ್ಯಲು ಯಾವುದೇ ವ್ಯವಸ್ಥೆಯಾಗಿಲ್ಲ' ಎಂದು ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಗೋಪನಾಳ್ ಗ್ರಾಮದ ಪ್ರಭು ಗುರುವಾರ 'ಪ್ರಜಾವಾಣಿ'ಗೆ ದೂರವಾಣಿ ಮೂಲಕ ತಿಳಿಸಿದರು.

ವಾಟ್ಸ್ ಆ್ಯಪ್ ಮೂಲಕ ಕಳುಹಿಸಿರುವ ವಿಡಿಯೊದಲ್ಲಿ ತಮ್ಮ ಅಳಲನ್ನು ತೋಡಿಕೊಂಡಿರುವ ಅವರು, 'ಕೆಲವರನ್ನು ಮಾತ್ರ ಸ್ವದೇಶಕ್ಕೆ ಕರೆದೊಯ್ಯಲಾಗುತ್ತಿದೆ. ಮೈಸೂರು, ಶಿವಮೊಗ್ಗ, ದಾವಣಗೆರೆ ಜಿಲ್ಲೆಗಳಿಂದ ಬಂದಿರುವ ನಮಗೆ ಮಾಹಿತಿ ನೀಡಲಾಗುತ್ತಿಲ್ಲ. ನಮ್ಮಲ್ಲಿ ಹಣ ಇಲ್ಲ ಎಂಬ ಕಾರಣದಿಂದ ಕರೆದೊಯ್ಯುತ್ತಿಲ್ಲ ಎಂಬುದು ನಮ್ಮ ಭಾವನೆ. ಕೂಡಲೇ ಸ್ವದೇಶಕ್ಕೆ ಕರೆದೊಯ್ಯಲು ನೆರವು ನೀಡುವಂತೆ ಭಾರತೀಯ ರಾಯಭಾರ ಕಚೇರಿಗೆ ಮನವಿ ಮಾಡಿದ್ದೇವೆ. ಆದರೂ ಈವರೆಗೆ ಸ್ಪಂದನೆ ಲಭಿಸಿಲ್ಲ' ಎಂದು ಅವರು ದೂರಿದ್ದಾರೆ.

'ಇದುವರೆಗೆ ಯಾವುದೇ ರಕ್ಷಣಾ ತಂಡ ಇಲ್ಲಿಗೆ ಬಂದಿಲ್ಲ. ಖಾರ್ಟೂಮ್ ನಗರದಲ್ಲಿದ್ದವರು ವಾಪಸ್ ತೆರಳಿದ್ದಾಗಿ ಮಾಹಿತಿ ಇದೆ. ನಮಗೆ ಊಟಕ್ಕೂ ಪರದಾಡುವ ಸ್ಥಿತಿ ಇದೆ. ರಾಯಭಾರ ಕಚೇರಿ ಅಧಿಕಾರಿಗಳಿಗೆ ಹೇಳಿದರೆ ನೀವೇ ಏನಾದರೂ ಮಾಡಿಕೊಳ್ಳಿ. ಹಣ ಇಲ್ಲ ಎನ್ನುತ್ತಿದ್ದಾರೆ. ಬಾಡಿಗೆ ಮನೆ ನೀಡಿರುವ ಮಾಲೀಕರು ಹೊರಗೆ ಕಳುಹಿಸುತ್ತಿದ್ದಾರೆ. ಸರ್ಕಾರ ನೆರವಿಗೆ ಬರಬೇಕಿದೆ' ಎಂದು ಅವರು ಮನವಿ ಮಾಡಿದ್ದಾರೆ.

ಗಡಿಪ್ರದೇಶದತ್ತ ಬಂದಿದ್ದೇವೆ: 'ಅಧಿಕಾರಿಗಳ ಸೂಚನೆ ಮೇರೆಗೆ ಗಡಿ ತಲುಪಿ ಭಾರತದತ್ತ ಮರಳುತ್ತಿದ್ದೇವೆ. ಹಿರಿಯ ನಾಗರಿಕರು, ಅನಾರೋಗ್ಯ ಪೀಡಿತರನ್ನು ಆದ್ಯತೆ ಮೇರೆಗೆ ಕರೆದೊಯ್ಯಲಾಗುತ್ತಿದೆ. ಮೊದಲ ತಂಡದಲ್ಲಿ 150 ಜನರನ್ನು ಮಾತ್ರ ಸುಡಾನ್‌ನ ಗಡಿಪ್ರದೇಶದತ್ತ ಕರೆತಂದಿದ್ದಾರೆ. ಭಾರತಕ್ಕೆ ಬರಲು ಇನ್ನೂ ಎರಡು ದಿನ ಬೇಕಾಗಬಹುದು' ಎಂದು ಸುಡಾನ್‌ನಿಂದ ಸೌದಿ ಅರೇಬಿಯಾದ ಜಿದ್ದಾದತ್ತ ಹೊರಟಿರುವ ಗೋಪನಾಳ್ ಗ್ರಾಮದ ನಂದಕುಮಾರ್ ಹೇಳಿದ್ದಾರೆ.

'ಆಪರೇಷನ್ ಕಾವೇರಿ' ಮೂಲಕ ಸುಡಾನ್‌ನಿಂದ ಭಾರತಕ್ಕೆ ಮರಳಿದವರ ಅನುಭವ

'ಮರಣಶಯ್ಯೆಯಲ್ಲಿ ಇದ್ದಂತೆ ಭಾಸವಾಗಿತ್ತು'

ನವದೆಹಲಿ (ಪಿಟಿಐ): 'ಒಂದು ಪ್ರದೇಶದಲ್ಲಿ ವಾಸಿಸುತ್ತಿದ್ದ ಎಲ್ಲರೂ ಒಂದೇ ಕೋಣೆಯಲ್ಲಿ ಇದ್ದೆವು. ಮರಣಶಯ್ಯೆಯಲ್ಲಿ ಇದ್ದಂತೆ ಭಾಸವಾಗುತ್ತಿತ್ತು' ಎಂದು ಹರಿಯಾಣದ ಎಂಜಿನಿಯರ್ ಸುಖ್ವಿಂದರ್ ಸಿಂಗ್ ಅವರು ಸಂಘರ್ಷ ಪೀಡಿತ ಸುಡಾನ್‌ನಲ್ಲಿ ಕಳೆದ ಕ್ಷಣಗಳನ್ನು ನೆನೆಯುತ್ತಾರೆ.

ಸಂಘರ್ಷ ಪೀಡಿತ ಸುಡಾನ್‌ನಲ್ಲಿ ಸಿಲುಕಿದ್ದ ಭಾರತೀಯರ ಮೊದಲ ತಂಡವನ್ನು 'ಆಪರೇಷನ್ ಕಾವೇರಿ' ಕಾರ್ಯಾಚರಣೆ ಅಡಿ ಬುಧವಾರ ಭಾರತಕ್ಕೆ ಕರೆತರಲಾಗಿದೆ. ತಾಯ್ನೆಲಕ್ಕೆ ಮರಳಿದವರು ತಮ್ಮ ಅನುಭವವನ್ನು ಹಂಚಿಕೊಂಡಿದ್ದಾರೆ.

ಅಲ್ಲಿಯ ಕಾರ್ಖಾನೆಯೊಂದರಲ್ಲಿ ಕಾರ್ಮಿಕರಾಗಿದ್ದ ಉತ್ತರಪ್ರದೇಶದ ಕುಶಿನಗರದ ಭೋಟು ಅವರು 'ನಾನು ನನ್ನ ದೇಶದಲ್ಲೇ ಏನಾದರೂ ಉದ್ಯೋಗ ಮಾಡುತ್ತೇನೆ, ಆದರೆ ಸುಡಾನ್‌ಗೆ ಎಂದಿಗೂ ಮರಳುವುದಿಲ್ಲ' ಎಂದಿದ್ದಾರೆ.

ಘರ್ಷಣೆ ನಡೆಯುತ್ತಲೇ ಇದೆ (ಕೊಚ್ಚಿ ವರದಿ): 'ಸುಡಾನ್‌ನಲ್ಲಿ ಕದನವಿರಾಮ ಘೋಷಣೆಯಾಗಿದ್ದರೂ ಘರ್ಷಣೆ ನಡೆಯುತ್ತಲೇ ಇತ್ತು. ನಾವು ದೇಶಕ್ಕೆ ವಾಪಸಾಗಿದ್ದು ಒಂದು ಪವಾಡ' ಎಂದು ಸುಡಾನ್‌ನಲ್ಲಿ ಸಿಲುಕಿದ್ದ ಕೇರಳದ ಕಾಕನಾಡಿನ ಬಿಜಿ ಆಲಪ್ಪಾಟ್ ಅವರ ಕುಟುಂಬ ಹೇಳಿದೆ.

ದೆಹಲಿಯಿಂದ ಕೊಚ್ಚಿ ವಿಮಾನ ನಿಲ್ದಾಣಕ್ಕೆ ಗುರುವಾರ ಬೆಳಿಗ್ಗೆ ಅವರು ಬಂದಿಳಿದಿದ್ದಾರೆ.

ಅಂಕಿ–ಅಂಶಗಳು

3,100 ಸುಡಾನ್‌ನಲ್ಲಿನ ಭಾರತೀಯ ರಾಯಭಾರ ಕಚೇರಿಯಲ್ಲಿ ನೋಂದಣಿ ಮಾಡಿಸಿರುವ ಭಾರತೀಯರು

300 ಭಾರತೀಯ ರಾಯಭಾರ ಕಚೇರಿ ಸಂಪರ್ಕದಲ್ಲಿರುವವರು

1,000 ಸುಡಾನ್‌ನಲ್ಲಿರುವ ಭಾರತ ಮೂಲದ ವ್ಯಕ್ತಿಗಳು

'ಸಂಘರ್ಷ ಆರಂಭವಾಗುವ ಮುನ್ನ ಸುಡಾನ್ ಶಾಂತಿಯುತವಾಗಿಯೇ ಇತ್ತು. ಸಂಘರ್ಷವು ನಡೆಯುತ್ತಲೇ ಇರುವುದರಿಂದ ನಾವು ಯಾವಾಗ ಅಲ್ಲಿಗೆ ವಾಪಸಾಗುತ್ತೇವೆ ಎಂದು ತಿಳಿದಿಲ್ಲ. ಈಗ ಅದೇ ನಮ್ಮ ಮುಂದಿರುವ ಸವಾಲು' ಎಂದಿದ್ದಾರೆ.

'ಸುಡಾನ್‌ನಲ್ಲಿ 18 ವರ್ಷ ನೆಲೆಸಿದ್ದೆವು. ಈ ರೀತಿಯ ಸಂದರ್ಭವನ್ನು ನಾವು ಎಂದಿಗೂ ಎದುರಿಸಿಲ್ಲ. ಹಿಂಸಾಚಾರ ಆರಂಭವಾದಾಗಿನಿಂದ ಜೀವನ ದಾರುಣವಾಗಿತ್ತು. ನಮ್ಮನ್ನು ಅಲ್ಲಿಂದ ಸ್ಥಳಾಂತರಿಸಿದ ಕೇಂದ್ರ ಸರ್ಕಾರಕ್ಕೆ ಧನ್ಯವಾದಗಳು' ಎಂದು ಕೇರಳದ ಥಾಮಸ್ ವರ್ಗೀಸ್ ಅವರ ಕುಟುಂಬ ಹೇಳಿದೆ.

ಭಾರತೀಯರನ್ನು ಕರೆತಂದದ್ದು ಮಹಿಳಾ ಪೈಲಟ್

ಜಿದ್ದಾದಿಂದ ಮುಂಬೈಗೆ ಭಾರತೀಯರನ್ನು ಹೊತ್ತುತಂದ ಯುದ್ಧವಿಮಾನದ ಚಾಲನೆ ಮಾಡಿರುವುದು ಮಹಿಳಾ ಪೈಲಟ್ ಫ್ಲೈಟ್ ಲೆಫ್ಟಿನೆಂಟ್ ಹರ್ ರಾಜ್ ಕೌರ್ ಬೋಪರಾಯ್ ಅವರು ಎಂದು ಅಧಿಕೃತ ಮೂಲಗಳು ತಿಳಿಸಿವೆ.

'ಆಪರೇಷನ್ ಕಾವೇರಿ' ಕಾರ್ಯಾಚರಣೆಗೆ ನಿಯೋಜನೆಯಾಗಿರುವ ಭಾರಿ ಸಾಮರ್ಥ್ಯದ ಯುದ್ಧವಿಮಾನ ಸಿ–17 ಗ್ಲೋಬ್‌ಮಾಸ್ಟರ್‌ನ 'ಮೊದಲ' ಮತ್ತು 'ಏಕೈಕ ಮಹಿಳಾ ಪೈಲಟ್' ಎಂಬ ಹೆಗ್ಗಳಿಕೆ ಫ್ಲೈಟ್ ಲೆಫ್ಟಿನೆಂಟ್ ಹರ್ ರಾಜ್ ಕೌರ್ ಅವರದ್ದು. ಸಿ–17 ಗ್ಲೋಬ್‌ಮಾಸ್ಟರ್ ಭಾರತೀಯ ವಾಯುಪಡೆಯ ಅತ್ಯಂತ ದೊಡ್ಡ ಗಾತ್ರದ ಯುದ್ಧವಿಮಾನವಾಗಿದೆ.

ಸುಡಾನ್‌ನಲ್ಲಿ ಯಾವುದೇ ಸಮಯದಲ್ಲಿ ಹಿಂಸಾಚಾರ ಭುಗಿಲೇಳುವ ಸಾಧ್ಯತೆ ಇದೆ. ಹೀಗಾಗಿ, ಅಲ್ಲಿ ಸಿಲುಕಿರುವ ಭಾರತೀಯರನ್ನು ಸ್ಥಳಾಂತರಿಸುವುದೇ ನಮ್ಮ ಉದ್ದೇಶ

ವಿನಯ್ ಕ್ವಾತ್ರಾ, ವಿದೇಶಾಂಗ ಕಾರ್ಯದರ್ಶಿ

ವಿದ್ಯುತ್, ನೀರು ಇಲ್ಲದ ಸಣ್ಣ ಮನೆಗಳಲ್ಲಿ ನಾವು ಮೃತದೇಹಗಳಂತೆ ಇದ್ದೆವು. ಇಂಥ ಸಂದರ್ಭವನ್ನು ಎದುರಿಸುತ್ತೇವೆ ಎಂದು ಭಾವಿಸಿಯೇ ಇರಲಿಲ್ಲ

ತಜಿಂದರ್ ಸಿಂಗ್, ಪಂಜಾಬ್‌ನ ಹೋಶಿಯಾರ್‌ಪುರ ನಿವಾಸಿ

ಒಂದು ಜೊತೆ ಬಟ್ಟೆ, ಪಾಸ್‌ಪೋರ್ಟ್ ಮಾತ್ರ ಉಳಿದುಕೊಂಡಿವೆ (ಚೆನ್ನೈ ವರದಿ): 'ಯುದ್ಧದ ವೇಳೆ ನಮ್ಮ ಬಳಿಯಿದ್ದ ಹಣ ಮತ್ತು ಬೆಲೆಬಾಳುವ ವಸ್ತುಗಳನ್ನು ಕಿತ್ತುಕೊಂಡಿದ್ದಾರೆ. ಸುಡಾನ್‌ನಿಂದ ವಾಪಸಾಗುತ್ತೇವೆ ಎನ್ನುವ ಭರವಸೆಯೇ ಇಲ್ಲವಾಗಿತ್ತು. ಈಗ ನಮ್ಮ ಬಳಿ ಕೇವಲ ಒಂದು ಜೊತೆ ಬಟ್ಟೆ ಮತ್ತು ಪಾಸ್‌ಪೋರ್ಟ್ ಮಾತ್ರ ಉಳಿದುಕೊಂಡಿವೆ' ಎಂದು ಸುಡಾನ್‌ನಿಂದ ಚೆನ್ನೈಗೆ ಆಗಮಿಸಿದ ದಿವ್ಯಾ ರಾಜಶೇಖರನ್ ತಮಗಾದ ಭೀಕರ ಅನುಭವವನ್ನು ಹಂಚಿಕೊಂಡಿದ್ದಾರೆ.

'ಆರಂಭದಲ್ಲಿ ಯುದ್ಧ ಕೆಲವು ದಿನಗಳಲ್ಲಿ ಮುಗಿಯುತ್ತದೆಂದು ಭಾವಿಸಿದ್ದೆವು. ಆದರೆ ಮೂರನೇ ದಿನದ ನಂತರ ದಾಳಿಗಳು ಹೆಚ್ಚಾಗಿತ್ತು. ಈಗ ನಾವು ಹೊಸದಾಗಿ ಜೀವನವನ್ನು ಕಟ್ಟಿಕೊಳ್ಳಬೇಕಿದೆ. ವಾಪಸ್ ಸುಡಾನ್‌ಗೆ ಹೋಗುವ ಯಾವುದೇ ಯೋಚನೆಯಿಲ್ಲ' ಎನ್ನುತ್ತಾರೆ ದಿವ್ಯಾ.

ಆಪರೇಷನ್ ಕಾವೇರಿಯ ಮೊದಲ ಬ್ಯಾಚ್‌ನಲ್ಲಿ ದಿವ್ಯಾ ಅವರು 9 ಮಂದಿ ತಮಿಳಿಗರ ಜೊತೆ ಸುಡಾನ್‌ನಿಂದ ಭಾರತಕ್ಕೆ ಬಂದಿಳಿದಿದ್ದಾರೆ.

ಮುಂಬೈ ತಲುಪಿದ 246 ಭಾರತೀಯರು



ಸುಡಾನ್‌ನಲ್ಲಿ ಸಿಲುಕಿದ್ದ 246 ಭಾರತೀಯರ ಎರಡನೇ ತಂಡ ಗುರುವಾರ ಮುಂಬೈಗೆ ಬಂದಿಳಿಯಿತು –ಪಿಟಿಐ ಚಿತ್ರ

ಮುಂಬೈ (ಪಿಟಿಐ): ಹಿಂಸಾಚಾರ ಪೀಡಿತ ಸುಡಾನ್‌ನಲ್ಲಿ ಸಿಲುಕಿದ್ದ 246 ಭಾರತೀಯರಿದ್ದ ಎರಡನೇ ತಂಡವನ್ನು ಹೊತ್ತ ಭಾರತೀಯ ವಾಯುಪಡೆಯ ಯುದ್ಧವಿಮಾನವು ಗುರುವಾರ ಮುಂಬೈಗೆ ತಲುಪಿತು.

ಭಾರತೀಯ ಕಾಲಮಾನದ ಪ್ರಕಾರ ಯುದ್ಧವಿಮಾನವು ಬೆಳಿಗ್ಗೆ ಸುಮಾರು 11 ಗಂಟೆಗೆ ಜಿದ್ದಾದಿಂದ ಹೊರಟು ಮಧ್ಯಾಹ್ನ ಸುಮಾರು 3.30ಕ್ಕೆ ಇಲ್ಲಿಗೆ ತಲುಪಿತು ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಖಾರ್ಟೂಮ್ ಸೇರಿ ಸುಡಾನ್‌ನ ಸಂಘರ್ಷಪೀಡಿತ ಪ್ರದೇಶಗಳಲ್ಲಿ ಸಿಲುಕಿರುವ ಭಾರತೀಯರನ್ನು 'ಆಪರೇಷನ್ ಕಾವೇರಿ' ಕಾರ್ಯಾಚರಣೆ ಅಡಿ ಪೋರ್ಟ್ ಸುಡಾನ್‌ಗೆ ಬಸ್‌ಗಳ ಮೂಲಕ ಕರೆತರಲಾಗುತ್ತಿದೆ. ಅಲ್ಲಿಂದ ಸೌದಿ ಅರೇಬಿಯಾದ ಜಿದ್ದಾಗೆ ಸೇನೆಯ ಯುದ್ಧವಿಮಾನಗಳು ಮತ್ತು ನೌಕೆಗಳ ಮೂಲಕ ಕರೆತರಲಾಗುತ್ತಿದೆ. ಕಾರ್ಯಾಚರಣೆಯು ಹಗಲು ರಾತ್ರಿಯೆನ್ನದೆ ಭರದಿಂದ ಸಾಗಿದೆ.

ಕದನ ವಿರಾಮ ವಿಸ್ತರಣೆಗೆ ಅರೆಸೇನಾ ಪಡೆ ನಕಾರ

ಖಾರ್ಟೂಮ್ (ರಾಯಿಟರ್ಸ್/ಎಎಫ್‌ಪಿ): ಸುಡಾನ್‌ನಲ್ಲಿ ಕದನ ವಿರಾಮ ಮುಂದುವರಿಸುವಂತೆ ಸೇನೆ ಮತ್ತು ಅರೆಸೇನಾ ಪಡೆಗಳ ಮುಖ್ಯಸ್ಥರಿಗೆ ಅಮೆರಿಕ ಸೇರಿದಂತೆ ದಕ್ಷಿಣ ಆಫ್ರಿಕದ ರಾಷ್ಟ್ರಗಳು ಒತ್ತಡ ಹೇರುತ್ತಿರುವ ಬೆನ್ನಲ್ಲೇ ಗುರುವಾರವೂ ರಾಜಧಾನಿ ಖಾರ್ಟೂಮ್‌ನಲ್ಲಿ ಗುಂಡಿನ ದಾಳಿ ಮುಂದುವರಿಯಿತು.

72 ಗಂಟೆಗಳ ಕದನ ವಿರಾಮ ಗುರುವಾರ ಮಧ್ಯರಾತ್ರಿ ಕೊನೆಗೊಂಡಿದೆ. ಸೇನಾ ಮುಖ್ಯಸ್ಥ ಜನರಲ್ ಅಬ್ದುಲ್ ಫತ್ತಾಹ್ ಅಲ್ ಬುಹ್ರಾನ್ ಮತ್ತೆ 72 ಗಂಟೆಗಳ ಕದನ ವಿರಾಮ ಘೋಷಣೆಗೆ ಸಹಮತ ಸೂಚಿಸಿದ್ದಾರೆ. ಆದರೆ, ಇದಕ್ಕೆ ಅರೆಸೇನಾ ಪಡೆಯ ಮುಖ್ಯಸ್ಥ ಮೊಹಮ್ಮದ್ ಹಮದಾನ್ ದಾಗಲೊ ಒಪ್ಪಿಗೆ ನೀಡಿಲ್ಲ.

ಸಂಘರ್ಷ 13ನೇ ದಿನಕ್ಕೆ ಕಾಲಿಟ್ಟಿದ್ದು, ಸುಡಾನ್ ಗಡಿ ಭಾಗದಲ್ಲಿ ನಿರಾಶ್ರಿತರ ಸಂಖ್ಯೆ ಹೆಚ್ಚುತ್ತಿದೆ. 2.70 ಲಕ್ಷ ನಿರಾಶ್ರಿತರು ದಕ್ಷಿಣ ಸುಡಾನ್‌ಗೆ ತೆರಳಿದ್ದಾರೆ ಎಂದು ವಿಶ್ವಸಂಸ್ಥೆಯ ನಿರಾಶ್ರಿತರ ಘಟಕ ತಿಳಿಸಿದೆ.

ಈವರೆಗೆ 512 ಜನ ಮೃತರಾಗಿದ್ದು, 4,193 ಮಂದಿ ಗಾಯಗೊಂಡಿದ್ದಾರೆ. ಅಪೌಷ್ಟಿಕತೆಯಿಂದ ಬಳಲುತ್ತಿರುವ 50 ಸಾವಿರ ಮಕ್ಕಳಿಗೆ ಅಗತ್ಯ ಚಿಕಿತ್ಸೆ ನೀಡಲಾಗಿದೆ. ಈ ನಡುವೆಯೇ ಆಸ್ಪತ್ರೆಗಳಿಗೆ ಅಗತ್ಯ ವೈದ್ಯಕೀಯ ನೆರವು ವ್ಯತ್ಯಯಗೊಂಡಿದೆ. ವಿದ್ಯುತ್ ಮತ್ತು ಕುಡಿಯುವ ನೀರು ಪೂರೈಕೆಯೂ ಸ್ಥಗಿತಗೊಂಡಿದೆ. ಇದರಿಂದ ಮತ್ತಷ್ಟು ಸಮಸ್ಯೆ ಎದುರಾಗಲಿದೆ ಎಂದು ವಿಶ್ವಸಂಸ್ಥೆ ತಿಳಿಸಿದೆ.

'ಬಿಜೆಪಿ ಜತೆ ಮೈತ್ರಿ ಮುಂದುವರಿಕೆ'

ನವದೆಹಲಿ/ಚೆನ್ನೈ (ಪಿಟಿಐ): 'ಬಿಜೆಪಿಯೊಂದಿಗೆ ತಮ್ಮ ಪಕ್ಷದ ಮೈತ್ರಿ ಮುಂದುವರೆದಿದೆ ಮತ್ತು ಕಮಲ ಪಕ್ಷದ ತಮಿಳುನಾಡು ಅಧ್ಯಕ್ಷ ಕೆ. ಅಣ್ಣಾಮಲೈ ಅವರೊಂದಿಗೆ ಯಾವುದೇ ಸಮಸ್ಯೆಗಳಿಲ್ಲ' ಎಂದು ಎಐಎಡಿಎಂಕೆ ಪ್ರಧಾನ ಕಾರ್ಯದರ್ಶಿ ಎಡಪ್ಪಾಡಿ ಕೆ. ಪಳನಿಸ್ವಾಮಿ (ಇಪಿಎಸ್) ಗುರುವಾರ ತಿಳಿಸಿದ್ದಾರೆ.

2019ರ ಲೋಕಸಭಾ ಚುನಾವಣೆ ಮತ್ತು 2021ರ ವಿಧಾನಸಭಾ ಚುನಾವಣೆಯಲ್ಲಿ ಮಿತ್ರಪಕ್ಷಗಳಾಗಿ ಸ್ಪರ್ಧಿಸಿದ್ದ ಉಭಯ ಪಕ್ಷಗಳ ನಡುವೆ ಭಿನ್ನಾಭಿಪ್ರಾಯ ಮೂಡಿದೆ ಎಂಬ ವರದಿಗಳ ಹಿನ್ನೆಲೆಯಲ್ಲಿ ಎಐಎಡಿಎಂಕೆ ಮುಖ್ಯಸ್ಥರು ಈ ಹೇಳಿಕೆ ನೀಡಿದ್ದಾರೆ.

ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಪಕ್ಷದ ಮುಖ್ಯಸ್ಥ ಜೆ.ಪಿ. ನಡ್ಡಾ ಅವರನ್ನು ನವದೆಹಲಿಯಲ್ಲಿ ಭೇಟಿಯಾದ ನಂತರ ಅವರು ಚೆನ್ನೈನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

'2019 ರ ಲೋಕಸಭಾ ಚುನಾವಣೆಗೆ ಬಿಜೆಪಿ ಜತೆ ಮೈತ್ರಿ ಮಾಡಿಕೊಂಡಿದ್ದೆವು. ಇದು 2021 (ತಮಿಳುನಾಡು) ವಿಧಾನಸಭಾ ಚುನಾವಣೆ ಮತ್ತು ಈರೋಡ್ ಉಪಚುನಾವಣೆಯಲ್ಲೂ (ಈ ವರ್ಷದ ಆರಂಭದಲ್ಲಿ) ಮುಂದುವರಿಯಿತು. ಈ ಮೈತ್ರಿ ಮುಂದುವರಿಯುತ್ತದೆ' ಎಂದರು.


'ಅಣ್ಣಾಮಲೈ ಅವರೊಂದಿಗೆ ನಮಗೆ ಯಾವುದೇ ಸಮಸ್ಯೆ ಇಲ್ಲ. ಹಾಗೇನಾದರೂ ಇದ್ದರೆ ಅವರು (ಇತ್ತೀಚೆಗೆ) ಈರೋಡ್ ಉಪಚುನಾವಣೆಯಲ್ಲಿ ಪ್ರಚಾರ ಮಾಡುತ್ತಿದ್ದರಾ? ಬಿರುಕು ಸೃಷ್ಟಿಸಲು ಮಾಧ್ಯಮಗಳು ಮಾತ್ರ ಇಂತಹ ಪ್ರಶ್ನೆಗಳನ್ನು ಕೇಳುತ್ತಿವೆ' ಎಂದು ಪಳನಿಸ್ವಾಮಿ ಆರೋಪಿಸಿದರು.

ಗುಜರಾತ್ ಹೈಕೋರ್ಟ್‌ನಲ್ಲಿ ರಾಹುಲ್ ಅರ್ಜಿ ನಾಳೆ ವಿಚಾರಣೆ

ಅಹಮದಾಬಾದ್ (ಪಿಟಿಐ): 'ಮೋದಿ ಉಪನಾಮ' ಕುರಿತ ಮಾನಹಾನಿ ಮೊಕದ್ದಮೆಯೊಂದರಲ್ಲಿ ಸೂರತ್‌ನ ನ್ಯಾಯಾಲಯ ವಿಧಿಸಿರುವ ಶಿಕ್ಷೆಗೆ ತಡೆ ಕೋರಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಲ್ಲಿಸಿದ್ದ ಮೇಲ್ಮನವಿಯ ವಿಚಾರಣೆ ಗುಜರಾತ್ ಹೈಕೋರ್ಟ್‌ನಲ್ಲಿ ಇದೇ ಏಪ್ರಿಲ್ 29ರಂದು ನಡೆಯಲಿದೆ.

ಗುರುವಾರ ಹೈಕೋರ್ಟ್ ಪ್ರಕಟಿಸಿರುವ ಅರ್ಜಿ ವಿಚಾರಣೆ ಪಟ್ಟಿಯ ಪ್ರಕಾರ, ಇದೇ 29ರಂದು ನ್ಯಾಯಮೂರ್ತಿ ಹೇಮಂತ್ ಪ್ರಚ್ಛಕ್ ಅವರು ರಾಹುಲ್ ಗಾಂಧಿಯವರ ಅರ್ಜಿಯನ್ನು ವಿಚಾರಣೆಗೆ ಕೈಗೆತ್ತಿಕೊಳ್ಳಲಿದ್ದಾರೆ.

ಬುಧವಾರ ಈ ಅರ್ಜಿ ವಿಚಾರಣೆಗೆ ಬಂದಾಗ ವಾದ– ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಗೀತಾ ಗೋಪಿ ಅವರು ವಿಚಾರಣೆಯಿಂದ ಹಿಂದೆ ಸರಿಯುವುದಾಗಿ ಪ್ರಕಟಿಸಿದ್ದರು.



ಉತ್ತರಾಖಂಡದ ಬದರೀನಾಥ ದೇವಾಲಯವನ್ನು ಗುರುವಾರ ಬೆಳಿಗ್ಗೆ 7.10ಕ್ಕೆ ತೆರೆಯಲಾಗಿದ್ದು, ಭಕ್ತರು ದರ್ಶನ ಪಡೆದರು –ಪಿಟಿಐ ಚಿತ್ರ

ಛತ್ತೀಸಗಢ: ದಾಂತೇವಾಡ ಜಿಲ್ಲೆಯಲ್ಲಿ ನಕ್ಸಲರಿಂದ ಭೀಕರ ದಾಳಿ ಬೆನ್ನಲ್ಲೇ ಕ್ರಮ

ಬಸ್ತರ್ ವಲಯದ ಏಳು ಜಿಲ್ಲೆಗಳಲ್ಲಿ ಹೈ ಅಲರ್ಟ್

ದಾಂತೇವಾಡ, ಛತ್ತೀಸಗಢ (ಪಿಟಿಐ): ಜಿಲ್ಲೆಯಲ್ಲಿ ಕಚ್ಚಾ ಬಾಂಬ್ ಸ್ಫೋಟಿಸಿ, ಭೀಕರ ದಾಳಿ ನಡೆದ ಬೆನ್ನಲ್ಲೇ, ನಕ್ಸಲರ ಹಾವಳಿ ಪೀಡಿತ ಬಸ್ತರ್ ವಲಯದ ಏಳು ಜಿಲ್ಲೆಗಳಲ್ಲಿ ಗುರುವಾರ ಹೈ ಅಲರ್ಟ್ ಘೋಷಿಸಲಾಗಿದೆ.

ಈ ಜಿಲ್ಲೆಗಳಲ್ಲಿ ವಾಹನಗಳಲ್ಲಿ ಸಂಚರಿಸುವಾಗ ಹೆಚ್ಚು ಜಾಗರೂಕತೆ ವಹಿಸುವಂತೆ ಭದ್ರತಾ ಪಡೆಗಳಿಗೆ ಸೂಚಿಸಲಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಬುಧವಾರದ ದಾಳಿಯಲ್ಲಿ ನಕ್ಸಲರು ನೆಲದಡಿ ಕಚ್ಚಾ ಬಾಂಬ್ ಇಟ್ಟಿದ್ದರು. ಇಲ್ಲಿ ನೆಲವನ್ನು ಅಗೆದು, ಕಚ್ಚಾಬಾಂಬ್ ಪತ್ತೆ ಹಚ್ಚಿ ನಿಷ್ಕ್ರಿಯಗೊಳಿಸುವ ಕಾರ್ಯಾಚರಣೆಯನ್ನು ಆರಂಭಿಸಲಾಗಿದೆ ಎಂದು ಐಜಿಪಿ (ಬಸ್ತರ್ ವಲಯ) ಸುಂದರರಾಜ್ ಪಿ. ತಿಳಿಸಿದ್ದಾರೆ.

ದಾಂತೇವಾಡ ಜಿಲ್ಲೆಯ ಅರನ್‌ಪುರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಚ್ಚಾಬಾಂಬ್ ಸ್ಫೋಟಗೊಂಡ ಪರಿಣಾಮ ಜಿಲ್ಲಾ ಮೀಸಲು ಪಡೆಯ 10 ಪೊಲೀಸರು ಹಾಗೂ ಅವರು ಪ್ರಯಾಣಿಸುತ್ತಿದ್ದ ಮಿನಿವ್ಯಾನ್ ವಾಹನದ ಚಾಲಕ ಬುಧವಾರ ಮೃತಪಟ್ಟಿದ್ದರು.

ಬಸ್ತರ್ ವಲಯದಲ್ಲಿ ಕಂಕೇರ್, ಕೊಂಡಗಾಂವ್, ನಾರಾಯಣಪುರ, ಬಸ್ತರ್, ದಾಂತೇವಾಡ, ಸುಕ್ಮಾ ಹಾಗೂ ಬಿಜಾಪುರ ಜಿಲ್ಲೆಗಳಿವೆ. ಅನೇಕ ವರ್ಷಗಳಿಂದಲೂ ಈ ಜಿಲ್ಲೆಗಳು ನಕ್ಸಲರ ದಾಳಿಗೆ ಒಳಗಾಗಿವೆ. ಅದರಲ್ಲೂ, ಬೇಸಿಗೆ ಕಾಲದಲ್ಲಿ ಭದ್ರತಾ ಪಡೆಗಳನ್ನು ಗುರಿಯಾಗಿಸಿ ನಕ್ಸಲರು ಹೆಚ್ಚು ದಾಳಿ ನಡೆಸುತ್ತಾರೆ ಎಂದು ಮೂಲಗಳು ಹೇಳಿವೆ.

'ನಾನು ಬದುಕಿರುವವರೆಗೂ ಮರೆಯಲಾರೆ': 'ನಕ್ಸಲರು ನೆಲದಡಿ ಇರಿಸಿದ್ದ ಕಚ್ಚಾ ಬಾಂಬ್ ಸ್ಫೋಟಗೊಂಡು 10 ಮಂದಿ ಪೊಲೀಸರು ಹಾಗೂ ಚಾಲಕ ಮೃತಪಟ್ಟ ಆ ಭೀಕರ ದೃಶ್ಯವನ್ನು ನಾನು ಬದುಕಿರುವವರೆಗೂ ಮರೆಯಲು ಸಾಧ್ಯವಿಲ್ಲ...'

– ಬುಧವಾರ ಜಿಲ್ಲಾ ಮೀಸಲು ಪಡೆಯ ಪೊಲೀಸರು ಪ್ರಯಾಣಿಸುತ್ತಿದ್ದ ನತದೃಷ್ಟ ವಾಹನದ ಹಿಂದೆ ಹೊರಟಿದ್ದ ಸ್ಕಾರ್ಪಿಯೊದ ಚಾಲಕ ಹೇಳಿದ ಮಾತುಗಳಿವು.

'ಈ ದಾಳಿಯಲ್ಲಿ ಮೃತಪಟ್ಟ, ವಾಹನದ ಚಾಲಕ ಧನಿರಾಮ್ ಯಾದವ್ ನನಗೆ ಪರಿಚಿತವಾಗಿದ್ದ' ಎಂದು ಹೇಳುತ್ತ ಅವರು ಕಣ್ಣೀರಿಟ್ಟರು.

ಹುತಾತ್ಮರಿಗೆ ಗೌರವದ ವಿದಾಯ

ಕಚ್ಚಾಬಾಂಬ್ ಸ್ಫೋಟಿಸಿ, ನಕ್ಸಲರು ನಡೆಸಿದ ದಾಳಿಯಲ್ಲಿ ಹುತಾತ್ಮರಾದ ಜಿಲ್ಲಾ ಮೀಸಲು ಪಡೆಯ (ಡಿಆರ್‌ಜಿ) 10 ಮಂದಿ ಪೊಲೀಸರು ಹಾಗೂ ಅವರಿದ್ದ ವಾಹನದ ಚಾಲಕನಿಗೆ ಗುರುವಾರ ಅಂತಿಮ ನಮನ ಸಲ್ಲಿಸಲಾಯಿತು.

ಇಲ್ಲಿನ ಕರ್ಲಿ ಪ್ರದೇಶದಲ್ಲಿರುವ ಪೊಲೀಸ್ ಲೈನ್ಸ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಧರ ಪಾರ್ಥಿವ ಶರೀರಕ್ಕೆ ಹೂಗುಚ್ಛ ಅರ್ಪಿಸಿ, ಗೌರವ ವಂದನೆ ಸಲ್ಲಿಸಲಾಯಿತು. ಮೃತರ ಮಕ್ಕಳು ಸೇರಿದಂತೆ ಕುಟುಂಬದ ಸದಸ್ಯರು, ಸಂಬಂಧಿಕರ ಆಕ್ರಂದನ ಒಂದೆಡೆಯಾದರೆ, ಯೋಧರ ಶೌರ್ಯ, ತ್ಯಾಗವನ್ನು ಸ್ಮರಿಸಿ 'ಭಾರತ್ ಮಾತಾ ಕಿ ಜೈ' ಘೋಷಣೆ ಕೂಗಲಾಯಿತು.

ನಂತರ, ಪಾರ್ಥಿವ ಶರೀರಗಳನ್ನು ಯೋಧರ ಊರುಗಳಿಗೆ ಒಯ್ಯಲಾಯಿತು. ಇದಕ್ಕೂ, ಮುನ್ನ ಯೋಧರೊಬ್ಬರ ಪಾರ್ಥಿವ ಶರೀರವನ್ನು ಅವರ ಊರಿಗೆ ಒಯ್ಯಲು ವಾಹನದತ್ತ ತೆಗೆದುಕೊಂಡು ಹೋಗುವಾಗ, ಮುಖ್ಯಮಂತ್ರಿ ಭೂಪೇಶ್ ಬಘೆಲ್ ಅವರು ಹೆಗಲು ನೀಡಿ ಗೌರವ ಸಲ್ಲಿಸಿದರು.

ಗೃಹ ಸಚಿವ ತಾಮ್ರಧ್ವಜ ಸಾಹು, ಸಂಸದರಾದ ದೀಪಕ್ ಬೈಜ್, ಫುಲೋದೇವಿ ನೇತಮ್, ಡಿಜಿಪಿ ಅಶೋಕ್ ಜುನೇಜ ಗೌರವ ಸಲ್ಲಿಸಿದರು.

'ಸಮಾನ ವೇತನಕ್ಕೆ ಅರ್ಹರಲ್ಲ'

ಪ್ರಜಾವಾಣಿ ವಾರ್ತೆ

ನವದೆಹಲಿ: ಅಲೋಪತಿ ಹಾಗೂ ಆಯುರ್ವೇದ ಪದ್ಧತಿಗಳ ವೈದ್ಯರು ಸಮಾನ ಕೆಲಸ ಮಾಡುವುದಿಲ್ಲ. ಹಾಗಾಗಿ, ಅವರು ಸಮಾನ ವೇತನಕ್ಕೆ ಅರ್ಹರಲ್ಲ ಎಂದು ಸುಪ್ರೀಂಕೋರ್ಟ್ ಸ್ಪಷ್ಟಪಡಿಸಿದೆ.

'ತುರ್ತು ಮತ್ತು ಅಪಘಾತ ಸೇವೆ, ಮರಣೋತ್ತರ ಪರೀಕ್ಷೆ ಸೇರಿದಂತೆ ಹಲವು ಕರ್ತವ್ಯಗಳನ್ನು ಅಲೋಪತಿ ಪದ್ಧತಿ ವೈದ್ಯರು ನಿಭಾಯಿಸುತ್ತಾರೆ. ಪರ್ಯಾಯ/ದೇಸಿ ವೈದ್ಯಪದ್ಧತಿ ವೈದ್ಯರು ಇಂಥ ಕರ್ತವ್ಯಗಳನ್ನು ನಿಭಾಯಿಸುವುದಿಲ್ಲ ಎಂದೂ ಸುಪ್ರೀಂಕೋರ್ಟ್ ಹೇಳಿದೆ. ನ್ಯಾಯಮೂರ್ತಿಗಳಾದ ವಿ.ರಾಮಸುಬ್ರಮಣಿಯನ್ ಹಾಗೂ ಪಂಕಜ್ ಮಿತ್ತಲ್ ಅವರಿದ್ದ ನ್ಯಾಯಪೀಠ ಅರ್ಜಿ ವಿಚಾರಣೆ ನಡೆಸಿತು.

ಸಂಕ್ಷಿಪ್ತ ಸುದ್ದಿ

ಸುಂದರ ನಗರ: ಸ್ಪರ್ಧೆ ಆಯೋಜಿಸಿದ ಕೇಂದ್ರ ಸರ್ಕಾರ

ನವದೆಹಲಿ: ನಗರಗಳನ್ನು ಸ್ವಚ್ಛವೂ ಸುಂದರವೂ ಆಗಿ ಮಾಡುವ ಉದ್ದೇಶದಿಂದ ಕೇಂದ್ರ ವಸತಿ ಹಾಗೂ ನಗರ ವ್ಯವಹಾರಗಳ ಸಚಿವಾಲಯವು 'ನಗರ ಸೌಂದರ್ಯ ಸ್ಪರ್ಧೆ'ಯನ್ನು ಆಯೋಜಿಸಿದೆ. ಸ್ಥಳೀಯ ಆಡಳಿತವು ತಮ್ಮ ನಗರಗಳನ್ನು ಸುಂದರವಾಗಿಟ್ಟುಕೊಳ್ಳುವುದನ್ನು ಉತ್ತೇಜಿಸಲು ಈ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದೆ.

ನಗರದ ವಾರ್ಡ್‌ಗಳು, ಸಾರ್ವಜನಿಕ ಸ್ಥಳಗಳನ್ನು ಈ ಸ್ಪರ್ಧೆಗೆ ಪರಿಗಣಿಸಲಾಗುವುದು. ಸಾರಿಗೆ ಸೌಲಭ್ಯ, ಮೂಲಸೌಕರ್ಯ, ಸೌಂದರ್ಯ, ಪರಿಸರ ಮತ್ತು ಚಟುವಟಿಕೆಗಳು ಎಂಬ ಐದು ವಿಚಾರಗಳನ್ನು ಪರಿಗಣಿಸಿ ವಾರ್ಡ್‌ಗಳಿಗೆ ಬಹುಮಾನವನ್ನು ನೀಡಲಾಗುವುದು. ಜಲಮೂಲಗಳ ಅಭಿವೃದ್ಧಿ, ಹಸಿರು ಪ್ರದೇಶ, ಪ್ರವಾಸಿ/ಪಾರಂಪರಿಕ ತಾಣಗಳು, ಮಾರುಕಟ್ಟೆ/ವ್ಯಾಪಾರಿ ಸ್ಥಳಗಳು– ಈ ಐದು ವರ್ಗಗಳಲ್ಲಿ ಸಾರ್ವಜನಿಕ ಸ್ಥಳಗಳನ್ನು ಸ್ಪರ್ಧೆಗೆ ಆಯ್ಕೆ ಮಾಡಲಾಗುತ್ತದೆ.

ಜುಲೈ 15ರ ಒಳಗೆ ಸ್ಪರ್ಧೆಗೆ ನೋಂದಾಯಿಸಿಕೊಳ್ಳಬಹುದು ಎಂದು ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.

ಈ ಸ್ಪರ್ಧೆಗಾಗಿಯೇ ಸಚಿವಾಲಯವು ವೆಬ್ ಪೋರ್ಟಲ್ https://citybeautyco mpetition.in ಅನ್ನು ಬುಧವಾರ ಬಿಡುಗಡೆ ಮಾಡಿದೆ.

ಶಿವಪುರ ಹಿಂಸಾಚಾರ: ಎನ್‌ಐಎ ತನಿಖೆಗೆ

ಕೋಲ್ಕತ್ತ(ಪಿಟಿಐ): ಹೌರಾ ಜಿಲ್ಲೆಯ ಶಿವಪುರದಲ್ಲಿ ರಾಮನವಮಿ ಆಚರಣೆ ವೇಳೆ ನಡೆದಿದ್ದ ಹಿಂಸಾಚಾರದ ಬಗ್ಗೆ ಎನ್‌ಐಎಯಿಂದ ತನಿಖೆ ನಡೆಸಲು ಕಲ್ಕತ್ತಾ ಹೈಕೋರ್ಟ್ ಗುರುವಾರ ಆದೇಶ ನೀಡಿದೆ.

ವಿರೋಧ ಪಕ್ಷದ ನಾಯಕ, ಬಿಜೆಪಿಯ ಸುವೇಂದು ಅಧಿಕಾರಿ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಆಲಿಸಿದ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಟಿ.ಎಸ್. ಶಿವಜ್ಞಾನಂ ಅವರ ನೇತೃತ್ವದ ವಿಭಾಗೀಯ ಪೀಠವು, ಪ್ರಕರಣದ ತನಿಖೆಯನ್ನು ಪಶ್ಚಿಮ ಬಂಗಾಳದ ಪೊಲೀಸರಿಂದ ಎನ್‌ಐಎಗೆ ವರ್ಗಾಯಿಸುವಂತೆ ನಿರ್ದೇಶಿಸಿದೆ.

ಸಿಸೋಡಿಯ ಜಾಮೀನು ಅರ್ಜಿ: ಆದೇಶ ಇಂದು?

ನವದೆಹಲಿ (ಪಿಟಿಐ): ಅಬಕಾರಿ ನೀತಿ ಹಗರಣದ ಜೊತೆ ನಂಟಿರುವ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ದೆಹಲಿಯ ಮಾಜಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ ಸಲ್ಲಿಸಿರುವ ಜಾಮೀನು ಅರ್ಜಿ ಕುರಿತು ಇಲ್ಲಿನ ನ್ಯಾಯಾಲಯವು ಶುಕ್ರವಾರ (ಏ. 28) ಆದೇಶ ಹೊರಡಿಸುವ ಸಾಧ್ಯತೆ ಇದೆ.

ಪ್ರಕರಣದ ವಿಚಾರಣೆಗಾಗಿ ಸಿಸೋಡಿಯಾ ಅವರನ್ನು ದೀರ್ಘಾವಧಿಗೆ ಬಂಧಿಸಿಡುವ ಅಗತ್ಯವಿಲ್ಲವೆಂದು ಅವರ ವಕೀಲರು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ಅರ್ಜಿ ಆಲಿಸಿದ ವಿಶೇಷ ನ್ಯಾಯಾಧೀಶ ಎಂ.ಕೆ. ನಾಗ್ಪಾಲ್ ಅವರು ಶುಕ್ರವಾರಕ್ಕೆ ತೀರ್ಪು ಕಾಯ್ದಿರಿಸಿದರು.

ಪಾತಕಿ ಆನಂದ್ ಬಿಡುಗಡೆ

ಪಟ್ನಾ (ಪಿಟಿಐ): ಹದಿನೈದು ವರ್ಷ ಜೈಲು ಶಿಕ್ಷೆ ಪೂರೈಸಿದ ಪಾತಕಿ, ರಾಜಕಾರಣಿ ಆನಂದ್ ಮೋಹನ್ ಸಿಂಗ್ ಸಹರ್ಸಾ ಜೈಲಿನಿಂದ ಗುರುವಾರ ಬೆಳಿಗ್ಗೆ ಬಿಡುಗಡೆಯಾಗಿದ್ದಾರೆ.

ರಾಜ್ಯ ಸರ್ಕಾರ ಇತ್ತೀಚೆಗೆ ಜೈಲು ನಿಯಮಗಳಿಗೆ ತಿದ್ದುಪಡಿ ಮಾಡಿದ ನಂತರ ಮಾಜಿ ಸಂಸದ ಸಿಂಗ್ ಸೇರಿದಂತೆ 27 ಅಪರಾಧಿಗಳನ್ನು ಅವಧಿಪೂರ್ವ ಬಿಡುಗಡೆ ಮಾಡಲು ಅವಕಾಶ ಮಾಡಿಕೊಡಲಾಯಿತು.

1994ರಲ್ಲಿ ಮುಜಾಫರ್ ಪುರ ಗ್ಯಾಂಗ್‌ಸ್ಟರ್ ಚೋಟಾನ್ ಶುಕ್ಲಾ ಅವರ ಅಂತ್ಯಸಂಸ್ಕಾರದ ಮೆರವಣಿಗೆ ವೇಳೆ ಆಗಿನ ಗೋಪಾಲ್ ಗಂಜ್ ಜಿಲ್ಲಾಧಿಕಾರಿ ಜಿ. ಕೃಷ್ಣಯ್ಯ ಹತ್ಯೆ ಪ್ರಕರಣದಲ್ಲಿ ಸಿಂಗ್ ಶಿಕ್ಷೆಗೆ ಗುರಿಯಾಗಿದ್ದರು.

2007ರ ಅಕ್ಟೋಬರ್‌ನಲ್ಲಿ ಸ್ಥಳೀಯ ನ್ಯಾಯಾಲಯ ಸಿಂಗ್‌ಗೆ ಮರಣದಂಡನೆ ವಿಧಿಸಿತ್ತು. ಆದರೆ ಪಟ್ನಾ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ ನಂತರ 2008ರಲ್ಲಿ ಅದನ್ನು ಜೀವಾವಧಿ ಶಿಕ್ಷೆಗೆ ಪರಿವರ್ತಿಸಿತು.

ತಿರುಪತಿ: ಮೂರು ಟನ್ ಪುಷ್ಪಾರ್ಚನೆ

ತಿರುಪತಿ (ಎಪಿ): ವೆಂಕಟೇಶ್ವರ ದೇವಾಲಯದ ಆಡಳಿತ ಮಂಡಳಿಯ ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ನೇತೃತ್ವದಲ್ಲಿ ಇಲ್ಲಿನ ಕೋದಂಡರಾಮ ಸ್ವಾಮಿ ದೇವಸ್ಥಾನದಲ್ಲಿ ವಾರ್ಷಿಕ ಪುಷ್ಪಯಾಗ (ಪುಷ್ಪಾರ್ಚನೆ) ಅದ್ದೂರಿಯಾಗಿ ನೆರವೇರಿತು.

ಶ್ರೀ ಸೀತಾ, ಲಕ್ಷ್ಮಣ ಮತ್ತು ಶ್ರೀ ರಾಮಚಂದ್ರ ಮೂರ್ತಿಗೆ ಮೂರು ಟನ್‌ಗಳಷ್ಟು ವಿವಿಧ ಪರಿಮಳಯುಕ್ತ ಪುಷ್ಪಗಳು ಮತ್ತು ಎಲೆಗಳನ್ನು ಸಮರ್ಪಿಸಲಾಯಿತು. ಬುಧವಾರ ಸಂಜೆ 4ರಿಂದ 6 ಗಂಟೆಯವರೆಗೆ ಪುಷ್ಪಯಾಗ ನಡೆಯಿತು. ನಂತರ ನಾಲ್ಕು ರಥ ಬೀದಿಗಳಲ್ಲಿ ದೇವಾನುದೇವತೆಗಳ ಮೂರ್ತಿಗಳ ಮೆರವಣಿಗೆ ನಡೆಸಲಾಯಿತು ಎಂದು ಟಿಟಿಡಿ ಪ್ರಕಟಣೆಯಲ್ಲಿ ತಿಳಿಸಿದೆ.

ಎನ್‌ಎಸ್‌ಯುಐ ಮುಖಂಡ ಡಿಬಾರ್: ದೆಹಲಿ ವಿ.ವಿ ಆದೇಶ ರದ್ದುಪಡಿಸಿದ ಹೈಕೋರ್ಟ್

ನವದೆಹಲಿ (ಪಿಟಿಐ): 2002ರ ಗುಜರಾತ್ ಗಲಭೆ ಕುರಿತು ಬಿಬಿಸಿ ತಯಾರಿಸಿರುವ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಿದ್ದಕ್ಕಾಗಿ ಎನ್‌ಎಸ್‌ಯುಐ ಮುಖಂಡರೊಬ್ಬರನ್ನು ಡಿಬಾರ್ ಮಾಡಿ ದೆಹಲಿ ವಿಶ್ವವಿದ್ಯಾಲಯ ಹೊರಡಿಸಿದ್ದ ಆದೇಶವನ್ನು ದೆಹಲಿ ಹೈಕೋರ್ಟ್ ಗುರುವಾರ ರದ್ದುಗೊಳಿಸಿದೆ.

ನ್ಯಾಯಮೂರ್ತಿ ಪುರುಷೇಂದ್ರಕುಮಾರ್ ಕೌರವ್ ಅರ್ಜಿ ವಿಚಾರಣೆ ನಡೆಸಿದರು.

'ಎನ್‌ಎಸ್‌ಯುಐನ ರಾಷ್ಟ್ರೀಯ ಕಾರ್ಯದರ್ಶಿ ಹಾಗೂ ಪಿಎಚ್‌.ಡಿ ಸಂಶೋಧನಾ ವಿದ್ಯಾರ್ಥಿ ಲೋಕೇಶ್ ಚುಗ್ ಅವರ ವಿರುದ್ಧ ಕೈಗೊಂಡಿರುವ ಕ್ರಮವು ಸ್ವಾಭಾವಿಕ ನ್ಯಾಯ ತತ್ವದ ಉಲ್ಲಂಘನೆಯಾಗಿದೆ. ಸಂಬಂಧಪಟ್ಟವರು ತಾವು ತೆಗೆದುಕೊಂಡಿರುವ ಕ್ರಮಕ್ಕೆ ಸಂಬಂಧಿಸಿ ಸಕಾರಣಗಳನ್ನು ವಿವರಿಸಬೇಕಿತ್ತು' ಎಂದು ನ್ಯಾಯಮೂರ್ತಿ ಕೌರವ್ ಹೇಳಿದ್ದಾರೆ.

'ಅರ್ಜಿದಾರರ ಕಾರ್ಯ ಆಕ್ಷೇಪಿಸಿ ಮಾರ್ಚ್ 10ರಂದು ದೆಹಲಿ ವಿಶ್ವವಿದ್ಯಾಲಯ ಹೊರಡಿಸಿರುವ ಆದೇಶ ಸಮರ್ಥನೀಯವಲ್ಲ. ಹೀಗಾಗಿ ವಿ.ವಿಯ ಆದೇಶವನ್ನು ರದ್ದುಗೊಳಿಸಲಾಗಿದೆ. ಅರ್ಜಿದಾರರ ಪ್ರವೇಶವನ್ನು ಮರುಸ್ಥಾಪಿಸಲಾಗಿದೆ' ಎಂದು ನ್ಯಾಯಮೂರ್ತಿ ಹೇಳಿದರು.

ದೆಹಲಿ ವಿಶ್ವವಿದ್ಯಾಲಯ ಪರ ಹಾಜರಿದ್ದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಅವರು ಸಂಶೋಧನಾ ವಿದ್ಯಾರ್ಥಿ ಸಲ್ಲಿಸಿದ್ದ ಅರ್ಜಿಗೆ ವಿರೋಧ ವ್ಯಕ್ತಪಡಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಕೌರವ್, 'ಸಂಶೋಧನಾ ವಿದ್ಯಾರ್ಥಿಯನ್ನು ಡಿಬಾರ್ ಮಾಡಿ ಹೊರಡಿಸಿದ್ದ ಆದೇಶ ಸ್ವಾಭಾವಿಕ ನ್ಯಾಯ ತತ್ವಕ್ಕೆ ಅನುಗುಣವಾಗಿ ಇರಲಿಲ್ಲ. ಈ ಕಾರಣಕ್ಕೆ ಆದೇಶವನ್ನು ರದ್ದುಗೊಳಿಸಲಾಗಿದೆ. ಆದರೆ, ಕಾನೂನುಪ್ರಕಾರ ಈ ವಿದ್ಯಾರ್ಥಿ ವಿರುದ್ಧ ವಿಶ್ವವಿದ್ಯಾಲಯ ಕ್ರಮ ಕೈಗೊಳ್ಳಬಹುದು' ಎಂದು ಸ್ಪಷ್ಟಪಡಿಸಿದರು.

ಏಷ್ಯನ್ ಬ್ಯಾಡ್ಮಿಂಟನ್; ಶ್ರೀಕಾಂತ್‌ಗೆ ನಿರಾಸೆ

ಎಂಟರಘಟ್ಟಕ್ಕೆ ಪ್ರಣಯ್, ಸಿಂಧು

ದುಬೈ (ಪಿಟಿಐ): ಭಾರತದ ಎಚ್. ಎಸ್.ಪ್ರಣಯ್ ಮತ್ತು ಪಿ.ವಿ. ಸಿಂಧು ಅವರು ಏಷ್ಯನ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ ಕೆ.ಶ್ರೀಕಾಂತ್ ಹೋರಾಟಕ್ಕೆ ತೆರೆಬಿತ್ತು.

ಗುರುವಾರ ನಡೆದ ಪುರುಷರ ವಿಭಾಗದ ಪಂದ್ಯದಲ್ಲಿ 8ನೇ ಶ್ರೇಯಾಂಕದ ಪ್ರಣಯ್ 21–16, 5–21, 21–18 ರಲ್ಲಿ ಇಂಡೊನೇಷ್ಯಾದ ಚಿಕೊ ಔರಾ ದ್ವಿ ವರ್ದೋಯೊ ಅವರನ್ನು ಮಣಿಸಿದರು. ಈ ಪಂದ್ಯ 1 ಗಂಟೆ 2 ನಿಮಿಷ ನಡೆಯಿತು. ಅವರು ಮುಂದಿನ ಪಂದ್ಯದಲ್ಲಿ ಜಪಾನ್‌ನ ಕಾಂತಾ ಸುನೆಯೆಮ ವಿರುದ್ಧ ಪೈಪೋಟಿ ನಡೆಸುವರು.

ಮಹಿಳೆಯರ ವಿಭಾಗದ ಪಂದ್ಯದಲ್ಲಿ ಸಿಂಧು 21-12, 21-15 ರಲ್ಲಿ ಚೀನಾದ ಹಾನ್ ಯುಯೆ ವಿರುದ್ಧ ಗೆದ್ದರು. ಚುರುಕಿನ ಪ್ರದರ್ಶನ ನೀಡಿದ ಹೈದರಾಬಾದ್‌ನ ಆಟಗಾರ್ತಿ 33 ನಿಮಿಷಗಳಲ್ಲಿ ಜಯಿಸಿದರು.



ಎಚ್‌.ಎಸ್‌.ಪ್ರಣಯ್

ಶ್ರೀಕಾಂತ್ 14-21, 22-20, 9-21 ರಲ್ಲಿ ನಾಲ್ಕನೇ ಶ್ರೇಯಾಂಕದ ಆಟಗಾರ ಜಪಾನ್‌ನ ಕೊದೈ ನರವೊಕ ಎದುರು ಪರಾಭವಗೊಂಡರು. 1 ಗಂಟೆ 12 ನಿಮಿಷ ಪಡೆದ ಪಂದ್ಯದಲ್ಲಿ ಭಾರತದ ಆಟಗಾರ ಎದುರಾಳಿಗೆ ತಕ್ಕ ಪೈಪೋಟಿ ನೀಡಿದರಾದರೂ, ಗೆಲುವು ದಕ್ಕಲಿಲ್ಲ.

ಪುರುಷರ ಡಬಲ್ಸ್ ವಿಭಾಗದ ಪ್ರೀ ಕ್ವಾರ್ಟರ್ ಫೈನಲ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿ ರೆಡ್ಡಿ– ಚಿರಾಗ್ ಶೆಟ್ಟಿ ಜೋಡಿ 21–13, 21–11 ರಲ್ಲಿ ಕೊರಿಯದ ಜಿನ್ ಯಾಂಗ್– ಸುನ್ ಸಾಂಗ್ ವಿರುದ್ಧ ಜಯಿಸಿತು.

ಮಿಶ್ರ ಡಬಲ್ಸ್‌ನಲ್ಲಿ ರೋಹನ್ ಬೋಪಣ್ಣ ಮತ್ತು ಸಿಕ್ಕಿ ರೆಡ್ಡಿ ಜೋಡಿ ವಾಕ್‌ಓವರ್ ಪಡೆದು ಎಂಟರಘಟ್ಟ ಪ್ರವೇಶಿಸಿತು.

ಅಶ್ವಿನಿ ಪೊನ್ನಪ್ಪ ಮತ್ತು ಸುಮೀತ್ ಬಿ. ರೆಡ್ಡಿ ಜೋಡಿ 15–21, 17–21 ರಲ್ಲಿ ಚೀನಾ ತೈಪೆಯ ಚಾಂಗ್ ಕೊ ಚಿ– ಲೀ ಚೆನ್ ಎದುರು ಪರಾಭವಗೊಂಡಿತು.

ಗಾಲ್ಫ್: ಏಷ್ಯನ್ ಕ್ರೀಡಾಕೂಟಕ್ಕೆ ಪ್ರಣವಿ, ಅವನಿ ಅರ್ಹತೆ

ಕೋಲ್ಕತ್ತ (ಪಿಟಿಐ): ಕರ್ನಾಟಕದ ಪ್ರಣವಿ ಅರಸ್ ಮತ್ತು ಅವನಿ ಪ್ರಶಾಂತ್ ಅವರು ಇದೇ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಏಷ್ಯನ್ ಕ್ರೀಡಾಕೂಟದ ಗಾಲ್ಫ್ ಟೂರ್ನಿಯಲ್ಲಿ ಪಾಲ್ಗೊಳ್ಳುವ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ರಾಯಲ್ ಕಲ್ಕತ್ತಾ ಗಾಲ್ಫ್ ಕ್ಲಬ್‌ನಲ್ಲಿ ಗುರುವಾರ ಕೊನೆಗೊಂಡ ಅರ್ಹತಾ ಟೂರ್ನಿಯಲ್ಲಿ ಪ್ರಣವಿ ಮತ್ತು ಅವನಿ ಅವರು ಮಹಿಳೆಯರ ವಿಭಾಗದಲ್ಲಿ ಜಂಟಿ ಅಗ್ರಸ್ಥಾನ ಪಡೆದರು. ಇವರಿಬ್ಬರ ಜತೆ ಬೆಂಗಳೂರಿನ ಅದಿತಿ ಅಶೋಕ್ ಅವರೂ ಭಾರತದ ಸವಾಲು ಮುನ್ನಡೆಸಲಿದ್ದಾರೆ.

ಮಹಿಳೆಯರ ತಂಡದಲ್ಲಿ ಸ್ಥಾನ ಪಡೆದಿರುವ ಮೂವರೂ ಕರ್ನಾಟಕದವರು ಎಂಬುದು ವಿಶೇಷ.

ಪುರುಷರ ವಿಭಾಗದಲ್ಲಿ ಖಾಲಿನ್ ಜೋಶಿ ಮತ್ತು ಎಸ್‌ಎಸ್‌ಪಿ ಚೌರಾಸಿಯಾ ಅವರು ಅರ್ಹತೆ ಗಳಿಸಿದರು. ಇವರಿಬ್ಬರ ಜತೆ ಅನಿರ್ಬನ್ ಲಾಹಿರಿ ಹಾಗೂ ಶುಭಾಂಕರ್ ಶರ್ಮಾ ಏಷ್ಯನ್ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲಿದ್ದಾರೆ. ಖಾಲಿನ್ ಅವರು ಅರ್ಹತಾ ಟೂರ್ನಿಯನ್ನು ಗೆದ್ದುಕೊಂಡರೆ, ಚೌರಾಸಿಯಾ ಎರಡನೇ ಸ್ಥಾನ ಪಡೆದುಕೊಂಡರು.



ಅವನಿ ಪ್ರಶಾಂತ್



ಪ್ರಣವಿ ಅರಸ್

ಲಾಹಿರಿ ಅವರು 2006ರ ದೋಹಾ ಏಷ್ಯನ್ ಕ್ರೀಡಾಕೂಟದಲ್ಲಿ ತಂಡ ವಿಭಾಗದಲ್ಲಿ ಬೆಳ್ಳಿ ಜಯಿಸಿದ್ದರು. 2016ರ ರಿಯೊ ಮತ್ತು 2020ರ ಟೋಕಿಯೊ ಒಲಿಂಪಿಕ್ಸ್‌ನಲ್ಲೂ ಅವರು ಭಾಗವಹಿಸಿದ್ದರು.

2014ರ ಏಷ್ಯನ್ ಕ್ರೀಡಾಕೂಟದಲ್ಲಿ ಪಾಲ್ಗೊಂಡಿದ್ದ ಅದಿತಿ ಅವರು ರಿಯೊ ಮತ್ತು ಟೋಕಿಯೊ ಒಲಿಂಪಿಕ್ ಕೂಟಗಳಲ್ಲೂ ಭಾರತ ತಂಡವನ್ನು ಪ್ರತಿನಿಧಿಸಿದ್ದರು. ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಸ್ಪರ್ಧಿಸಿದ್ದ ದೀಕ್ಷಾ, ಏಷ್ಯನ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆಯಲು ವಿಫಲರಾದರು. ಅವರು ಟ್ರಯಲ್ಸ್‌ನಲ್ಲಿ ಐದನೇ ಸ್ಥಾನ ಪಡೆದರು.

ವಿಶ್ವ ಚೆಸ್: ಅಂತಿಮ ಪಂದ್ಯಕ್ಕೆ ಫೈನಲ್ ಹಣಾಹಣಿ

ಅಸ್ತಾನ, ಕಜಕಸ್ತಾನ: ಗ್ರ್ಯಾಂಡ್‌ಮಾಸ್ಟರ್ ಇಯಾನ್ ನಿಪೊಮ್‌ನಿಷಿ ಮತ್ತು ಸವಾಲಿಗ ಡಿಂಗ್ ಲಿರೆನ್ ನಡುವಣ ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ 13ನೇ ಪಂದ್ಯ ಗುರುವಾರ 'ಡ್ರಾ' ಆಯಿತು. ಒಂದು ಪಂದ್ಯ ಉಳಿದಿರುವಂತೆಯೇ ಈಗ ಇಬ್ಬರ ಬಳಿಯೂ ತಲಾ ಆರೂವರೆ ಪಾಯಿಂಟ್ಸ್ ಇವೆ.

ಬಿಳಿ ಕಾಯಿಗಳಲ್ಲಿ ಆಡಿದ ನಿಪೊಮ್‌ನಿಷಿ 38 ನಡೆಗಳ ನಂತರ ಲಿರೆನ್ ಜೊತೆ 'ಡ್ರಾ' ಒಪ್ಪಂದಕ್ಕೆ ಸಹಿ ಮಾಡಿದರು. ಶನಿವಾರ ನಡೆಯುವ ಫೈನಲ್ ಹಣಾಹಣಿಯ ಅಂತಿಮ (14ನೇ) ಪಂದ್ಯದಲ್ಲಿ ಲಿರೆನ್ ಬಿಳಿ ಕಾಯಿಗಳಲ್ಲಿ ಆಡಲಿದ್ದು, ಒಂದೊಮ್ಮೆ ಜಯಶಾಲಿಯಾದರೆ ಅವರು ಚೀನಾದ ಮೊದಲ ವಿಶ್ವ ಚಾಂಪಿಯನ್ ಎನ್ನುವ ಹೆಗ್ಗಳಿಕೆಗೆ ಪಾತ್ರರಾಗಲಿದ್ದಾರೆ. ಒಂದೊಮ್ಮೆ ನಿಪೊಮ್‌ನಿಷಿ ಆ ಪಂದ್ಯ ಗೆದ್ದುಕೊಂಡರೆ ಅವರು ರಷ್ಯಾದ ವಿಶ್ವ ಚಾಂಪಿಯನ್ನರ ಸಾಲಿಗೆ ಸೇರಲಿದ್ದಾರೆ.

ಪಂದ್ಯ 'ಡ್ರಾ' ಆದರೆ ಸ್ಕೋರ್ 7–7 ಸಮಬಲ ಆಗಲಿದ್ದು, ಟೈಬ್ರೇಕರ್ ಪಂದ್ಯಗಳ ಮೊರೆ ಹೋಗಬೇಕಾಗುತ್ತದೆ.

ಟೈಗರ್ ಕಪ್ ಕ್ರಿಕೆಟ್: ರಿತ್ವಿಕ್ ಆಲ್‌ರೌಂಡ್ ಆಟ

ಬೆಂಗಳೂರು: ರಿತ್ವಿಕ್ ಕುಮಾರ್ (43 ಮತ್ತು 26ಕ್ಕೆ3) ಅವರ ಆಲ್‌ರೌಂಡ್ ಆಟದ ನೆರವಿನಿಂದ ಗೋಪಾಲನ್ ತಂಡ, ಟೈಗರ್ ಕಪ್ (14 ವರ್ಷದೊಳಗಿನವರ) ಕ್ರಿಕೆಟ್ ಟೂರ್ನಿ ಪಂದ್ಯದಲ್ಲಿ ಗುರುವಾರ ಮ್ಯಾಕ್ಸ್‌ಮುಲ್ಲರ್ ತಂಡವನ್ನು 43 ರನ್‌ಗಳಿಂದ ಸೋಲಿಸಿತು.

ಯಂಗ್ ಲಯನ್ಸ್ ತಂಡ ಯಲಹಂಕದ ಎಂವಿಐಟಿ ಮೈದಾನದಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ 66 ರನ್‌ಗಳಿಂದ ಡಿಪಿಎಸ್ ನಾರ್ತ್ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರುಗಳು: ಗೋಪಾಲನ್: 30 ಓವರುಗಳಲ್ಲಿ 7 ವಿಕೆಟ್‌ಗೆ 186 (ಕುಶ್ ಕುಮಾರ್ 46, ರಿತ್ವಿಕ್ ಕುಮಾರ್; ಆರ್ನವ್ ರವೀಂದ್ರ 28ಕ್ಕೆ3); ಮ್ಯಾಕ್ಸ್ ಮುಲ್ಲರ್: 30 ಓವರುಗಳಲ್ಲಿ 9 ವಿಕೆಟ್‌ಗೆ 143 (ನಿತೀಶ್ ಆರ್ಯ 59, ರಿತ್ವಿಕ್ ಕುಮಾರ್ 26ಕ್ಕೆ3) ಯಂಗ್ ಲಯನ್ಸ್: 30 ಓವರುಗಳಲ್ಲಿ 8 ವಿಕೆಟ್‌ಗೆ 220 (ರೋಹಿತ್ ಎಂ. 73, ಬ್ರಹ್ಮಣ್ಯ 51); ಡಿಪಿಎಸ್ ನಾರ್ತ್: 30 ಓವರುಗಳಲ್ಲಿ 4 ವಿಕೆಟ್‌ಗೆ 108 (ರಿತೇಶ್ ಪಿ. 48)

ಚೆನ್ನೈ ಸೂಪರ್ ಕಿಂಗ್ಸ್ ಮಣಿಸಿ ಅಗ್ರಸ್ಥಾನಕ್ಕೇರಿದ ರಾಜಸ್ಥಾನ ರಾಯಲ್ಸ್; ಜಂಪಾ ಮಿಂಚು

ಯಶಸ್ವಿ ಜೈಸ್ವಾಲ್ ಅಬ್ಬರದ ಬ್ಯಾಟಿಂಗ್

ಜೈಪುರ (ಪಿಟಿಐ): ಯುವ ಕ್ರಿಕೆಟಿಗ ಯಶಸ್ವಿ ಜೈಸ್ವಾಲ್ ಅವರ ಅಬ್ಬರದ ಅರ್ಧಶತಕದ ಬಲದಿಂದ ರಾಜಸ್ಥಾನ ರಾಯಲ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು 32 ರನ್‌ಗಳಿಂದ ಮಣಿಸಿ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನಕ್ಕೇರಿತು.

ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಐಪಿಎಲ್ ಪಂದ್ಯದಲ್ಲಿ ಟಾಸ್ ಗೆದ್ದ ರಾಜಸ್ಥಾನ ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಯಶಸ್ವಿ ಜೈಸ್ವಾಲ್ (77; 43ಎ) ಅವರ ಬಿರುಸಿನ ಆಟದಿಂದ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 202 ರನ್ ಗಳಿಸಿತು.

ಆ್ಯಡಮ್ ಜಂಪಾ (22ಕ್ಕೆ 3) ಮತ್ತು ಆರ್.ಅಶ್ವಿನ್ (35ಕ್ಕೆ 2) ಅವರ ಸ್ಪಿನ್ ದಾಳಿಯ ಮುಂದೆ ಪರದಾಟ ನಡೆಸಿದ ಮಹೇಂದ್ರಸಿಂಗ್ ಧೋನಿ ನಾಯಕತ್ವದ ಚೆನ್ನೈ ತಂಡ, ನಿಗದಿತ ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 170 ರನ್ ಕಲೆಹಾಕಿತು.

ಆರಂಭಿಕ ಬ್ಯಾಟರ್ ಋತುರಾಜ್ ಗಾಯಕವಾಡ್ (47 ರನ್, 27 ಎ.) ಮತ್ತು ಶಿವಂ ದುಬೆ (52 ರನ್, 33 ಎ.) ಮಾತ್ರ ಚೆನ್ನೈ ಪರ ಛಲದ ಆಟವಾಡಿದರು. ಮೊಯೀನ್ ಅಲಿ ಹಾಗೂ ರವೀಂದ್ರ ಜಡೇಜ ನಡೆಸಿದ ಹೋರಾಟಕ್ಕೆ ಫಲ ಲಭಿಸಲಿಲ್ಲ.

ಉತ್ತಮ ಆರಂಭ: ರಾಯಲ್ಸ್ ತಂಡಕ್ಕೆ ಜೈಸ್ವಾಲ್ ಹಾಗೂ ಜಾಸ್ ಬಟ್ಲರ್ (27; 21ಎ) ಉತ್ತಮ ಆರಂಭ ನೀಡಿದರು. ಪವರ್ ಪ್ಲೇ ಅವಧಿಯಲ್ಲಿ ಚೆನ್ನೈ ಬೌಲರ್‌ಗಳ ದಾಳಿ ದುರ್ಬಲವಾಗಿತ್ತು. ಯಶಸ್ವಿ ಮತ್ತು ಬಟ್ಲರ್ ಕೇವಲ ಎಂಟು ಓವರ್‌ಗಳಲ್ಲಿ 86 ರನ್ ಸೇರಿಸಿದರು. ಎಡಗೈ ಸ್ಪಿನ್ನರ್ ರವೀಂದ್ರ ಜಡೇಜ ಅವರು ಒಂಬತ್ತನೇ ಓವರ್‌ನಲ್ಲಿ ಈ ಜೊತೆಯಾಟವನ್ನು ಮುರಿದರು.

ನಾಯಕ ಸಂಜು ಸ್ಯಾಮ್ಸನ್ (17;17ಎ) ವಿಫಲರಾದರು. 14ನೇ ಓವರ್‌ನವರೆಗೂ ಯಶಸ್ವಿಯ ಅಬ್ಬರ ನಡೆಯಿತು. ಅವರು ತಮ್ಮ ಇನಿಂಗ್ಸ್‌ನಲ್ಲಿ 8 ಬೌಂಡರಿ ಮತ್ತು ನಾಲ್ಕು ಸಿಕ್ಸರ್ ಸಿಡಿಸಿದರು. ಮಧ್ಯಮವೇಗಿ ತುಷಾರ್ ದೇಶಪಾಂಡೆ ಎಸೆತದಲ್ಲಿ ಯಶಸ್ವಿ ಔಟಾದರು. ಶಿಮ್ರೊನ್ ಹೆಟ್ಮೆಯರ್ ಅವರನ್ನು ತೀಕ್ಷಣ ಕ್ಲೀನ್‌ಬೌಲ್ಡ್ ಮಾಡಿದರು. ಇದರಿಂದಾಗಿ ತಂಡವು ದ್ವಿಶತಕದ ಗಡಿ ಮುಟ್ಟುವುದು ಅನುಮಾನವಾಗಿತ್ತು.

ಆದರೆ ಧ್ರುವ ಜುರೇಲ್ (34; 15ಎ) ಮತ್ತು ಕನ್ನಡಿಗ ದೇವದತ್ತ ಪಡಿಕ್ಕಲ್ (ಔಟಾಗದೇ 27; 13ಎ) ಆತಂಕ ದೂರ ಮಾಡಿದರು. ಜುರೇಲ್ 2 ಸಿಕ್ಸರ್ ಹಾಗೂ 3 ಬೌಂಡರಿ ಬಾರಿಸಿದರು. ಕೊನೆಯ 4 ಓವರ್‌ಗಳಲ್ಲಿ 56 ರನ್‌ಗಳು ಮೊತ್ತಕ್ಕೆ ಸೇರ್ಪಡೆಯಾದವು.



ರಾಜಸ್ಥಾನ ರಾಯಲ್ಸ್ ತಂಡದ ಯಶಸ್ವಿ ಜೈಸ್ವಾಲ್ ಬ್ಯಾಟಿಂಗ್ –ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ರಾಜಸ್ಥಾನ ರಾಯಲ್ಸ್ 5ಕ್ಕೆ 202 (20 ಓವರುಗಳಲ್ಲಿ)

ಜೈಸ್ವಾಲ್ ಸಿ ರಹಾನೆ ಬಿ ದೇಶಪಾಂಡೆ 77 (43ಎ, 4x8, 6x4)
ಬಟ್ಲರ್ ಸಿ ದುಬೆ ಬಿ ಜಡೇಜ 27 (21ಎ, 4x4)
ಸ್ಯಾಮ್ಸನ್ ಸಿ ಗಾಯಕವಾಡ ಬಿ ದೇಶಪಾಂಡೆ 17 (17ಎ, 4x1)
ಹೆಟ್ಮೆಯರ್ ಬಿ ತೀಕ್ಷಣ 8 (10ಎ)
ಜುರೆಲ್ ರನೌಟ್ (ಧೋನಿ) 34 (15ಎ, 4x3, 6x2)
ಪಡಿಕ್ಕಲ್ ಔಟಾಗದೇ 27 (13ಎ, 4x4)
ಅಶ್ವಿನ್ ಔಟಾಗದೇ 1 (1ಎ)
ಇತರೆ: 11 (ಬೈ 4, ಲೆಗ್‌ಬೈ 3, ವೈಡ್ 4)
ವಿಕೆಟ್ ಪತನ: 1–86 (ಜಾಸ್ ಬಟ್ಲರ್, 8.2), 2–125 (ಸ್ಯಾಮ್ಸನ್ 13.1), 3–132 (ಯಶಸ್ವಿ ಜೈಸ್ವಾಲ್, 13.5), 4–146 (ಶಿಮ್ರೊನ್ ಹೆಟ್ಮೆಯರ್, 16.1), 5–194 (ಧ್ರುವ ಜುರೆಲ್; 19.3)
ಬೌಲಿಂಗ್: ಆಕಾಶ್ ಸಿಂಗ್ 2–0–32–0, ತುಷಾರ್ ದೇಶಪಾಂಡೆ 4–0–42–2, ಮಹೀಷ ತೀಕ್ಷಣ 4–0–24–1, ರವೀಂದ್ರ ಜಡೇಜ 4–0–32–1, ಮೋಯಿನ್ ಅಲಿ 2–0–17–0, ಮಥೀಶ್ ಪಥಿರಾಣ 4–0–48–0.

ಚೆನ್ನೈ ಸೂಪರ್ ಕಿಂಗ್ಸ್ 6ಕ್ಕೆ 170 (20 ಓವರ್‌ಗಳಲ್ಲಿ)

ಋತುರಾಜ್ ಸಿ ಪಡಿಕ್ಕಲ್ ಬಿ ಜಂಪಾ 47 (29 ಎ., 4X5, 6X1)
ಕಾನ್ವೆ ಸಿ ಸಂದೀಪ್ ಬಿ ಜಂಪಾ 8 (16 ಎ., 4X1)
ರಹಾನೆ ಸಿ ಬಟ್ಲರ್ ಬಿ ಅಶ್ವಿನ್ 15 (13ಎ)
ದುಬೆ ಸಿ ಬಟ್ಲರ್ ಬಿ ಯಾದವ್ 52 (33 ಎ., 4X2, 6X4)
ರಾಯುಡು ಸಿ ಹೋಲ್ಡರ್ ಬಿ ಅಶ್ವಿನ್ 0 (2 ಎ)
ಮೊಯೀನ್ ಸಿ ಸ್ಯಾಮ್ಸನ್ ಬಿ ಜಂಪಾ 23 (12 ಎ., 4X2, 6X2)
ಜಡೇಜ ಔಟಾಗದೆ 23 (15 ಎ., 4X3)
ಇತರೆ: 2 (ಲೆಗ್‌ಬೈ 1, ವೈಡ್ 1)
ವಿಕೆಟ್ ಪತನ: 1–42 (ಡೆವೊನ್ ಕಾನ್ವೆ; 5.6), 2–69 (ಋತುರಾಜ್ ಗಾಯಕವಾಡ್; 9.2), 3–73 (ಅಜಿಂಕ್ಯ ರಹಾನೆ; 10.2), 4–73 (ಅಂಬಟಿ ರಾಯುಡು; 10.4), 5–124 (ಮೊಯೀನ್ ಅಲಿ; 14.5), 6–170 (ಶಿವಂ ದುಬೆ; 19.6)
ಬೌಲಿಂಗ್: ಸಂದೀಪ್ ಶರ್ಮಾ 4–0–24–0, ಕುಲದೀಪ್ ಯಾದವ್ 3–0–18–1, ಜೇಸನ್ ಹೋಲ್ಡರ್ 4–0–49–0, ಆರ್.ಅಶ್ವಿನ್ 4–0–35–2, ಆ್ಯಡಂ ಜಂಪಾ 3–0–22–3, ಯಜುವೇಂದ್ರ ಚಾಹಲ್ 2–0–21–0

ಫಲಿತಾಂಶ: ರಾಜಸ್ಥಾನ ರಾಯಲ್ಸ್‌ಗೆ 32 ರನ್ ಗೆಲುವು

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ರಾಜಸ್ಥಾನ	8	5	3	0	10	0.939
ಗುಜರಾತ್	7	5	2	0	10	0.580
ಚೆನ್ನೈ	8	5	3	0	10	0.376
ಲಖನೌ	7	4	3	0	8	0.547
ಬೆಂಗಳೂರು	8	4	4	0	8	-0.139
ಪಂಜಾಬ್	7	4	3	0	8	-0.162
ಕೋಲ್ಕತ್ತ	8	3	5	0	6	-0.027
ಮುಂಬೈ	7	3	4	0	6	-0.620
ಹೈದರಾಬಾದ್	7	2	5	0	4	-0.725
ಡೆಲ್ಲಿ	7	2	5	0	4	-0.961

ಗುರುವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	422

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಸಿರಾಜ್	ಆರ್‌ಸಿಬಿ	14

ಕೆಕೆಆರ್‌ಗೆ ಗೆಲುವು ಉಡುಗೊರೆಯಾಗಿ ಕೊಟ್ಟೆವು: ಕೊಹ್ಲಿ

ಬೆಂಗಳೂರು (ಪಿಟಿಐ): ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಸಹ ಆಟಗಾರರು ತೋರಿದ ಪ್ರದರ್ಶನದ ಬಗ್ಗೆ ಆರ್‌ಸಿಬಿಯ ಹಂಗಾಮಿ ನಾಯಕ ವಿರಾಟ್ ಕೊಹ್ಲಿ ಅಸಮಾಧಾನ ಹೊರಹಾಕಿದ್ದಾರೆ.

'ನಿಜ ಹೇಳಬೇಕೆಂದರೆ, ನಾವು ಗೆಲುವನ್ನು ಎದುರಾಳಿಗಳಿಗೆ ತಟ್ಟೆಯಲ್ಲಿಟ್ಟುಕೊಟ್ಟೆವು. ನಮ್ಮ ತಂಡ ಸೋಲುವುದಕ್ಕೆ ಅರ್ಹವಾಗಿತ್ತು. ನಾವು ವೃತ್ತಿಪರವಾಗಿ ಆಡಲಿಲ್ಲ' ಎಂದು ಟೀಕಿಸಿದ್ದಾರೆ.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದಿದ್ದ ಪಂದ್ಯವನ್ನು ಆರ್‌ಸಿಬಿ 21 ರನ್‌ಗಳಿಂದ ಸೋತಿತ್ತು. 201 ರನ್‌ಗಳ ಗುರಿ ಬೆನ್ನಟ್ಟಿದ್ದ ಬೆಂಗಳೂರಿನ ತಂಡ, 8 ವಿಕೆಟ್‌ಗಳಿಗೆ 179 ರನ್ ಮಾತ್ರ ಗಳಿಸಿತ್ತು.

ಮದುಷ್ಕ, ಮೆಂಡಿಸ್ ದ್ವಿಶತಕ ರನ್ ಮಳೆ ಸುರಿಸಿದ ಶ್ರೀಲಂಕಾ

ಗಾಲೆ, ಶ್ರೀಲಂಕಾ (ಎಎಫ್‌ಪಿ): ನಿಶಾನ್ ಮದುಷ್ಕ (205) ಮತ್ತು ಕುಶಾಲ್ ಮೆಂಡಿಸ್ (245) ಇಬ್ಬರೂ ಐರ್ಲೆಂಡ್ ವಿರುದ್ಧ ಭರ್ಜರಿ ದ್ವಿಶತಕ ಬಾರಿಸಿದರು. ಎರಡನೇ ಟೆಸ್ಟ್‌ನಲ್ಲಿ ರನ್ ಹೊಳೆ ಮುಂದುವರಿದಿದ್ದು, ನಾಲ್ಕನೇ ದಿನವಾದ ಗುರುವಾರ ಶ್ರೀಲಂಕಾ ಮೊದಲ ಇನಿಂಗ್ಸ್‌ನಲ್ಲಿ 3 ವಿಕೆಟ್‌ಗೆ 704 ರನ್ ಗಳಿಸಿ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು.

212 ರನ್‌ಗಳಿಂದ ಹಿಂದುಳಿದ ಐರ್ಲೆಂಡ್ ಎರಡನೇ ಇನಿಂಗ್ಸ್‌ನಲ್ಲಿ 2 ವಿಕೆಟ್‌ಗೆ 54 ರನ್ ಗಳಿಸಿದ್ದು ಪಂದ್ಯ ಉಳಿಸಿಕೊಳ್ಳುವ ದೊಡ್ಡ ಸವಾಲು ಎದುರಿಸುತ್ತಿದೆ. ಶ್ರೀಲಂಕಾ ತಂಡ, ಕೊನೆಯ ದಿನವಾದ ಶುಕ್ರವಾರ ಗೆಲ್ಲಲು ಯಶಸ್ವಿಯಾದಲ್ಲಿ ಐರ್ಲೆಂಡ್ ಆಡಿದ ಎಲ್ಲ ಆರೂ ಟೆಸ್ಟ್‌ಗಳಲ್ಲಿ ಸೋಲು ಕಂಡಂತಾಗುತ್ತದೆ.

ತಂಡವೊಂದರ ಮೊದಲ ನಾಲ್ಕು ಮಂದಿ ಆಟಗಾರರು ಶತಕ ಬಾರಿಸಿದ್ದು ಟೆಸ್ಟ್ ಇತಿಹಾಸದಲ್ಲಿ ಇದು ಮೂರನೇ ನಿದರ್ಶನವಾಗಿದೆ.

ಈ ಹಿಂದೆ ಎರಡು ಬಾರಿ ದ್ವಿಶತಕ ತಪ್ಪಿಸಿಕೊಂಡಿದ್ದ ಮೆಂಡಿಸ್ ಇಲ್ಲಿ ಆ ಮೈಲಿಗಲ್ಲು ತಲುಪಿದರು. 11 ಸಿಕ್ಸರ್ ಹೊಡೆದ ಅವರು ವಾಸಿಂ ಅಕ್ರಂ ದಾಖಲೆ ಸರಿಗಟ್ಟುವ ಯತ್ನದಲ್ಲಿ ಲಾಂಗ್‌ಆಫ್‌ನಲ್ಲಿ ಕ್ಯಾಚಿತ್ತರು. ಅವರ ಆಟದಲ್ಲಿ 18 ಬೌಂಡರಿಗಳೂ ಇದ್ದವು.

ಏಂಜೆಲೊ ಮ್ಯಾಥ್ಯೂಸ್ ಶತಕ ದಾಟಿದ ತಕ್ಷಣ (ಔಟಾಗದೇ 100, 114 ಎ) ನಾಯಕ ಕರುಣಾರತ್ನೆ ಇನಿಂಗ್ಸ್ ಡಿಕ್ಲೇರ್ ಮಾಡಿದರು. ಐರ್ಲೆಂಡ್ ಮೊದಲ ಇನಿಂಗ್ಸ್‌ನಲ್ಲಿ 492 ರನ್ ಹೊಡೆದಿತ್ತು.

ವಾಷಿಂಗ್ಟನ್ ಅಲಭ್ಯ

ನವದೆಹಲಿ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ತಂಡದ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಗಾಯಗೊಂಡಿದ್ದಾರೆ. ಇದರಿಂದಾಗಿ ಅವರು ಐಪಿಎಲ್ ಟೂರ್ನಿಯ ಮುಂದಿನ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ.

ವಾಷಿಂಗ್ಟನ್ ಅವರಿಗೆ ಮಂಡಿರಜ್ಜು (ಹ್ಯಾಮ್‌ಸ್ಟ್ರಿಂಗ್) ಗಾಯವಾಗಿದೆ. ಅವರು ಈ ಟೂರ್ನಿಯಲ್ಲಿ ಏಳು ಪಂದ್ಯಗಳನ್ನು ಆಡಿದ್ದಾರೆ. ಮೂರು ವಿಕೆಟ್ ಹಾಗೂ 60 ರನ್ ಗಳಿಸಿದ್ದಾರೆ.



ಪಂಜಾಬ್‌ನ ಮಾಜಿ ಸಿಎಂ ಮತ್ತು ಗೌರವಾನ್ವಿತ ನಾಯಕನಿಗೆ ಶ್ರದ್ಧಾಂಜಲಿ!

ಲಖನೌ ಸೂಪರ್ ಜೈಂಟ್ಸ್ –ಪಂಜಾಬ್ ಕಿಂಗ್ಸ್ ಹಣಾಹಣಿ

ರಾಹುಲ್ ಬ್ಯಾಟಿಂಗ್ ಮೇಲೆ ಕಣ್ಣು

ಮೊಹಾಲಿ (ಪಿಟಿಐ): ಕೆ.ಎಲ್. ರಾಹುಲ್ ನಾಯಕತ್ವದ ಲಖನೌ ಸೂಪರ್ ಜೈಂಟ್ಸ್ ತಂಡವು ಶುಕ್ರವಾರ ಪಂಜಾಬ್ ಕಿಂಗ್ಸ್ ಎದುರು ಕಣಕ್ಕಿಳಿಯಲಿದೆ.

ಲಖನೌ ಆರಂಭಿಕ ಬ್ಯಾಟರ್ ಕೂಡ ಆಗಿರುವ ರಾಹುಲ್ ಅವರ ಸ್ಟ್ರೈಕ್ ರೇಟ್ ಈಗ ಕ್ರಿಕೆಟ್ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ. ಚುರುಕಾಗಿ ರನ್ ಗಳಿಸುವಲ್ಲಿ ಯಶಸ್ವಿಯಾಗುತ್ತಿಲ್ಲ. ಇದರಿಂದಾಗಿ ಕಳೆದ ಶನಿವಾರ ನಡೆದಿದ್ದ ಗುಜರಾತ್ ಟೈಟನ್ಸ್ ಎದುರಿನ ಪಂದ್ಯದಲ್ಲಿ ಸಾಧಾರಣ ಮೊತ್ತದ (136 ರನ್) ಗುರಿ ಸಾಧನೆ ಮಾಡುವಲ್ಲಿಯೂ ತಂಡವು ಎಡವಿತ್ತು.

ಅದರಿಂದಾಗಿ ಮೊಹಾಲಿಯ ಪಿಸಿಎ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ರಾಹುಲ್ ಮೇಲೆ ಕಣ್ಣು ನೆಟ್ಟಿದೆ. ಇಲ್ಲಿ ಇದುವರೆಗೆ ನಡೆದಿರುವ ಪಂದ್ಯಗಳಲ್ಲಿ 200 ರನ್‌ಗಳಿಗಿಂತ ಹೆಚ್ಚಿನ ಮೊತ್ತ ದಾಖಲಾಗಿಲ್ಲ. ಆದರೂ ಪಿಚ್ ಬ್ಯಾಟಿಂಗ್‌ಗೆ ಉತ್ತಮವಾಗಿದೆ.



ಕೆ.ಎಲ್. ರಾಹುಲ್

ಪಂಜಾಬ್ ಕಿಂಗ್ಸ್ ತಂಡವು ಪಾಯಿಂಟ್ ಪಟ್ಟಿಯಲ್ಲಿ ಆರನೇ ಸ್ಥಾನದಲ್ಲಿದೆ. ಭುಜದ ನೋವಿನಿಂದಾಗಿ ಕಳೆದ ಮೂರು ಪಂದ್ಯಗಳಲ್ಲಿ ಆಡದ ನಾಯಕ ಶಿಖರ್ ಧವನ್ ಈ ಪಂದ್ಯಕ್ಕೆ ಮರಳುವ ಸಾಧ್ಯತೆ ಇದೆ.

'ಶಿಖರ್ ಚೇತರಿಸಿಕೊಳ್ಳುತ್ತಿದ್ದಾರೆ. ಅವರು ನಾಳೆ ಪಂದ್ಯಕ್ಕೆ ಲಭ್ಯರಾಗಬಹುದು' ಎಂದು ತಂಡದ ಮೂಲಗಳು ತಿಳಿಸಿವೆ.

ತಂಡದ ಆರಂಭಿಕ ಜೋಡಿ ಪ್ರಭಸಿಮ್ರನ್ ಸಿಂಗ್ ಮತ್ತು ಮ್ಯಾಥ್ಯೂ ಶಾರ್ಟ್ ಅವರು ಉತ್ತಮ ಆರಂಭ ನೀಡಿದರೆ, ಮಧ್ಯಮ ಕ್ರಮಾಂಕದಲ್ಲಿ ಲಿಯಾಮ್ ಲಿವಿಂಗ್‌ಸ್ಟೋನ್, ಶಾರೂಕ್ ಖಾನ್ ಹಾಗೂ ಆಲ್‌ರೌಂಡರ್ ಸ್ಯಾಮ್ ಕರನ್ ಅವರು ಬಿರುಸಿನ ಆಟವಾಡುವ ಬ್ಯಾಟರ್‌ಗಳಾಗಿದ್ದಾರೆ. ಇವರು ಲಖನೌ ತಂಡದ ಬೌಲರ್‌ಗಳಾದ ಜೈದೇವ್ ಉನದ್ಕತ್, ಮಾರ್ಕಸ್ ಸ್ಟೊಯಿನಿಸ್, ರವಿ ಬಿಷ್ಣೋಯಿ ಹಾಗೂ ಆವೇಶ್ ಖಾನ್ ಅವರನ್ನು ಎದುರಿಸಲು ಸಿದ್ಧರಾಗಬೇಕಿದೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನೆಮಾ ಆ್ಯಪ್.

ಬಿಸಿಸಿಐ ಕೇಂದ್ರ ಗುತ್ತಿಗೆ: ರಿಚಾ, ಜೆಮಿಮಾಗೆ ಬಡ್ತಿ

ನವದೆಹಲಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡದ ವಿಕೆಟ್‌ಕೀಪರ್ ರಿಚಾ ಘೋಷ್ ಮತ್ತು ಬ್ಯಾಟರ್ ಜೆಮಿಮಾ ರಾಡ್ರಿಗಸ್ ಅವರು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ ಕೇಂದ್ರ ಗುತ್ತಿಗೆಯಲ್ಲಿ ಬಡ್ತಿ ಗಳಿಸಿದ್ದಾರೆ.

ಆದರೆ ಶಿಖಾ ಪಾಂಡೆ ಹಾಗೂ ತಾನಿಯಾ ಭಾಟಿಯಾ ಈ ಪಟ್ಟಿಯಿಂದ ಸ್ಥಾನ ಕಳೆದುಕೊಂಡಿದ್ದಾರೆ. ರಿಚಾ ಮತ್ತು ಜೆಮಿಮಾ ಅವರು ಸಿ ಯಿಂದ ಬಿ ವಿಭಾಗಕ್ಕೆ ಬಡ್ತಿಯಾಗಿದ್ದಾರೆ.

ಭಾರತ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್ ಹಾಗೂ ಸ್ಮೃತಿ ಮಂದಾನ ಎ ಕೆಟಗರಿಯಲ್ಲಿ ಮುಂದುವರಿದಿದ್ದಾರೆ. ಈ ವಿಭಾಗದಲ್ಲಿ ಮೂವರಿಗೆ ಮಾತ್ರ ಸ್ಥಾನ ನೀಡಲಾಗಿದೆ. ಆದರೆ ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ ಅವರನ್ನು 'ಎ'ಯಿಂದ 'ಬಿ' ಕೆಟಗರಿಗೆ ಇಳಿಸಲಾಗಿದೆ. ಲೆಗ್‌ಸ್ಪಿನ್ನರ್ ಪೂನಂ ಯಾದವ್ ಹೋದ ವರ್ಷ ಎ ವಿಭಾಗದಲ್ಲಿದ್ದರು. ಆದರೆ ಈಗ ಗುತ್ತಿಗೆಯ ಪಟ್ಟಿಯಿಂದ ಹೊರಬಿದ್ದಿದ್ದಾರೆ. 2022ರ ಮಾರ್ಚ್‌ನಲ್ಲಿ ಅವರು ಕೊನೆಯ ಪಂದ್ಯ ಆಡಿದ್ದರು.

ಹೋದ ವರ್ಷ ಗುತ್ತಿಗೆಯಲ್ಲಿರದ ರೇಣುಕಾ ಠಾಕೂರ್ ಅವರು ಈ ಬಾರಿ ನೇರವಾಗಿ ಬಿ ವಿಭಾಗದಲ್ಲಿ ಸ್ಥಾನ ಗಳಿಸಿದ್ದಾರೆ.

ಗುರುವಾರ ಬಿಸಿಸಿಐ ಪಟ್ಟಿ ಪ್ರಕಟಿಸಿದೆ. ಇದು ಈ ಅಕ್ಟೋಬರ್‌ನಿಂದ ಮುಂದಿನ ಸೆಪ್ಟೆಂಬರ್‌ವರೆಗೆ ಜಾರಿಯಾಗಲಿದೆ. ಎ ಕೆಟಗರಿಯ ಆಟಗಾರ್ತಿಯರಿಗೆ ₹ 50 ಲಕ್ಷ, ಬಿ ಮತ್ತು ಸಿ ಕೆಟಗರಿಯವರಿಗೆ ಕ್ರಮವಾಗಿ ₹ 30 ಹಾಗೂ 10 ಲಕ್ಷ ವಾರ್ಷಿಕವಾಗಿ ನೀಡಲಾಗುತ್ತದೆ.



ರಿಚಾ ಘೋಷ್

ಒಟ್ಟು 17 ಆಟಗಾರ್ತಿಯರು ಗುತ್ತಿಗೆ ಪಡೆದುಕೊಂಡಿದ್ದಾರೆ.

ಕೇಂದ್ರ ಗುತ್ತಿಗೆಯಲ್ಲಿರುವವರು: ವಿಭಾಗ ಎ: ಹರ್ಮನ್‌ಪ್ರೀತ್ ಕೌರ್, ಸ್ಮೃತಿ ಮಂದಾನ, ದೀಪ್ತಿ ಶರ್ಮಾ. ವಿಭಾಗ ಬಿ: ರೇಣುಕಾ ಠಾಕೂರ್, ಜೆಮಿಮಾ ರಾಡ್ರಿಗಸ್, ಶಫಾಲಿ ವರ್ಮಾ, ರಿಚಾ ಘೋಷ್, ರಾಜೇಶ್ವರಿ ಗಾಯಕವಾಡ. ವಿಭಾಗ ಸಿ: ಮೇಘನಾ ಸಿಂಗ್, ದೇವಿಕಾ ವೈದ್ಯ, ಎಸ್. ಮೇಘನಾ, ಅಂಜಲಿ ಶರವಣಿ, ಪೂಜಾ ವಸ್ತ್ರಕರ್, ಸ್ನೇಹಾ ರಾಣಾ, ರಾಧಾ ಯಾದವ್, ಹರ್ಲೀನ್ ಡಿಯೊಲ್, ಯಷ್ಟಿಕಾ ಭಾಟಿಯಾ.

ಎಸ್‌ಎನ್‌ಸಿ ಕ್ಯಾಡೀಸ್ ಓಪನ್: ಶಶಿಕುಮಾರ್ ಪ್ರಥಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಂ. ಶಶಿಕುಮಾರ್ ಅವರು ಬೆಂಗಳೂರು ಗಾಲ್ಫ್ ಕ್ಲಬ್‌ನಲ್ಲಿ ನಡೆದ ಎಸ್.ಎನ್.ಸಿ ಕ್ಯಾಡೀಸ್ ಓಪನ್ ಗಾಲ್ಫ್ ಚಾಂಪಿಯನ್‌ಷಿಪ್‌ನ ಮುಕ್ತ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು. ಅವರು 68 ಗ್ರಾಸ್ ಸಾಧನೆ ಮಾಡಿದರು.

ಇದೇ ವಿಭಾಗದಲ್ಲಿ ಸದಾಶಿವಂ (71 ಗ್ರಾಸ್) ಮತ್ತು ಎಸ್. ಸುನಿಲ್ (72 ಗ್ರಾಸ್) ಕ್ರಮವಾಗಿ ಮೊದಲ ಹಾಗೂ ಎರಡನೇ ರನ್ನರ್ ಅಪ್ ಆದರು.

ಫಲಿತಾಂಶಗಳು: ಓಪನ್ ವಿಭಾಗ: ಎಂ. ಶಶಿಕುಮಾರ್ –1, ಸದಾಶಿವಂ (ಟಿಸಿಜಿ) –ರನ್ನರ್ ಅಪ್ 1, ಎಸ್. ಸುನಿಲ್ –ರನ್ನರ್ ಅಪ್ 2.

ಓಪನ್ ಕೋಚಸ್ ವಿಭಾಗ: ಅಕ್ಬರ್ –1, ಮಾರ್ಟಿನ್ –2

ಕ್ಯಾಡೀಸ್ ಪಟ್ಟಿಂಗ್ ಸ್ಪರ್ಧೆ: ಚರಣ್ –1, ಕಾರ್ತಿಕ್ –ರನ್ನರ್ ಅಪ್ 1, ಕಾಂತರಾಜ್ –ರನ್ನರ್ ಅಪ್ 2

ಅಡ್ಮಿನ್ ಸಿಬ್ಬಂದಿ ಪಟ್ಟಿಂಗ್: ಕುಮಾರ್ (ಜಿಮ್) –1, ಚಂದ್ರಶೇಖರ್ (ಗಾರ್ಡನ್)–ರನ್ನರ್ ಅಪ್ 1, ಭರತ್ ರಾವ್ –ರನ್ನರ್ ಅಪ್ 2

ಕೋರ್ಸ್ ಸಿಬ್ಬಂದಿ ಪಟ್ಟಿಂಗ್: ಸಿ ರವಿ –1, ಎಚ್.ಕೆ. ರಮೇಶ್–ರನ್ನರ್ ಅಪ್ 1, ನಿಂಗಯ್ಯ –ರನ್ನರ್ ಅಪ್ 2

ಕುಸ್ತಿಪಟುಗಳ ಧರಣಿಯಿಂದ ದೇಶಕ್ಕೆ ಕಳಂಕ

ಐಒಎ ಅಧ್ಯಕ್ಷೆ ಉಷಾ ಹೇಳಿಕೆ; ಪಾರದರ್ಶಕ ತನಿಖೆಗೆ ಆದ್ಯತೆ– ಅನುರಾಗ್

ನವದೆಹಲಿ (ಪಿಟಿಐ): ಅಗ್ರಗಣ್ಯ ಕುಸ್ತಿಪಟುಗಳು ಬೀದಿಗಿಳಿದು ಧರಣಿ ನಡೆಸುತ್ತಿರುವುದು ಅಶಿಸ್ತು ಎಂದೇ ಪರಿಗಣಿತವಾಗುತ್ತದೆ. ಇದರಿಂದಾಗಿ ದೇಶದ ವರ್ಚಸ್ಸು ಹಾಳಾಗುತ್ತಿದೆ ಎಂದು ಭಾರತ ಒಲಿಂಪಿಕ್ ಸಂಸ್ಥೆ (ಐಒಎ) ಅಧ್ಯಕ್ಷೆ ಪಿ.ಟಿ. ಉಷಾ ಹೇಳಿದ್ದಾರೆ.

ಗುರುವಾರ ನಡೆದ ಐಒಎ ಆಡಳಿತ ಸಮಿತಿಯ ಸಭೆಯ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರು ಮಹಿಳಾ ಕುಸ್ತಿಪಟುಗಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆಂದು ಆರೋಪಿಸಿರುವ ಕುಸ್ತಿಪಟುಗಳು ಕಳೆದ ಐದು ದಿನಗಳಿಂದ ಧರಣಿ ನಡೆಸಿದ್ದಾರೆ. ಒಲಿಂಪಿಯನ್ ಕುಸ್ತಿಪಟುಗಳಾದ ವಿನೇಶಾ ಫೋಗಟ್, ಬಜರಂಗ್ ಪೂನಿಯಾ ಹಾಗೂ ಸಾಕ್ಷಿ ಮಲಿಕ್ ಅವರು ಧರಣಿಯ ನೇತೃತ್ವ ವಹಿಸಿದ್ದಾರೆ.

ಈ ವಿಷಯದ ಕುರಿತು ಚರ್ಚೆಗಾಗಿ ಐಒಎ ಸಭೆ ನಡೆಸಿತು.

ಐಒಎಯು ಮೂರು ಸದಸ್ಯರ ಹಂಗಾಮಿ ಸಮಿತಿಯನ್ನು ಡಬ್ಲ್ಯುಎಫ್‌ಐಗೆ ನೇಮಕ ಮಾಡಿದೆ. ಅದರಲ್ಲಿ ಮಾಜಿ ಶೂಟಿಂಗ್ ಪಟು ಸುಮಾ ಶಿರೂರ್, ಭಾರತ ವುಷು ಸಂಸ್ಥೆ ಮುಖ್ಯಸ್ಥ ಭೂಪೇಂದ್ರ ಸಿಂಗ್ ಬಜ್ವಾ ಅವರು ಸಮಿತಿಯಲ್ಲಿದ್ದಾರೆ. ಹೈಕೋರ್ಟ್‌ನ ನಿವೃತ್ತ ನ್ಯಾಯಾಧೀಶರೊಬ್ಬರನ್ನು ಸದಸ್ಯರನ್ನಾಗಿ ನೇಮಕ ಮಾಡುವುದು ಬಾಕಿಯಿದೆ.



ಪಿ.ಟಿ.ಉಷಾ



ಅನುರಾಗ್

ಡಬ್ಲ್ಯುಎಫ್‌ಐಗೆ ನೂತನ ಆಡಳಿತ ಮಂಡಳಿಯು ಚುನಾಯಿತವಾಗುವವರೆಗೆ ಈ ಸಮಿತಿಯು ಕಾರ್ಯನಿರ್ವಹಿಸಲಿದೆ. ಹೋದ ಜನವರಿಯಲ್ಲಿಯೂ ಕುಸ್ತಿಪಟುಗಳು ಧರಣಿ ನಡೆಸಿದ್ದರು. ಆ ಸಂದರ್ಭದಲ್ಲಿ ಐಒಎ ಹಾಗೂ ಕೇಂದ್ರ ಕ್ರೀಡಾ ಸಚಿವಾಲಯವು ಕೆಲವು ಭರವಸೆಗಳನ್ನು ನೀಡುವ ಮೂಲಕ ಪ್ರತಿಭಟನೆ ಕೈಬಿಡುವಂತೆ ಕುಸ್ತಿಪಟುಗಳ ಮನವೊಲಿಸಿದ್ದರು.

ಆದರೆ ಇದುವರೆಗೆ ಆರೋಪಿಗಳ ವಿರುದ್ಧ ಯಾವುದೇ ಕ್ರಮ ಜರುಗಿಲ್ಲ ಹಾಗೂ ದೂರು ನೀಡಿರುವ ಸಂತ್ರಸ್ತೆಯರಿಗೆ ಜೀವಬೆದರಿಕೆ ಹಾಕಲಾಗುತ್ತಿದೆ ಎಂದು ಆರೋಪಿಸಿರುವ ಕುಸ್ತಿಪಟುಗಳು ಹೋದ ಭಾನುವಾರದಿಂದ ಪ್ರತಿಭಟನೆ ನಡೆಸಿದ್ದಾರೆ.

ಪಾರದರ್ಶಕ ತನಿಖೆ: ಪ್ರಕರಣದ ಕುರಿತು ಪಾರದರ್ಶಕವಾಗಿ ವಿಚಾರಣೆ ನಡೆಯಲು ಕ್ರಮ ಕೈಗೊಳ್ಳಲಾಗಿದೆ. ವಿಚಾರಣಾ ಸಮಿತಿಯ ಮುಂದೆ ತಮ್ಮ ಅಹವಾಲುಗಳನ್ನು ಮುಕ್ತವಾಗಿ ಸಲ್ಲಿಸಲು ಕುಸ್ತಿಪಟುಗಳಿಗೆ ಈ ಹಿಂದೆಯೇ ಅವಕಾಶ ನೀಡಲಾಗಿದೆ ಎಂದು ಕೇಂದ್ರ ಕ್ರೀಡಾ ಸಚಿವ ಅನುರಾಗ್ ಠಾಕೂರ್ ಹೇಳಿದ್ದಾರೆ.

'ಜನವರಿಯಲ್ಲಿ ಜಂತರ್ ಮಂಥರ್‌ನಲ್ಲಿ ಕುಸ್ತಿಪಟುಗಳು ಪ್ರತಿಭಟನೆ ನಡೆಸಿದ್ದರು. ಆಗ ನಾನೇ ಸ್ವತಃ 12 ತಾಸು ಅವರೆಲ್ಲರೊಂದಿಗೆ ಚರ್ಚಿಸಿದ್ದೇನೆ. ವಿಚಾರಣೆ ಸಮಿತಿಯನ್ನೂ ನೇಮಕ ಮಾಡಲಾಗಿತ್ತು' ಎಂದು ಠಾಕೂರ್ ಹೇಳಿದರು.

'ಸಮಿತಿಯ ಮುಂದೆ ತಮ್ಮ ದೂರುಗಳನ್ನು ಮುಕ್ತವಾಗಿ ಸಲ್ಲಿಸಲು ಎಲ್ಲರಿಗೂ ಅವಕಾಶ ಮಾಡಿಕೊಡಲಾಗಿದೆ. ಸಮಿತಿಯು 14 ಸಭೆಗಳನ್ನು ನಡೆಸಿದೆ. ಎಲ್ಲ ಅಥ್ಲೀಟ್‌ಗಳಿಗೂ ಅವಕಾಶ ಕೊಡಲಾಗಿದೆ. ಈ ಆಧಾರದ ಮೇಲೆ ಹಂಗಾಮಿ ಸಮಿತಿಯು ಪಾರದರ್ಶಕ ಚುನಾವಣೆಯನ್ನು ಸಂಘಟಿಸಲಿದೆ' ಎಂದು ತಿಳಿಸಿದರು.

ಹೋರಾಟ: ಬ್ರಿಜ್ ಭೂಷಣ್ ಸಿಂಗ್

ತಮ್ಮ ಮೇಲೆ ಮಾಡಿರುವ ಲೈಂಗಿಕ ದೌರ್ಜನ್ಯದ ಆರೋಪಗಳು ಸುಳ್ಳು. ಅದನ್ನು ಸಾಬೀತುಪಡಿಸಲು ತೀವ್ರ ಹೋರಾಟ ನಡೆಸುವೆ. ಸುಲಭವಾಗಿ ಸೋಲುವುದಿಲ್ಲ ಎಂದು ಡಬ್ಲ್ಯುಎಫ್‌ಐ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಹೇಳಿದ್ದಾರೆ.

ಭಾರತೀಯ ಜನತಾ ಪಕ್ಷದ ಸಂಸದರೂ ಆಗಿರುವ ಸಿಂಗ್, ಗುರುವಾರ ವಿಡಿಯೊ ಸಂದೇಶವನ್ನು ಬಿಡುಗಡೆ ಮಾಡಿದ್ದಾರೆ.

'ಸ್ನೇಹಿತರೇ ನನ್ನ ಜೀವನದಲ್ಲಿ ಏನು ಕಳೆದುಕೊಂಡಿದ್ದೇನೆ ಹಾಗೂ ಗಳಿಸಿದ್ದೇನೆ ಎನ್ನುವುದು ಪ್ರತಿಫಲನವಾಗಲಿದೆ. ನಾನು ಅಸಹಾಯಕನಾದಾಗ ಹಾಗೂ ಹೋರಾಡಲು ಅಶಕ್ತನಾದಾಗ ಜೀವಿಸಲು ಇಚ್ಛಿಸುವುದಿಲ್ಲ. ಅಂತಹ ಜೀವನಕ್ಕಿಂತ ಸಾವು ಮೇಲು' ಎಂದಿದ್ದಾರೆ.

ಬಾಕ್ಸರ್ ಕೌರ್ ಸಿಂಗ್ ನಿಧನ

ಚಂಡೀಗಡ (ಪಿಟಿಐ): ದೆಹಲಿ ಏಷ್ಯನ್ ಗೇಮ್ಸ್‌ನಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದ ಬಾಕ್ಸರ್ ಕೌರ್ ಸಿಂಗ್ (74) ಅವರು ಗುರುವಾರ ಹರಿಯಾಣದ ಕುರುಕ್ಷೇತ್ರದ ಆಸ್ಪತ್ರೆಯಲ್ಲಿ ಗುರುವಾರ ನಿಧನರಾದರು.

ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಅವರು ಪಂಜಾಬ್‌ನ ಸಂಗ್ರೂರ್ ಜಿಲ್ಲೆಯ ಖನಾಲ್ ಖುರ್ದ್ ಗ್ರಾಮದಲ್ಲಿ ನೆಲೆಸಿದ್ದರು. 1982ರ ದೆಹಲಿ ಏಷ್ಯನ್ ಗೇಮ್ಸ್‌ನ ಹೆವಿವೇಟ್ ವಿಭಾಗದಲ್ಲಿ ಚಿನ್ನದ ಪದಕ ಗೆದ್ದುಕೊಂಡಿದ್ದರು. 1984ರ ಲಾಸ್ ಏಂಜಲಿಸ್ ಒಲಿಂಪಿಕ್ಸ್‌ನಲ್ಲಿ ಅವರು ದೇಶವನ್ನು ಪ್ರತಿನಿಧಿಸಿದ್ದರು. ಅವರಿಗೆ 1982ರಲ್ಲಿ ಅರ್ಜುನ ಮತ್ತು 1983ರಲ್ಲಿ ಪದ್ಮಶ್ರೀ ಪುರಸ್ಕಾರಗಳು ಒಲಿದುಬಂದಿದ್ದವು.

ಅಲಿ ಜೊತೆ 'ಫೈಟ್': 1980ರಲ್ಲಿ ಅವರು ಬಾಕ್ಸಿಂಗ್ ದಂತಕತೆ ಮುಹಮದ್ ಅಲಿ ಜೊತೆ ಪ್ರದರ್ಶನ ಪಂದ್ಯದಲ್ಲಿ ಸೆಣಸಾಡಿದ್ದರು.

ಪಠ್ಯಪುಸ್ತಕದಲ್ಲಿ ಸೇರ್ಪಡೆ: ನಾಲ್ವರು ದಿಗ್ಗಜ ಕ್ರೀಡಾಪಟುಗಳ ಯಶೋಗಾಥೆಯನ್ನು ಪ್ರೌಢ ಶಾಲಾ ಪಠ್ಯಕ್ರಮದಲ್ಲಿ ಸೇರ್ಪಡೆ ಮಾಡುವುದಾಗಿ ಪಂಜಾಬ್ ಸರ್ಕಾರ ಈ ತಿಂಗಳ ಆರಂಭದಲ್ಲಿ ಪ್ರಕಟಿಸಿತ್ತು. ಆ ನಾಲ್ವರಲ್ಲಿ ಕೌರ್ ಕೂಡಾ ಒಬ್ಬರು.